ಮಂಗಳೂರು
ಮಂಗಳವಾರ, 12 ಮೇ 2026
ಸಂಪುಟ 48, ಸಂಚಿಕೆ 54, ಪುಟಗಳು 12+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಕರ್ನಾಟಕದಲ್ಲಿ ಎಸ್‌ಐಆರ್ ಶೀಘ್ರ |೦೨
ಸ್ಟಾಲಿನ್ ಭೇಟಿಯಾದ ಸಿಎಂ ವಿಜಯ್ |೦೨
ಇಂದು ಅಸ್ಸಾಂ ಸಿಎಂ ಆಗಿ ಬಿಸ್ವಾ ಪ್ರಮಾಣ |೦೨

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ : ದಶಮಿ, ನಕ್ಷತ್ರ: ಪೂರ್ವಾಭಾದ್ರೆ

ದಿನದ ಮಾತು

ಮನಸ್ಸಿಗೆ ಪ್ರಿಯವನ್ನುಂಟು ಮಾಡುವುದೇ ಸ್ವರ್ಗ. ಆದಕ್ಕೆ ವಿರುದ್ಧವಾದುದೇ ನರಕ.

▲ ಜಾತಕಮಾಲ

ಹಾರುವತಟ್ಟೆಗಳ ರಹಸ್ಯದ ಬಾಗಿಲು ತೆರೆದ ಅಮೆರಿಕ

ರಾಘವಾಂಕಣ

• ರಾಘವೇಂದ್ರ ಸುಬ್ರಹ್ಮಣ್ಯ

• ಪುಟ ೬

ಕಿರುಸುದ್ದಿ

ರಾಜ್ಯ ಸರ್ಕಾರಿ ನೌಕರರಿಗೆ ತುಟ್ಟಿಭತ್ಯೆ ಶೇ.1.5 ಹೆಚ್ಚಳ

• **ಬೆಂಗಳೂರು:** ರಾಜ್ಯ ಸರ್ಕಾರಿ ನೌಕರರು ಮತ್ತು ನಿವೃತ್ತ ವೇತನದಾರರಿಗೆ ರಾಜ್ಯ ಸರ್ಕಾರ ಸಿಹಿ ಸುದ್ದಿ ನೀಡಿದೆ. ತುಟ್ಟಿಭತ್ಯೆಯನ್ನು ಶೇ.1.5ರಷ್ಟು ಹೆಚ್ಚಿಸಿ ಸೋಮವಾರ ಆದೇಶ ಹೊರಡಿಸಿದೆ. ತುಟ್ಟಿ ಭತ್ಯೆ ದರಗಳನ್ನು ಪ್ರಸ್ತುತ ಮೂಲವೇತನದ ಶೇ.14.25ರಿಂದ ಶೇ.15.75ಕ್ಕೆ ಹೆಚ್ಚಿಸಲಾಗಿದೆ. 2024ರ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ವೇತನವನ್ನು ಪಡೆಯುತ್ತಿರುವ ರಾಜ್ಯ ಸರ್ಕಾರಿ ನೌಕರರಿಗೆ 2026ರ ಜ.1ರಿಂದಲೇ ಜಾರಿಗೆ ಬರುವಂತೆ ತುಟ್ಟಿಭತ್ಯೆ ದರಗಳನ್ನು ಪರಿಷ್ಕರಿಸಿದೆ. ➡ಪುಟ ೪

ಪ್ರಧಾನಿ ಮೋದಿ ಭಾಷಣಕ್ಕೆ ಸಿಎಂ ಸಿದ್ದರಾಮಯ್ಯ ಕಿಡಿ

• **ಬೆಂಗಳೂರು:** ಭಾನುವಾರ ಬೆಂಗಳೂರಿಗೆ ಆಗಮಿಸಿದ್ದ ಪ್ರಧಾನಿ ಮೋದಿ ಅವರು ಬಿಜೆಪಿ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಭಾಷಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದ್ದು, ಪ್ರಧಾನಮಂತ್ರಿ ಅವರು ರಾಜ್ಯದ ಕಾಂಗ್ರೆಸ್ ಸರ್ಕಾರವನ್ನುದ್ದೇಶಿಸಿ ಮಾತನಾಡಿದ್ದರೂ ಅವರ ಮಾತಿನಲ್ಲಿ ಕೇಂದ್ರದಲ್ಲಿರುವ ಅವರದ್ದೇ ಸರ್ಕಾರದ ವೈಫಲ್ಯ ಮತ್ತು ರಾಜ್ಯದಲ್ಲಿರುವ ಅವರ ಪಕ್ಷದ ದುಸ್ಥಿತಿಯನ್ನು ಸರಿಪಡಿಸ ಲಾಗದ ಅಸಹಾಯಕತೆ ಇತ್ತು ಎಂದು ಕಿಡಿಕಾರಿದ್ದಾರೆ. ➡ಪುಟ ೪

ವರ್ಕ್ ಫ್ರಮ್ ಹೋಮ್ ವ್ಯವಸ್ಥೆಗೆ ಒತ್ತು: ಮೋದಿ

• ಪುಟ ೨

ಲೋಕಾಯುಕ್ತದಿಂದ 6,400 ಕೆರೆ ಒತ್ತುವರಿ ತೆರವು

• ಪುಟ ೪

ದೇಶದ ಆರ್ಥಿಕ ಪರಿಸ್ಥಿತಿ ಅಭದ್ರ: ಸಿದ್ದರಾಮಯ್ಯ

• ಪುಟ ೩



ದೇಶಭಕ್ತಿಯ ಕರೆಯ ಹೆಜ್ಜೆ

ಪ್ರಧಾನಿ ನರೇಂದ್ರ ಮೋದಿ ಮಿತವ್ಯಯದ ಕರೆಯ ಹಿಂದಿನ ಅಸಲಿ ಕಾರಣ

• ಪುಟ ೨

ಸುದ್ದಿ ಸಮಗ್ರ

ಪ.ಬಂಗಾಳದಲ್ಲಿ ಸುವೇಂದು ಸರ್ಕಾರ ಮಹತ್ವದ ನಿರ್ಧಾರ
ಬಾಂಗ್ಲಾ ಗಡಿಯಲ್ಲಿ ಬೇಲಿ ಹಾಕಲು ಬಿಎಸ್ಎಫ್‌ಗೆ ಭೂಮಿ
ಬಂಗಾಳ ಬಾಂಗ್ಲಾ ಬೇಲಿ

• **ಕೋಲ್ಕತ್ತಾ:** ಭಾರತ-ಬಾಂಗ್ಲಾದೇಶ ಗಡಿ ಬೇಲಿ ನಿರ್ಮಾಣಕ್ಕಾಗಿ ಗಡಿ ಭದ್ರತಾ ಪಡೆಗೆ(ಬಿಎಸ್‌ಎಫ್) ಭೂಮಿ ಹಸ್ತಾಂತರಿಸುವ ಪ್ರಕ್ರಿಯೆ ಇಂದಿನಿಂದ ಆರಂಭವಾಗಲಿದೆ ಮತ್ತು 45 ದಿನಗಳೊಳಗೆ ಭೂಮಿ ವರ್ಗಾವಣೆ ಪೂರ್ಣಗೊಳ್ಳಲಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರು ಸೋಮವಾರ ಘೋಷಿಸಿದ್ದಾರೆ. ಈ ನಿರ್ಧಾರವು ಬಾಂಗ್ಲಾದೇಶದಿಂದ ಅಕ್ರಮ ನುಸುಳುವಿಕೆಯನ್ನು ತಡೆಯುವ ಕುರಿತ ಬಿಜೆಪಿಯ ಪ್ರಮುಖ ಚುನಾವಣಾ ಭರವಸೆ ಈಡೇರಿಸಿದೆ.

ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯ ಭರ್ಜರಿ ಜಯದ ಕೆಲವೇ ದಿನಗಳ ಬಳಿಕ, ನಬನ್ನಾದಲ್ಲಿ(ರಾಜ್ಯ ಕಾರ್ಯಾಲಯ) ನಡೆದ ಮೊದಲ ಸಚಿವ ಸಂಪುಟ ಸಭೆಗೆ ಅಧ್ಯಕ್ಷತೆ ವಹಿಸಿದ್ದ ಅಧಿಕಾರಿ, ಭಾರತ-ಬಾಂಗ್ಲಾದೇಶ ಗಡಿ ಬೇಲಿಗೆ ಅಗತ್ಯವಿರುವ ಭೂಮಿಯ ಸಂಪೂರ್ಣ ನಿಯಂತ್ರಣವನ್ನು ಬಿಎಸ್‌ಎಫ್‌ಗೆ ನೀಡಲಾಗುವುದು ಎಂದು ಹೇಳಿದರು.

ಇಂದು ನಡೆದ ನಮ್ಮ ಮೊದಲ ಸಚಿವ ಸಂಪುಟ ಸಭೆಯಲ್ಲೇ, ಭೂಮಿಯನ್ನು ಬಿಎಸ್‌ಎಫ್‌ಗೆ ವರ್ಗಾಯಿಸುವ ನಿರ್ಧಾರ ಕೈಗೊಂಡಿದ್ದೇವೆ. ಪ್ರಕ್ರಿಯೆ ಇಂದೇ ಆರಂಭವಾಗುತ್ತದೆ. ಮುಂದಿನ 45 ದಿನಗಳಲ್ಲಿ ಪೂರ್ಣಗೊಳ್ಳಲಿದೆ. ಇದು ಪೂರ್ಣವಾದ ಬಳಿಕ, ಬಿಎಸ್‌ಎಫ್ ಗಡಿ ಬೇಲಿ ಕಾಮಗಾರಿ ಪೂರ್ಣಗೊಳಿಸುತ್ತದೆ ಮತ್ತು ಅಕ್ರಮ ನುಸುಳುವಿಕೆಯ ಸಮಸ್ಯೆಯನ್ನು ಅಲ್ಪಾವಧಿಯಲ್ಲೇ ಪರಿಹರಿಸಲಾಗುತ್ತದೆ ಎಂದು ಅಧಿಕಾರಿ ಸಭೆಯ ಬಳಿಕ ಸುದ್ದಿಗಾರರಿಗೆ ತಿಳಿಸಿದರು.

ವಿಧಾನಸಭೆ ಚುನಾವಣೆಯ ವೇಳೆ ನುಸುಳುವಿಕೆ ಪ್ರಮುಖ ರಾಜಕೀಯ ವಿಷಯವಾಗಿ ಹೊರಹೊಮ್ಮಿತ್ತು. ಬಿಜೆಪಿಯು ತುಷ್ಟೀಕರಣದ ರಾಜಕೀಯಕ್ಕಾಗಿ ತೃಣಮೂಲ ಕಾಂಗ್ರೆಸ್(ಟಿಎಂಸಿ) ಗಡಿಯನ್ನು ತೆರೆದಿಟ್ಟು ಬಾಂಗ್ಲಾದೇಶಿ ನುಸುಳುಕೋರರಿಗೆ ಅವಕಾಶ ನೀಡುತ್ತಿದೆ ಎಂದು ನಿರಂತರವಾಗಿ ಆರೋಪಿಸಿತ್ತು. ಚುನಾವಣಾ ಪ್ರಚಾರ ವೇಳೆ ಗೃಹ ಸಚಿವ ಅಮಿತ್ ಶಾ ಅವರು, ಬಿಜೆಪಿ ಅಧಿಕಾರಕ್ಕೆ ಬಂದರೆ ಗಡಿ ಬೇಲಿಗೆ ಅಗತ್ಯವಿರುವ ಎಲ್ಲಾ ಭೂಮಿಯನ್ನು 45 ದಿನಗಳಲ್ಲಿ ಬಿಎಸ್‌ಎಫ್‌ಗೆ ಹಸ್ತಾಂತರಿಸಲಾಗುವುದು ಎಂದು ಭರವಸೆ ನೀಡಿದ್ದರು. ➡ಪುಟ ೪



ಪಶ್ಚಿಮ ಬಂಗಾಳದಲ್ಲಿ ಇತ್ತೀಚಿನ ರಾಜಕೀಯ ಹಿಂಸಾಚಾರದಲ್ಲಿ ಪ್ರಾಣ ಕಳೆದುಕೊಂಡ 321 ಬಿಜೆಪಿ ಕಾರ್ಯಕರ್ತರ ಕುಟುಂಬಗಳ ಜವಾಬ್ದಾರಿಯನ್ನು ರಾಜ್ಯ ಸರ್ಕಾರ ಹೊರುತ್ತದೆ.
■ ಸುವೇಂದು ಅಧಿಕಾರಿ, ಮುಖ್ಯಮಂತ್ರಿ

ಕೇಂದ್ರ ಯೋಜನೆಗಳ ಜಾರಿಗೆ ಅನುಮೋದನೆ

ಗಡಿ ಬೇಲಿ ನಿರ್ಧಾರದ ಹೊರತಾಗಿ, ಅಧಿಕಾರಿಯವರ ಮೊದಲ ಸಚಿವ ಸಂಪುಟವು ಆಯುಷ್ಮಾನ್ ಭಾರತ್ ಹಾಗೂ ಇತರೆ ಬಾಕಿ ಉಳಿದಿದ್ದ ಕೇಂದ್ರ ಯೋಜನೆಗಳನ್ನು ಪಶ್ಚಿಮ ಬಂಗಾಳದಲ್ಲಿ ಜಾರಿಗೆ ತರುವುದಕ್ಕೂ ಅನುಮೋದನೆ ನೀಡಿತು. ಪ್ರಧಾನಮಂತ್ರಿ ಉಜ್ವಲ ಯೋಜನೆ 3.0 ಸೇರಿದಂತೆ ಕಲ್ಯಾಣ ಯೋಜನೆಗಳಲ್ಲಿ ಬಾಕಿ ಉಳಿದ ಅರ್ಜಿಗಳನ್ನು ಆದ್ಯತೆಯ ಮೇಲೆ ವಿಲೇವಾರಿ ಮಾಡಲಾಗುವುದು ಎಂದೂ ಅಧಿಕಾರಿ ಘೋಷಿಸಿದರು. ಜನರಿಗೆ ಲಾಭ ಸಿಗದಂತೆ ಮಾಡಲು ಟಿಎಂಸಿ ಸರ್ಕಾರ, ಕೇಂದ್ರ ಯೋಜನೆಗಳನ್ನು ತಡೆಹಿಡಿದಿತ್ತು ಎಂದು ಆರೋಪಿಸಿದರು. ವಿಧಾನಸಭಾ ಚುನಾವಣಾ ಪ್ರಚಾರದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಾತು ಕೊಟ್ಟಂತೆ ಶಾಲಾ ಉದ್ಯೋಗ ಅರ್ಜಿದಾರರ ವಯಸ್ಸಿನ ಮಿತಿಯನ್ನು 5 ವರ್ಷ ಕಾಲ ವಿಸ್ತರಿಸುವ ಪ್ರಸ್ತಾವನೆಗೂ ಸಂಪುಟ ಒಪ್ಪಿಗೆ ಸೂಚಿಸಿದೆ ಎಂದರು. ➡ಪುಟ ೪

ಎಸ್‌ಐಆರ್: ಹೊಸ ಅರ್ಜಿ ಸಲ್ಲಿಕೆಗೆ ಸುಪ್ರೀಂ ಅಸ್ತು

• **ಹೊಸದಿಲ್ಲಿ:** ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹಾಗೂ ಇತರರು ಹೊಸ ಅರ್ಜಿಗಳನ್ನು ಸಲ್ಲಿಸಬಹುದು ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ. ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ವೇಳೆ ಮತಪಟ್ಟಿಯಿಂದ ತೆಗೆದುಹಾಕಲಾದ ಮತಗಳ ಸಂಖ್ಯೆಗೆ ಹೋಲಿಸಿದರೆ, 31 ಕ್ಷೇತ್ರಗಳಲ್ಲಿ ಗೆಲುವಿನ ಅಂತರ ಕಡಿಮೆಯಿತ್ತು ಎಂಬ ಆರೋಪಕ್ಕೆ ಸಂಬಂಧಿಸಿ ನ್ಯಾಯಾಲಯ ಈ ಅವಕಾಶ ನೀಡಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿ ಜೋಯ್ಮಲ್ಯ ಭಾಗ್ಚಿ ಅವರಿದ್ದ ಪೀಠ ವಿಚಾರಣೆ ನಡೆಸಿತು. ➡ಪುಟ ೪



ಸೋಮನಾಥ ಅಮೃತ ಮಹೋತ್ಸವದಲ್ಲಿ ಭಾಗಿ
ಯಾವ ಒತ್ತಡಕ್ಕೂ ಭಾರತ ಬಾಗದು: ಪ್ರಧಾನಿ ಮೋದಿ

• **ಸೋಮನಾಥ:** ಭಾರತ ಜಗತ್ತಿನ ಯಾವುದೇ ಶಕ್ತಿ ಅಥವಾ ಒತ್ತಡಕ್ಕೆ ಮಣಿಯುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ದೃಢವಾಗಿ ಹೇಳಿದ್ದಾರೆ. ಐತಿಹಾಸಿಕ ಬಿಕ್ಕಟ್ಟುಗಳ ಸಂದರ್ಭದಲ್ಲಿ ದೇಶ ಪ್ರದರ್ಶಿಸಿದ ದೃಢತೆಯನ್ನು ಅವರು ಈ ವೇಳೆ ಸ್ಮರಿಸಿದರು.

ಗುಜರಾತ್‌ನ ಸೋಮನಾಥದಲ್ಲಿ ನಡೆದ ಸೋಮನಾಥ ಅಮೃತ ಮಹೋತ್ಸವವನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ, 1998ರ ಪೋಖ್ರಾನ್ ಅಣು ಪರೀಕ್ಷೆಯ ಉದಾಹರಣೆ ನೀಡಿದರು. ಮೇ 11 ಮತ್ತು 13ರಂದು ನಡೆದ ಅಣು ಪರೀಕ್ಷೆಗಳ ನಂತರ ಅಂತಾರಾಷ್ಟ್ರೀಯ ಮಟ್ಟದಲ್ಲಿ ತೀವ್ರ ವಿರೋಧ ಮತ್ತು ಆರ್ಥಿಕ ನಿರ್ಬಂಧಗಳು ಎದುರಾದರೂ, ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರ ಯಾವುದಕ್ಕೂ ತಲೆಬಾಗಲಿಲ್ಲ. ಆ ಕಾಲಘಟ್ಟ ಬಾಹ್ಯ ಬೆದರಿಕೆಗಳಿಗಿಂತ ರಾಷ್ಟ್ರೀಯ ಹಿತಾಸಕ್ತಿಗೆ ಆದ್ಯತೆ ನೀಡುವ ಭಾರತದ ರಾಜಕೀಯ ಇಚ್ಛಾಶಕ್ತಿಯನ್ನು ಜಗತ್ತಿಗೆ ತೋರಿಸಿಕೊಟ್ಟಿತು ಎಂದು ಅವರು ಅಭಿಪ್ರಾಯಪಟ್ಟರು. ➡ಪುಟ ೪

ವಿಜ್ಞಾನಿಗಳ ಸಾಧನೆಗೆ ಪ್ರಧಾನಿ ಮೋದಿ ಮೆಚ್ಚುಗೆ

• **ಹೊಸದಿಲ್ಲಿ:** 1998ರ ಪೋಖ್ರಾನ್ ಅಣು ಪರೀಕ್ಷೆ ಭಾರತದ ವೈಜ್ಞಾನಿಕ ಸಾಮರ್ಥ್ಯವನ್ನು ಜಗತ್ತಿಗೆ ಸಾಬೀತುಪಡಿಸಿದ ಐತಿಹಾಸಿಕ ಕ್ಷಣ ಎಂದು ಬಣ್ಣಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಸೋಮವಾರ ರಾಷ್ಟ್ರೀಯ ತಂತ್ರಜ್ಞಾನ ದಿನದ ಶುಭಾಶಯ ಕೋರಿದ್ದಾರೆ. ಸ್ವಾವಲಂಬಿ ಭಾರತ ನಿರ್ಮಾಣದಲ್ಲಿ ತಂತ್ರಜ್ಞಾನ ಪ್ರಮುಖ ಸ್ತಂಭ ಎಂದು ಪ್ರಧಾನಿ ತಿಳಿಸಿದರು. ಸಂಶೋಧನೆ, ನಾವೀನ್ಯತೆ ಮತ್ತು ಪ್ರತಿಭೆಗಳಿಗೆ ಶಕ್ತಿ ತುಂಬುವ ಮೂಲಕ ರಾಷ್ಟ್ರೀಯ ಆಕಾಂಕ್ಷೆಗಳನ್ನು ಈಡೇರಿಸಲು ಸರ್ಕಾರ ಗಮನಹರಿಸಿದೆ. ➡ಪುಟ ೪

ಚಳ್ಳಕೆರೆ ಜೈನಧಾಮದಲ್ಲಿ ನಡೆದ ವಿಧಿವಿಧಾನ | ಸರ್ಕಾರಿ ಗೌರವ
ಸಚಿವ ಡಿ.ಸುಧಾಕರ್ ಅಂತ್ಯಕ್ರಿಯೆ

• **ಚಳ್ಳಕೆರೆ(ಚಿತ್ರದುರ್ಗ):** ರಾಜ್ಯದ ಯೋಜನೆ ಮತ್ತು ಸಾಂಖ್ಯಿಕ ಹಾಗೂ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಡಿ. ಸುಧಾಕರ್ ಅವರ ಅಂತ್ಯಕ್ರಿಯೆ ಚಳ್ಳಕೆರೆ ಜೈನಧಾಮದಲ್ಲಿ ಸೋಮವಾರ ಸಂಜೆ ನೆರವೇರಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಂತ್ಯಕ್ರಿಯೆಯಲ್ಲಿ ಭಾಗಿಯಾಗಿ ಅಂತಿಮ ನಮನ ಸಲ್ಲಿಸಿದರು. ಪೊಲೀಸ್ ಇಲಾಖೆ ವತಿಯಿಂದ ಮೃತರ ಗೌರವಾರ್ಥ 3 ಸುತ್ತಿನ ಕುಶಾಲತೋಪು ಸಿಡಿಸುವ ಮೂಲಕ ಗೌರವ ವಂದನೆ ಸಲ್ಲಿಸಲಾಯಿತು. ಒಂದು ನಿಮಿಷದ ಮೌನಾಚರಣೆ ಮಾಡಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವರ ಪತ್ನಿಗೆ ರಾಷ್ಟ್ರಧ್ವಜ ಹಸ್ತಾಂತರಿಸಿದರು. ➡ಪುಟ ೪



ಜಿಲೆಟಿನ್ ಕಡ್ಡಿ ಪತ್ತೆ ಪ್ರಕರಣಕ್ಕೆ ತ.ನಾಡು ಲಿಂಕ್ | 6 ತಂಡ ರಚನೆ
ಎನ್‌ಐಎ, ಐಬಿ ಜಂಟಿ ತನಿಖೆ

• **ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ಅವರು ನಗರಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಅವರ ಸಂಚಾರ ಮಾರ್ಗದಲ್ಲಿ ಜಿಲೆಟಿನ್ ಕಡ್ಡಿಗಳು ಪತ್ತೆಯಾದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ರಾಷ್ಟ್ರೀಯ ತನಿಖಾ ದಳ (ಎನ್‌ಐಎ), ಗುಪ್ತಚರ ದಳ ಅಧಿಕಾರಿಗಳು ಸ್ಥಳೀಯ ಪೊಲೀಸರ ಜತೆಗೂಡಿ ತನಿಖೆ ಚುರುಕುಗೊಳಿಸಿದ್ದಾರೆ.



ಘಟನೆ ಬಗ್ಗೆ ಬೆಂಗಳೂರು ದಕ್ಷಿಣದ ವಡೇರಹಳ್ಳಿ ಗೇಟ್ ಸಮೀಪ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿದ್ದವು. ಈ ಸಂಬಂಧ ಕಗ್ಗಲೀಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣವೂ ದಾಖಲಾಗಿತ್ತು. ಈ ಪ್ರಕರಣ ಈಗ ಇಡೀ ದೇಶದ ಗಮನ ಸೆಳೆದಿದ್ದು, ರಾಷ್ಟ್ರೀಯ ತನಿಖಾ ಸಂಸ್ಥೆಗಳು ಈ ಘಟನೆಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿವೆ. ಆರ್ಟ್ ಆಫ್ ಲಿವಿಂಗ್ ಆಶ್ರಮಕ್ಕೆ ಪ್ರಧಾನಿಗಳು ಭೇಟಿಗೆ ಕೇವಲ ಎರಡು ಗಂಟೆಗಳ ಮೊದಲು ನಡೆದ ಈ ಘಟನೆ ಭದ್ರತಾ ಲೋಪವನ್ನು ಎತ್ತಿ ತೋರಿಸಿದ್ದು, ಈಗ ಕೇಂದ್ರ ಮತ್ತು ರಾಜ್ಯದ ತನಿಖಾ ಸಂಸ್ಥೆಗಳು ಅಖಾಡಕ್ಕೆ ಇಳಿದಿವೆ. ➡ಪುಟ ೪

ಹುಸಿ ಬಾಂಬ್ ಕರೆ ಮಾಡಿದ್ದ ವ್ಯಕ್ತಿ ವಿಚಾರಣೆ

ಪೊಲೀಸ್ ನಿಯಂತ್ರಣ ಕೊಠಡಿಗೆ ಭಾನುವಾರ ಬೆಳಗ್ಗೆ ಬಾಂಬ್ ಇಟ್ಟಿರುವುದಾಗಿ ಹುಸಿ ಕರೆ ಮಾಡಿದ್ದ ವ್ಯಕ್ತಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಈ ಬಗ್ಗೆ ಮಾಹಿತಿ ನೀಡಿ ಕೋರಮಂಗಲ ಮೂಲದ ವ್ಯಕ್ತಿಯು ಕರೆ ಮಾಡಿದ ತಕ್ಷಣ ಮೊಬೈಲ್ ಸ್ವಿಚ್ ಆಫ್ ಮಾಡಿದ್ದರೂ, ತಾಂತ್ರಿಕ ಕಾರ್ಯಾಚರಣೆಯ ಮೂಲಕ ಆತನನ್ನು ಪತ್ತೆಹಚ್ಚಲಾಗಿದೆ. ➡ಪುಟ ೪

ಯಥಾಸ್ಥಿತಿ ಕಾಪಾಡಲು ಸೂಚನೆ



ಶೃಂಗೇರಿ ಅಂಚೆಮತ ಮರು ಎಣಿಕೆ ಫಲಿತಾಂಶ ಕುರಿತ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆ

• **ಚಿಕ್ಕಮಗಳೂರು:** ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆಗೆ ಹೈಕೋರ್ಟ್ ನೀಡಿದ್ದ ಆದೇಶ ಹಾಗೂ ಮರು ಎಣಿಕೆ ಫಲಿತಾಂಶಕ್ಕೆ ಸೋಮವಾರ ಸುಪ್ರೀಂ ಕೋರ್ಟ್ ತಡೆ ನೀಡಿ, ಯಥಾಸ್ಥಿತಿ ಕಾಯ್ದುಕೊಳ್ಳಲು ಸೂಚಿಸಿದೆ. ಇಂದಿನ ಸುಪ್ರೀಂ ತೀರ್ಪಿನಿಂದ ಕಾಂಗ್ರೆಸ್ ಪಾಳೆಯದಲ್ಲಿ ಮತ್ತೆ ಸಂಭ್ರಮ ಮನೆ ಮಾಡಿದೆ. ಬಿಜೆಪಿ ಕಾರ್ಯಕರ್ತರಲ್ಲಿ ಮೂಡಿದ್ದ ಸಂತಸ, ಹುಮ್ಮಸ್ಸು ಎಲ್ಲವೂ ಕೇವಲ ಕೇವಲ 9 ದಿನಕ್ಕಷ್ಟೇ ಸೀಮಿತ ವಾಗಿದೆ. ಮೇ 2ರಂದು ನಡೆದಿದ್ದ ಅಂಚೆ ಮತಗಳ ಮರು ಎಣಿಕೆ ನಂತರ ಬಿಜೆಪಿ ಅಭ್ಯರ್ಥಿ ಡಿ.ಎನ್. ಜೀವರಾಜ್ 52 ಮತಗಳ ಮುನ್ನಡೆ ಗಳಿಸಿದ್ದರು. ➡ಪುಟ ೪

ಪ್ರಜಾಪ್ರಭುತ್ವ ಹೈಜಾಕ್‌ಗಿಲ್ಲ ಅವಕಾಶ: ಸುಪ್ರೀಂ

• ಪುಟ ೪

ವಿಬಿ ಜಿ ರಾಮ್ ಜಿ ಜುಲೈ 1ರಿಂದ ಜಾರಿ

• **ಹೊಸದಿಲ್ಲಿ:** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆಯನ್ನು ರದ್ದುಗೊಳಿಸಿ, ಅದರ ಬದಲಿಗೆ ವಿಕಸಿತ ಭಾರತ – ಗ್ಯಾರಂಟಿ ಫಾರ್ ರೋಜ್‌ಗಾರ್ ಆ್ಯಂಡ್ ಆಜೀವಿಕಾ ಮಿಷನ್(ಗ್ರಾಮೀಣ) ಕಾಯ್ದೆಯನ್ನು ಜುಲೈ 1ರಿಂದ ದೇಶಾದ್ಯಂತ ಜಾರಿಗೆ ತರುವುದಾಗಿ ಕೇಂದ್ರ ಸರ್ಕಾರ ಸೋಮವಾರ ಘೋಷಿಸಿದೆ.

ಹೊಸ ಕಾಯ್ದೆಯಲ್ಲಿ ಗ್ರಾಮೀಣ ಕುಟುಂಬಗಳಿಗೆ ಒಂದು ಹಣಕಾಸು ವರ್ಷದಲ್ಲಿ 125 ದಿನಗಳ ಶಾಸನಬದ್ಧ ಉದ್ಯೋಗವನ್ನು ಖಾತರಿಪಡಿಸಲಾಗಿದೆ. ಇದು ಈ ಹಿಂದಿನ ನರೇಗಾ ಯೋಜನೆಯಲ್ಲಿದ್ದ 100 ದಿನಗಳ ಮಿತಿಗಿಂತ ಹೆಚ್ಚಾಗಿದೆ. ಈ ಬದಲಾವಣೆ, ಗ್ರಾಮೀಣ ಆದಾಯ ವೃದ್ಧಿ ಮತ್ತು ಗ್ರಾಮ ಮಟ್ಟದ ಮೂಲಸೌಕರ್ಯ ಅಭಿವೃದ್ಧಿಯನ್ನು ಬಲಪಡಿಸುವ ಗುರಿ ಹೊಂದಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವಾಲಯ ತಿಳಿಸಿದೆ.

ವರ್ಗಾವಣೆ ಪ್ರಕ್ರಿಯೆ: ಜೂನ್ 30ರವರೆಗೆ ನರೇಗಾದಲ್ಲಿ ನಡೆಯುತ್ತಿರುವ ಎಲ್ಲಾ ಕಾಮಗಾರಿಗಳು ಯಾವುದೇ ಅಡೆತಡೆಯಿಲ್ಲದೆ ಹೊಸ ಚೌಕಟ್ಟಿಗೆ ವರ್ಗಾವಣೆಯಾಗಲಿವೆ. ಪ್ರಸ್ತುತ ಚಾಲ್ತಿಯಲ್ಲಿರುವ ಇ-ಕೆವೈಸಿ ಪರಿಶೀಲಿಸಿದ ಜಾಬ್ ಕಾರ್ಡ್‌ಗಳು ಹೊಸ ಗ್ರಾಮೀಣ ರೋಜ್‌ಗಾರ್ ಗ್ಯಾರಂಟಿ ಕಾರ್ಡ್ ವಿತರಿಸುವವರೆಗೆ ಮಾನ್ಯವಾಗಿರುತ್ತವೆ. ಕಾರ್ಡ್ ಇಲ್ಲದವರು ಗ್ರಾಮ ಪಂಚಾಯತ್ ಮಟ್ಟದಲ್ಲಿ ನೋಂದಾಯಿಸಿಕೊಳ್ಳಬಹುದು ಮತ್ತು ಇ-ಕೆವೈಸಿ ಬಾಕಿ ಇರುವ ಕಾರಣಕ್ಕೆ ಯಾರಿಗೂ ಕೆಲಸ ನಿರಾಕರಿಸುವಂತಿಲ್ಲ. ➡ಪುಟ ೪





ಬೆಳ್ಳಿ ಬಂಗಾರ (ಬೆಂಗಳೂರು)	ಬೆಳ್ಳಿ: 2,62,200(2,61,900)	ಅಪರಂಜಿ ಚಿನ್ನ 14,980(15,000)	ಆಭರಣ ಚಿನ್ನ: 13,945(13,965)	ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)	ಷೇರು ಸೂಚ್ಯಂಕ ಬಿಎಸ್‌ಇ 76,015(1312↓) ಎನ್‌ಎಸ್‌ಇ 23,815(360↓)	$1=₹95.25



ಮಧ್ಯಪ್ರಾಚ್ಯ ಸಂಘರ್ಷದಿಂದ ಜಾಗತಿಕ ಪೂರೈಕೆ ಜಾಲ ವ್ಯತ್ಯಯಗೊಂಡು ಭಾರತದ ವಿದೇಶಿ ವಿನಿಮಯ ಮೀಸಲಿನ ಮೇಲೆ ಒತ್ತಡ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಇಂಧನ ಬಳಕೆ ತಗ್ಗಿಸಲು, ವಿದೇಶಿ ಪ್ರವಾಸ ಹಾಗೂ ಅನಿವಾರ್ಯವಲ್ಲದ ಚಿನ್ನದ ಖರೀದಿಯನ್ನು ಒಂದು ವರ್ಷದವರೆಗೆ ಮುಂದೂಡುವಂತೆ ದೇಶವಾಸಿಗಳಿಗೆ ತುರ್ತು ಕರೆ ನೀಡಿದ್ದಾರೆ. ಅಷ್ಟಕ್ಕೂ ಮೋದಿ ಈ ಸಲಹೆಗಳನ್ನು ನೀಡಲು ಕಾರಣವೇನು? ಎಂಬುದರ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಪ್ರಧಾನಿ ನರೇಂದ್ರ ಮೋದಿ ಮಿತವ್ಯಯದ ಕರೆಯ ಹಿಂದಿನ ಅಸಲಿ ಕಾರಣ

ಸನ್ನದ್ಧತೆಯ ದೇಶಭಕ್ತಿ

ಹಾರ್ಮುಜ್ ಜಲಸಂಧಿ: ಮುಂದುವರಿದ ಬಿಕ್ಕಟ್ಟು

ವಿಶ್ವದ ಒಟ್ಟು ತೈಲ ಪೂರೈಕೆಯ ಶೇ.20ರಷ್ಟು ಭಾಗ ಸಾಗುವ ಇರಾನ್ ಮತ್ತು ಒಮಾನ್ ನಡುವಿನ ಈ ಕಿರಿದಾದ ಸಮುದ್ರ ಮಾರ್ಗ ಕಳೆದ ಎರಡು ತಿಂಗಳಿನಿಂದ ಸ್ಥಗಿತಗೊಂಡಿದೆ. ಅಮೆರಿಕದೊಂದಿಗಿನ ಸಂಘರ್ಷದ ಹಿನ್ನೆಲೆಯಲ್ಲಿ ಇರಾನ್ ಪಡೆಗಳು ವಾಣಿಜ್ಯ ಹಡಗುಗಳ ಸಂಚಾರವನ್ನು ನಿರ್ಬಂಧಿಸಿವೆ. ಇದರಿಂದಾಗಿ ತೈಲ ಟ್ಯಾಂಕರ್‌ಗಳು ಆಫ್ರಿಕಾದ ಕೇಪ್ ಆಫ್ ಗುಡ್ ಹೋಪ್ ಮಾರ್ಗವಾಗಿ ಸುತ್ತಿ ಬರಬೇಕಾಗಿದ್ದು, ಸಾರಿಗೆ ವೆಚ್ಚ ಮತ್ತು ಸಮಯ ಗಣನೀಯವಾಗಿ ಹೆಚ್ಚಾಗಿದೆ.

ಇಂಧನ ಉಳಿತಾಯ ಅನಿವಾರ್ಯ

ಪ್ರಧಾನಿಯವರ ಭಾಷಣದ ಕೇಂದ್ರಬಿಂದು ಇಂಧನ ಉಳಿತಾಯವಾಗಿತ್ತು. ಸಾರ್ವಜನಿಕ ಸಾರಿಗೆ ಮತ್ತು ಮೆಟ್ರೊ ಬಳಕೆ, ಕಾರ್ ಪೂಲಿಂಗ್, ಸರಕು ಸಾಗಣೆಗಾಗಿ ರೈಲ್ವೆಗೆ ಆದ್ಯತೆ ಮತ್ತು ಎಲೆಕ್ಟ್ರಿಕ್ ವಾಹನಗಳ ಬಳಕೆಗೆ ಅವರು ಒತ್ತು ನೀಡಿದರು. ನಮ್ಮಲ್ಲಿ ದೊಡ್ಡ ತೈಲ ನಿಕ್ಷೇಪಗಳಿಲ್ಲ. ಪೆಟ್ರೋಲ್, ಡೀಸೆಲ್ ಮತ್ತು ಗ್ಯಾಸ್‌ಗಾಗಿ ನಾವು ಆಮದನ್ನೇ ಅವಲಂಬಿಸಿದ್ದೇವೆ. ಯುದ್ಧದ ಕಾರಣದಿಂದಾಗಿ ಇವುಗಳ ಬೆಲೆ ಗಗನಕ್ಕೇರಿದೆ ಎಂದು ಹೇಳಿದರು.

ಪ್ರಧಾನಿಯ ಸಂದೇಶ ಸ್ಪಷ್ಟವಾಗಿದೆ:
ದೇಶದ ಹಿತದೃಷ್ಟಿಯಿಂದ ಮುಂಬರುವ ಕಠಿಣ ದಿನಗಳಿಗೆ ಸಿದ್ಧರಾಗಿ

ಖಾದ್ಯ ತೈಲ ಕಡಿತದಿಂದ ವಿದೇಶಿ ವಿನಿಮಯ ಉಳಿತಾಯ: ಹೇಗೆ?

ಭಾರತದ ವಿದೇಶಿ ವಿನಿಮಯ ಮೀಸಲು ಮೇಲಿನ ಒತ್ತಡ ತಗ್ಗಿಸಲು ಖಾದ್ಯ ತೈಲ ಬಳಕೆ ಕಡಿಮೆ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ನೀಡಿರುವ ಕರೆ ಆರ್ಥಿಕವಾಗಿ ನಿರ್ಣಾಯಕ ಎಂದು ತಜ್ಞರು ವಿಶ್ಲೇಷಿಸಿದ್ದಾರೆ. ದೇಶ ತನ್ನ ಖಾದ್ಯ ತೈಲ ಅಗತ್ಯತೆಯ ಶೇ.55–60ರಷ್ಟನ್ನು ಆಮದು ಮಾಡಿಕೊಳ್ಳುತ್ತಿದ್ದು, ಇದಕ್ಕಾಗಿ ವಾರ್ಷಿಕ 19.5 ಬಿಲಿಯನ್ ಡಾಲರ್ ವ್ಯಯಿಸುತ್ತಿದೆ. ಇಂಡೋನೇಷ್ಯಾ ಮತ್ತು ಮಲೇಷ್ಯಾದಿಂದ ಬರುವ ಪಾಮ್ ಆಯಿಲ್ ಹಾಗೂ ಅರ್ಜೆಂಟೀನಾದ ಸೋಯಾಬೀನ್ ಮತ್ತು ಸೂರ್ಯಕಾಂತಿ ಎಣ್ಣೆ ಈ ಆಮದಿನ ಸಿಂಹಪಾಲನ್ನು ಹೊಂದಿವೆ. ಸೊಲ್ವೆಂಟ್ ಎಕ್ಸ್ ಟ್ರಾಕ್ಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮಾಹಿತಿ ಪ್ರಕಾರ, 202526ರ ಮೊದಲ ಐದು ತಿಂಗಳಲ್ಲಿ ತೈಲ ಆಮದು ಶೇ.8ರಷ್ಟು ಏರಿಕೆಯಾಗಿ 6.57 ಮಿಲಿಯನ್ ಟನ್‌ಗಳಿಗೆ ತಲುಪಿದೆ.

ಪರ್ಯಾಯ ಮಾರ್ಗಗಳು ಸಾಲುತ್ತಿಲ್ಲ

ತೈಲ ಕೊರತೆ ನೀಗಿಸಲು ಭಾರತ ರಷ್ಯಾ, ಯುಎಇ ಮತ್ತು ಪಶ್ಚಿಮ ಆಫ್ರಿಕಾದ ದೇಶಗಳಿಂದ ಹೆಚ್ಚಿನ ತೈಲ ಆಮದು ಮಾಡಿಕೊಳ್ಳಲು ಯತ್ನಿಸುತ್ತಿದೆ. ಆದರೆ, ಈ ಪರ್ಯಾಯಗಳು ಗಲ್ಫ್ ರಾಷ್ಟ್ರಗಳ ತೈಲಕ್ಕೆ ಸಮನಾಗುತ್ತಿಲ್ಲ. ತಾಂತ್ರಿಕ ಸಮಸ್ಯೆಗಳು, ಹಣಕಾಸು ವ್ಯವಹಾರದ ಅಡೆತಡೆಗಳು ಮತ್ತು ರಿಫೈನರಿಗಳಲ್ಲಿನ ಹೊಂದಾಣಿಕೆಯ ಕೊರತೆಯಿಂದಾಗಿ ಭಾರತಕ್ಕೆ ಪೂರ್ಣ ಪ್ರಮಾಣದ ತೈಲ ಪೂರೈಕೆ ಕಷ್ಟಕರವಾಗಿದೆ.

ಪ್ರಧಾನಿ ಪ್ರಧಾನ ಮನವಿ

- ಪೆಟ್ರೋಲ್ ಮತ್ತು ಡೀಸೆಲ್ ಬಳಕೆ ಕಡಿಮೆ ಮಾಡಿ
- ವರ್ಕ್ ಫ್ರಮ್ ಹೋಮ್ ಮತ್ತು ವರ್ಚುವಲ್ ಸಭೆಗಳಿಗೆ ಆದ್ಯತೆ ನೀಡಿ.
- ವಿದೇಶಿ ಪ್ರವಾಸ ಮತ್ತು ವಿದೇಶಿ ವಿವಾಹಗಳನ್ನು ಸದ್ಯಕ್ಕೆ ತಪ್ಪಿಸಿ
- ಒಂದು ವರ್ಷದವರೆಗೆ ಅನಿವಾರ್ಯವಲ್ಲದ ಚಿನ್ನದ ಖರೀದಿ ಮಾಡಬೇಡಿ





ಚರ್ಚೆಗೆ ಕಾರಣವಾದ ಮನವಿ

ತೆಲಂಗಾಣದ ಸಿಕಂದರಾಬಾದ್‌ನಲ್ಲಿ ಸುಮಾರು 9,400 ಕೋಟಿ ರೂ. ಮೌಲ್ಯದ ಯೋಜನೆಗಳಿಗೆ ಚಾಲನೆ ನೀಡಿ ಮಾತನಾಡಿದ ಪ್ರಧಾನಿ ಮೋದಿ, ಈ ಮಿತವ್ಯಯದ ಕರೆಯನ್ನು ದೇಶಭಕ್ತಿಯ ಕರ್ತವ್ಯ ಎಂದು ಬಣ್ಣಿಸಿದರು. ದೇಶಭಕ್ತಿ ಎಂದರೆ ಕೇವಲ ದೇಶಕ್ಕಾಗಿ ಪ್ರಾಣತ್ಯಾಗ ಮಾಡುವುದು ಮಾತ್ರವಲ್ಲ, ಕಷ್ಟಕಾಲದಲ್ಲಿ ಜವಾಬ್ದಾರಿಯುತವಾಗಿ ಬದುಕುವ ಮೂಲಕ ದೇಶದ ಹಿತ ಕಾಯುವುದೂ ಆಗಿದೆ ಎಂದು ಅವರು ಹೇಳಿದರು.

ಈಗ ಏಕೆ?

- ಕಳೆದ 70 ದಿನಗಳಿಂದ ನಡೆಯುತ್ತಿರುವ ಅಮೆರಿಕ–ಇರಾನ್ ನಡುವಿನ ಯುದ್ಧ ಜಾಗತಿಕ ಇಂಧನ ಮಾರುಕಟ್ಟೆಯನ್ನು ತಲ್ಲಣಗೊಳಿಸಿದೆ. ವಿಶ್ವದ ಶೇ.20ರಷ್ಟು ತೈಲ ಪೂರೈಕೆಯ ಮಾರ್ಗವಾಗಿರುವ ಹಾರ್ಮುಜ್ ಜಲಸಂಧಿ ಕಳೆದ ಎರಡು ತಿಂಗಳಿನಿಂದ ಬಂದ್ ಆಗಿದ್ದು, ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರೆಲ್‌ಗೆ ಸುಮಾರು 126ಕ್ಕೆ ತಲುಪಿದೆ.
- ಭಾರತದ ಸರ್ಕಾರಿ ತೈಲ ಕಂಪನಿಗಳಾದ ಇಂಡಿಯನ್ ಆಯಿಲ್, ಬಿಪಿಸಿಎಲ್ ಮತ್ತು ಎಚ್‌ಪಿಸಿಎಲ್ ಪ್ರತಿ ತಿಂಗಳು ಸುಮಾರು 30,000 ಕೋಟಿ ರೂ.ಗಳ ನಷ್ಟದ ಹೊರೆ ಭರಿಸುತ್ತಿವೆ. ಗ್ರಾಹಕರ ಮೇಲೆ ಹೆಚ್ಚಿನ ಹೊರೆ ಬೀಳದಂತೆ ತಡೆಯಲು ಸರ್ಕಾರ ಪ್ರತಿದಿನ ಸುಮಾರು 1,600 ರಿಂದ 1,700 ಕೋಟಿ ರೂ.ಗಳನ್ನು ವ್ಯಯಿಸುತ್ತಿದೆ.
- ವಿದೇಶಿ ವಿನಿಮಯ ಮೀಸಲು ಕೂಡ ತೀವ್ರ ಒತ್ತಡದಲ್ಲಿದೆ. ಕಳೆದ 10 ವಾರಗಳಲ್ಲಿ ಹೆಚ್ಚುವರಿ ಆಮದು ಬಿಲ್‌ಗಳಿಂದಾಗಿ ಸುಮಾರು 1 ಲಕ್ಷ ಕೋಟಿ ರೂ. ವೆಚ್ಚವಾಗಿದೆ. ಥೈಲ್ಯಾಂಡ್, ಇಂಡೋನೇಷ್ಯಾ ಮತ್ತು ಪಾಕಿಸ್ತಾನ ಸೇರಿದಂತೆ 70ಕ್ಕೂ ಹೆಚ್ಚು ದೇಶಗಳು ಈಗಾಗಲೇ ಇಂತಹ ಇಂಧನ ಉಳಿತಾಯ ಕ್ರಮಗಳನ್ನು ಜಾರಿಗೆ ತಂದಿವೆ.

ವರ್ಕ್ ಫ್ರಮ್ ಹೋಮ್ ವ್ಯವಸ್ಥೆಗೆ ಒತ್ತು

ಜಾಗತಿಕ ಮಟ್ಟದಲ್ಲಿ ತೈಲ ಬೆಲೆ ಏರಿಕೆ ಮತ್ತು ಪಶ್ಚಿಮ ಏಷ್ಯಾದ ಅಸ್ಥಿರ ಪರಿಸ್ಥಿತಿಯ ನಡುವೆ ದೇಶದ ಜನತೆ ಇಂಧನ ಉಳಿತಾಯದತ್ತ ಗಮನಹರಿಸಬೇಕೆಂದು ಪ್ರಧಾನಿ ನರೇಂದ್ರ ಮೋದಿ ಅವರು ಮತ್ತೊಮ್ಮೆ ಕರೆ ನೀಡಿದ್ದಾರೆ. ಪರಿಸ್ಥಿತಿ ಸಹಜ ಸ್ಥಿತಿಗೆ ಮರಳುವವರೆಗೆ ಸರ್ಕಾರಿ ಹಾಗೂ ಖಾಸಗಿ ಕಚೇರಿಗಳಲ್ಲಿ ಸಾಧ್ಯವಾದಷ್ಟು ವರ್ಕ್ ಫ್ರಂ ಹೋಮ್ ವ್ಯವಸ್ಥೆಯನ್ನು ಅನುಸರಿಸುವಂತೆ ಅವರು ಸಲಹೆ ನೀಡಿದ್ದಾರೆ.

ಗುಜರಾತಿನ ವಡೋದರಾದ ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಿ, 'ಭಾರತದ ಆಮದುಗಳಲ್ಲಿ ಕಚ್ಚಾ ತೈಲದ ಪಾಲು ಬಹಳ ದೊಡ್ಡದು. ತೈಲ ಪೂರೈಕೆ ಮಾಡುವ ಪ್ರದೇಶವೇ ಈಗ ಸಂಘರ್ಷ ಮತ್ತು ಅನಿಶ್ಚಿತತೆಯಲ್ಲಿದೆ. ಆದ್ದರಿಂದ ದೇಶದ ಹಿತದೃಷ್ಟಿಯಿಂದ ಪ್ರತಿಯೊಬ್ಬರೂ ತಮ್ಮ ದಿನನಿತ್ಯದ ಬದುಕಿನಲ್ಲಿ ಕೆಲವು ಬದಲಾವಣೆಗಳನ್ನು ತರಬೇಕಾಗಿದೆ,' ಎಂದು ಹೇಳಿದರು.

ಕೋವಿಡ್ ಅವಧಿಯಲ್ಲಿ ಜಾರಿಯಾಗಿದ್ದ ವರ್ಕ್ ಫ್ರಂ ಹೋಮ್, ಆನ್ ಲೈನ್ ಸಭೆಗಳು ಮತ್ತು ವಿಡಿಯೋ ಕಾನ್ಫರೆನ್ಸ್‌ಗಳಂತಹ ವ್ಯವಸ್ಥೆಗಳನ್ನು ಮತ್ತೆ ಉತ್ತೇಜಿಸುವ ಅಗತ್ಯವಿದೆ ಎಂದು ಮೋದಿ ಅಭಿಪ್ರಾಯಪಟ್ಟರು. ಇದರಿಂದ ಪೆಟ್ರೋಲ್ ಮತ್ತು ಡೀಸೆಲ್ ಬಳಕೆ ಕಡಿಮೆಯಾಗುವುದಲ್ಲದೆ ವಿದೇಶಿ ವಿನಿಮಯ ಸಂಗ್ರಹದ ಮೇಲಿನ ಒತ್ತಡವೂ ತಗ್ಗಲಿದೆ ಎಂದು ಹೇಳಿದರು. ಇದರ ಜೊತೆಗೆ ಸಾರ್ವಜನಿಕ ಸಾರಿಗೆ ಬಳಕೆ, ಕಾರ್ ಪೂಲಿಂಗ್, ಎಲೆಕ್ಟ್ರಿಕ್ ವಾಹನಗಳ ಬಳಕೆ ಹಾಗೂ ಅನಗತ್ಯ ವಿದೇಶಿ ಪ್ರವಾಸಗಳನ್ನು ಕಡಿಮೆ ಮಾಡುವಂತೆ ಪ್ರಧಾನಿ ಮನವಿ ಮಾಡಿದರು. ದೇಶದ ಆರ್ಥಿಕ ಸ್ಥಿರತೆಗೆ ನಾಗರಿಕರ ಸಹಕಾರ ಅತ್ಯಗತ್ಯ ಎಂದೂ ಅವರು ಹೇಳಿದರು.



ಕಿರುಸುದ್ದಿ

ಮಾಜಿ ಸಿಎಂ ಸ್ಟಾಲಿನ್ ಭೇಟಿಯಾದ ವಿಜಯ್

ಚೆನ್ನೈ: ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ಸೋಮವಾರ ಮಾಜಿ ಮುಖ್ಯಮಂತ್ರಿ ಮತ್ತು ಡಿಎಂಕೆ ಮುಖ್ಯಸ್ಥ ಎಂ. ಕೆ. ಸ್ಟಾಲಿನ್ ಅವರನ್ನು ಭೇಟಿಯಾಗಿದ್ದಾರೆ. ವಿಧಾನಸಭೆಯಲ್ಲಿ ಬಹುಮತ ಸಾಬೀತಿಗೂ ಮುನ್ನ ಸ್ಟಾಲಿನ್ ಮನೆಗೆ ತೆರಳಿ ವಿಜಯ್ ಭೇಟಿಯಾಗಿರುವುದು ಚರ್ಚೆಗೆ ಗ್ರಾಸವಾಗಿದೆ. ತಮಿಳುನಾಡಿನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ವಿಜಯ್ ಅವರು ನನ್ನನ್ನು ರಾಜಕೀಯ ಸೌಜನ್ಯದಿಂದ ಭೇಟಿಯಾಗಿ ನನ್ನ ಶುಭಾಶಯಗಳನ್ನು ಸ್ವೀಕರಿಸಿದರು ಎಂದು ಸ್ಟಾಲಿನ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಬಂಗಾಳದ ಮಾಜಿ ಸಚಿವ ಸುಜಿತ್ ಬೋಸ್ ಬಂಧನ

ಕೋಲ್ಕತ್ತಾ: ಪಶ್ಚಿಮ ಬಂಗಾಳದ ಪುರಸಭೆ ನೇಮಕಾತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮಾಜಿ ಸಚಿವ ಹಾಗೂ ಟಿಎಂಸಿ ನಾಯಕ ಸುಜಿತ್ ಬೋಸ್‌ರನ್ನು ಜಾರಿ ನಿರ್ದೇಶನಾಲಯ(ಇಡಿ) ಬಂಧಿಸಿದೆ. ಬೋಸ್‌ರನ್ನು ದಿನಪೂರ್ತಿ ವಿಚಾರಣೆ ನಡೆಸಿದ ಬಳಿಕ, ಪಿಎಂಎಲ್‌ಎ ಅನ್ವಯ ಬಂಧಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

60 ದಿನಕ್ಕೆ ಆಗುವಷ್ಟು ಇಂಧನ ದೇಶದಲ್ಲಿದೆ

ಹೊಸದಿಲ್ಲಿ: ಮಧ್ಯಪ್ರಾಚ್ಯದ ಯುದ್ಧದ ನಡುವೆಯೂ ಭಾರತದಲ್ಲಿ 60 ದಿನಗಳಿಗೆ ಸಾಕಾಗುವಷ್ಟು ಕಚ್ಚಾ ತೈಲ ಮತ್ತು ನೈಸರ್ಗಿಕ ಅನಿಲ ಸಂಗ್ರಹವಿದೆ ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ. ಇಂಧನ ಸರಬರಾಜು ಪರಿಶೀಲನೆಗಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯಲ್ಲಿ ಸೋಮವಾರ ಐದನೇ ಅನೌಪಚಾರಿಕ ಐಜಿಒಎಂ ಸಭೆ ನಡೆದಿದ್ದು, ಸಭೆ ಬಳಿಕ ದೇಶದಲ್ಲಿ 60 ದಿನಗಳ ಕಚ್ಚಾ ತೈಲ, 60 ದಿನಗಳ ನೈಸರ್ಗಿಕ ಅನಿಲ ಹಾಗೂ 45 ದಿನಗಳಿಗಾಗುವಷ್ಟು ಎಲ್‌ಪಿಜಿ ಸಂಗ್ರಹ ಲಭ್ಯವಿದೆ ಎಂದು ರಕ್ಷಣಾ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಜಾಗತಿಕ ಅಡೆತಡೆಗಳು ಮತ್ತು ಸವಾಲುಗಳನ್ನು ಎದುರಿಸಲು ಜನರ ಸಾಮೂಹಿಕ ಭಾಗವಹಿಸುವಿಕೆಗಾಗಿ ಪ್ರಧಾನಿ ನರೇಂದ್ರ ಮೋದಿಯವರ ಮನವಿ ಸ್ವಾವಲಂಬನೆ ಮತ್ತು ಇಂಧನ ಭದ್ರತೆ ಖಾತ್ರಿಪಡಿಸಿಕೊಳ್ಳುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಲಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ಪೂರೈಕೆ ಸರಪಳಿಗಳಲ್ಲಿನ ಕೊರತೆಗಳು ಅಥವಾ ಅಡೆತಡೆಗಳನ್ನು ತಡೆಯಲು ಸರ್ಕಾರವು ದೃಢವಾದ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವುದರಿಂದ ಜನರುಯಾವುದೇ ರೀತಿ ಆತಂಕಪಡುವ ಅಗತ್ಯವಿಲ್ಲ ಎಂದು ರಾಜನಾಥ್ ಹೇಳಿದರು. ಮುಂಬರುವ ಮುಂಗಾರು ಬಿತ್ತನೆ ಋತುವಿನ ಬೇಡಿಕೆ ಪೂರೈಸಲು ಭಾರತದಲ್ಲಿ ರಸಗೊಬ್ಬರ ಸಾಕಷ್ಟು ದಾಸ್ತಾನಿದೆ. ರೈತರು ಅಗತ್ಯಕ್ಕಿಂತ ಹೆಚ್ಚಿನ ಖರೀದಿಯಲ್ಲಿ ತೊಡಗಬಾರದು ಎಂದು ಸರ್ಕಾರ ಮನವಿ ಮಾಡಿದೆ.

ಪ್ರಧಾನಿ ಸಲಹೆಗಳಿಗೆ ವಿಪಕ್ಷಗಳ ಅಪಸ್ವರ

ಹೊಸದಿಲ್ಲಿ: ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಜನತೆಗೆ ನೀಡಿದ ಸಲಹೆಗಳ ಬಗ್ಗೆ ವಿಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿವೆ. ವಿದೇಶಿ ವಿನಿಮಯ ಉಳಿಕೆಗೆ ಸಹಾಯ ಮಾಡಲು ಇಂಧನದ ವಿವೇಕಯುತ ಬಳಕೆ, ಚಿನ್ನದ ಖರೀದಿ ಮತ್ತು ವಿದೇಶಿ ಪ್ರಯಾಣ ಮುಂದೂಡುವಂತೆ ಮನವಿ ಮಾಡಿದ ನಂತರ ತಮ್ಮ ಸರ್ಕಾರವು ಜನರ ಹಿತಾಸಕ್ತಿಗಳನ್ನು ರಕ್ಷಿಸುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿ ಪ್ರತಿಪಕ್ಷ ನಾಯಕರು ಪ್ರಧಾನಿ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಇದಕ್ಕಾಗಿ ಅವರನ್ನು ರಾಜಿ ಮಾಡಿಕೊಂಡ ಪ್ರಧಾನಿ ಎಂದು ಆರೋಪಿಸಿದ್ದಾರೆ. ಆದರೆ, ಮೋದಿಯವರ ಮಿತವ್ಯಯದ ಮನವಿಯು ವಿಶಾಲ ರಾಷ್ಟ್ರೀಯ ಹಿತಾಸಕ್ತಿಯನ್ನು ಹೊಂದಿದ್ದು, ಅವರ ಸಲಹೆಗಳನ್ನು ಎಲ್ಲರೂ ಅನುಸರಿಸಬೇಕು ಎಂದು ಬಿಜೆಪಿ ಮನವಿ ಮಾಡಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ದೇಶವನ್ನು ಮುನ್ನಡೆಸಲು ಮೋದಿ ಸಮರ್ಥರಾಗಿಲ್ಲ ಎಂದು ಆರೋಪಿಸಿದ್ದಾರೆ. 12 ವರ್ಷಗಳ ವೈಫಲ್ಯಗಳ ಹೊಣೆಯನ್ನು ಸಾಮಾನ್ಯ ಭಾರತೀಯರ ಹೆಗಲ ಮೇಲೆ ಹಾಕಬೇಡಿ ಎಂದೂ ಹೇಳಿದ್ದಾರೆ. ಪ್ರಧಾನಿಯವರ ಮಾತುಗಳು ವೈಫಲ್ಯದ ಪುರಾವೆ ಎಂದಿರುವ ರಾಹುಲ್, ಇವು ಸಲಹೆಯ ಮಾತುಗಳಲ್ಲ; ವೈಫಲ್ಯದ ಪುರಾವೆಗಳಾಗಿವೆ ಎಂದಿದ್ದಾರೆ. ಪದೇ ಪದೇ, ಅವರು ತಮ್ಮ ಸ್ವಂತ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಜವಾಬ್ದಾರಿಯನ್ನು ಸಾರ್ವಜನಿಕರ ಮೇಲೆ ಹೇರುತ್ತಾರೆ ಎಂದು ರಾಹುಲ್ ಆರೋಪಿಸಿದ್ದಾರೆ.

ಸುವೇಂದು ಪಿಎ ಕೊಲೆ; 3 ಆರೋಪಿಗಳ ಬಂಧನ

ಕೋಲ್ಕತ್ತಾ: ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರ ಆಪ್ತ ಸಹಾಯಕ ಚಂದ್ರನಾಥ್ ರಥ್ ಹತ್ಯೆಗೆ ಸಂಬಂಧಿಸಿದಂತೆ ಉತ್ತರ ಪ್ರದೇಶದಿಂದ ಮೂವರನ್ನು ಬಂಧಿಸಲಾಗಿದೆ. ಬಂಧಿತ ಆರೋಪಿಗಳನ್ನು ಬಿಹಾರದ ಬಕ್ಸಾರ್ ಜಿಲ್ಲೆಯ ಪಾಂಡಿಯಪಟ್ಟಿ ನಿವಾಸಿ ವಿಶಾಲ್ ಶ್ರೀವಾಸ್ತವ ಮತ್ತು ಇತರ ಇಬ್ಬರು ಉತ್ತರ ಪ್ರದೇಶದವರಾಗಿದ್ದು, ಆರೋಪಿಗಳಲ್ಲಿ ಓರ್ವ ಶಾರ್ಪ್‌ಶೂಟರ್ ಎಂದು ಶಂಕೆ ಇದೆ ಎಂದು ಪೊಲೀಸರು ಹೇಳಿದ್ದಾರೆ. ತನಿಖಾಧಿಕಾರಿಗಳು ಡಿಜಿಟಲ್, ಯುಪಿಐ ಪಾವತಿ ಪುರಾವೆಗಳು ಮತ್ತು ಅಂತಾರಾಜ್ಯ ಸಂಪರ್ಕಗಳನ್ನು ಪತ್ತೆಹಚ್ಚಿ ಆರೋಪಿಗಳನ್ನು ಗುರುತಿಸಿದ್ದಾರೆ. ತಾಂತ್ರಿಕ ಕಣ್ಗಾವಲು, ಡಿಜಿಟಲ್ ಟ್ರ್ಯಾಕಿಂಗ್ ಮತ್ತು ಇತರ ಮಾಹಿತಿಗಳ ಆಧಾರದ ಮೇಲೆ, ಎಸ್‌ಐಟಿ ತಂಡವನ್ನು ಉತ್ತರ ಪ್ರದೇಶ ಮತ್ತು ಬಿಹಾರಕ್ಕೆ ಕಳುಹಿಸಲಾಗಿತ್ತು. ಕೊಲೆ ಯೋಜಿಸುವ ಮತ್ತು ಕಾರ್ಯಗತಗೊಳಿಸುವಲ್ಲಿ ಕನಿಷ್ಠ ಎಂಟು ಜನರು ಭಾಗಿಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸುವೇಂದು ಅಧಿಕಾರಿಯ ವೈಯಕ್ತಿಕ ಸಹಾಯಕ ಚಂದ್ರನಾಥ್ ರಥ್ ಹತ್ಯೆ ತನಿಖೆಯಲ್ಲಿ ಕೋಲ್ಕತ್ತಾ ಬಳಿಯ ಟೋಲ್ ಪ್ಲಾಜಾದಲ್ಲಿ ಡಿಜಿಟಲ್ ಪಾವತಿಯು ಪ್ರಮುಖ ಪ್ರಗತಿಯಾಗಿ ಹೊರಹೊಮ್ಮಿದೆ.

ಬಂಧಿತರನ್ನು ಹೆಚ್ಚಿನ ತನಿಖೆಗಾಗಿ ನ್ಯಾಯಾಲಯ 13 ದಿನ ಪೊಲೀಸ್ ಕಸ್ಟಡಿಗೆ ಒಪ್ಪಿಸಿದೆ. ಈ ಕೊಲೆಯು ವೃತ್ತಿಪರ ಶಾರ್ಪ್‌ಶೂಟರ್ ನಡೆಸಿದ ಪೂರ್ವ ಯೋಜಿತ ಹತ್ಯೆ ಎಂದು ತೋರುತ್ತದೆ ಎಂದು ಪ್ರಾಸಿಕ್ಯೂಷನ್ ವಾದಿಸಿತು.

ಇಂದು ಅಸ್ಸಾಂ ಸಿಎಂ ಆಗಿ ಬಿಸ್ವಾ ಪ್ರಮಾಣ

ಗುವಾಹಟಿ: ಅಸ್ಸಾಂನಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಸತತ ಮೂರನೇ ಅವಧಿಯ



ಅಧಿಕಾರಾವಧಿಯನ್ನು ಪ್ರಾರಂಭಿಸಲು ಸಿದ್ಧವಾಗಿದೆ. ಹಿಮಂತ ಬಿಸ್ವಾ ಶರ್ಮಾ ಅವರು ಸತತ ಎರಡನೇ ಅವಧಿಗೆ ಮಂಗಳವಾರ ಅಸ್ಸಾಂ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಪ್ರಮಾಣ ವಚನ ಸಮಾರಂಭದಲ್ಲಿ ಪ್ರಧಾನಿ ಮೋದಿ, ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ್ ಸಿಂಗ್, ನಿರ್ಮಲಾ ಸೀತಾರಾಮನ್, ಸರ್ಬಾನಂದ ಸೋನೊವಾಲ್ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಹಾಗೂ 40ಕ್ಕೂ ಹೆಚ್ಚು ಎನ್‌ಡಿಎ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ಪಾಲ್ಗೊಳ್ಳುವ ನಿರೀಕ್ಷೆಯಿದೆ. ರಾಜ್ಯಪಾಲ ಲಕ್ಷ್ಮಣ ಪ್ರಸಾದ್ ಆಚಾರ್ಯ ಅವರು ಬೆಳಗ್ಗೆ 11.40ಕ್ಕೆ ಬಿಜೆಪಿ ನಾಯಕ ಮತ್ತು ಹೊಸ ಸಚಿವ ಸಂಪುಟದ ಸದಸ್ಯರಿಗೆ ಅಧಿಕಾರ ಮತ್ತು ಗೌಪ್ಯತೆಯ ಪ್ರಮಾಣ ವಚನ ಬೋಧಿಸಲಿದ್ದಾರೆ. 2021ರಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿಯಾದ ಶರ್ಮಾ, ಅಸ್ಸಾಂನಲ್ಲಿ ಸತತವಾಗಿ ಎರಡು ಬಾರಿ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ ಮೊದಲ ಕಾಂಗ್ರೆಸ್ಸೇತರ ನಾಯಕರಾಗಲಿದ್ದಾರೆ.

ಕೇರಳ ಸಿಎಂ ನೇಮಕ: ದಿಲ್ಲಿಗೆ ಬುಲಾವ್ ನೀಡಿರುವ ಖರ್ಗೆ, ಇಂದು ನಿರ್ಧಾರ ಸಾಧ್ಯತೆ

ಸಿಎಂ ನೇಮಕ ಯಾವಾಗ? ಮೈತ್ರಿಯಿಂದಲೇ ಪ್ರಶ್ನೆ

ಹೊಸದಿಲ್ಲಿ/ತಿರುವನಂತಪುರ: ಕಾಂಗ್ರೆಸ್ ನೇತೃತ್ವದ ಕೇರಳದ ಯುಡಿಎಫ್ ಸರ್ಕಾರದಲ್ಲಿ ಮುಖ್ಯಮಂತ್ರಿ ಆಯ್ಕೆ ಪ್ರಕ್ರಿಯೆ ಇನ್ನೂ ಅಂತಿಮವಾಗದಿರುವುದು ರಾಜಕೀಯ ವಲಯದಲ್ಲಿ ಕುತೂಹಲ ಹಾಗೂ ಅಸಮಾಧಾನಕ್ಕೆ ಕಾರಣವಾಗಿದೆ. ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿದ್ದರೂ, ಮುಖ್ಯಮಂತ್ರಿ ಯಾರಾಗಬೇಕು ಎಂಬ ಕುರಿತು ಕಾಂಗ್ರೆಸ್ ಹೈಕಮಾಂಡ್ ಇನ್ನೂ ನಿರ್ಧಾರ ಕೈಗೊಂಡಿಲ್ಲ. ಈ ಬೆಳವಣಿಗೆಯ ಮಧ್ಯೆ ಮೈತ್ರಿಪಕ್ಷವಾದ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್(ಐಯುಎಂಎಲ್) ಬಹಿರಂಗ ಎಚ್ಚರಿಕೆ ನೀಡಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ದಿಲ್ಲಿಯಲ್ಲಿ ಮಂಗಳವಾರ ಸಭೆ ನಡೆಯಲಿದ್ದು, ಇದರಲ್ಲಿ ಮುಖ್ಯಮಂತ್ರಿ ಹುದ್ದೆಗೆ ಪ್ರಮುಖ ಆಕಾಂಕ್ಷಿಗಳಾಗಿರುವ ಹಿರಿಯ ನಾಯಕ ರಮೇಶ್ ಚೆನ್ನಿತ್ತಲ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹಾಗೂ ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್ ಭಾಗಿಯಾಗಲಿದ್ದಾರೆ. ಹಾಗೆಯೇ, ಎಂ.ಎಂ.ಹಸನ್, ವಿ.ಎಂ.ಸುಧೀರನ್, ಮುಲ್ಲಪಲ್ಲಿ ರಾಮಚಂದ್ರನ್, ಕೆ.ಮುರಳೀಧರನ್ ಮತ್ತು ಕೆ.ಸುಧಾಕರನ್ ಭಾಗಿಯಾಗುವ ಸಾಧ್ಯತೆಗಳಿವೆ. ಮಾಜಿ ರಕ್ಷಣಾ ಸಚಿವ ಎ.ಕೆ.ಆಂಟನಿ ಸೇರಿದಂತೆ ಹಲವು ಹಿರಿಯ ನಾಯಕರೊಂದಿಗೆ ಮತ್ತಷ್ಟು ಚರ್ಚೆ ನಡೆಸಿ ಅಂತಿಮ ತೀರ್ಮಾನ ಕೈಗೊಳ್ಳುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಒಂದರಿಂದ ಎರಡು ದಿನಗಳಲ್ಲಿ ಮುಖ್ಯಮಂತ್ರಿ ಕುರಿತ ಪ್ರಶ್ನೆಗಳಿಗೆ ಉತ್ತರ ಸಿಗಲಿದೆ ಎಂದು ಮೂಲಗಳು ಹೇಳಿವೆ.

ಹೈಕಮಾಂಡ್ ನಿರ್ಧಾರಕ್ಕೆ ಬದ್ಧ: ಚೆನ್ನಿತ್ತಲ

ಈ ಮಧ್ಯೆ ರಮೇಶ್ ಚೆನ್ನಿತ್ತಲ ಅವರು ಹೈಕಮಾಂಡ್ ತೆಗೆದುಕೊಳ್ಳುವ ಯಾವುದೇ ನಿರ್ಧಾರವನ್ನು ಕಾಂಗ್ರೆಸ್ ಹಾಗೂ ಯುಡಿಎಫ್ ಕಾರ್ಯಕರ್ತರು ಒಪ್ಪಿಕೊಳ್ಳುತ್ತಾರೆ ಎಂದು ಹೇಳಿದ್ದಾರೆ. ಇದು ಪ್ರಜಾಪ್ರಭುತ್ವದ ಪ್ರಕ್ರಿಯೆ. ಎಲ್ಲ ಚರ್ಚೆಗಳೂ ಪೂರ್ಣಗೊಂಡಿವೆ. ಎಡ ಮೈತ್ರಿ ಕಳೆದ ಬಾರಿ ತೆಗೆದುಕೊಂಡಷ್ಟು ಸಮಯ ನಾವು ತೆಗೆದುಕೊಳ್ಳುತ್ತಿಲ್ಲ ಎಂದರು.

- ಕೇರಳದಲ್ಲಿ ಇನ್ನೂ ಮುಖ್ಯಮಂತ್ರಿ ಸ್ಥಾನ ಅನಿಶ್ಚಿತತೆ
- ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ಐಯುಎಂಎಲ್ ಕಿಡಿ

ಐಯುಎಂಎಲ್ ಅಸಮಾಧಾನ: ಐಯುಎಂಎಲ್‌ನ ಮಲಪ್ಪುರಂ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ. ಅಬ್ದುಲ್ ಹಮೀದ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಈಗಾಗಲೇ ನಿರ್ಧಾರ ವಿಳಂಬವಾಗಿದೆ. ಇನ್ನೂ ಮುಂದುವರಿದರೆ ರಾಜಕೀಯ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಅವರ ಪ್ರಕಾರ, ಯುಡಿಎಫ್‌ಗೆ ಮತ ನೀಡಿದ ಜನರು ಈಗ ಪ್ರಶ್ನೆಗಳನ್ನು ಕೇಳತೊಡಗಿದ್ದಾರೆ. ಮದುವೆ, ಅಂತ್ಯಕ್ರಿಯೆ ಸೇರಿದಂತೆ ಎಲ್ಲೆಡೆ ಜನರು ಇದೇ ವಿಚಾರ ಕೇಳುತ್ತಿದ್ದಾರೆ ಎಂದು ಹೇಳಿದ್ದಾರೆ.

ಐಯುಎಂಎಲ್ ನಾಯಕರು, ಕೇರಳ ರಾಜಕೀಯವಾಗಿ ಜಾಗೃತ ರಾಜ್ಯ. ಇಲ್ಲಿ ದೀರ್ಘಕಾಲದ ಅನಿಶ್ಚಿತತೆಯನ್ನು ಜನ ಒಪ್ಪುವುದಿಲ್ಲ ಎಂದು ಹೇಳಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿದ ಕಾಂಗ್ರೆಸ್‌ನ ಕೆಲ ನಾಯಕರು, ವಿಧಾನಸಭೆಯ ಅವಧಿ ಮೇ 23ರವರೆಗೆ ಇರುವುದರಿಂದ ತುರ್ತು ಪರಿಸ್ಥಿತಿ ಏನೂ ಇಲ್ಲ ಎಂದು ಸಮರ್ಥಿಸಿಕೊಂಡಿದ್ದಾರೆ. ಲೀಗ್ ನಾಯಕರು ಕಾಂಗ್ರೆಸ್ ಮೇಲೆ ಸವಾರಿ ಮಾಡಲಾಗದು ಎಂದು ಕೆಲವು ನಾಯಕರು ಹೇಳಿದ್ದಾರೆ.

22 ರಾಜ್ಯಗಳಲ್ಲಿ ಮತದಾರರ ಪಟ್ಟಿಯ ತೀವ್ರ ಪರಿಷ್ಕರಣೆ

ಕರ್ನಾಟಕದಲ್ಲಿ ಎಸ್‌ಐಆರ್ ಶೀಘ್ರ

ಹೊಸದಿಲ್ಲಿ: ಕರ್ನಾಟಕ ಸೇರಿದಂತೆ 22 ರಾಜ್ಯಗಳಲ್ಲಿ ಇನ್ನು ಕೆಲವೇ ದಿನಗಳಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್)ಯನ್ನು ಕೈಗೊಳ್ಳುವುದಾಗಿ ಕೇಂದ್ರ ಚುನಾವಣಾ ಆಯೋಗ ಹೇಳಿದೆ.

ಈಗಾಗಲೇ ಸಿದ್ಧತೆ ಆರಂಭಿಸಿದ್ದು ಕೆಲವೇ ದಿನಗಳಲ್ಲಿ ಆರಂಭ ಮಾಡುವುದಾಗಿ ಹೇಳಿದೆ. ಈಗಾಗಲೇ 60 ಕೋಟಿ ಜನರ ವಿಶೇಷ



ಪರಿಷ್ಕರಣೆ ಮುಗಿದಿದ್ದು ಇನ್ನು 40 ಕೋಟಿ ಮಂದಿಯಷ್ಟೇ ಬಾಕಿ ಇದ್ದಾರೆ.

ಈವರೆಗೆ ಎಸ್‌ಐಆರ್ ಕಾರ್ಯವನ್ನು 10 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆಸಲಾಗಿದೆ. ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ತಮಿಳುನಾಡು, ರಾಜಸ್ಥಾನ, ಛತ್ತೀಸ್‌ಗಢ, ಕೇರಳ, ಪುದುಚೇರಿ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಲಕ್ಷದ್ವೀಪ, ಗುಜರಾತ್, ಮಧ್ಯಪ್ರದೇಶ, ಗೋವಾ ಮತ್ತು ಬಿಹಾರ ಇವುಗಳಲ್ಲಿ ಈ ಪ್ರಕ್ರಿಯೆ ನಡೆದಿವೆ. ಅಸ್ಸಾಂನಲ್ಲಿ ಮತದಾರರ ಪಟ್ಟಿಗೆ ವಿಶೇಷ ಪರಿಷ್ಕರಣೆ ಪ್ರತ್ಯೇಕವಾಗಿ ಕೈಗೊಳ್ಳಲಾಗಿದೆ.

ಫೆ.19ರಂದು ಚುನಾವಣಾ ಆಯೋಗವು ದಿಲ್ಲಿ ಸೇರಿ 22 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಈ ಕಾರ್ಯಕ್ಕೆ ಅಗತ್ಯವಾದ ಪೂರ್ವ ಸಿದ್ಧತೆಗಳನ್ನು ಶೀಘ್ರ ಪೂರ್ಣಗೊಳಿಸುವಂತೆ ಸೂಚಿಸಿತ್ತು. ಈ ಕಾರ್ಯ ಪೂರ್ಣಗೊಂಡ ಬಳಿಕ ದೇಶದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಎಸ್‌ಐಆರ್ ವ್ಯಾಪ್ತಿಗೆ ಬರುತ್ತವೆ.

ಪಶ್ಚಿಮ ಬಂಗಾಳ ಚುನಾವಣಾ ಫಲಿತಾಂಶ ಬಳಿಕ ಕರ್ನಾಟಕದಲ್ಲಿ ಕೆಲವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಎಸ್‌ಐಆರ್ ಕುರಿತಂತೆ ಬಿಗಿ ನಿಲುವು ತೆಗೆದುಕೊಳ್ಳುವಂತೆ ಮನವಿ ಮಾಡಿದ್ದರು.

ಎಲ್ಲೆಲ್ಲಿ ಎಸ್‌ಐಆರ್?

ಕರ್ನಾಟಕ, ಆಂಧ್ರ ಪ್ರದೇಶ, ಅರುಣಾಚಲ ಪ್ರದೇಶ, ಚಂಡೀಗಢ, ದಾದ್ರಾ ಮತ್ತು ನಾಗರ ಹವೇಲಿ ಹಾಗೂ ದಮನ್ ಮತ್ತು ದೀಯು, ಹರಿಯಾಣ, ಹಿಮಾಚಲ ಪ್ರದೇಶ, ಜಮ್ಮು–ಕಾಶ್ಮೀರ, ಜಾರ್ಖಂಡ್, ಲಡಾಖ್, ಮಹಾರಾಷ್ಟ್ರ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ದಿಲ್ಲಿ, ಒಡಿಶಾ, ಪಂಜಾಬ್, ಸಿಕ್ಕಿಂ, ತ್ರಿಪುರಾ, ತೆಲಂಗಾಣ ಹಾಗೂ ಉತ್ತರಾಖಂಡ ರಾಜ್ಯಗಳು.

ಕಿರುಸುದ್ದಿ

ಪುತ್ತೂರು ದೇವಳದಲ್ಲಿಂದು ಮೃತ್ಯುಂಜಯ ಸೂಕ್ತ ಜಪ

• **ಪುತ್ತೂರು:** ಪುತ್ತೂರು ಪರಿಸರದಲ್ಲಿ ಇತ್ತೀಚೆಗೆ ಹೆಚ್ಚುತ್ತಿರುವ ಅಪಘಾತಗಳ ಪರಿಹಾರಾರ್ಥವಾಗಿ ಲೋಕ ಕಲ್ಯಾಣಾರ್ಥವಾಗಿ ಮೇ 12ರಂದು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ವಿಶೇಷ ಮೃತ್ಯುಂಜಯ ಸೂಕ್ತ ಜಪ ನಡೆಯಲಿದೆ. ಶಾಸಕ ಅಶೋಕ್ ಕುಮಾರ್ ರೈ ಅವರ ಸೂಚನೆಯಂತೆ ಬೆಳಗ್ಗೆ 9.30ರಿಂದ 11.30ರವರೆಗೆ ದೇವಸ್ಥಾನದ ಸನ್ನಿಧಾನದಲ್ಲಿ 1008 ಸಂಖ್ಯೆಯ ಮೃತ್ಯುಂಜಯ ಸೂಕ್ತ ಜಪವನ್ನು ಅನೇಕ ವೈದಿಕರು ಪಠಿಸಲಿದ್ದಾರೆ. ಪ್ರಧಾನ ಅರ್ಚಕ ವಸಂತ ಕೆದಿಲಾಯ ಮತ್ತು ಜಯರಾಮ ಜೋಯಿಸರ ನೇತೃತ್ವದಲ್ಲಿ ಈ ಧಾರ್ಮಿಕ ಕಾರ್ಯಕ್ರಮ ನಡೆಯಲಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾಗಬೇಕೆಂದು ದೇವಸ್ಥಾನದ ಆಡಳಿತ ಮಂಡಳಿ ವಿನಂತಿಸಿದೆ.

ಮೇ 26-30: ಓಪನ್ ಶೂಟಿಂಗ್ ಚಾಂಪಿಯನ್‌ಶಿಪ್

• **ಮಂಗಳೂರು:** ಮಂಗಳೂರು ರೈಫಲ್ ಕ್ಲಬ್ ವತಿಯಿಂದ 2ನೇ ಮಂಗಳೂರು ಓಪನ್ ಶೂಟಿಂಗ್ ಚಾಂಪಿಯನ್‌ಶಿಪ್ 2026 ಮೇ 26 ರಿಂದ 30ರವರೆಗೆ ಮಂಗಳೂರಿನಲ್ಲಿ ಆಯೋಜಿಸಲಾಗಿದೆ. ಚಾಂಪಿಯನ್‌ಶಿಪ್‌ನ ಅರ್ಹತಾ ಸುತ್ತುಗಳು ಕದ್ರಿ ಮಲ್ಲಿಕಟ್ಟೆ ಜುಗುಲ್ ಟವರ್ಸ್ 4 ನೇ ಮಹಡಿಯ ಮಂಗಳೂರು ರೈಫಲ್ ಕ್ಲಬ್‌ನಲ್ಲಿ, ಫೈನಲ್ ಪಂದ್ಯ ನಗರದ ಯು. ಎಸ್. ಮಲ್ಯ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿದೆ. ವಿವಿಧ ರಾಜ್ಯಗಳಿಂದ 450ಕ್ಕೂ ಅಧಿಕ ಮಂದಿ ಶೂಟರ್‌ಗಳು ಭಾಗವಹಿಸಲಿದ್ದಾರೆ. ವಿಜೇತರಿಗೆ ನಗದು ಬಹುಮಾನ, ಪದಕ ಹಾಗೂ ಟ್ರೋಫಿ ನೀಡಲಾಗುವುದು ಎಂದು ಮಂಗಳೂರು ರೈಫಲ್ ಕ್ಲಬ್ ಸ್ಥಾಪಕ ಕಾರ್ಯದರ್ಶಿ ಮುಕೇಶ್‌ಕುಮಾರ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಚಾಂಪಿಯನ್‌ಶಿಪ್‌ನಲ್ಲಿ ರಾಜ್ಯದ ಅಂತಾರಾಷ್ಟ್ರೀಯ ಮಟ್ಟದ 8 ಮಂದಿ ಶೂಟರ್‌ಗಳು ಭಾಗವಹಿಸಲಿದ್ದು, ಪ್ರದರ್ಶನ ಪಂದ್ಯದಲ್ಲಿ ಪಾಲ್ಗೊಳ್ಳುವರು. ಈ 8 ಮಂದಿಯನ್ನು ಕಾರ್ಯಕ್ರಮದಲ್ಲಿ ನಗದು ಸಹಿತ ಸನ್ಮಾನಿಸಲಾಗುವುದು. ಮಂಗಳೂರು ರೈಫಲ್ ಕ್ಲಬ್ 10-ಮೀಟರ್ ಏರ್ ರೈಫಲ್ ಮತ್ತು ಏರ್ ಪಿಸ್ತೂಲ್‌ನಲ್ಲಿ ಪರಿಣತಿ ಹೊಂದಿರುವ ವೃತ್ತಿಪರ ಶೂಟಿಂಗ್ ಅಕಾಡೆಮಿಯಾಗಿದ್ದು, 32 ರಾಷ್ಟ್ರೀಯ ಮಟ್ಟದ ಶೂಟರ್‌ಗಳಿಗೆ ತರಬೇತಿ ನೀಡಿದೆ ಎಂದರು. ಪ್ರಮುಖರಾದ ಆಶಿಷ್ ಶೆಟ್ಟಿ, ಗೋಪಾಲಕೃಷ್ಣ ನಿತೇಶ್‌ಕುಮಾರ್ ಉಪಸ್ಥಿತರಿದ್ದರು.

ಫಾ.ಬ್ರಾಯನ್ ಪಿರೇರಾ ಅಧಿಕಾರ ಸ್ವೀಕಾರ



• **ಮಂಗಳೂರು:** ಮಂಗಳೂರಿನ ಸಂತ ಅಲೋಶಿಯಸ್ ಸಂಸ್ಥೆಗಳ 31ನೇ ರೆಕ್ಟರ್ ಆಗಿ ರೆ.ಫಾ. ಬ್ರಾಯನ್ ಪಿರೇರಾ ಅವರು ಭಾನುವಾರ ಅಧಿಕಾರ ವಹಿಸಿಕೊಂಡರು. ವೈಸ್ ರೆಕ್ಟರ್ ಡಾ.ಮೆಲ್ವಿನ್ ಡಿಕುನ್ಹಾ ಹೊಸ ರೆಕ್ಟರ್ ಅವರನ್ನು ಸ್ವಾಗತಿಸಿ, ಸಂಸ್ಥೆಗಳ ನಾಯಕತ್ವದ ಜವಾಬ್ದಾರಿಯನ್ನು ಅವರಿಗೆ ಹಸ್ತಾಂತರಿಸಿದರು. ಅಧಿಕಾರ ಸ್ವೀಕರಿಸಿ ಮಾತನಾಡಿದ ಫಾ.ಬ್ರಾಯನ್, ಸಂಸ್ಥೆಯ ಪರಂಪರೆ ಮತ್ತು ದಿವಂಗತ ಫಾದರ್ ಮೆಲ್ವಿನ್ ಜೋಸೆಫ್ ಪಿಂಟೊ ಅವರ ಸಹಾನುಭೂತಿಯ ನಾಯಕತ್ವವು ಬೆಳೆಯಲು ನಾವು ಅವಕಾಶ ನೀಡಬೇಕು. ನಿಜ ಜೀವನವು ಸವಾಲಿನದ್ದಾಗಿದೆ, ಆದರೆ ದೇವರು ನಮ್ಮನ್ನು ಹೇಗೆ ಮುನ್ನಡೆಸುತ್ತಾನೆ ಎಂಬುದು ಮುಖ್ಯವಾಗಿದೆ ಎಂದರು.

ಮುಳಿಕ್ಕಾರು ಮಲೆಕುಡಿಯ ಕಾಲನಿ ರಸ್ತೆಯ ದಯನೀಯ ಸ್ಥಿತಿ

ಇಲ್ಲಿ ಕಾಲಿಟ್ಟಲ್ಲಿ ಕಲ್ಲು, ಬೇರು!





• **ಬೆಳ್ತಂಗಡಿ:** ಇದೊಂದು ಮಲೆಕುಡಿಯ ಕಾಲನಿಯೊಂದರ ಕಥೆ. ಮುಳಿಕ್ಕಾರು ಪರಿಸರದ ಜನರ ವ್ಯಥೆ ಇದು. ಇಲ್ಲಿ 80 ಕ್ಕೂ ಹೆಚ್ಚು ಮಲೆಕುಡಿಯ ಸಮುದಾಯದ ಕುಟುಂಬಗಳು ತಲೆತಲಾಂತರಗಳಿಂದಲೂ ವಾಸಿಸುತ್ತಿದೆ. ಇಲ್ಲಿ 10 ಕ್ಕೂ ಹೆಚ್ಚು ಇತರ ಜಾತಿಯ ಕುಟುಂಬಗಳೂ ಇವೆ. ಇಲ್ಲಿಯ ರಸ್ತೆ ಇಂದಿಗೂ ಪಕ್ಕಾ ಮಣ್ಣಿನ ರಸ್ತೆ. ರಸ್ತೆಯಲ್ಲಿ ಬಾರಿ ಗಾತ್ರದ ಕಲ್ಲುಗಳು , ಮರದ ಬೇರುಗಳು ಜೊತೆಗೆ ರಸ್ತೆ ಮಧ್ಯೆದಲ್ಲೇ ಪ್ರಕೃತಿ ರೂಪಿಸಿದ ತಾತ್ಕಾಲಿಕ ಚರಂಡಿ ಇದರಲ್ಲಿಯೇ ಜನ , ವಾಹನ ಸಂಚಾರ. ತುರ್ತು ಅಗತ್ಯಗಳಿಗೆ ಅಂಬುಲೆನ್ಸ್ ವಾಹನಗಳೂ ಕೂಡ ಇಲ್ಲಿ ಬರಲು ಒಪ್ಪಲ್ಲ ಅಂತಹ ದುಸ್ಥಿತಿಯ ರಸ್ತೆಯ ಡಾಮರೀಕರಣ ಅಥವಾ ಕಾಂಕ್ರೀಟಿಕರಣಕ್ಕಾಗಿ ಹೋರಾಟದ ಅಂತಿಮ ಹೆಜ್ಜೆ ಚುನಾವಣಾ ಬಹಿಷ್ಕಾರ.

ಈ ರಸ್ತೆಯು ಧರ್ಮಸ್ಥಳ ಬಸದಿಯಿಂದ ಕೊಲ್ಪೆ, ನೆಲ್ಲಿಕಟ್ಟೆ, ಮುಳಿಕ್ಕಾರು ಪ್ರದೇಶಕ್ಕೆ 5 ಕಿಮೀ, ಇಲ್ಲಿಂದ ಭೀಮಂಡೆ ಪ್ರದೇಶದ 6 ಕಿಮೀ ರಸ್ತೆ ಅವ್ಯವಸ್ಥೆಯ ಬಗ್ಗೆ ಧರ್ಮಸ್ಥಳ ಗ್ರಾಮ ಪಂಚಾಯತ್ ನಿಂದ ಹಿಡಿದು ಜಿಲ್ಲಾ ಪಂಚಾಯತ್ ವರೆಗೂ, ಸಮಾಜ ಕಲ್ಯಾಣ ಇಲಾಖೆ, ಗಿರಿಜನ ಕಲ್ಯಾಣ ಇಲಾಖೆಯಿಂದ ಹಿಡಿದು ಸರ್ಕಾರದ ವರೆಗೂ, ಗ್ರಾಮ ಪಂಚಾಯತ್‌ನ ಸದಸ್ಯನಿಂದ ಹಿಡಿದು ತಾಲೂಕು , ಜಿಲ್ಲಾ ಪಂಚಾಯತ್ ಸದಸ್ಯರ ವರೆಗೂ , ಶಾಸಕ , ಸಂಸದರಿಗೂ ಮನವಿ ಮೇಲೆ ಮನವಿ ಸಲ್ಲಿಸಿದರೂ ಯಾರೂ ಇತ್ತ ಕಡೆಗೆ ತಲೆಯೂ ಹಾಕಿಲ್ಲ ಎನ್ನುವುದಕ್ಕೆ ರಸ್ತೆಯ ದುರವಸ್ಥೆಗಳೇ ಸಾಕ್ಷಿ ನುಡಿಯುತ್ತದೆ. ಅಧಿಕಾರಿಗಳು ಯಾವುದೋ ಪ್ರವಾಸಿ ತಾಣಗಳಿಗೆ ಭೇಟಿ ನೀಡಿದಂತೆ ಬಂದು ಹೋಗಿದ್ದು ಬಿಟ್ಟರೆ ಉಳಿದ ಯಾವುದೇ ಕೆಲಸವಾಗಿಲ್ಲ ಎಂದು ನೋವಿನಿಂದ ನುಡಿಯುತ್ತಾರೆ ಈ ಪ್ರದೇಶದ ಜನರು.

ನಮ್ಮ ರಸ್ತೆಗೆ ಇನ್ನೂ ಡಾಮರು ಕಾಂಕ್ರಿಟ್ ಭಾಗ್ಯ ಬಂದಿಲ್ಲ. ಬಾಡಿಗೆಗೆ ಒಂದು ಆಟೋ ರಿಕ್ಷಾವೂ ಇಲ್ಲಿಗೆ ಬರುವುದಿಲ್ಲ, ಅತ್ಯಂತ ಅಪಾಯಕಾರಿ ರಸ್ತೆಯಲ್ಲಿ ನಾವು ಓಡಾಡುತ್ತಿದ್ದೇವೆ. ಅಧಿಕಾರಿಗಳು, ಜನಪ್ರತಿನಿಧಿಗಳಿಗೆ ಮನವಿ ನೀಡಿ, ಅವರ ಆಶ್ವಾಸನೆಗಳು ಕೇಳಿ ಸಾಕಾಗಿದೆ. ಅಂತಿಮವಾಗಿ ಚುನಾವಣಾ ಬಹಿಷ್ಕಾರ ಮಾಡಲು ನಿರ್ಧಾರ ತೆಗೆದುಕೊಂಡಿದ್ದೇವೆ. ರಸ್ತೆ ಸರಿಪಡಿಸುವವರೆಗೆ ಮುಂದೆ ಬರುವ ಎಲ್ಲ ಚುನಾವಣೆಗಳನ್ನು ಬಹಿಷ್ಕರಿಸುತ್ತೇವೆ.

■ **ಸುಂದರ ಮುಳಿಕಾರು,** ಸ್ಥಳೀಯ ನಿವಾಸಿ

ಚುನಾವಣಾ ಬಹಿಷ್ಕಾರ

ಧರ್ಮಸ್ಥಳ ಗ್ರಾಮದ ಮುಳಿಕ್ಕಾರು ಪ್ರದೇಶದ ಕೊಲ್ಪೆಯಿಂದ ನೆಲ್ಲಿಕಟ್ಟೆ ; ಪಿಜತಡ್ಕದಿಂದ ಭೀಮಂಡೆವರೆಗಿನ ರಸ್ತೆಯ ಅವ್ಯವಸ್ಥೆಯ ಸರಿ ಪಡಿಸಲು ಹೋರಾಟದ ಅಂತಿಮ ಭಾಗವಾಗಿ ಚುನಾವಣಾ ಬಹಿಷ್ಕಾರ ಹಾಕಲಾಗಿದೆ. ಭೀಮಂಡೆ ಪ್ರದೇಶದಲ್ಲಿ 26 , ಕೊಲ್ಪೆ 20 , ನೆಲ್ಲಿಕಟ್ಟೆ 15 , ಕುದ್ರಾಯ 3 ಮತ್ತು ಹೊಳಿಬದಿ 13 ಹೀಗೆ ಒಟ್ಟು 77 ಮಲೆಕುಡಿಯ ಸಮುದಾಯ ವಾಸವಾಗಿರುವ ಈ ರಸ್ತೆಯ ಅಭಿವೃದ್ಧಿಗಾಗಿ ಈ ತನಕವೂ ಜನಪ್ರತಿನಿಧಿಗಳು , ಅಧಿಕಾರಿಗಳು ಮುಂದಾಗದಿರುವುದು ಅವರಿಗೆ ಆದಿವಾಸಿಗಳ ಬಗ್ಗೆ ಇರುವ ನಿರ್ಲಕ್ಷ್ಯತೆಗೆ ಸಾಕ್ಷಿಯಾಗಿದೆ. ಇಂತಹ ನಿರ್ಲಕ್ಷ್ಯತೆಯ ವಿರುದ್ಧದ ಅಂತಿಮ ಹೋರಾಟದ ಭಾಗವೇ ಚುನಾವಣಾ ಬಹಿಷ್ಕಾರ ಎನ್ನಲಾಗಿದೆ.

ಅಂಗಾಂಗ ವ್ಯಾಪಾರಕ್ಕಾಗಿ ನಕಲಿ ದಾಖಲೆ: 8ಕ್ಕೇರಿದ ಬಂಧಿತರ ಸಂಖ್ಯೆ

• **ಕಾಸರಗೋಡು:** ನಕಲಿ ದಾಖಲು ಪತ್ರಗಳನ್ನು ನಿರ್ಮಿಸಿ ಅಂಗಾಂಗ ದಾನ ನಡೆಸುತ್ತಿದ್ದ ಪ್ರಕರಣದ ಪ್ರಧಾನ ಆರೋಪಿಯನ್ನು ಸೆರೆ ಹಿಡಿಯುವಲ್ಲಿ ಎರ್ನಾಕುಳಂ ಪೊಲೀಸರು ಸಫಲರಾದರು.

ಕಳನಾಡು ಅಲ್ ನಿಹಾಮತ್ ಮಂಜಿಲ್ ನಿವಾಸಿ ಮುಹಮ್ಮದ್ ನಜೀಬ್ ಕಲ್ಲಟ್ರ (53) ಬಂಧಿತ ಆರೋಪಿಯಾಗಿದ್ದಾನೆ. ಎರ್ನಾಕುಳಂ ಗ್ರಾಮೀಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್.ಸುದರ್ಶನ್ ನೇತೃತ್ವದ ಪೊಲೀಸರ ವಿಶೇಷ ತಂಡ ಉತ್ತರಪ್ರದೇಶದ ಗಾಜಿಯಾಬಾದ್ ನಿಂದ ಸೆರೆ ಹಿಡಿದಿದ್ದಾರೆ.



ತನ್ನನ್ನು ಪೊಲೀಸರು ಹುಡುಕುತ್ತಿರುವುದು ಮನಗಂಡು ಆರೋಪಿ ತನ್ನ ಮೊಬೈಲ್ ಫೋನ್ ಸ್ವಿಚ್‌ಆಫ್ ಮಾಡಿ ವಿಮಾನದ ಮೂಲಕ ದಿಲ್ಲಿಗೆ ಹೋಗಿದ್ದನು. ಆ ಬಗ್ಗೆ ಮಾಹಿತಿ ಲಭಿಸಿದ ವಿಶೇಷ ಪೊಲೀಸರ ತಂಡ ಆತನ ಪತ್ತೆಗಾಗಿ ದಿಲ್ಲಿಗೆ ತೆರಳಿತು. ಆ ವೇಳೆ ಆರೋಪಿ ಅಲ್ಲಿಂದ ಗಾಜಿಯಾಬಾದ್‌ಗೆ ಪರಾರಿಯಾದ ಬಗ್ಗೆ ಪೊಲೀಸರಿಗೆ ಸ್ಪಷ್ಟ ಮಾಹಿತಿ ಲಭಿಸಿತು. ಆದರ ಜಾಡು ಹಿಡಿದು ಪೊಲೀಸರು ಅಲ್ಲಿಗೆ ತೆರಳಿ ಆರೋಪಿಯನ್ನು ಸೆರೆ ಹಿಡಿಯುವಲ್ಲಿ ಯಶಸ್ವಿಯಾದರು. ಇದರಿಂದ ಈ ಪ್ರಕರಣದಲ್ಲಿ ಬಂಧಿತರ ಸಂಖ್ಯೆ 8ಕ್ಕೇರಿದೆ.

ಎರ್ನಾಕುಳಂ ಕೇಂದ್ರೀಕರಿಸಿ ಮಾನವ ಅವಯವ ಕೇಂದ್ರ ಕಾರ್ಯವೆಸಗುತ್ತಿದೆ. ಈ ಪ್ರಕರಣಕ್ಕೆ ಸಂಬಂಧಿಸಿ ನಜೀಬ್‌ನ ಪತ್ನಿ ಕುನ್ನತ್ತುನಾಡ್ ಪೆರಿಂಜಾಲ ಬೈತುಲ್ ರಹ್ಮಾ ವಿಟಿಲ್‌ನ ರಶೀದಾಳನ್ನು ಕುನ್ನತ್ತುನಾಡು ಪೊಲೀಸರು ಈ ಹಿಂದೆಯೇ ಬಂಧಿಸಿದ್ದರು. ಬಳಿಕ ಇತರ ಆರೋಪಿಗಳಾದ ಕುನ್ನತ್ತುನಾಡು ಕುಮಾರಪುರದ ಸನ್ನಿ ವರ್ಗೀಸ್, ಆತನ ಪತ್ನಿ ಸಿನಿ ವರ್ಗೀಸ್, ಚೇಲಕುಳಂ ಕವುಂಜಪ್ಪಾರ ಸನೋಜ್, ರೀಜಾ, ಸುಧೀರ್ ಮತ್ತು ವಿನೋದ್ ಎಂಬವರನ್ನು ಪೊಲೀಸರು ಬಂಧಿಸಿದ್ದಾರೆ.

1 ಕೋಟಿ ರೂ. ವಸೂಲು

ಕಿಡ್ನಿ ದಾನ ಮಾಡಲು ತಯಾರಾಗುವವರಿಗೆ 20 ಲಕ್ಷರಿಂದ 25 ಲಕ್ಷದ ವರೆಗೆ ನೀಡುವ ಭರವಸೆ ನೀಡಿ ಬಳಿಕ ಕಿಡ್ನಿ ಅಗತ್ಯವಿರುವವರಿಂದ 1 ಕೋಟಿ ರೂ.ವನ್ನು ಈ ಜಾಲದವರು ಕೇಳಿ ಪಡೆಯುತ್ತಿದ್ದರೆಂಬ ಮಾಹಿತಿ ಲಭಿಸಿದೆ ಎಂದೂ, ಅದಕ್ಕಾಗಿ ಅವರು ನಕಲಿ ದಾಖಲು ಪತ್ರಗಳನ್ನು ತಯಾರಿಸಿ ಅದನ್ನು ಬಳಸುತ್ತಿದ್ದಾರೆಂದು ಪೊಲೀಸರು ತಿಳಿಸಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿ ಪ್ರಧಾನ ಆರೋಪಿ ಕಳನಾಡು ನಿವಾಸಿ ಮುಹಮ್ಮದ್ ನಜೀಬ್‌ನ ಡೈರಿ ಪೊಲೀಸರಿಗೆ ಲಭಿಸಿದ್ದು, ಅದರಲ್ಲಿ ಪೊಲೀಸರಿಗೆ ಮಹತ್ತರ ಮಾಹಿತಿಗಳು ಲಭಿಸಿದೆ.

ಈ ವ್ಯವಹಾರದಲ್ಲಿ ನಂಟು ಹೊಂದಿರುವ ಏಜೆಂಟರುಗಳ ಮಾಹಿತಿಗಳು ಪೊಲೀಸರಿಗೆ ಲಭಿಸಿದೆ ಎನ್ನಲಾಗಿದೆ. ಅಲ್ಲದೆ ಈ ದಂಧೆಯಲ್ಲಿ ಯಾರಾದರೂ ವೈದ್ಯರು ಮತ್ತು ಆಸ್ಪತ್ರೆಗಳು ಶಾಮೀಲಾಗಿದ್ದಾರೆಯೇ ಎಂಬ ಬಗ್ಗೆ ತನಿಖೆ ನಡೆಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಚುನಾವಣೆಯಲ್ಲಿ ತಮಿಳುನಾಡು, ಕೇರಳ ಸರಕಾರ ಪತನ

ಶ್ರೀಅಯ್ಯಪ್ಪನಿಂದ ಸರಿಯಾದ ಶಾಸ್ತಿ



• **ಮಂಗಳೂರು:** ತಮಿಳುನಾಡಿನಲ್ಲಿ ಸ್ಟಾಲಿನ್ ಸರಕಾರ ಮತ್ತು ಕೇರಳದಲ್ಲಿ ಪಿಣರಾಯಿ ವಿಜಯನ್ ಸರಕಾರದ ಸೋಲನ್ನು ಶಬರಿಮಲೈ ಅಯ್ಯಪ್ಪ ಸೇವಾ ಸಮಾಜ ದಕ್ಷಿಣ ಕನ್ನಡ ವತಿಯಿಂದ ಕದ್ರಿ ದೇವಸ್ಥಾನದ ಮುಂಭಾಗದಲ್ಲಿ ವಿಜಯೋತ್ಸವವಾಗಿ ಸಂಭ್ರಮಿಸಲಾಯಿತು.

ಸಾಸ್‌ನ ದ. ಕ. ಜಿಲ್ಲಾ ಮಹಿಳಾ ಪ್ರಮುಖ್ ಕಾತ್ಯಾಯಿನಿ ರಾವ್ ಮಾತನಾಡಿ, ಶಬರಿಮಲೆ ಪಾವಿತ್ರ್ಯತೆಯನ್ನು ಹಾಳು ಮಾಡಲು ಎಲ್ಲಾ ವರ್ಗದ ಮಹಿಳೆಯರಿಗೆ ಪ್ರವೇಶಕ್ಕೆ ಅವಕಾಶ ನೀಡಿ, ಯಾವ ವ್ರತ ನಿಯಮದ ಪಾಲನೆ ಬೇಕಿಲ್ಲ ಎಂದು, ಶಬರಿಮಲೆಯಲ್ಲಿನ ದ್ವಾರಪಾಲಕರ ಬಂಗಾರದ ಹೊದಿಕೆಯನ್ನುಅಪಹರಿಸಿದಪಿಣರಾಯಿ ಸರಕಾರಕ್ಕೆ ಸರಿಯಾದ ಶಿಕ್ಷೆಯನ್ನು ಸ್ವಾಮಿ ಅಯ್ಯಪ್ಪ ನೀಡಿದ್ದಾರೆ ಎಂದರು.

ಸಾಸ್‌ನ ದ. ಕ. ಜಿಲ್ಲಾ ಅಧ್ಯಕ್ಷ ಗಣೇಶ್ ಪೊದುವಾಳ್ ಮಾತನಾಡಿ, ಸನಾತನ ಹಿಂದೂ ಧರ್ಮವನ್ನು ಕೊರೋನ ವೈರಸ್, ಡೆಂಗ್ಯೂ ವೈರಸ್‌ಗೆ ಹೋಲಿಸಿದ ತಮಿಳುನಾಡಿನ ಸ್ಟಾಲಿನ್ ಅವರಿಗೆ ದೇವರು ಸರಿಯಾದ ಶಿಕ್ಷೆಯನ್ನು ನೀಡಿದ್ದಾರೆ ಎಂದು ಹೇಳಿದರು. ಈ ಹಿಂದೆ ಸಾಸ್ ಇಂತಹ ಸರಕಾರವನ್ನು ಕಿತ್ತೊಗೆಯಬೇಕೆಂದು ಪ್ರತಿಭಟನೆ ಮಾಡಿತ್ತು. ದೇವರ ನ್ಯಾಯಾಲಯದಲ್ಲಿ ನಮಗೆ ನ್ಯಾಯ ಸಿಕ್ಕಿದೆ ಎಂದು ಅವರು ಹೇಳಿದರು.

ಸಾಸ್‌ನ ಗೌರವಾಧ್ಯಕ್ಷರಾದ ಮೋಹನ್ ಪಡೀಲ್, ಮೋಹನ್ ಬರ್ಕೆ, ಗುರುಸ್ವಾಮಿಗಳಾದ ಜಗದೀಶ್ ಕಾಟಿಪಳ್ಳ, ಕಿರಣ್ ಕುಮಾರ್, ನವಪ್ರಭಾ ಇನ್ನಿತರರು ಉಪಸ್ಥಿತರಿದ್ದರು.

ವಿವಿ ಕಾಲೇಜಿನಲ್ಲಿ 'ಇಕ್ವಿನೊಕ್ಸ್ 2026- ಸಂಧ್ಯಾ ಮಂಥನ್' ಕಾರ್ಯಕ್ರಮ

ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಿ



• **ಮಂಗಳೂರು:** ಮಂಗಳೂರಿನ ಹಂಪನಕಟ್ಟೆ ವಿಶ್ವವಿದ್ಯಾನಿಲಯ ಕಾಲೇಜಿನ ಎಂಬಿಎ (ಐಬಿ) ಸಂಧ್ಯಾ ಕಾರ್ಯಕ್ರಮ ಮತ್ತು ಎಂಬಿಎ ಹಳೆಯ ವಿದ್ಯಾರ್ಥಿಗಳ ಸಂಘದ ಸಹಯೋಗದಲ್ಲಿ ಆಯೋಜಿಸಲಾಗಿದ್ದ ನಿರ್ವಹಣೆ ಮತ್ತು ಸಾಂಸ್ಕೃತಿಕ ಸಂಭ್ರಮ 'ಇಕ್ವಿನೊಕ್ಸ್ 2026- ಸಂಧ್ಯಾ ಮಂಥನ್' ಕಾರ್ಯಕ್ರಮದ ವಿವಿಧ ಸ್ಪರ್ಧೆಗಳಲ್ಲಿ ಎಸ್‌ಡಿಎಂ ಕಾಲೇಜು ಚಾಂಪಿಯನ್ ಆಗಿ ಹೊರಹೊಮ್ಮಿತು. ಕೆನರಾ ಕಾಲೇಜಿನ ವಿದ್ಯಾರ್ಥಿಗಳ ತಂಡ ರನ್ನರ್ಸ್ ಅಪ್ ಪ್ರಶಸ್ತಿ ಪಡೆದುಕೊಂಡಿತು.

ವಿವಿ ಕಾಲೇಜಿನ ರವೀಂದ್ರ ಕಲಾಭವನದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿದ ವಿಧಾನಸಭಾ ಅಧ್ಯಕ್ಷಯು.ಟಿ.ಖಾದರ್,ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ತಮ್ಮ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡುವತ್ತ ವಿದ್ಯಾರ್ಥಿಗಳು ಪಣ ತೊಡಬೇಕು ಎಂದು ಕರೆ ನೀಡಿದರು.

ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದು ತಮ್ಮ ಭವಿಷ್ಯ ರೂಪಿಸಿಕೊಳ್ಳುವುದರೊಂದಿಗೆ ದೇಶ ಮತ್ತು ಸಮಾಜಕ್ಕೂ ತಮ್ಮಿಂದಾದ ಕೊಡುಗೆ ನೀಡಬೇಕು. ಜೊತೆಗೆ ತಮ್ಮ ಕುಟುಂಬಕ್ಕೆ ದಾರಿದೀಪವಾಗಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಂಶುಪಾಲ ಪ್ರೊ. ಗಣಪತಿ ಗೌಡ. ಎಸ್, ಯಾವುದೇ ಕೆಲಸದಲ್ಲಿ ಯಶಸ್ವಿಯಾಗಲು ನಿರಂತರ ಪ್ರಯತ್ನ ಹಾಗೂ ಆತ್ಮಸ್ಥೈರ್ಯ ಮುಖ್ಯ. ವಿವಿಧ ವೃತ್ತಿಪರ ಕೌಶಲ್ಯ ತರಬೇತಿ ಪಡೆದುಕೊಂಡು ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಕರೆನೀಡಿದರು.

ಕಾಲೇಜಿನ ಸಂಧ್ಯಾ ಕಾರ್ಯಕ್ರಮದ ಸಲಹೆಗಾರ ಪ್ರೊ.ಜಯವಂತ ನಾಯಕ್, ಸ್ನಾತಕೋತ್ತರ ವಿಭಾಗಗಳ ಸಲಹೆಗಾರ ಪ್ರೊ. ಅಬೂಬಕರ್ ಸಿದ್ದಿಕ್ ಮತ್ತಿತರರು ಉಪಸ್ಥಿತರಿದ್ದರು. ಸಂಧ್ಯಾ ಕಾಲೇಜಿನ ಸ್ನಾತಕೋತ್ತರ ಎಂಬಿಎ (ಐಬಿ) ವಿಭಾಗದ ಉಪನ್ಯಾಸಕ ಹಾಗೂ ಹಳೆ ವಿದ್ಯಾರ್ಥಿ ಸಂಘದ ಖಜಾಂಜಿ ರಾಜೇಶ್ ಕುಮಾರ್ ಸ್ವಾಗತಿಸಿದರು. ವಿದ್ಯಾರ್ಥಿ ಸಂಯೋಜಕ ಅಹಮದ್ ಶೋಯೆಬ್ ವಂದಿಸಿದರು. ಎಂಬಿಎ ಪ್ರಥಮ ವರ್ಷದ ವಿದ್ಯಾರ್ಥಿನಿ ಪೂಜಾ ಕಾರ್ಯಕ್ರಮ ನಿರೂಪಿಸಿದರು.

ಕಡಬ ತಾಲೂಕಿನ ವಿವಿಧೆಡೆ ಮತಾಂತರದ ಷಡ್ಯಂತ್ರಕ್ಕೆ ವಿ.ಹಿಂ.ಪ. ಆಕ್ರೋಶ

ಪೊಲೀಸರು ಸೂಕ್ತ ಕಾನೂನು ಕ್ರಮ ಕೈಗೊಳ್ಳದಿದ್ದಲ್ಲಿ ಪ್ರತಿಭಟನೆ ಎಚ್ಚರಿಕೆ

• **ಕಡಬ:** ಕಡಬ ತಾಲೂಕಿನ ಹಲವು ಗ್ರಾಮಗಳಲ್ಲಿ ಹಿಂದೂಗಳನ್ನು ಮತಾಂತರ ಮಾಡುವ ಷಡ್ಯಂತ್ರ ನಡೆಯುತ್ತಲೇ ಇದೆ. ಮತಾಂತರದ ಅಡ್ಡೆಗಳ ಬಗ್ಗೆ ನಾವು ಮಾಹಿತಿ ನೀಡಿದಾಗ ಪೊಲೀಸರು ಅಗತ್ಯ ತನಿಖೆ ನಡೆಸಿ ಮತಾಂತರಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಇಲ್ಲದೇ ಹೋದಲ್ಲಿ ಉಗ್ರ ರೀತಿಯ ಪ್ರತಿಭಟನೆ ಅನಿವಾರ್ಯ ಎಂದು ವಿಶ್ವ ಹಿಂದೂ ಪರಿಷತ್ ಜಿಲ್ಲಾ ಕಾರ್ಯದರ್ಶಿ ನವೀನ್ ನೆರಿಯ ಎಚ್ಚರಿಸಿದರು.

ಅವರು ಸೋಮವಾರ ಕಡಬದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹಿಂದೂಗಳ ದೌರ್ಬಲ್ಯ ಹಾಗೂ ಬಡತನದಂತಹ ಸಮಸ್ಯೆಗಳನ್ನು ಬಂಡವಾಳ ಮಾಡಿಕೊಂಡು ವಿವಿಧ ಆಮಿಷಗಳನ್ನು ಒಡ್ಡಿ ಮತಾಂತರ ಯತ್ನಗಳು ನಡೆಯುತ್ತಿವೆ. ಮತಾಂತರದಂತಹ ಸವಾಲನ್ನು ವಿಶ್ವ ಹಿಂದೂ ಪರಿಷತ್ ಎದುರಿಸುತ್ತಾ ಬಂದಿದೆ. ಹಿಂದೂ ಧರ್ಮದಿಂದ ಮತಾಂತರವಾದರೂ ಅವರನ್ನು ಮರಳಿ ಸ್ವಧರ್ಮಕ್ಕೆ ತರುವಲ್ಲಿ ಮಹತ್ತರವಾದ ಕೆಲಸವನ್ನು ಮಾಡಲಾಗುತ್ತಿದೆ ಎಂದರು.



ಇತ್ತೀಚೆಗೆ ಕಡಬ ಠಾಣಾ ವ್ಯಾಪ್ತಿಯ ಕೆರ್ಮಾಯಿಯ ಮನೆಯೊಂದರಲ್ಲಿ ಬೆಂಗಳೂರು ಮೂಲದವರನ್ನು ಕರೆತಂದು ಗುಪ್ತವಾಗಿ ಪ್ರಾರ್ಥನೆ ಹಾಗೂ ಮತಾಂತರ ಯತ್ನ ನಡೆಸಲಾಗುತ್ತಿದೆ ಎಂದು ನಮ್ಮ ಕಾರ್ಯಕರ್ತರು ನೀಡಿದ ಮಾಹಿತಿಯ ಮೇರೆಗೆ ಪೊಲೀಸರು ಪರಿಶೀಲನೆ ನಡೆಸಿದಾಗ ಮತಾಂತರ ಯತ್ನ ನಡೆದಿರುವುದು ಕಂಡು ಬಂದಿದೆ. 4 ತಿಂಗಳ ಹಿಂದೆ ಅವರನ್ನು ಮತಾಂತರ ಮಾಡಿ ಇಲ್ಲಿ ಮತ ಭೋಧನೆ ಮಾಡಲಾಗುತ್ತಿತ್ತು. ಆದರೆ, ಪೊಲೀಸರಿಗೆ ಅವರು ಹೇಳಿಕೆ ನೀಡುವಾಗ20 ವರ್ಷಗಳ ಹಿಂದೆಮತಾಂತರವಾಗಿರುವುದಾಗಿ ಪ್ರಕರಣವನ್ನು ತಿರುಚಿದ್ದಾರೆ. ಪ್ರತೀ ಗ್ರಾಮ ಹಾಗೂ ಬೂತ್ ಮಟ್ಟದಲ್ಲಿ ನಮ್ಮ ಕಾರ್ಯಕರ್ತರು ಮತಾಂತರದಂತಹ ಕೃತ್ಯಗಳ ಬಗ್ಗೆ ನಿಗಾ ವಹಿಸಿ ಪೊಲೀಸರಿಗಿಂತ ಮೊದಲೇ ಮಾಹಿತಿ ಸಂಗ್ರಹಿಸುತ್ತಾರೆ ಎಂದು ಅವರು ಹೇಳಿದರು.

ಇಲ್ಲಿ ಎಲ್ಲೆಲ್ಲಿ, ಹೇಗೆ ಮತಾಂತರ ನಡೆಯುತ್ತಿದೆ ಎಂದು ನಮಗೆ ಗೊತ್ತಿದೆ. 2-3 ತಿಂಗಳಿಂದ ಮತಾಂತರ ಮಾಡಿರುವ 12 ಪ್ರಕರಣಗಳು ಇವೆ. 15ರಿಂದ 20 ಹಿಂದೂ ಯುವತಿಯರನ್ನು ಕ್ರಿಶ್ಚಿಯನ್ನರು ಮದುವೆಯಾಗಿ ಮತಾಂತರಿಸಿದ್ದಾರೆ. ಈ ಬಗ್ಗೆ ನಾವು ಪೊಲೀಸರಿಗೆ ದೂರು ನೀಡುತ್ತೇವೆ. ಅಷ್ಟಕ್ಕೂ ಬಗ್ಗದಿದ್ದರೆ, ಒಂದು ಹಂತದವರೆಗೆ ನಾವು ಸಹಿಸುತ್ತೇವೆ. ಕೈ ಮೀರಿದರೆ ಅದಕ್ಕೆ ಜಿಲ್ಲಾಡಳಿತ ಹೊಣೆಯಾಗುತ್ತದೆ ಎಂದು ನವೀನ್ ನೆರಿಯ ಎಚ್ಚರಿಸಿದರು.

ಪಂಜದ ಒಂದು ಕುಟುಂಬವನ್ನು ಆಮಿಷವೊಡ್ಡಿ ಮತಾಂತರ ಮಾಡಿ ಯಾವುದೇ ಸವಲತ್ತು ನೀಡದೆ ವಂಚಿಸಿದವರನ್ನು ನಾವು ಘರ್ ವಾಪಾಸಿ ಮಾಡಿದ್ದೇವೆ. ಬೆಂಗಳೂರಿನಿಂದ ಅಥವಾ ಬೇರೆ ಕಡೆಗಳಿಂದ ಮತಾಂತರ ಮಾಡಿ ಇಲ್ಲಿಗೆ ಕರೆ ತಂದು ಗುಪ್ತವಾಗಿ ಮತಾಂತರವನ್ನು ಗಟ್ಟಿಗೊಳಿಸುವ ಕಾರ್ಯ ಮಾಡಿದರೆ ನಮ್ಮ ಕಾರ್ಯಕರ್ತರು ಸುಮ್ಮನಿರುವುದಿಲ್ಲ. ಮತಾಂತರಿಗಳ ವಿರುದ್ಧ ಪೊಲೀಸರು ಹಾಗೂ ಜಿಲ್ಲಾಡಳಿತ ಗಂಭೀರ ತನಿಖೆ ನಡೆಸಬೇಕು ಎಂದು ಅವರು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ವಿಶ್ವ ಹಿಂದೂ ಪರಿಷತ್ ಜಿಲ್ಲಾ ಸಹ ಕಾರ್ಯದರ್ಶಿ ಪ್ರಮೋದ್ ರೈ ನಂದಗುರಿ, ಕಡಬ ಪ್ರಖಂಡ ಕಾರ್ಯದರ್ಶಿ ಪ್ರಮೀಳಾ ಲೋಕೇಶ್ ಹಾಗೂ ಮಾತೃಶಕ್ತಿ ಸಂಯೋಜಕಿ ಪ್ರೇಮಲತಾ ಕೇಪುಂಜ ಉಪಸ್ಥಿತರಿದ್ದರು.

ಮಾದಿಗ ಸಮುದಾಯವೇ ಟಾರ್ಗೆಟ್

ಕೋಲಾರ, ತುಮಕೂರು, ಬೆಂಗಳೂರು ಜಿಲ್ಲೆಗಳಿಂದ ಮಾದಿಗ ಜನಾಂಗದವರನ್ನು ಕರೆ ತಂದು, ಮತಾಂತರ ಮಾಡಿ ಕಡಬ ತಾಲೂಕಿನ ವಿವಿಧ ಚಚ್‌ಗಳಿಗೆ ಪ್ರಾರ್ಥನೆ ಮಾಡಿಸಿ, ಮತಾಂತರವನ್ನು ಗಟ್ಟಿಗೊಳಿಸುವ ಕೆಲಸ ಮಾಡಿದ್ದಾರೆ. ಪ್ರೀತಿಸಿದ ಹುಡುಗಿಯರನ್ನು ಮದುವೆ ಮಾಡಿಸಿಕೊಡುತ್ತೇವೆ ಎನ್ನುವ ಆಮಿಷವೊಡ್ಡಿ ಆ ಮೂಲಕ ಹುಡುಗಿಯ ಕುಟುಂಬವನ್ನು ಮತಾಂತರ ಮಾಡುವ ಷಡ್ಯಂತ್ರ ನಡೆಯುತ್ತಿದೆ. ಇಡೀ ರಾಜ್ಯದಲ್ಲಿ ದೊಡ್ಡ ಸಮುದಾಯವಾದ ಮಾದಿಗ ಸಮುದಾಯವನ್ನು ಟಾರ್ಗೆಟ್ ಮಾಡಿ, ದೂರದ ಊರಿನಲ್ಲಿ ಮತಾಂತರ ಮಾಡಿ ಈ ಭಾಗದಲ್ಲಿ ಅದನ್ನು ಗಟ್ಟಿ ಮಾಡುವ ಕೆಲಸ ನಡೆಯುತ್ತಿದೆ. ದೂರದ ಬೆಂಗಳೂರು ಮುಂತಾದೆಡೆ ಮಾದಿಗ ಸಮುದಾಯದವರು ಹಿಂದುತ್ವದ ಜೊತೆಗೆ ಗಟ್ಟಿಯಾಗಿದ್ದಾರೆ. ಅಲ್ಲಿ ಮತಾಂತರಿಗಳ ಕುತಂತ್ರಗಳು ನಡೆಯುವುದಿಲ್ಲ. ಹಾಗಾಗಿ ಅಲ್ಲಿ ಗುಪ್ತವಾಗಿ ಮತಾಂತರ ಮಾಡಿ ಕಡಬ ಭಾಗದ ಗ್ರಾಮೀಣ ಪ್ರದೇಶಗಳಲ್ಲಿ ಅದನ್ನು ಅನುಷ್ಠಾನ ಮಾಡಲು ಹೊರಟಿದ್ದಾರೆ ಎಂದು ನವೀನ್ ನೆರಿಯ ಅವರು ವಿವರಿಸಿದರು.

ಉದ್ಘಾಟನೆಗೊಂಡರೂ ಬಸ್ ಟರ್ಮಿನಲ್‌ಗೆ ಬರುತ್ತಿಲ್ಲ ಬಸ್ | ಪ್ರೆಶರ್ ಕೊರತೆಯಿಂದ ಸಮರ್ಪಕವಾಗಿ ಬರುತ್ತಿಲ್ಲ ನೀರು

ರೇಷನಿಂಗ್ ಬಳಿಕ ನೀರು ವಿತರಣೆ ಸಮಸ್ಯೆ

▸ **ಹರೀಶ ಕುಲ್ಕುಂದ**

ದಿಗಂತ ವಾಟರ್ ಚೆಕ್

ಮಂಗಳೂರು: ನೀರು ಪೂರೈಕೆಗೆ ಮಂಗಳೂರು ಮಹಾನಗರ ಪಾಲಿಕೆ ರೇಷನಿಂಗ್ ವ್ಯವಸ್ಥೆ ಜಾರಿಗೊಳಿಸಿದ ಬಳಿಕ ಮಂಗಳಾದೇವಿ ದೇವಸ್ಥಾನದ ಸುತ್ತಲಿನ ಪ್ರದೇಶಗಳನ್ನು ಒಳಗೊಂಡಿರುವ ಮಂಗಳಾದೇವಿ ವಾರ್ಡ್‌ನಲ್ಲಿ ಸಮರ್ಪಕವಾಗಿ ನೀರು ಪೂರೈಕೆ ಆಗುತ್ತಿಲ್ಲ ಎಂಬ ದೂರುಗಳಿವೆ.

ಪಾಂಡೇಶ್ವರ ಜಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ ಕಚೇರಿ ಬಳಿಯಿಂದ ಪಾಂಡೇಶ್ವರ ಶಿವನಗರ, ಅಮರ್ ಆಳ್ವ ರಸ್ತೆ, ಮಂಕಿಸ್ಟ್ಯಾಂಡ್ ನ್ಯೂರೋಡ್, ಮಂಗಳಾದೇವಿ ಮುಖ್ಯರಸ್ತೆ, ಎಮ್ಮೆಕೆರೆ, ರಾಮಕೃಷ್ಣ ಮಠ, ಮಂಗಳಾದೇವಿ ದೇವಸ್ಥಾನ ಪ್ರದೇಶಗಳನ್ನು ಒಳಗೊಂಡಿರುವ ಮಂಗಳಾದೇವಿ ವಾರ್ಡ್‌ನಲ್ಲಿ ಸ್ವಲ್ಪಮಟ್ಟಿಗೆ ನೀರಿನ ಸಮಸ್ಯೆ ಇದೆ.

ಈ ವಾರ್ಡ್‌ನ ಅಮರ್ ಆಳ್ವ ರಸ್ತೆ, ಎಮ್ಮೆಕೆರೆ ಪ್ರದೇಶಗಳಲ್ಲಿ ಈ ಬೇಸಿಗೆಯಲ್ಲಿ ನೀರಿನ ಕೊರತೆ ಕಾಣಿಸಿಕೊಂಡಿತ್ತು. ರೇಷನಿಂಗ್ ಆರಂಭಗೊಂಡ ಬಳಿಕ ಎಮ್ಮೆಕೆರೆ ಸುತ್ತಮುತ್ತ ನೀರಿನ ಅಭಾವ ಹೆಚ್ಚಳಗೊಂಡಿದೆ. ಮನಪಾ ವತಿಯಿಂದ ನೀರು ಪೂರೈಸುವಪೈಪ್‌ಲೈನ್‌ನಲ್ಲಿಪ್ರೆಶರ್‌ಕೊರತೆಯಿಂದ ಸಮರ್ಪಕವಾಗಿ ನೀರು ತಲುಪುತ್ತಿಲ್ಲ. ದಿನ ಬಿಟ್ಟು ದಿನ ನೀರು ಬರುತ್ತಿರುವುದರಿಂದ ಕೆಲ ಸ್ಥಳಗಳಿಗೆ ನೀರು ತಲುಪುತ್ತಿಲ್ಲ. ಅಗತ್ಯ ಇರುವಷ್ಟು ನೀರು ಸಂಗ್ರಹಿಸಿಟ್ಟುಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂಬುದು ಸ್ಥಳೀಯರ ಆರೋಪ.

ಮಂಗಳಾದೇವಿ ವಾರ್ಡ್‌ಗೆ ಪಡೀಲು ಹಾಗೂ ಬೆಂದೂರುವೆಲ್ ಟ್ಯಾಂಕ್‌ನಿಂದ ನೀರು ಪೂರೈಕೆ ಮಾಡಲಾಗುತ್ತಿದೆ. ಇಡೀ ವಾರ್ಡ್‌ಗೆ ಪಡೀಲ್ ಟ್ಯಾಂಕ್‌ನಿಂದ ನೀರು ಒದಗಿಸಲಾಗುತ್ತಿದೆ. ಜತೆಗೆ ಹಳೆಯ ಲೈನ್ ಮೂಲಕ ಬೆಂದೂರುವೆಲ್‌ನಿಂದಲೂ ನೀರು ಸರಬರಾಜು ಆಗುತ್ತಿದೆ. ಪ್ರತಿದಿನ ಬೆಳಗ್ಗೆ 5ರಿಂದ ಮಧ್ಯಾಹ್ನ 12ರವರೆಗೆ ನೀರು ಬರುತ್ತಿತ್ತು. ರೇಷನಿಂಗ್ ಬಳಿಕವೂ ಬಹುತೇಕ ಇದೇ ಸಮಯದಲ್ಲಿ ನೀರು ಬರುತ್ತಿದೆ.

ಈ ವಾರ್ಡ್‌ನಲ್ಲಿ ಟ್ಯಾಂಕರ್ ಮೂಲಕ ನೀರು ಒದಗಿಸುವ ಅನಿವಾರ್ಯತೆ ಇದುವರೆಗೆ ಉಂಟಾಗಿಲ್ಲ.ಆದರೆ,ರೇಷನಿಂಗ್‌ಮುಂದುವರೆದರೆ ಸರಿಯಾಗಿ ನೀರು ಪೂರೈಕೆಯಾಗದೇ ನೀರಿನ ಅಭಾವ ಉಂಟಾಗಿ ಟ್ಯಾಂಕರ್ ಮೂಲಕ ನೀರು ಪೂರೈಸಬೇಕಾದೀತು ಎನ್ನುತ್ತಾರೆ ಇಲ್ಲಿನ ನಿವಾಸಿಗಳು. ಎರಡು ದಿನಕ್ಕೊಮ್ಮೆ ನೀರು ಬರುತ್ತಿರುವ ಕಾರಣ ಫ್ಲ್ಯಾಟ್‌ಗಳೂ ಟ್ಯಾಂಕರ್ ನೀರು ಬಳಸುವುದು ಅನಿವಾರ್ಯ ಆಗಲಿದೆ. ಈ ವಾರ್ಡ್‌ನಲ್ಲಿ ಸಾರ್ವಜನಿಕ ಬಾವಿ ಹಾಗೂ ಕೊಳವೆ ಬಾವಿಗಳು ಇಲ್ಲ. ಈ ಹಿಂದೆ ಕೊಳವೆಬಾವಿ ಕೊರೆಯಿಸಲಾಗಿತ್ತು. ಆದರೆ, ನೀರು ಸಿಕ್ಕಿಲ್ಲ.

ಮಂಗಳಾದೇವಿ ವಾರ್ಡ್‌ನಲ್ಲಿ ಜಲಸಿರಿ ಯೋಜನೆ ಕಾಮಗಾರಿಗಳು ನಿಧಾನಗತಿಯಲ್ಲಿ ಸಾಗಿದೆ. ಇತ್ತೀಚಿನ ದಿನಗಳಲ್ಲಿ ಕೆಲಸಗಳು ಆಗುತ್ತಿಲ್ಲ. ಮಂಗಳಾದೇವಿ ಮುಖ್ಯರಸ್ತೆ ಸಹಿತ ವಿವಿಧ ಕಡೆಗಳಲ್ಲಿ ಮುಖ್ಯ ಪೈಪ್‌ಲೈನ್ ಆಗಿಲ್ಲ. ನಂದಿಗುಡ್ಡ ವಾಮನ ನಾಯಕ್ ಮೈದಾನ ಬಳಿ ಟ್ಯಾಂಕ್ ನಿರ್ಮಾಣಗೊಂಡಿದೆ.



ಮಂಗಳಾದೇವಿಯಲ್ಲಿ ಬಸ್ ನಿಲ್ದಾಣ ನಿರ್ಮಾಣಗೊಂಡಿದ್ದರೂ ಬಸ್‌ಗಳು ಆಗಮಿಸುತ್ತಿಲ್ಲ

ಇಲಾಖೆ ಕ್ರಮ ಕೈಗೊಳ್ಳಲಿ

ಮಂಗಳಾದೇವಿಗೆ ನಗರದ ವಿವಿಧ ಕಡೆಗಳಿಂದ ಆಗಮಿಸುವ ಬಸ್‌ಗಳು ನಿಲ್ಲಲು ಮಂಗಳಾದೇವಿಯಲ್ಲಿ ಸುಸಜ್ಜಿತ ಬಸ್ ಟರ್ಮಿನಲ್ ನಿರ್ಮಿಸಲಾಗಿದೆ. ಸಂಚಾರಿ ಪೊಲೀಸರು ಹಾಗೂ ಬಸ್ ಮಾಲಕರನ್ನು ವಿಶ್ವಾಸಕ್ಕೆ ಪಡೆದು ಈ ಬಸ್ ತಂಗುದಾಣ ನಿರ್ಮಿಸಲಾಗಿದೆ. ಮಂಗಳಾದೇವಿ ದೇವಸ್ಥಾನದ ಎದುರು ಬಸ್ ನಿಲ್ಲುವುದರಿಂದ ಉಂಟಾಗುವ ಅಡಚಣೆ ತಪ್ಪಿಸಲು ಈ ಬಸ್ ಟರ್ಮಿನಲ್ ನಿರ್ಮಿಸಲಾಗಿದೆ. ಆದರೆ, ಬಸ್‌ಗಳು ಇಲ್ಲಿಗೆ ಬರುತ್ತಿಲ್ಲ. ಶಾಲಾ ಬಸ್‌ಗಳು, ಖಾಸಗಿ ವಾಹನಗಳನ್ನು ಬಸ್ ಟರ್ಮಿನಲ್‌ನಲ್ಲಿ ಪಾರ್ಕಿಂಗ್ ಮಾಡಲಾಗುತ್ತಿದೆ. ಬಸ್‌ಗಳು ಈ ಬಸ್ ನಿಲ್ದಾಣದೊಳಕ್ಕೆ ಬಂದು ಹೋಗಲು ಸಂಬಂಧಪಟ್ಟ ಇಲಾಖೆಗಳು ಕ್ರಮ ಕೈಗೊಳ್ಳಬೇಕು ಎನ್ನುತ್ತಾರೆ ಮಂಗಳಾದೇವಿ ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್ ಪ್ರೇಮಾನಂದ ಶೆಟ್ಟಿ.

ಕೊಳಚೆ ನೀರು ಸೋರಿಕೆ

ಶಾಂತ ಆಳ್ವ ಕಂಪೌಂಡ್‌ನಲ್ಲಿ ಡ್ರೈನೇಜ್ ಸಮಸ್ಯೆ ಜನತೆಯನ್ನು ಕಾಡುತ್ತಿದೆ. ಪಾಂಡೇಶ್ವರ ವೆಟ್‌ವೆಲ್ ಕಾರ್ಯನಿರ್ವಹಿಸದೇ ಇದ್ದಾಗ ಇಲ್ಲಿನ ಮ್ಯಾನ್‌ಹೋಲ್‌ಗಳಲ್ಲಿ ಕೊಳಚೆ ನೀರು ಸೋರಿಕೆ ಆಗುತ್ತದೆ. ವಿದ್ಯುತ್ ಕೈಕೊಟ್ಟಾಗ ಅಥವಾ ಇತರ ತಾಂತ್ರಿಕ ಸಮಸ್ಯೆಯಿಂದ ವೆಟ್‌ವೆಲ್ ಸ್ಥಗಿತಗೊಂಡಾಗ ಸಮಸ್ಯೆ ಹೆಚ್ಚಾಗುತ್ತದೆ. ಶಾಂತ ಆಳ್ವ ಕಂಪೌಂಡ್, ಶಿವನಗರ, ಸುಭಾಷ್ ನಗರ ಪ್ರದೇಶಗಳಲ್ಲಿ ಯುಜಿಡಿ ತ್ಯಾಜ್ಯ ಸೋರಿಕೆ ಸಮಸ್ಯೆಯಿದೆ.



ಮಂಗಳಾದೇವಿ ವಾರ್ಡ್‌ನಲ್ಲಿ ನೀರು ಪೂರೈಕೆಗೆ ರೇಷನಿಂಗ್ ವ್ಯವಸ್ಥೆ ಜಾರಿಗೊಳಿಸಿದ ಬಳಿಕ ಕೆಲ ಪ್ರದೇಶಗಳಿಗೆ ಸಮರ್ಪಕವಾಗಿ ನೀರು ಪೂರೈಕೆ ಆಗುತ್ತಿಲ್ಲ. ನೀರು ಪೂರೈಕೆಗೆ ರೇಷನಿಂಗ್ ಅಗತ್ಯ ಇರಲಿಲ್ಲ. ತುಂಬೆ ಡ್ಯಾಂನಲ್ಲಿ ನೀರು ಕಡಿಮೆಯಾದರೆ ಎಎಂಆರ್ ಡ್ಯಾಂನಿಂದ ನೀರು ಹರಿಸಲು ಅವಕಾಶವಿದೆ. ಎಲ್ಲ ಪ್ರದೇಶಗಳಿಗೆ ನೀರು ಸರಿಯಾಗಿ ವಿತರಣೆ ಮಾಡಲು ಕ್ರಮ ಕೈಗೊಳ್ಳಬೇಕಿದೆ. ಮಂಗಳಾದೇವಿ ರಥಬೀದಿ ರಸ್ತೆಯನ್ನು ಇಕ್ಕೆಲಗಳಲ್ಲಿ ಫುಟ್‌ಪಾತ್, ಡ್ರೈನೇಜ್ ಸಹಿತ ಮಾದರಿಯಾಗಿ ನಿರ್ಮಿಸಲಾಗಿದೆ. ವಾರ್ಡ್ ಶೇ.98ರಷ್ಟು ಪ್ರದೇಶಗಳಲ್ಲಿ ಡ್ರೈನೇಜ್ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸಿ, ಸಂಪರ್ಕ ಕಲ್ಪಿಸಲಾಗಿದೆ. ಮಂಗಳಾದೇವಿ ಆರೋಗ್ಯ ಕೇಂದ್ರ, ಪಶು ಚಿಕಿತ್ಸಾಲಯ ಮೇಲ್ದರ್ಜೆಗೇರಿಸಲಾಗಿದೆ. ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ.

■ **ಪ್ರೇಮಾನಂದ ಶೆಟ್ಟಿ,** ಮಂಗಳಾದೇವಿ ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್

▸ **ಶಿವನಗರದಲ್ಲಿ ಕೃತಕ ನೆರೆ**

ಮಂಗಳಾದೇವಿ ವಾರ್ಡ್‌ನ ಪಾಂಡೇಶ್ವರ ರೈಲ್ವೆ ಟ್ರ್ಯಾಕ್ ಬಳಿ ರಾಜಕಾಲುವೆ ಹಾದುಹೋಗುತ್ತಿದೆ. ಮಳೆಗಾಲದಲ್ಲಿ ಒಂದೆರಡು ಗಂಟೆಗಳ ಕಾಲ ನಿರಂತರ ಭಾರಿ ಮಳೆ ಸುರಿದಾಗ ಇಲ್ಲಿನ ಶಿವನಗರ ಪ್ರದೇಶದಲ್ಲಿ ರಾಜಕಾಲುವೆ ಉಕ್ಕಿ ಕೃತಕ ನೆರೆ ಸೃಷ್ಟಿಯಾಗುತ್ತದೆ. ರಾಜಕಾಲುವೆ ಹೂಳು ತೆಗೆದರೂ ಪ್ರವಾಹ ಉಂಟಾಗುತ್ತಿದೆ. ಇಲ್ಲಿನ ಸುತ್ತಲಿನ ಪ್ರದೇಶಗಳಲ್ಲಿ ಲೇಔಟ್‌ಗಳು ಆಗಿದ್ದು, ಮಳೆ ನೀರು ಹರಿಯಲು ಜಾಗ ಇಲ್ಲದಾಗಿದೆ. ಇದರಿಂದಾಗಿ ಶಿವನಗರದ 10ರಷ್ಟು ಮನೆಗಳಿಗೆ ನೀರು ನುಗ್ಗುತ್ತಿದೆ. ಮನೆಯೊಳಗಿನ ಪೀಠೋಪಕರಣಗಳಿಗೆ ಹಾನಿ ಉಂಟಾಗುತ್ತಿದೆ.

ಬಂಗಾಳ ಬಾಂಗ್ಲಾ ಬೇಲಿ



ಪುಟ ೧➡ ಪಶ್ಚಿಮ ಬಂಗಾಳವು ಬಾಂಗ್ಲಾದೇಶದೊಂದಿಗೆ 4,097 ಕಿ.ಮೀ. ಉದ್ದದ ಗಡಿಯನ್ನು ಹಂಚಿಕೊಂಡಿದೆ. ಕೇಂದ್ರ ಗೃಹ ಸಚಿವಾಲಯದ ಪ್ರಕಾರ, ಸುಮಾರು 3,240 ಕಿ.ಮೀ. ಪ್ರದೇಶಕ್ಕೆ ಈಗಾಗಲೇ ಬೇಲಿ ನಿರ್ಮಾಣವಾಗಿದ್ದು, ಸುಮಾರು 850 ಕಿ.ಮೀ. ಭಾಗ, ಇದರಲ್ಲಿ 175 ಕಿ.ಮೀ. ಕಠಿಣ ಭೂಪ್ರದೇಶವೂ ಸೇರಿದೆ, ಇನ್ನೂ ಬೇಲಿಯಿಲ್ಲದೆ ಉಳಿದಿದೆ.

ಹಿಂದಿನ ಟಿಎಂಸಿ ಸರ್ಕಾರವು ಭೂಮಿ ಹಸ್ತಾಂತರದಲ್ಲಿ ವಿಳಂಬ ಮಾಡಿದ್ದರಿಂದ ಬೇಲಿ ಕಾಮಗಾರಿ ನಿಧಾನಗೊಂಡಿತು ಎಂದು ಬಿಜೆಪಿ ಹಲವು ಬಾರಿ ಆರೋಪಿಸಿತ್ತು. ಇದಕ್ಕೆ ಪ್ರತಿಯಾಗಿ ಟಿಎಂಸಿ, ಬೇಲಿ ಕಾಮಗಾರಿಗೆ ಮೊದಲು ಸ್ಥಳೀಯರ ಭೂಮಿ ಮತ್ತು ಜೀವನೋಪಾಯದ ಸಮಸ್ಯೆಗಳನ್ನು ಪರಿಹರಿಸಬೇಕಾಗಿತ್ತು ಎಂದು ಹೇಳಿತ್ತು. ಆದರೆ, ಹಿಂದಿನ ಟಿಎಂಸಿ ಸರ್ಕಾರದ ಅವಧಿಯಲ್ಲಿ 127 ಕಿ.ಮೀ. ಉದ್ದದ ಪ್ರಸ್ತಾವಿತ ಪ್ರದೇಶದಲ್ಲಿ ಕೇವಲ 8 ಕಿ.ಮೀ. ಮಾತ್ರ ಮುಚ್ಚಲಾಗಿತ್ತು ಎಂದು ಅಧಿಕಾರಿ ಆರೋಪಿಸಿದರು. ಟಿಎಂಸಿ ಆಡಳಿತದ ಅವಧಿಯಲ್ಲಿಯೂ, ಅಂತಾರಾಷ್ಟ್ರೀಯ ಗಡಿ ನಿರ್ವಹಣೆ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತಿದ್ದುದರಿಂದ ಗಡಿ ಭದ್ರತಾ ಕಾರ್ಯಾಚರಣೆಗಳು ಬಿಎಸ್‌ಎಫ್ ಅಧೀನದಲ್ಲೇ ಇವೆ. ಆದರೆ ಬೇಲಿ ಯೋಜನೆಗಳಿಗೆ ಸಂಬಂಧಿಸಿದ ಭೂಸ್ವಾಧೀನ, ಸ್ಥಳೀಯ ಅನುಮತಿಗಳು ಮತ್ತು ಆಡಳಿತಾತ್ಮಕ ಸಮನ್ವಯವನ್ನು ರಾಜ್ಯ ಸರ್ಕಾರ ನಿಯಂತ್ರಿಸುತ್ತಿತ್ತು.

2021ರಲ್ಲಿ ಕೇಂದ್ರ ಸರ್ಕಾರವು ಪಶ್ಚಿಮ ಬಂಗಾಳದಲ್ಲಿ ಬಿಎಸ್‌ಎಫ್ ಅಧಿಕಾರ ವ್ಯಾಪ್ತಿಯನ್ನು ಗಡಿಯಿಂದ 15 ಕಿ.ಮೀ.ನಿಂದ 50 ಕಿ.ಮೀ.ವರೆಗೆ ವಿಸ್ತರಿಸಿದ ಬಳಿಕ ಈ ವಿಷಯ ರಾಜಕೀಯವಾಗಿ ವಾಕ್ಸಮರಕ್ಕೆ ಕಾರಣವಾಗಿತ್ತು. ಆಗಿನ ಟಿಎಂಸಿ ಸರ್ಕಾರ ಇದನ್ನು ಒಕ್ಕೂಟ ವ್ಯವಸ್ಥೆಯ ಅಧಿಕಾರಗಳ ಮೇಲೆ ದಾಳಿ ಎಂದು ತೀವ್ರವಾಗಿ ವಿರೋಧಿಸಿತ್ತು.

ಮೊದಲ ಸಚಿವ ಸಂಪುಟ ಸಭೆಯಲ್ಲಿ ದಿಲೀಪ್ ಘೋಷ್, ಅಗ್ನಿಮಿತ್ರ ಪೌಲ್ ಹಾಗೂ ನಿಶಿತ್ ಪ್ರಮಾಣಿಕ್ ಸೇರಿದಂತೆ ಇತರರು ಭಾಗವಹಿಸಿದ್ದರು.

ಕೇಂದ್ರ ಯೋಜನೆಗಳ ಜಾರಿಗೆ ಅನುಮೋದನೆ

ಪುಟ ೧➡ ರಾಜ್ಯದಲ್ಲಿ ಭಾರತೀಯ ನ್ಯಾಯ ಸಂಹಿತೆಯನ್ನು(ಬಿಎನ್‌ಎಸ್) ಜಾರಿಗೆ ತರಲಾಗುತ್ತದೆ. ಇದು ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳಿಗೆ ಕೇಂದ್ರ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವಕಾಶ ನೀಡುತ್ತದೆ ಮತ್ತು ಜನಗಣತಿ ಪ್ರಕ್ರಿಯೆಯನ್ನು ಆರಂಭಿಸುತ್ತದೆ ಎಂದು ಹೇಳಿದರು. ಹಿಂದಿನ ಸರ್ಕಾರ ಸಂಬಂಧಿತ ಕಡತಗಳನ್ನು ವಿಳಂಬಗೊಳಿಸಿತ್ತು ಎಂದು ಸುವೇಂದು ಅಧಿಕಾರಿ ಆರೋಪಿಸಿದರು. ಹಿಂದಿನ ಸರ್ಕಾರವು ಗೃಹ ಸಚಿವಾಲಯದ ಜೂನ್ 2025ರ ಜನಗಣತಿ ಸುತ್ತೋಲೆಯನ್ನು ನಿರ್ಲಕ್ಷಿಸಿತ್ತು. ಬಂಗಾಳ ಸಚಿವ ಸಂಪುಟವು ಅದನ್ನು ತಕ್ಷಣ ಜಾರಿಗೆ ತರುವ ಅನುಮೋದನೆ ನೀಡಿದೆ ಎಂದು ಅವರು ಹೇಳಿದರು.

ಎಸ್‌ಐಆರ್: ಹೊಸ ಅರ್ಜಿ ಸಲ್ಲಿಕೆಗೆ ಸುಪ್ರೀಂ ಅಸ್ತು

ಪುಟ ೧➡ ತೃಣಮೂಲ ಕಾಂಗ್ರೆಸ್ ಸಂಸದ ಕಲ್ಯಾಣ್ ಬ್ಯಾನರ್ಜಿ, ಒಂದು ಕ್ಷೇತ್ರದಲ್ಲಿ ಕೇವಲ 862 ಮತಗಳಿಂದ ಸೋಲಾಗಿದ್ದರೆ, ಅದೇ ಕ್ಷೇತ್ರದಲ್ಲಿ 5,550 ಮತಗಳನ್ನು ಮತಪಟ್ಟಿಯಿಂದ ತೆಗೆದುಹಾಕಲಾಗಿತ್ತು ಎಂದು ವಾದಿಸಿದರು. ಚುನಾವಣಾ ಆಯೋಗವು ಇದಕ್ಕೆ ವಿರೋಧ ವ್ಯಕ್ತಪಡಿಸಿ, ಪರಿಹಾರಕ್ಕೆ ಚುನಾವಣಾ ಅರ್ಜಿಯೇ ಸರಿಯಾದ ಮಾರ್ಗ ಎಂದು ತಿಳಿಸಿತು. ಇತ್ತೀಚಿನ ಚುನಾವಣೆಯಲ್ಲಿ ಬಿಜೆಪಿ 207 ಸ್ಥಾನಗಳೊಂದಿಗೆ ಭರ್ಜರಿ ಜಯ ಸಾಧಿಸಿದರೆ, ಟಿಎಂಸಿ 80 ಸ್ಥಾನಗಳನ್ನು ಗೆದ್ದಿದೆ.

ಸಚಿವ ಡಿ.ಸುಧಾಕರ್ ಅಂತ್ಯಕ್ರಿಯೆ



ಪುಟ ೧➡ ಈ ವೇಳೆ ವಿಧಾನಸಭೆ ಸಭಾಧ್ಯಕ್ಷ ಯು.ಟಿ. ಖಾದರ್, ಗೃಹ ಸಚಿವ ಜಿ. ಪರಮೇಶ್ವರ್, ಸಚಿವರಾದ ಎಚ್.ಕೆ. ಪಾಟೀಲ್, ಸತೀಶ್ ಜಾರಕಿಹೊಳಿ, ಕೆ.ಜೆ.ಜಾರ್ಜ್, ಕೆ.ಎಚ್.ಮುನಿಯಪ್ಪ, ಶರಣ ಪ್ರಕಾಶ್ ಪಾಟೀಲ್, ಎಂ.ಸಿ.ಸುಧಾಕರ್, ಲಕ್ಷ್ಮೀ ಹೆಬ್ಬಾಳ್ಕರ್, ಈಶ್ವರ ಖಂಡ್ರೆ, ಭೈರತಿ ಸುರೇಶ್ ಅಲ್ಲದೆ ಶಾಸಕರು, ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

ಇಂಜಿನಿಯರ್ ಆತ್ಮಹತ್ಯೆ

• **ತುಮಕೂರು:** ಲೋಕೋಪ ಯೋಗಿ ಇಲಾಖೆಯ ಸಹಾಯಕ ಇಂಜಿನಿಯರ್ ಮಂಜು ಪ್ರಸಾದ್ (33) ತಾಲೂಕಿನ ದೇವರಾಯನದುರ್ಗದ ಬೆಟ್ಟದಿಂದ ಜಿಗಿದು ಆತ್ಮಹತ್ಯೆಗೆ ಶರಣಾಗಿರುವ ಘಟನೆ ದೇವರಾಯನದುರ್ಗದಲ್ಲಿ ನಡೆದಿದೆ. ಮಂಜುಪ್ರಸಾದ್ ಪಾವಗಡದ ಪಿಡಬ್ಲ್ಯೂ ಡಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ನಗರದ ಸತ್ಯಮಂಗಲದಲ್ಲಿ ವಾಸವಾಗಿದ್ದರು ಎನ್ನಲಾಗಿದೆ. ಸೋಮವಾರ ಬೆಳಗ್ಗೆ ಕೆಲಸಕ್ಕೆ ಹೋಗುವುದಾಗಿ ಹೇಳಿ ಹೊರಟಿದ್ದ ಮಂಜು ಪ್ರಸಾದ್ ಕೊರಟಗೆರೆಯಲ್ಲಿರುವ ಸಂಬಂಧಿಗೆ ಮೊಬೈಲ್, ಮನೆ ಕೀ ಕೊಟ್ಟು ಹೋಗಿದ್ದರು. ಮೀಟಿಂಗ್ ಇದೆ ಎಂದು ದೇವರಾಯನದುರ್ಗಕ್ಕೆ ಬಂದಿದ್ದರು. ಹೀಗೆ ಬಂದವರೇ ದೇವರಾಯನದುರ್ಗದ ಬೆಟ್ಟದಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕುಟುಂಬದವರು ಅನುಮಾನಗೊಂಡು ಪರಿಶೀಲಿಸಿದಾಗ ಮಂಜು ಪ್ರಸಾದ್ ಆತ್ಮಹತ್ಯೆ ಮಾಡಿಕೊಂಡಿರುವುದು ತಿಳಿದುಬಂದಿದೆ. ಈ ಸಂಬಂಧ ಕ್ಯಾತ್ಸಂದ್ರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಮೆಕಾಲೆ ಶಿಕ್ಷಣ ಪದ್ಧತಿಯಿಂದಾಗಿ ನಮ್ಮ ದೇಶದ ಸಂಸ್ಕೃತಿ, ಆಚಾರ ವಿಚಾರಗಳು ಅವಗಣಿಸಲ್ಪಟ್ಟಿವೆ
–ಶ್ರೀ ವಿವಿಕ್ತಾನಂದ ಸರಸ್ವತಿ ಸ್ವಾಮೀಜಿ

– ಆದರೆ ಅದರಿಂದಾಗಿ ಅಮ್ಮ ಮಮ್ಮಿಯಾಗಿ, ಅಪ್ಪ ಡ್ಯಾಡಿಯಾಗಿ , ಸಂಬಂಧಿಕರೆಲ್ಲ ಆಂಟಿ ಅಂಕಲ್ ಆಗಿ,ಅನ್ನ ರೈಸ್ ಆಗಿ, ಹುಟ್ಟುಹಬ್ಬ ಬರ್ತ್ ಡೇ ಆಗಿ,ಮದುವೆ ವೆಡ್ಡಿಂಗ್ ಆಗಿ,ಹಾಡು ಸಾಂಗ್ ಆಗಿ, ಕೊನೆಗೆ ಭಾರತವೇ ಇಂಡಿಯಾ ಆಗಿ ಭಾರೀ ಬದಲಾವಣೆಯಾಗಿ ಹೆಚ್ಚಿನವರ ಪ್ರೆಸ್ಟೀಜ್ ಆಕಾಶದೆತ್ತರಕ್ಕೆ ಹಾರಾಡಿ ಸಂತಸದಿಂದ ಕೇಲಾಡುವಂತಾಗಿದೆ!

ದಿನ ಭವಿಷ್ಯ

ಮೇಷ
ಈ ದಿನ ತಾಳ್ಮೆ ಮುಖ್ಯ. ಮನಸ್ಸಿನ ಗೊಂದಲ ನಿಮ್ಮ ದಾರಿ ತಪ್ಪಿಸಬಹುದು. ಕೆಲಸದಲ್ಲಿ ಜಡತ್ವ. ಉತ್ಸಾಹದಿಂದ ಕಾರ್ಯ ನಿರ್ವಹಿಸಿ.

ವೃಷಭ
ನಿಮ್ಮ ದಾರಿಗೆ ಅಡ್ಡ ಬರುವ ವಿಘ್ನಗಳನ್ನು ನಿವಾರಿಸಿಕೊಳ್ಳಿ. ಅವಸರ ಬೇಡ. ಟೀಕೆಗಳನ್ನು ಕಡೆಗಣಿಸಿರಿ. ಬಂಧು ಜತೆ ವಿರಸ ತಪ್ಪಿಸಿರಿ.

ಮಿಥುನ
ನಿಮ್ಮ ಪ್ರಗತಿಗೆ ಪೂರಕ ವಾತಾವರಣ. ಅದನ್ನು ಸದುಪಯೋಗ ಮಾಡಿಕೊಳ್ಳಿ. ಬಂಧುತ್ವ ವೃದ್ಧಿ. ವಿಘ್ನ ನಿವಾರಣೆ. ಆರೋಗ್ಯ ಸುಸ್ಥಿರ.

ಕಟಕ
ಕೆಲಸದ ಒತ್ತಡ ಹೆಚ್ಚು. ಸಹೋದ್ಯೋಗಿ ಜತೆ ಸಮಸ್ಯೆ. ವಾಗ್ವಾದದಲ್ಲಿ ತೊಡಗಬೇಡಿ. ಹಣದ ವಿಚಾರದಲ್ಲಿ ರಿಸ್ಕ್ ತೆಗೆದುಕೊಳ್ಳದಿರಿ.

ಸಿಂಹ
ಆತ್ಮವಿಶ್ವಾಸದ ಕೊರತೆ. ಕೆಲಸದಲ್ಲಿ ನಿರಾಸಕ್ತಿ. ಪ್ರೀತಿಯಲ್ಲೂ ಸಮಸ್ಯೆ. ಪ್ರಮುಖ ನಿರ್ಧಾರ ತಾಳದಿರಿ. ಕಾದು ನೋಡುವ ನೀತಿ ಒಳಿತು.

ಕನ್ಯಾ
ಸಂಗಾತಿ ಜತೆ ಸಂಬಂಧ ಕೆಡದಂತೆ ನೋಡಿಕೊಳ್ಳಿ. ಖರ್ಚು ಹೆಚ್ಚಳ ಚಿಂತೆಗೆ ಕಾರಣ. ಆತ್ಮೀಯರ ಟೀಕೆ ಮನಸ್ಸಿಗೆ ಘಾಸಿ ಮಾಡಲಿದೆ.

ತುಲಾ
ಏಕಾಗ್ರಚಿತ್ತತೆ ನಿಮ್ಮ ಗುರಿ ಸಾಧಿಸಲು ನೆರವು ನೀಡಲಿದೆ. ನಿಮ್ಮ ಪ್ರತಿಭೆ ಅನಾವರಣಕ್ಕೆ ಅವಕಾಶ. ವ್ಯವಹಾರದ ಸಮಸ್ಯೆ ಪರಿಹಾರ ಕಾಣಲಿದೆ.

ವೃಶ್ಚಿಕ
ಕೆಲಸದ ಒತ್ತಡದಿಂದ ಮುಕ್ತಿ. ಮನೆಯಲ್ಲೂ ನಿರಾಳತೆ. ಒಟ್ಟಿನಲ್ಲಿ ನಿಶ್ಚಿಂತ ದಿನ. ನಿಮ್ಮ ಹವ್ಯಾಸದಲ್ಲಿ ತೊಡಗಲು ಸಕಾಲ. ಧನಲಾಭದ ಸಂಕೇತ.

ಧನು
ಎಲ್ಲರ ಜತೆ ಸೌಹಾರ್ದದಿಂದ ವರ್ತಿಸುವ ನಿಮ್ಮ ಸ್ವಭಾವ ಮೆಚ್ಚುಗೆ ಗಳಿಸುವುದು. ಹಣ ಉಳಿತಾಯದ ಯೋಜನೆ ಫಲಿಸಲಿದೆ.

ಮಕರ
ವೃತ್ತಿಯಲ್ಲಿ ಸಾಫಲ್ಯ. ಖಾಸಗಿ ಬದುಕಲ್ಲೂ ನೀವು ಬಯಸಿದ ಬೆಳವಣಿಗೆ. ಆರ್ಥಿಕ ಒತ್ತಡ ನಿವಾರಣೆ. ಗಳಿಕೆಯ ಹಾದಿ ಸುಗಮ. ಬಂಧುಮಿತ್ರರ ನೆರವು.

ಕುಂಭ
ನಿಮ್ಮ ಸಂವಹನ ಕಲೆ ಎಲ್ಲರ ಜತೆ ವ್ಯವಹರಿಸಲು ನೆರವಿಗೆ ಬರಲಿದೆ. ಅಡ್ಡಿಗಳನ್ನು ಸುಲಭವಾಗಿ ನಿವಾರಿಸಿಕೊಳ್ಳುವಿರಿ. ಕೌಟುಂಬಿಕ ಸೌಹಾರ್ದ.

ಮೀನ
ನಿಮ್ಮ ಮನಸ್ಥಿತಿ ಉತ್ತೇಜಿಸುವ ಬೆಳವಣಿಗೆ. ಬಯಸಿದ ಕಾರ್ಯ ಸುಗಮವಾಗಿ ಸಾಗಲಿದೆ. ಆಪ್ತರ ಜತೆಗಿನ ವಿರಸ ಅಂತ್ಯ. ಸೌಹಾರ್ದತೆ.

ರಾಹುಕಾಲ: 3.00– 4.30
ಗುಳಿಕಕಾಲ: 12.00–1.30

ಅದೃಷ್ಟ ಸಂಖ್ಯೆ: 2,8,1,5

ಡಿಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧ ದೇವೇಗೌಡ ಅಸಮಾಧಾನ

ಪ್ರಧಾನಿ ಟೀಕೆ ಸಲ್ಲದು

• **ಬೆಂಗಳೂರು:** ರಾಜ್ಯ ಸರ್ಕಾರದ ವಿರುದ್ಧ ಭಾನುವಾರ ವಾಗ್ದಾಳಿ ನಡೆಸಿದ್ದ ಪ್ರಧಾನಿ ನರೇಂದ್ರ ಮೋದಿಯವರ ಹೇಳಿಕೆಯನ್ನು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಸಮರ್ಥಿಸಿಕೊಂಡಿದ್ದಾರೆ.

ಸೋಮವಾರ ಕಬ್ಬನ್ ಪಾರ್ಕ್‌ನಲ್ಲಿ ನಡೆಯುತ್ತಿರುವ ಮಾವು ಮೇಳಕ್ಕೆ ಭೇಟಿ ನೀಡಿ ಮಾಧ್ಯಮದವರೊಂದಿಗೆ ಮಾತನಾಡಿದರು. ಪ್ರಧಾನಿ ಮೋದಿಯವರು ಎಚ್‌ಎಎಲ್ ಏರ್‌ಪೋರ್ಟ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯ ಸರ್ಕಾರದ ವಿರುದ್ಧ ಕೆಲವು ಆರೋಪ ಮಾಡಿದ್ದು, ಅದು ಸರಿಯಾಗಿದೆ. ಆದರೆ, ರಾಜ್ಯ ಸರ್ಕಾರದ ಮಂತ್ರಿಯೊಬ್ಬರು ಮೋದಿಯವರನ್ನು ಟೀಕಿಸುವ ಭರದಲ್ಲಿ ಕಠಿಣ ಶಬ್ದ ಉಪಯೋಗಿಸಿದ್ದಾರೆ, ಅದು ಸರಿಯಲ್ಲ. ನಾನು ಮಂತ್ರಿ, ಪ್ರಧಾನಿಯಾಗಿ ಸಾಕಷ್ಟು ಅನುಭವ ಇದೆ. ನಾನು ಯಾರ ಬಗ್ಗೆ ಟೀಕೆ ಮಾಡಲು ಹೋಗಲ್ಲ. ಟೀಕೆ ಮಾಡುವಾಗ ಬಳಸುವ ಭಾಷೆ ಸರಿಯಾಗಿರಬೇಕು ಎಂದು ಪರೋಕ್ಷವಾಗಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಮಹಿಳಾ ಮೀಸಲಾತಿ ಬಿಲ್ ಮೊದಲು ತಂದಿದ್ದು ನಾನೇ: ಎಚ್‌ಡಿಡಿ: ನಾನು ಅಧಿಕಾರದಲ್ಲಿದ್ದಾಗ ಸಾಮಾಜಿಕ ನ್ಯಾಯ ಕೊಡುವ ಬಗ್ಗೆ ಯಾರಿಂದಲೂ ಹೇಳಿಸಿಕೊಂಡಿಲ್ಲ. ನಾನು ಹಿಂದುಳಿದ ಎಲ್ಲ ಜಾತಿಗಾಗಿ ಶಕ್ತಿ ಮೀರಿ ಪ್ರಯತ್ನಿಸಿದಿದ್ದೇನೆ. ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದವರಿಗೆ ಅನುಕೂಲ ಮಾಡಿದ್ದೇನೆ. ಕ್ರಿಶ್ಚಿಯನ್, ಮುಸ್ಲಿಂ ಸಮುದಾಯಕ್ಕೂ ನ್ಯಾಯ ನೀಡಿದ್ದೇನೆ. ಮಹಿಳೆಯರಿಗೆ ಮೀಸಲಾತಿ ಯಾವ ರಾಜ್ಯ ಕೊಡದೇ ಇದ್ದರೂ, ಮೊದಲ ಬಾರಿ ಕರ್ನಾಟಕದಲ್ಲಿ ಸರ್ಕಾರಿ ಹುದ್ದೆಯಲ್ಲಿ ಮಹಿಳೆ ಮೀಸಲಾತಿ ಕೊಟ್ಟಿದ್ದು ನಾನು ಎಂದು ಎಚ್.ಡಿ.ದೇವೇಗೌಡ ಹೇಳಿದರು.





> **ವಾರದಲ್ಲಿ 2 ದಿನ ಆರೋಗ್ಯ ತಪಾಸಣೆಗೆ ಮೀಸಲಿಟ್ಟಿದ್ದೇನೆ. ಐದು ದಿನ ಕೆಲಸ ಮಾಡುತ್ತೇನೆ. ನಾನು ಹಾಸನಕ್ಕೆ ಹೋಗುತ್ತೇನೆ. ಅಲ್ಲೂ ಸುದ್ದಿಗೋಷ್ಠಿ ಮಾಡಿ ಮಾತಾಡುತ್ತೇನೆ. ಶಕ್ತಿ ಇರುವವರೆಗೆ ನಾಡಿನ ಜನರ ಆಶೀರ್ವಾದದಿಂದ ಜನತೆಗೆ ಉಪಯೋಗ ಮಾಡುತ್ತೇನೆ.**
> ■ ಎಚ್.ಡಿ.ದೇವೇಗೌಡ, ಮಾಜಿ ಪ್ರಧಾನಿ

ಮಹಿಳೆಯರಿಗೆ ಮೀಸಲಾತಿ ನೀಡುವ ವಿಧೇಯಕ ವಿರೋಧ ಪಕ್ಷಗಳ ವಿರೋಧದಿಂದ ಸೋಲುಂಟಾಯಿತು. ಆದರೆ, ಈಗ ವಿರೋದ ಪಕ್ಷಗಳು ಮೀಸಲಾತಿ ಬಿಲ್ ತನ್ನಿ ಎನ್ನುತ್ತಿದ್ದಾರೆ. ಬಹುಶಃ ಮತ್ತೆ ಮಹಿಳಾ ಮೀಸಲಾತಿ ಬಿಲ್ ಅನ್ನು ಪ್ರಧಾನಿ ಮೋದಿ, ಗೃಹ ಸಚಿವರಾದ ಅಮಿತ್ ಷಾ ಅವರು ಚರ್ಚೆಗೆ ತಂದು ಪಾಸ್ ಮಾಡುತ್ತಾರೆ ಎನ್ನುವ ನಂಬಿಕೆಯಿದೆ ಎಂದರು. ಪ್ರಧಾನಿ ಮೋದಿ ಅವರ ಕಾರ್ಯಕ್ರಮದಿಂದ ದೇಶದ ಜನಕ್ಕೆ ಒಳ್ಳೆಯದಾಗಿದೆ. ಮೋದಿ ಅವರಿಗೆ ಸರಿಸಮರಾದ ನಾಯಕರು ಯಾರು ಇಲ್ಲ ಎಂದು ದೇವೇಗೌಡ ತಿಳಿಸಿದರು.

6,400 ಕೆರೆ ಒತ್ತುವರಿ ತೆರವು

▸ ವೀರಣ್ಣ ಬಳಿಗಾರ

• **ಬೆಂಗಳೂರು:** ರಾಜ್ಯಾದ್ಯಂತ ಒತ್ತುವರಿ ಯಾಗಿರುವ ಕೆರೆಗಳನ್ನು ಸಂರಕ್ಷಿಸಲು ಕರ್ನಾಟಕ ಲೋಕಾಯುಕ್ತವು ಕೆರೆಗಳ ಒತ್ತುವರಿ ತೆರವು ಕಾರ್ಯಾಚರಣೆ ಕೈಗೆತ್ತಿಕೊಂಡಿದ್ದು, ಕಳೆದ 3 ವರ್ಷಗಳಲ್ಲಿ 6,400 ಕೆರೆಗಳ ಒತ್ತುವರಿ ತೆರವುಗೊಳಿ ಸಲಾಗಿದೆ ಎಂದು ಸಂಸ್ಥೆ ತನ್ನ ವರದಿಯಲ್ಲಿ ತಿಳಿಸಿದೆ. ರಾಜ್ಯದ ಅನೇಕ ಕೆರೆಗಳು ದಶಕಗಳಿಂದ ನಿರ್ಲಕ್ಷ್ಯಕ್ಕೆ ಒಳಗಾಗಿ ಅತಿಕ್ರಮಣಕ್ಕೊಳಗಾಗಿವೆ. ಕೆಲವೆಡೆ ಕೆರೆಗಳನ್ನೇ ನುಂಗಿರುವ ರಿಯಲ್ ಎಸ್ಟೇಟ್‌ನವರು ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸಿದ್ದಾರೆ. ಹಲವೆಡೆ ಕೆರೆಗಳ ಸಮೀಕ್ಷೆಯೇ ನಡೆದಿರಲಿಲ್ಲ. ಹೀಗಾಗಿ ಕೆರೆಗಳ ಪುನಶ್ಚೇತನ ಕಾರ್ಯವನ್ನು ಕೈಗೊಳ್ಳುವುದು ತುರ್ತು ಅಗತ್ಯವಾಗಿತ್ತು. ಈ ಹಿನ್ನೆಲೆಯಲ್ಲಿ ಲೋಕಾಯುಕ್ತದಿಂದ ಹಲವು ಕಡೆಗಳಲ್ಲಿ ಸ್ವಯಂ ದೂರು ದಾಖಲಿಸಿಕೊಂಡಿದ್ದು, ಸಾರ್ವಜನಿಕರಿಂದ ಬಂದ ದೂರುಗಳನ್ನು ಆಲಿಸಿ ಒತ್ತುವರಿ ತೆರವು ಕಾರ್ಯ ಕೈಗೊಂಡಿದೆ. ಇದಕ್ಕೆ ಸಾರ್ವಜನಿಕರಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಅವರು ರಾಜ್ಯಾದ್ಯಂತ ಸುಮಾರು 70 ಸ್ವಯಂ ಪ್ರೇರಿತ ಪ್ರಕರಣಗಳನ್ನು ದಾಖಲಿಸಿ ಸೂಕ್ತ ಕ್ರಮಗಳನ್ನು ಕೈಗೊಂಡಿದ್ದಾರೆ.

ಸಂಬಂಧಪಟ್ಟ ಅಧಿಕಾರಿಗಳಿಂದ ವರದಿಗಳನ್ನು ಪಡೆಯುವುದು ಹಾಗೂ ವೈಯಕ್ತಿಕ ವಿಚಾರಣೆಗೆ ಹಾಜರುಪಡಿಸುವ ಮೂಲಕ ಇಂತಹ ಪ್ರಕರಣಗಳನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲಾಗಿದೆ. ಇದರ ಪರಿಣಾಮವಾಗಿ ಅನೇಕ ಕೆರೆಗಳು ಪುನಶ್ಚೇತನಗೊಂಡು ಅಭಿವೃದ್ಧಿಗೊಂಡಿವೆ.

ಕೆರೆಗಳ ಅಭಿವೃದ್ಧಿ: ದೂರುಗಳು ಮತ್ತು ವರದಿಗಳ ಆಧಾರದ ಮೇಲೆ ಲೋಕಾಯುಕ್ತವು ತನಿಖೆ ಕೈಗೊಂಡ ಪರಿಣಾಮದಿಂದ ರಾಜ್ಯಾದ್ಯಂತ ಕೆರೆಗಳ ಒತ್ತುವರಿ ತೆರವು ಹಾಗೂ ಪುನಶ್ಚೇತನ ಜತೆಗೆ ಅಭಿವೃದ್ಧಿ ಕಾರ್ಯಗಳು ನಡೆದಿವೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿರುವ ಎಲ್ಲಾ ಕೆರೆಗಳು ಅತಿಕ್ರಮಣವಾಗಿ ಅನೇಕ ಕೆರೆಗಳು ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡಿದ್ದವು. ಅತಿಕ್ರಮಣ ತೆರವುಗೊಳಿಸಿ ಅಭಿವೃದ್ಧಿ ಕಾಮಗಾರಿ ಕೈಗೊಂಡ ನಂತರ ನೀರಿನ ಸಂಗ್ರಹ ಸಾಮರ್ಥ್ಯವು ಗಣನೀಯವಾಗಿ ಹೆಚ್ಚಿದ್ದು, ಅಂತರ್ಜಲ ಮಟ್ಟವೂ ಏರಿಕೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ 101 ಕೆರೆಗಳ ಅತಿಕ್ರಮಣದ ವಿರುದ್ಧ ಕ್ರಮ ಕೈಗೊಳ್ಳಲಾಗಿದ್ದು, ಏ.2ರವರೆಗೆ 41 ಕೆರೆಗಳ ಅತಿಕ್ರಮಣ ತೆರವುಗೊಳಿಸಲಾಗಿದ್ದು, ಉಳಿದ 60 ಕೆರೆಗಳ ಅತಿಕ್ರಮಣ ತೆರವು ಕಾರ್ಯ ಪ್ರಗತಿಯಲ್ಲಿದೆ. ಕೋಲಾರ ಜಿಲ್ಲೆಯಲ್ಲಿ 3,232 ಕೆರೆಗಳನ್ನು ಸಮೀಕ್ಷೆ ನಡೆಸಲಾಗಿದ್ದು, ಅನೇಕ ಕೆರೆಗಳ ಅತಿಕ್ರಮಣಗಳನ್ನು ತೆರವುಗೊಳಿಸಿ ಪುನಶ್ಚೇತನ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಇದೇ ರೀತಿ ರಾಜ್ಯಾದ್ಯಂತ ಕೆರೆಗಳ ಒತ್ತುವರಿ ತೆರವು ಜತೆಗೆ ಪುನಶ್ಚೇತನ ಕಾರ್ಯ ಕೈಗೊಳ್ಳಲಾಗಿದೆ.

ರಾಜ್ಯದಲ್ಲಿ ಕೆರೆಗಳ ತೆರವು ಕಾರ್ಯಾಚರಣೆ ವಿವರ

- ▸▸ ರಾಜ್ಯದಲ್ಲಿರುವ ಒಟ್ಟು ಕೆರೆಗಳು 40,630 ಕ್ಕೂ ಅಧಿಕ
- ▸▸ ದಾಖಲಾದ ಸ್ವಯಂಪ್ರೇರಿತ ಪ್ರಕರಣಗಳು 70
- ▸▸ ಸಮೀಕ್ಷೆ ನಡೆಸಲಾದ ಕೆರೆಗಳ ಸಂಖ್ಯೆ 34,029
- ▸▸ ಸಮೀಕ್ಷೆಗೆ ಬಾಕಿ ಇರುವ ಕೆರೆಗಳ ಸಂಖ್ಯೆ 376
- ▸▸ ಒತ್ತುವರಿ ಪತ್ತೆಯಾದ ಕೆರೆಗಳ ಸಂಖ್ಯೆ 16,229
- ▸▸ ಒತ್ತುವರಿ ತೆರವುಗೊಳಿಸಿದ ಕೆರೆಗಳ ಸಂಖ್ಯೆ 6,400
- ▸▸ ಒತ್ತುವರಿ ತೆರವು ಬಾಕಿ ಇರುವ ಕೆರೆಗಳು 9,825

ರಾಜ್ಯದಲ್ಲಿ 34,099 ಕೆರೆಗಳ ಸಮೀಕ್ಷೆ

ಲೋಕಾಯುಕ್ತವು ಒತ್ತುವರಿಯಾಗಿರುವ ಕೆರೆಗಳಿಗೆ ಭೇಟಿ ನೀಡಿದ ನಂತರ ಸಮೀಕ್ಷಾ ಕಾರ್ಯಗಳಿಗೆ ವೇಗ ದೊರೆತು, ಅನೇಕ ಕಡೆಗಳಲ್ಲಿ ಅತಿಕ್ರಮಣಗಳನ್ನು ಗುರುತಿಸಿ ತೆರವುಗೊಳಿಸಲಾಗಿದೆ. ಕೆರೆಗಳ ಅತಿಕ್ರಮಣ ತೆರವು ಮತ್ತು ಪುನಶ್ಚೇತನ ಕಾರ್ಯಗಳು ನಿಯಮಿತ ವಿಚಾರಣೆ ಹಾಗೂ ನಿರಂತರ ಮೇಲ್ವಿಚಾರಣೆಯ ಮೂಲಕ ಮುಂದುವರಿಯುತ್ತಿವೆ. ಇದುವರೆಗೂ 47 ಕೆರೆಗಳ ಪುನಶ್ಚೇತನಗೊಂಡಿವೆ. ಲೋಕಾಯುಕ್ತವು ರಾಜ್ಯಾದ್ಯಂತ 34,099 ಕೆರೆಗಳ ಸಮೀಕ್ಷೆ ನಡೆಸಿದ್ದು, 16,229 ಅತಿಕ್ರಮಣ ಕೆರೆಗಳ ಪತ್ತೆಯಾಗಿವೆ. ಇನ್ನೂ 9,825 ಕೆರೆಗಳ ಅತಿಕ್ರಮಣ ತೆರವು ಬಾಕಿ ಇದೆ.

ಪ್ರಧಾನಿ ಮೋದಿ ಭಾಷಣಕ್ಕೆ ಸಿಎಂ ಕಿಡಿ

ಪುಟ ೧➡ ದೇಶದ ಜಿಡಿಪಿಯಲ್ಲಿ ಕರ್ನಾಟಕದ ಪಾಲು ಶೇ.9.19 ಆಗಿದೆ. ಜಿಎಸ್ಟಿ ಸಂಗ್ರಹದಲ್ಲಿ ಮಹಾರಾಷ್ಟ್ರದ ನಂತರ ಕರ್ನಾಟಕದ್ದೇ ಅತ್ಯಧಿಕ ಪಾಲು. ಪ್ರಧಾನಿಗಳೇ, ಕರ್ನಾಟಕವು ಅಭಿವೃದ್ಧಿಯ ಪಥದಲ್ಲಿ ವೇಗದಲ್ಲಿ ಸಾಗುತ್ತಿರುವುದಕ್ಕೆ ಇನ್ನೇನು ಪುರಾವೆ ಬೇಕು? ಮುಂದಿನ ಬಾರಿ ನಮ್ಮ ಸರ್ಕಾರದ ವಿರುದ್ಧ ಆರೋಪ ಮಾಡುವಾಗ ಸ್ವಲ್ಪ ಪೂರ್ವತಯಾರಿ ಮಾಡಿಕೊಂಡು ಬನ್ನಿ. ದೇಶದ ಪ್ರಧಾನಿಯವರ ಬಾಯಲ್ಲಿ ಸುಳ್ಳು ಹೇಳಿಕೆಗಳು ಶೋಭೆಯಲ್ಲ ಎಂದು ಕಿಡಿಕಾರಿದ್ದಾರೆ.

ಇರಾನ್ ವಿರುದ್ಧ ಇಸ್ರೇಲ್ ಮತ್ತು ಅಮೆರಿಕ ಜಂಟಿಯಾಗಿ ನಡೆಸುತ್ತಿರುವ ಯುದ್ಧದ ನಡುವೆ ಭಾರತ ಸಿಕ್ಕಿಹಾಕಿಕೊಂಡು ಒದ್ದಾಡುತ್ತಿದೆ. ಇಂತಹ ಸಂದರ್ಭದಲ್ಲಿ ನ್ಯಾಯ ಮತ್ತು ನೀತಿಯ ಪರವಾಗಿ ಗಟ್ಟಿಯಾದ ನಿಲುವು ತೆಗೆದುಕೊಂಡಿದ್ದರೆ ಭಾರತ ಇಂದಿನ ದುಸ್ಥಿತಿ ಎದುರಿಸುತ್ತಿರಲಿಲ್ಲ. ಮೋದಿಯವರೇ, ಈ ವೈಫಲ್ಯಕ್ಕೆ ಯಾರನ್ನು ದೂರುತ್ತೀರಿ? ಜವಾಹರಲಾಲ್ ನೆಹರೂ ಅವರನ್ನೇ? ಕಾಂಗ್ರೆಸ್ ಪಕ್ಷವನ್ನೇ? ಉತ್ತರಿಸಿ ಎಂದು ಹೇಳಿದ್ದಾರೆ.

ರಾಜ್ಯ ಸರ್ಕಾರಿ ನೌಕರರಿಗೆ ತುಟ್ಟಿಭತ್ಯೆ ಶೇ.1.5 ಹೆಚ್ಚಳ

ಪುಟ ೧➡ **ಯಾರಿಗೆಲ್ಲ ಅನ್ವಯವಾಗಲಿದೆ?:** ಯುಜಿಸಿ, ಎಐಸಿಟಿಇ, ಐಸಿಎಆರ್ ವೇತನ ಶ್ರೇಣಿಗಳ ನಿವೃತ್ತ ನೌಕರರಿಗೆ ಈ ಆದೇಶ ಅನ್ವಯ ವಾಗಲಿದೆ. ಸರ್ಕಾರದ ಮತ್ತು ಜಿಲ್ಲಾ ಪಂಚಾಯತ್‌ಗಳ ಪೂರ್ಣಾವಧಿ ನೌಕರರಿಗೆ, ಕಾಲಿಕ ವೇತನ ಶ್ರೇಣಿಗಳಲ್ಲಿರುವ ಪೂರ್ಣಾವಧಿ ವರ್ಕ್‌ಚಾರ್ಜ್ ನೌಕರರಿಗೆ ಹಾಗೂ ಸರ್ಕಾರದಿಂದ ಸಹಾಯಾನುದಾನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳಲ್ಲಿ ಕಾಲಿಕ ವೇತನ ಶ್ರೇಣಿಗಳಲ್ಲಿರುವ ಪೂರ್ಣಾವಧಿ ನೌಕರರಿಗೂ ಅನ್ವಯಿಸಲಿದೆ. ರಾಜ್ಯ ಸರ್ಕಾರದ ನಿವೃತ್ತಿ ವೇತನದಾರರು, ಕುಟುಂಬ ನಿವೃತ್ತಿ ವೇತನದಾರರಿಗೆ ಮತ್ತು ರಾಜ್ಯದ ಸಂಚಿತ ನಿಧಿಯಿಂದ ನಿವೃತ್ತಿ ವೇತನ ಪಡೆಯುತ್ತಿರುವ ಅನುದಾನಿತ ಶಿಕ್ಷಣ ಸಂಸ್ಥೆಗಳ ನಿವೃತ್ತಿ ವೇತನದಾರರು, ಕುಟುಂಬ ನಿವೃತ್ತಿ ವೇತನದಾರರಿಗೂ ಇದು ಅನ್ವಯವಾಗಲಿದೆ. ಯುಜಿಸಿ, ಎಐಸಿಟಿಇ, ಐಸಿಎಆರ್ ವೇತನ ಶ್ರೇಣಿಗಳ ನೌಕರರಿಗೆ ಮತ್ತು ಎನ್‌ಜೆಪಿಸಿ ವೇತನ ಶ್ರೇಣಿಗಳ ನ್ಯಾಯಾಂಗ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಆದೇಶ ಹೊರಡಿಸಲಾಗುತ್ತದೆ. ತುಟ್ಟಿಭತ್ಯೆಯನ್ನು ಸಂಭಾವನೆಯ ವಿಶಿಷ್ಟ ಅಂಶವಾಗಿ ತೋರಿಸಬೇಕು. ಯಾವುದೇ ಉದ್ದೇಶಕ್ಕಾಗಿ ಇದನ್ನು ವೇತನ ಎಂದು ಪರಿಗಣಿಸಲಾಗುವುದಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಯಾವ ಒತ್ತಡಕ್ಕೂ ಭಾರತ ಬಾಗದು

ಪುಟ ೧➡ 1951ರಲ್ಲಿ ಪುನರ್‌ನಿರ್ಮಾಣಗೊಂಡ ಸೋಮನಾಥ ದೇವಾಲಯದ ಉದ್ಘಾಟನೆಯ 75 ವರ್ಷಗಳ ಸ್ಮರಣಾರ್ಥ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಅಂಚೆ ಚೀಟಿ ಬಿಡುಗಡೆ: ದೇವಾಲಯದ ಪುನರ್‌ನಿರ್ಮಾಣ ಭಾರತದ ಮುಕ್ತ ಪ್ರಜ್ಞೆಯ ಘೋಷಣೆ ಎಂದು ಮೋದಿ ಬಣ್ಣಿಸಿದರು. ಈ ಸಂದರ್ಭದಲ್ಲಿ ವಿಶೇಷ ಪೂಜೆ ನೆರವೇರಿಸಿದ ಅವರು, ಆ ಸ್ಮರಣಾರ್ಥ ಅಂಚೆ ಚೀಟಿ ಬಿಡುಗಡೆ ಮಾಡಿದರು. ಆಕ್ರಮಣಕಾರರು ಹಲವು ಬಾರಿ ಈ ದೇವಾಲಯವನ್ನು ಧ್ವಂಸಗೊಳಿಸಿದರೂ, ಪ್ರತಿ ಬಾರಿಯೂ ಅದು ಮರುನಿರ್ಮಾಣಗೊಂಡು ಸಾಂಸ್ಕೃತಿಕ ಬೇರುಗಳೊಂದಿಗಿನ ಅವಿನಾಭಾವ ಸಂಬಂಧವನ್ನು ಸಾಬೀತುಪಡಿಸಿದೆ ಎಂದು ಅವರು ಹೇಳಿದರು. ದೇಶದ ಕೆಲವು ಶಕ್ತಿಗಳು ರಾಷ್ಟ್ರೀಯ ಸ್ವಾಭಿಮಾನಕ್ಕಿಂತ ಓಲೈಕೆ ರಾಜಕೀಯಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿವೆ ಎಂದು ಮೋದಿ ಆರೋಪಿಸಿದರು. ಸೋಮನಾಥ ದೇವಾಲಯದ ಪುನರ್ ನಿರ್ಮಾಣದ ವೇಳೆ ಸರ್ದಾರ್ ವಲ್ಲಭಭಾಯಿ ಪಟೇಲ್ ಮತ್ತು ಡಾ. ರಾಜೇಂದ್ರ ಪ್ರಸಾದ್ ಅವರು ಎದುರಿಸಿದ ವಿರೋಧವನ್ನು ಅಯೋಧ್ಯೆಯ ರಾಮಮಂದಿರ ನಿರ್ಮಾಣದ ಸಂದರ್ಭದಲ್ಲಿನ ವಿರೋಧಕ್ಕೆ ಹೋಲಿಸಿದರು.

ವಿಜ್ಞಾನಿಗಳ ಸಾಧನೆಗೆ ಮೋದಿ ಮೆಚ್ಚುಗೆ

ಪುಟ ೧➡ ದೇಶದ ಹೆಮ್ಮೆ ಮತ್ತು ಎಲ್ಲಾ ವಲಯಗಳ ಬೆಳವಣಿಗೆಗೆ ವಿಜ್ಞಾನಿಗಳ ಸಮರ್ಪಣಾ ಮನೋಭಾವವೇ ಕಾರಣ ಎಂದು ಅವರು ಶ್ಲಾಘಿಸಿದರು. ರಾಜಸ್ಥಾನದ ಪೋಖ್ರಾನ್ ಶ್ರೇಣಿಯಲ್ಲಿ ನಡೆದ ಯಶಸ್ವಿ ಅಣು ಪರೀಕ್ಷೆಗಳ ನೆನಪಿಗಾಗಿ ಈ ದಿನವನ್ನು ಆಚರಿಸಲಾಗುತ್ತದೆ. 1998ರ ಮೇ 11ರಂದು ಮಧ್ಯಾಹ್ನ 3:45ಕ್ಕೆ ವಿಜ್ಞಾನಿಗಳು ಏಕಕಾಲದಲ್ಲಿ ಮೂರು ಪರೀಕ್ಷೆಗಳನ್ನು ನಡೆಸಿದರು, ನಂತರ ಮೇ 13ರಂದು ಮತ್ತೆರಡು ಪರೀಕ್ಷೆಗಳನ್ನು ಕೈಗೊಳ್ಳಲಾಯಿತು. ಈ ಘಟನೆ ಸುಧಾರಿತ ಆಯುಧ ವಿನ್ಯಾಸದಲ್ಲಿ ಭಾರತದ ಪರಿಣತಿಯನ್ನು ಜಗತ್ತಿಗೆ ಸಾರಿತು.

ವಿಬಿ ಜಿ ರಾಮ್ ಜಿ ಜುಲೈ 1ರಿಂದ ಜಾರಿ

ಪುಟ ೧➡ **ವೇತನ ಮತ್ತು ಅನುದಾನ:** ಕೂಲಿಯನ್ನು ನೇರ ನಗದು ವರ್ಗಾವಣೆ ಮೂಲಕ ಕಾರ್ಮಿಕರ ಬ್ಯಾಂಕ್ ಅಥವಾ ಅಂಚೆ ಕಚೇರಿ ಖಾತೆಗಳಿಗೆ ಜಮಾ ಮಾಡಲಾಗುತ್ತದೆ. ಮಾಸ್ಟರ್ ರೋಲ್ ಮುಕ್ತಾಯಗೊಂಡ 15 ದಿನಗಳೊಳಗೆ ವೇತನ ಪಾವತಿಯಾಗಬೇಕು. ತಪ್ಪಿದಲ್ಲಿ ಕಾರ್ಮಿಕರು ವಿಳಂಬ ಪರಿಹಾರಕ್ಕೆ ಅರ್ಹರಾಗಿರುತ್ತಾರೆ. ನಿಗದಿತ ಅವಧಿಯಲ್ಲಿ ಕೆಲಸ ನೀಡದಿದ್ದಲ್ಲಿ ನಿರುದ್ಯೋಗ ಭತ್ಯೆ ನೀಡುವ ಅವಕಾಶವೂ ಇಲ್ಲಿದೆ. 2026–27ರ ಹಣಕಾಸು ವರ್ಷಕ್ಕೆ ಈ ಯೋಜನೆಗಾಗಿ ಕೇಂದ್ರ ಸರ್ಕಾರ 95,692.31 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದೆ ಎಂದರು.

ಎನ್‌ಐಎ, ಐಬಿ ಜಂಟಿ ತನಿಖೆ

ಪುಟ ೧➡ **ಎನ್‌ಐಎ, ಐಬಿ ಜಂಟಿ ಕಾರ್ಯಾಚರಣೆ:** ಈ ಪ್ರಕರಣದ ತನಿಖೆಯನ್ನು ಕೇವಲ ರಾಜ್ಯ ಪೊಲೀಸರಿಗೆ ಸೀಮಿತಗೊಳಿಸದೆ, ಕೇಂದ್ರದ ಪ್ರಭಾವಿ ಸಂಸ್ಥೆಗಳಾದ ರಾಷ್ಟ್ರೀಯ ತನಿಖಾ ದಳ (ಎನ್‌ಐಎ), ಹಾಗೂ ಗುಪ್ತಚರ ದಳ(ಐಬಿ) ಹಿರಿಯ ಅಧಿಕಾರಿಗಳು ಈಗ ಜಂಟಿಯಾಗಿ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಎನ್‌ಐಎ ಡಿವೈಎಸ್ಪಿ ನೇತೃತ್ವದ ತಂಡವು ಘಟನಾ ಸ್ಥಳವನ್ನು ಕೂಲಂಕಷವಾಗಿ ಪರಿಶೀಲಿಸಿದ್ದು, ಬೆಂಗಳೂರು ದಕ್ಷಿಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸ್‌ಗೌಡ ಅವರಿಂದ ಸಮಗ್ರ ಮಾಹಿತಿ ಪಡೆದುಕೊಂಡಿದೆ. ಅಲ್ಲದೆ, ಪ್ರಧಾನಿಗಳ ಭದ್ರತೆಯ ಹೊಣೆ ಹೊತ್ತಿರುವ ಎನ್‌ಎಸ್‌ಜಿ ಪಡೆ ಕೂಡ ರಾಜ್ಯ ಪೊಲೀಸ್ ಇಲಾಖೆಯಿಂದ ಪ್ರತಿ ಗಂಟೆಗೊಮ್ಮೆ ತನಿಖಾ ಪ್ರಗತಿಯ ವರದಿ ತರಿಸಿಕೊಳ್ಳುತ್ತಿದೆ.

ತಮಿಳುನಾಡಿಗೆ ಧಾವಿಸಿದ ವಿಶೇಷ ಪೊಲೀಸ್ ತಂಡ: ಪ್ರಕರಣದ ತನಿಖೆಯ ವ್ಯಾಪ್ತಿ ಈಗ ತಮಿಳುನಾಡಿಗೂ ವ್ಯಾಪಿಸಿದೆ. ಸ್ಫೋಟಕಗಳ ಮೂಲದ ಬಗ್ಗೆ ಶಂಕೆ ವ್ಯಕ್ತವಾಗುತ್ತಿದ್ದಂತೆ ವಿಶೇಷ ಪೊಲೀಸ್ ತಂಡವೊಂದು ತಮಿಳುನಾಡಿಗೆ ಧಾವಿಸಿದೆ. ಅಲ್ಲಿನ ಗಣಿಗಾರಿಕೆ ಪ್ರದೇಶಗಳು ಅಥವಾ ಸ್ಫೋಟಕ ಪೂರೈಕೆದಾರರಿಂದ ಈ ಜಿಲೆಟಿನ್ ಕಡ್ಡಿಗಳನ್ನು ತರಲಾಗಿದೆಯೇ ಎಂಬ ದಿಕ್ಕಿನಲ್ಲಿ ತನಿಖೆ ನಡೆಯುತ್ತಿದೆ.

ಕಗ್ಗಲಿಪುರ ಪೊಲೀಸರು ಒಟ್ಟು ಆರು ವಿಶೇಷ ತಂಡಗಳನ್ನು ರಚಿಸಿ ಶೋಧ ಮುಂದುವರಿಸಿದ್ದಾರೆ. ಅಂತಾರಾಜ್ಯ ಅಥವಾ ಅಂತರಜಿಲ್ಲಾ ಸಂಚುಕೋರರ ತಂಡ ಈ ಕೃತ್ಯದ ಹಿಂದೆ ಇದೆಯೇ ಎಂದು ಅಧಿಕಾರಿಗಳು ರಹಸ್ಯ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಹುಸಿ ಬಾಂಬ್ ಕರೆ ಮಾಡಿದ್ದ ವ್ಯಕ್ತಿ ವಿಚಾರಣೆ

ಪುಟ ೧➡ ತಪಾಸಣೆಯ ವೇಳೆ ಯಾವುದೇ ಸ್ಫೋಟಕಗಳು ಪತ್ತೆಯಾಗಿಲ್ಲ. ಆರೋಪಿ ಈ ಹಿಂದೆಯೂ ಹಲವು ಬಾರಿ ಇದೇ ರೀತಿ ಹುಸಿ ಕರೆಗಳನ್ನು ಮಾಡಿದ್ದು, ಸದ್ಯ ಪೊಲೀಸರು ಆತನ ಮಾನಸಿಕ ಸ್ಥಿತಿಯ ಬಗ್ಗೆ ವೈದ್ಯರಿಂದ ಮಾಹಿತಿ ಪಡೆಯುತ್ತಿದ್ದಾರೆ. ಸಿಸಿಬಿ ಮತ್ತು ಆಗ್ನೇಯ ವಿಭಾಗದ ಪೊಲೀಸರು ಈ ಪ್ರಕರಣದ ಹೆಚ್ಚಿನ ವಿಚಾರಣೆ ನಡೆಸುತ್ತಿದ್ದಾರೆ.

ಯಥಾಸ್ಥಿತಿ ಕಾಪಾಡಲು ಸೂಚನೆ

ಪುಟ ೧➡ ಈ ಹಿನ್ನೆಲೆಯಲ್ಲಿ ಶಾಸಕರಾಗಿ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರೆದುರು ಪ್ರಮಾಣವಚನವನ್ನೂ ಸ್ವೀಕರಿಸಿದ್ದರು.

ಗೊಂದಲ-ಸಂಶಯ: ಮೂರು ವರ್ಷಗಳ ನಂತರ ಕಾಂಗ್ರೆಸ್‌ನ ಟಿ.ಡಿ. ರಾಜೇಗೌಡ ಅವರು ಅಧಿಕಾರ ಕಳೆದುಕೊಂಡಿದ್ದರು. ಮತಗಳ ಮರು ಎಣಿಕೆ ಸಂದರ್ಭದಲ್ಲಿ ಮತಗಳಿದ್ದ ಟ್ರಂಕ್ ಬಾಯ್ತೆರೆದುಕೊಂಡಿದ್ದು, ಸೀಲ್ ಇಲ್ಲದಿರುವುದು, ಮರು ಮತ ಎಣಿಕೆ ನಂತರ ದೊಡ್ಡ ಪ್ರಮಾಣದಲ್ಲಿ ಅಂಚೆ ಪತ್ರಗಳು ಅಸಿಂಧು ಎಂದು ಗೊತ್ತಾಗಿರುವುದೆಲ್ಲವೂ ಗೊಂದಲಕ್ಕೆಡೆಮಾಡಿದ್ದರೆ, ತಪ್ಪು ಎಲ್ಲಿ ನಡೆದಿದೆ ಎನ್ನುವ ಕುರಿತು ವ್ಯಾಪಕ ಚರ್ಚೆಗೂ ಗ್ರಾಸವಾಗಿತ್ತು. ಕಾಂಗ್ರೆಸ್–ಬಿಜೆಪಿ ನಡುವೆ ಆರೋಪ, ಪ್ರತ್ಯಾರೋಪಗಳು ನಡೆದಿದ್ದವು. ಸ್ವತಃ ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರ ನಡುವೆ ವಾಗ್ಯುದ್ಧಕ್ಕೂ ಕಾರಣವಾಗಿತ್ತು.

ಶೃಂಗೇರಿ ಕ್ಷೇತ್ರದ ಮತದಾರರು ಹಾಗೂ ವಿವಿಧ ಸಂಘ–ಸಂಸ್ಥೆಗಳು ಚುನಾವಣೆ ನಡೆದಾಗಿನಿಂದ ಅಂಚೆ ಮತಗಳ ಮರುಎಣಿಕೆ ಪ್ರಕ್ರಿಯೆ ಹಾಗೂ ಅದರ ಫಲಿತಾಂಶದ ಕುರಿತು ಎರಡೂ ಪಕ್ಷಗಳ ಅಭ್ಯರ್ಥಿಗಳು ಹಾಗೂ ಅವರ ಚುನಾವಣಾ ಏಜೆಂಟರು ಮತ್ತು ಮತ ಎಣಿಕೆ ಕೇಂದ್ರದ ಏಜೆಂಟರುಗಳ ವಿರುದ್ಧ ಹಲವು ರೀತಿಯ ಸಂಶಯಗಳನ್ನು ವ್ಯಕ್ತಪಡಿಸಿದ್ದರು.

ಆಣೆ-ಪ್ರಮಾಣ: ಎರಡೂ ಅಭ್ಯರ್ಥಿಗಳ ಕಡೆಯವರು ತಮ್ಮ ತಪ್ಪಿಲ್ಲ ಎಂದು ದೇವರ ಮುಂದೆ ಪ್ರಮಾಣ ಮಾಡಬೇಕು ಎನ್ನುವ ಒತ್ತಾಯವನ್ನೂ ಮಾಡಿದ್ದ ಹಿನ್ನೆಲೆಯಲ್ಲಿ 2023ರಲ್ಲಿ ನಡೆದ ಮತ ಎಣಿಕೆ ಸಂದರ್ಭದಲ್ಲಿ ಹಾಜರಿದ್ದ ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿಗಳು ಕೊಪ್ಪದ ವೀರಭದ್ರಸ್ವಾಮಿ ದೇವರ ಮುಂದೆ ನಿಂತು ಮತ ಎಣಿಕೆ ವೇಳೆ ಯಾವುದೇ ಲೋಪಗಳು ನಡೆದಿರಲಿಲ್ಲ. ಎಲ್ಲವೂ ಪಾರದರ್ಶಕವಾಗಿ ನಡೆದಿತ್ತು ಎಂದು ಪ್ರಮಾಣವನ್ನೂ ಮಾಡಿದ್ದರು.

ಅಂಚೆ ಮತಗಳ ಎಣಿಕೆಯಲ್ಲಿ ಲೋಪವಾಗಿದೆ ಎಂದು ಕೋರ್ಟ್ ಮೆಟ್ಟಿಲೇರಿ ಮರು ಮತ ಎಣಿಕೆಗೂ ಕಾರಣರಾಗಿರುವ ಬಿಜೆಪಿ ಅಭ್ಯರ್ಥಿ ಡಿ.ಎನ್. ಜೀವರಾಜ್ ಅವರ ಪರ ಹಾಜರಿದ್ದ ಎಣಿಕೆ ಕೇಂದ್ರದ ಏಜೆಂಟರು ಸಹ ಪ್ರತ್ಯೇಕವಾಗಿ ದೇವರ ಮುಂದೆ ನಿಂತು ಎಣಿಕೆಯಲ್ಲಿ ಯಾವ ಲೋಪವೂ ನಡೆದಿರಲಿಲ್ಲ ಎಂದು ಪ್ರಮಾಣ ಮಾಡಿದ್ದು ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿತ್ತು.

ಅಧಿಕಾರದ ಹಾವು-ಏಣಿ ಆಟ: ಇದೀಗ ಸುಪ್ರೀಂ ಕೋರ್ಟ್ ಅಂಚೆ ಮತಗಳ ಮರು ಎಣಿಕೆಗೆ ಹೈಕೋರ್ಟ್ ನೀಡಿದ್ದ ಆದೇಶ ಮತ್ತು ಮರು ಎಣಿಕೆ ನಂತರದ ಫಲಿತಾಂಶಕ್ಕೆ ತಡೆ ನೀಡಿರುವುದರಿಂದ ಕೇವಲ 7 ದಿನಗಳಲ್ಲಿ ಶಾಸಕ ಸ್ಥಾನ ಕಳೆದುಕೊಂಡಿರುವ ಡಿ.ಎನ್.ಜೀವರಾಜ್ ಮಾಜಿ ಆಗಿದ್ದಾರೆ. ಮೂರು ವರ್ಷಗಳ ಕಾಲ ಶಾಸಕರಾಗಿದ್ದು, 7 ದಿನಗಳ ಕಾಲ ಮಾಜಿ ಆಗಿದ್ದ ಟಿ.ಡಿ. ರಾಜೇಗೌಡ ಮತ್ತೆ ಶಾಸಕರಾಗಿ ಮುಂದುವರಿಯಲಿದ್ದಾರೆ. ಪ್ರಕರಣದ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮೇ 21ಕ್ಕೆ ಮುಂದೂಡಿದೆ.

ಪ್ರಜಾಪ್ರಭುತ್ವ ಹೈಜಾಕ್‌ಗಿಲ್ಲ ಅವಕಾಶ: ಸುಪ್ರೀಂ

• **ಬೆಂಗಳೂರು:** ಪ್ರಜಾಪ್ರಭುತ್ವವನ್ನು ಹೈಜಾಕ್ ಮಾಡಲು ಅವಕಾಶ ನೀಡುವುದಿಲ್ಲ ಎಂದಿರುವ ಸುಪ್ರೀಂ ಕೋರ್ಟ್, ಶೃಂಗೇರಿ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಕಾಂಗ್ರೆಸ್‌ನ ಟಿ.ಡಿ. ರಾಜೇಗೌಡ ಮುಂದುವರಿಯಲಿದ್ದಾರೆ ಎಂದು ಸೋಮವಾರ ಮಹತ್ವದ ಆದೇಶ ಮಾಡಿದೆ. ರಾಜೇಗೌಡರ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪಿ.ವಿ. ಸಂಜಯ್ ಕುಮಾರ್ ಮತ್ತು ಕೆ. ವಿನೋದ್ ಚಂದ್ರನ್ ಅವರ ವಿಭಾಗೀಯ ಪೀಠವು ಬಿಜೆಪಿ ಅಭ್ಯರ್ಥಿ ಡಿ.ಎನ್. ಜೀವರಾಜ್ ವಿರುದ್ಧ ಗಂಭೀರ ಮಾತುಗಳನ್ನಾಡಿದೆ. ಹೈಕೋರ್ಟ್ ನಿರ್ದೇಶದನಂತೆ ಅಂಚೆ ಮತ ಎಣಿಕೆಯ ನಂತರ ಬಿಜೆಪಿಯ ಜೀವರಾಜ್ ವಿಜೇತರಾಗಿದ್ದಾರೆ ಎಂಬ ನಿರ್ದೇಶನದ ಹೊರತಾಗಿಯೂ ರಾಜೇಗೌಡ ಶಾಸಕರಾಗಿ ಮುಂದುವರಿಯಲಿದ್ದಾರೆ ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿದೆ. ಪ್ರಜಾಪ್ರಭುತ್ವವನ್ನು ಈ ರೀತಿಯಲ್ಲಿ ಹೈಜಾಕ್ ಮಾಡಲು ಅವಕಾಶ ನೀಡಲಾಗದು ಎಂದು ಪೀಠ ಮೌಖಿಕವಾಗಿ ಹೇಳಿದ್ದು, ಮತ ಮರು ಎಣಿಕೆಗೂ ಮುನ್ನ ಇದ್ದ ಯಥಾಸ್ಥಿತಿಯನ್ನು ಕಾಪಾಡುವಂತೆ ಪಕ್ಷಕಾರರಿಗೆ ನ್ಯಾಯಾಲಯ ನಿರ್ದೇಶಿಸಿದ್ದು, ರಾಜೇಗೌಡ ಶೃಂಗೇರಿ ಶಾಸಕರಾಗಿ ಮುಂದುವರಿಯಲಿದ್ದಾರೆ. ರಾಜೇಗೌಡ ತಮ್ಮ ಆಯ್ಕೆ ಅಸಿಂಧುವನ್ನು ವಕೀಲ ತುಷಾರ್ ಗಿರಿ ಮೂಲಕ ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. 279 ತಿರಸ್ಕೃತ ಮತಗಳನ್ನು ಮಾತ್ರ ಪರಿಶೀಲಿಸುವಂತೆ ಹೈಕೋರ್ಟ್ ನಿರ್ದೇಶಿಸಿತ್ತು. ಆದರೆ, ಚುನಾವಣಾಧಿಕಾರಿಯು ರಾಜೇಗೌಡ ಪರವಾಗಿದ್ದ 562 ಸಿಂಧುವಾದ ಮತಗಳನ್ನು ಅಕ್ರಮವಾಗಿ ಪರಿಗಣಿಸಿದ್ದಾರೆ ಎಂದು ವಾದಿಸಲಾಗಿತ್ತು.

ಮಾರ್ಚ್, ಏಪ್ರಿಲ್ ಗೃಹಲಕ್ಷ್ಮಿ ಹಣ ಶೀಘ್ರ ಜಮಾ: ಸಚಿವೆ

ಬೆಳಗಾವಿ: ಮಾರ್ಚ್ ತಿಂಗಳ ಗೃಹಲಕ್ಷ್ಮಿ ಇನ್ನು 4-5 ದಿನದಲ್ಲಿ ಹಾಗೂ ಏಪ್ರಿಲ್ ತಿಂಗಳ ಹಣ ಇನ್ನು 8-10 ದಿನದಲ್ಲಿ ಜಮಾ ಆಗಲಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ತಿಳಿಸಿದ್ದಾರೆ.

ಬೆಳಗಾವಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಬಾಕನೂರು ಗ್ರಾಮದ ಮಹಾಲಕ್ಷ್ಮೀ ದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಸೋಮವಾರ ಬೆಳಗ್ಗೆ ದೇವಿಗೆ ವಿಶೇಷ ಪೂಜೆ



ಸಲ್ಲಿಸಿ, ಗ್ರಾಮಸ್ಥರನ್ನು ಉದ್ದೇಶಿಸಿ ಅವರು ಮಾತನಾಡಿದರು. ಕೆಲಸ ಮಾಡುವುದೆಂದರೆ ನನಗೆ ಹುಚ್ಚು. 2013ರಲ್ಲಿ ಚುನಾವಣೆಯಲ್ಲಿ ಸೋತ ನಂತರ ಕೂಡ ಕೆಲಸ ಮಾಡುತ್ತಲೇ ಇದ್ದೆ. ಬೇರೆಯವರಂತೆ ನಾಟಕ ಮಾಡುವುದು ನನಗೆ ಗೊತ್ತಿಲ್ಲ. ಕೆಲಸ ಮಾಡುವುದೊಂದೇ ನನಗೆ ಗೊತ್ತು. ಹಿಂದೆ ಆಯ್ಕೆಯಾದವರು ಬರೇ ಹಿಂದುತ್ವ ಎಂದುಕೊಂಡು ಓಡಾಡಿದ್ದನ್ನು ಬಿಟ್ಟು ಬೇರೇನೂ ಮಾಡಿಲ್ಲ. ನಾನು ಹೇಳುವುದಿಲ್ಲ, ಮಾಡಿ ತೋರಿಸುತ್ತಿದ್ದೇನೆ. ಪ್ರತಿಯೊಂದು ಸಮಾಜಕ್ಕೆ ಸಹಾಯವಾಗುವ ರೀತಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಸರ್ವ ಭಾಷಿಕ, ಸರ್ವ ಜಾತಿಯ ಜನರ ಕೆಲಸ ಮಾಡುತ್ತಿದ್ದೇನೆ. ಸರ್ವ ಕ್ಷೇತ್ರದಲ್ಲೂ ನಂಬರ್ ಒನ್ ಮಾಡುವ ಮೂಲಕ ಬಾರಾಮತಿಯಂತೆ ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ಗುರಿಯನ್ನು ನಾನು ಹೊಂದಿದ್ದೇನೆ ಎಂದು ತಿಳಿಸಿದರು.

ಈ ವೇಳೆ ಕಾಡಾ ಅಧ್ಯಕ್ಷ ಯುವರಾಜ ಕದಂ, ಯುವ ಮುಖಂಡ ಮೃಣಾಲ ಹೆಬ್ಬಾಳ್ಕರ್ ಸೇರಿದಂತೆ ಹಲವಾರು ಮುಖಂಡರು, ಗ್ರಾಮಸ್ಥರು ದೊಡ್ಡ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.



ಹುಬ್ಬಳ್ಳಿ ಮತ್ತು ಉತ್ತರ ಕರ್ನಾಟಕ ಭಾಗಕ್ಕೆ ರೈಲ್ವೆ ಇಲಾಖೆ ಕೊಡುಗೆ ನೀಡಿದ್ದು, ಮೂರು ಹೊಸ ವಿಶೇಷ ರೈಲುಗಳನ್ನು ಖಾಯಂಗೊಳಿಸಲು ಸೋಮವಾರ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹಸಿರು ನಿಶಾನೆ ತೋರಿಸಿದರು.

ಸಿಎಂಗೆ ಪ್ರಶ್ನೆಗಳ ಸುರಿಮಳೆ

ಬೆಂಗಳೂರು: ಪ್ರಧಾನಿ ಮೋದಿ ಅವರ ಭಾಷಣಕ್ಕೆ ಪ್ರತಿಕ್ರಿಯೆ ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ ಪ್ರಶ್ನೆಗಳ ಸುರಿಮಳೆ ಹರಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಸುದೀರ್ಘ ಪೋಸ್ಟ್ ಹಂಚಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮಾಡಿದ ಭಾಷಣ



ನಿಮ್ಮನ್ನು ಯಾಕೆ ಇಷ್ಟು ವಿಚಲಿತಗೊಳಿಸಿದೆ ಎಂಬುದನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಇಷ್ಟಕ್ಕೂ ಪ್ರಧಾನಿ ಮೋದಿ ಅವರು ಹೇಳಿದ್ದರಲ್ಲಿ ಹೊಸತೇನೂ ಇಲ್ಲ. ಅಧಿಕಾರ ಹಂಚಿಕೆಯ ನಿರಂತರ ಸರ್ಕಸ್ ಮತ್ತು ನಿಮ್ಮ ಸರ್ಕಾರದ ಒಳಜಗಳದಿಂದ ಕಂಗೆಟ್ಟಿರುವ 7 ಕೋಟಿ ಕನ್ನಡಿಗರ ಅಂತರಾಳದ ಧ್ವನಿಯನ್ನೇ ಪ್ರಧಾನಿಗಳು ಪ್ರತಿಧ್ವನಿಸಿದ್ದಾರೆ. ಆ ಸತ್ಯವೇ ಇಂದು ನಿಮಗೆ ನುಂಗಲಾರದ ತುತ್ತಾಗಿದೆ ಎಂದು ಕುಟುಕಿದ್ದಾರೆ. ಎಚ್.ಎ.ಎಲ್. ವಿಮಾನ ನಿಲ್ದಾಣದ ಬಳಿ ನಡೆದದ್ದು ಸರ್ಕಾರಿ ಕಾರ್ಯಕ್ರಮವಲ್ಲ. ಅದು ಬಂಗಾಳ, ಅಸ್ಸಾಂ ಮತ್ತು ಪುದುಚೇರಿ ವಿಧಾನಸಭಾ ಚುನಾವಣೆಗಳಲ್ಲಿ ನಮ್ಮ ಪಕ್ಷದ ಐತಿಹಾಸಿಕ ವಿಜಯದ ಹಿನ್ನೆಲೆಯಲ್ಲಿ ನಮ್ಮ ಲಕ್ಷಾಂತರ ಕಾರ್ಯಕರ್ತರು ಅಭಿಮಾನಪೂರ್ವಕವಾಗಿ ಹಮ್ಮಿಕೊಂಡಿದ್ದ ಬಿಜೆಪಿ ಪಕ್ಷದ ಕಾರ್ಯಕ್ರಮ. ಒಂದು ರಾಜಕೀಯ ವೇದಿಕೆಯಲ್ಲಿ ರಾಜಕೀಯ ಭಾಷಣ ಮಾಡುವ ಮತ್ತು ಪ್ರತಿಪಕ್ಷಗಳ ವೈಫಲ್ಯಗಳ ಬಗ್ಗೆ ಟೀಕೆ ಮಾಡುವ ಸಂಪೂರ್ಣ ಪ್ರಜಾಸತ್ತಾತ್ಮಕ ಹಕ್ಕು ಪ್ರಧಾನ ಮಂತ್ರಿಗಳಿಗಿದೆ ಎಂದಿದ್ದಾರೆ. ಇಷ್ಟಕ್ಕೂ ಶಿಷ್ಟಾಚಾರ, ಘನತೆ ಮತ್ತು ಗೌರವದ ಬಗ್ಗೆ ನೀವು ಇತರರಿಗೆ ಉಪದೇಶ ನೀಡುವುದು ನೋಡಿದರೆ ಎಂತಹವರಿಗೂ ಅಚ್ಚರಿಯಾಗುತ್ತದೆ, ನಗು ಬರುತ್ತದೆ. ಬಜೆಟ್ ಭಾಷಣವನ್ನೂ ರಾಜಕೀಯಕ್ಕೆ ಬಳಸುವ, ರಾಜ್ಯಪಾಲರ ಭಾಷಣವನ್ನು ಕಾಂಗ್ರೆಸ್ ಪಕ್ಷದ ಚುನಾವಣಾ ಕರಪತ್ರದಂತೆ ದುರ್ಬಳಕೆ ಮಾಡುವ ಮತ್ತು ಸಾಂವಿಧಾನಿಕ ಸಂಸ್ಥೆಗಳ ಮೇಲೆ ನಿರಂತರ ದಾಳಿ ಮಾಡುವ ಸಿದ್ದರಾಮಯ್ಯ ಅವರೇ ಇಂದು ಸಂಸದೀಯ ಮೌಲ್ಯಗಳ ಮತ್ತು ಶಿಷ್ಟಾಚಾರದ ಬಗ್ಗೆ ಮಾತನಾಡುತ್ತಿರುವುದು ಅತ್ಯಂತ ಹಾಸ್ಯಾಸ್ಪದ ಎಂದು ಲೇವಡಿ ಮಾಡಿದ್ದಾರೆ.

ಕಿರುಸುದ್ದಿ

ಮೇ 14ಕ್ಕೆ ಮೈ. ಚ. ಜಯದೇವ ಪುಸ್ತಕ ಬಿಡುಗಡೆ

ಬೆಂಗಳೂರು: ರಾಷ್ಟ್ರೋತ್ಥಾನ ಪರಿಷತ್ ವತಿಯಿಂದ ದಿವಂಗತ ಮೈ. ಚ. ಜಯದೇವ ಅವರ ಬದುಕು -ನೆನಪುಗಳನ್ನೊಳಗೊಂಡ ಅವಿಶ್ರಾಂತ ಧ್ಯೇಯಜೀವಿ ಪುಸ್ತಕದ ಲೋಕಾರ್ಪಣೆ ಕಾರ್ಯಕ್ರಮವನ್ನು ಮೇ 14 ರಂದು ಹಮ್ಮಿಕೊಳ್ಳಲಾಗಿದೆ. ಆರ್‌ಎಸ್‌ಎಸ್‌ನ ವಿವಿಧ ಜವಾಬ್ದಾರಿಗಳನ್ನು ನಿಭಾಯಿಸಿದ, ರಾಷ್ಟ್ರೋತ್ಥಾನ ಪರಿಷತ್ತಿನ ಆರಂಭದ



ದಿನಗಳಿಂದಲೂ ಅದರ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಮೈ.ಚ. ಜಯದೇವ ಅವರ ಕುರಿತ ಪುಸ್ತಕ ನಗರದ ಟೌನ್‌ಹಾಲ್ ಸಂಜೆ 6.30 ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಸುತ್ತೂರಿನ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಲೋಕಾರ್ಪಣೆ ಮಾಡಲಿದ್ದಾರೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಪುಸ್ತಕದ ಕುರಿತು ಮಾತನಾಡಲಿದ್ದಾರೆ.ಲೇಖಕರಾದ ಡಾ.ಬಾಬು ಕೃಷ್ಣಮೂರ್ತಿ ಹಾಗೂ ಬೇಳೂರು ಸುದರ್ಶನ್, ರಾಷ್ಟ್ರೋತ್ಥಾನ ಪರಿಷತ್‌ನ ಅಧ್ಯಕ್ಷ ಎಂ. ಪಿ. ಕುಮಾರ್ ಉಪಸ್ಥಿತರಿರಲಿದ್ದಾರೆ.

ಮೇ 14ರಂದು ನೂತನ ಶಾಸಕರಿಗೆ ಪ್ರಮಾಣವಚನ

ಬೆಂಗಳೂರು: ವಿಧಾನಸಭಾ ಉಪ ಚುನಾವಣೆಯಲ್ಲಿ ಚುನಾಯಿತರಾಗಿರುವ ಶಾಸಕದ್ವಯರು ಮೇ 14ರಂದು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಕಳೆದ ತಿಂಗಳು ನಡೆದ ಉಪ ಚುನಾವಣೆಯಲ್ಲಿ ಬಾಗಲಕೋಟೆ ವಿಧಾನ ಸಭಾ ಕ್ಷೇತ್ರದಿಂದ ಉಮೇಶ ಹುಲ್ಲಪ್ಪ ಮೇಟಿ ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ಸಮರ್ಥ್ ಶಾಮನೂರು ಮಲ್ಲಿಕಾರ್ಜುನ್ ಆಯ್ಕೆಯಾಗಿದ್ದಾರೆ. ಮೇ 14 ರಂದು ಬೆಳಗ್ಗೆ 10 ಗಂಟೆಗೆ ವಿಧಾನ ಸೌಧದ ಮೂರನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ: 334ರಲ್ಲಿ ವಿಧಾನಸಭಾ ಸದಸ್ಯರಾಗಿ ಪ್ರಮಾಣ ವಚನ ಸ್ವೀಕಾರ ಮಾಡಲಿದ್ದಾರೆ.

ಈಜಲು ಹೋದ ಇಬ್ಬರು ಬಾಲಕರ ಸಾವು

ನಾಗಮಂಗಲ: ಕೆರೆಯಲ್ಲಿ ಈಜಲು ಹೋಗಿದ್ದ ಬಾಲಕರಿಬ್ಬರು ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ತಾಲೂಕಿನ ಬಿಂಡಿಗನವಿಲೆ ಹೋಬಳಿಯ ಹೆರಗನಹಳ್ಳಿಯಲ್ಲಿ ನಡೆದಿದೆ. ತಾಲೂಕಿನ ಬಿಂಡಿಗನವಿಲೆ ಹೋಬಳಿಯ ಅಳಿಸಂದ್ರ ಗ್ರಾಮದ ಸತ್ಯಪ್ರಕಾಶ್ (17) ಮತ್ತು ಹೆರಗನಹಳ್ಳಿ ಗ್ರಾಮದ ಯಶಸ್ (17) ಮೃತ ದುರ್ದೈವಿಗಳು. ಮೃತ ಬಾಲಕರು ಮನೆಗೆ ಬಾರದಿರುವುದರಿಂದ ಗಾಬರಿಗೊಂಡ ಪಾಲಕರು, ಸ್ನೇಹಿತರು ಹಾಗೂ ಕುಟುಂಬಸ್ಥರ ಮನೆಗಳಲ್ಲಿ ವಿಚಾರಿಸಿ ನಂತರ ಕೆರೆಯ ಬಳಿಗೆ ಈಜಲು ತೆರಳಿರುವ ವಿಚಾರ ತಿಳಿದು ಕೆರೆಯ ಬಳಿ ಹೋಗಿ ನೋಡಲಾಗಿ ಕೆರೆಯ ಕೋಡಿಯ ಬಳಿ ಮೃತ ಸತ್ಯಪ್ರಕಾಶ್ ತಂದಿದ್ದ ಬೈಕ್‌ನಿಂತಿರುವುದು ಹಾಗೂ ಇಬ್ಬರು ಬಾಲಕರ ಬಟ್ಟೆಗಳು ಪತ್ತೆಯಾಗಿದ್ದವು. ಮೃತದೇಹಗಳನ್ನು ಹೊರತೆಗೆದು ಆದಿಚುಂಚನಗಿರಿ ಆಸ್ಪತ್ರೆಯ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಿದರು. ಬಿಂಡಿಗನವಿಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಿಷಯ ತಿಳಿದ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಅವರು ಆದಿಚುಂಚನಗಿರಿ ಆಸ್ಪತ್ರೆಯ ಶವಾಗಾರಕ್ಕೆ ತೆರಳಿ ಮೃತ ಬಾಲಕರ ಅಂತಿಮ ದರ್ಶನ ಪಡೆದು, ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಜನರ ನಿತ್ಯದ ಜೀವನ ನಿರ್ವಹಣೆಗಾಗಿ ಪರದಾಟ: ಸಿದ್ದರಾಮಯ್ಯ

ದೇಶದ ಆರ್ಥಿಕ ಸ್ಥಿತಿ ಅಭದ್ರ

ಬೆಂಗಳೂರು: ಬೆಂಗಳೂರು : ದೇಶದ ಬಡತನವನ್ನು ನಿರ್ಮೂಲನೆ ಮಾಡಿದ್ದೇವೆ. ಎಂದಿದ್ದ ಪ್ರಧಾನಿಯವರು ಈಗ ಚಿನ್ನ ಖರೀದಿಸ ಬೇಡಿ, ಪೆಟ್ರೋಲ್ ಮತ್ತು ಖಾದ್ಯ ಎಣ್ಣೆ ಕಡಿಮೆ ಬಳಸಿ, ವಿದೇಶ ಪ್ರವಾಸ ಮಾಡಬೇಡಿ ಮತ್ತು ಗೊಬ್ಬರ ಬಳಕೆ ತಗ್ಗಿಸಿ ಎಂದು ಮನವಿ ಮಾಡಿರುವುದು ಯಾವ ಅಭಿವೃದ್ಧಿಯ ಲಕ್ಷಣ ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಮೋದಿಯವರ ಹೇಳಿಕೆ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ಮಾತನಾಡಿರುವ ಅವರು, ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಖಾದ್ಯತೈಲ ಎಲ್ಲವೂ ದುಬಾರಿಯಾಗಿ ದೇಶದ ಜನರ ನಿತ್ಯದ ಜೀವನ ನಿರ್ವಹಣೆಗಾಗಿ ಪರದಾಡುವಂತಹ ಪರಿಸ್ಥಿತಿ ನಿರ್ಮಾಣಕ್ಕೆ ದೇಶದ



ಎಡಬಿಡಂಗಿ ವಿದೇಶಾಂಗ ನೀತಿ ಕಾರಣ ಎನ್ನುವುದನ್ನು ಅರಿತುಕೊಳ್ಳುವಷ್ಟು ಜನತೆ ಪ್ರಬುದ್ಧರಾಗಿದ್ದಾರೆ ಎಂದಿದ್ದಾರೆ. ಇರಾನ್ ವಿರುದ್ಧ ಇಸ್ರೇಲ್ ಮತ್ತು ಅಮೆರಿಕ ಜಂಟಿಯಾಗಿ ನಡೆಸುತ್ತಿರುವ ಯುದ್ಧದ ನಡುವೆ ಭಾರತ ಸಿಕ್ಕಿಹಾಕಿಕೊಂಡು ಒದ್ದಾಡುತ್ತಿದೆ. ಇಂತಹ ಸಂದರ್ಭದಲ್ಲಿ ನ್ಯಾಯ ಮತ್ತು ನೀತಿಯ ಪರವಾಗಿ ಗಟ್ಟಿಯಾದ ನಿಲುವು ತೆಗೆದುಕೊಂಡಿದ್ದರೆ ಭಾರತ ಇಂದಿನ ದುಸ್ಥಿತಿ ಯನ್ನು ಎದುರಿಸುತ್ತಿರಲಿಲ್ಲ. ಮೋದಿಯವರೇ, ಈ ವೈಫಲ್ಯಕ್ಕೆ ಯಾರನ್ನು ದೂರುತ್ತೀರಿ? ಜವಾಹರಲಾಲ್ ನೆಹರೂ ಅವರನ್ನೇ? ಕಾಂಗ್ರೆಸ್ ಪಕ್ಷವನ್ನೇ? ಉತ್ತರಿಸಿ ಎಂದು ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ಆಡಳಿತದಲ್ಲಿ ಕರ್ನಾಟಕದ ಆರ್ಥಿಕ ಪರಿಸ್ಥಿತಿ ಸುಭದ್ರವಾಗಿದೆ. ದೇಶದ ತಲಾವಾರು ಆದಾಯ ರೂ.2.11 ಲಕ್ಷ ರೂಗಳಾಗಿದ್ದರೆ ಕರ್ನಾಟಕದ್ದು 4.33 ಲಕ್ಷ ರೂಪಾಯಿಗಳು. ದೇಶದ ಜಿಡಿಪಿ ಬೆಳವಣಿಗೆಯ ದರ ಶೇಕಡಾ 7.4 ಆಗಿದ್ದರೆ, ಕರ್ನಾಟಕದ್ದು ಶೇಕಡಾ 8.1 ಆಗಿದೆ. ದೇಶದ ಜಿಡಿಪಿಯಲ್ಲಿ ಕರ್ನಾಟಕದ ಪಾಲು ಶೇಕಡಾ 9.19 ಆಗಿದೆ. ಜಿಎಸ್ಟಿ ಸಂಗ್ರಹದಲ್ಲಿ ಮಹಾರಾಷ್ಟ್ರದ ನಂತರ ಕರ್ನಾಟಕದ್ದೇ ಅತ್ಯಧಿಕ ಪಾಲು ಎಂದಿದ್ದಾರೆ.

ಬೆಲೆ ಏರಿಕೆಯಾಗಿದ್ದು ಯಾರಿಂದ?: ಡಿಸಿಎಂ

ಬೆಂಗಳೂರು: ಚಿನ್ನ ಖರೀದಿಸಬೇಡಿ, ಇಂಧನ ಬಳಕೆ ಕಡಿಮೆ ಮಾಡಿ ಎಂಬ ಸಲಹೆ ನೀಡುತ್ತಿರುವ ಪ್ರಧಾನ ಮಂತ್ರಿಗಳು, ಇವುಗಳ ಬೆಲೆ ಏರಿಕೆಯಾಗಿದ್ದು ಯಾಕೆ? ಯಾರಿಂದ



ಬೆಲೆ ಏರಿಕೆಯಾಗಿದೆ ಎಂಬುದನ್ನೂ ವಿವರಿಸಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಗ್ರಹಿಸಿದ್ದಾರೆ. ಸೋಮವಾರ ಮಾಧ್ಯಮಗಳ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಅವರು, ಮದುವೆ, ಮುಂಜಿ ಮಾಡುವವರು ಚಿನ್ನ ತೆಗೆದುಕೊಳ್ಳಬೇಡಿ ಎಂದು ಹೇಳಲು ಸಾಧ್ಯವೇ? ಅವರು ಸಲಹೆಗಳನ್ನು ನೀಡುತ್ತಾರೆ. ಹಿಂದೆ ಕೋವಿಡ್ ಬಂದಾಗ ದೀಪ ಹಚ್ಚಿಸಿ, ಚಪ್ಪಾಳೆ ತಟ್ಟಿಸಿದರು. ಅದರಿಂದ ಸಮಸ್ಯೆ ನಿಂತು ಹೋಯಿತಾ? ಮದುವೆಯಾದ ಮಹಿಳೆ ಚಿನ್ನದ ತಾಳಿ, ಸರ ಹಾಕಿಕೊಳ್ಳುವುದುನ್ನು ಬೇಡ ಎನ್ನಲು ಸಾಧ್ಯವೇ? ಎಂದು ಪ್ರಶ್ನಿಸಿದರು. ಜನ ಸಾಮಾನ್ಯರ ಬದುಕಿನಲ್ಲಿ ಕಷ್ಟವೋ ಸುಖವೋ, ಸಾಲ ಮಾಡಿ ಚಿನ್ನ ಖರೀದಿ ಮಾಡುತ್ತಾರೆ. ಎಲ್ಲರನ್ನು ಸಾರ್ವಜನಿಕ ಸಾರಿಗೆಯಲ್ಲೇ ಓಡಾಡಿ ಎನ್ನುವುದಾದರೆ, ಪ್ರಧಾನ ಮಂತ್ರಿಗಳು, ಕೇಂದ್ರ ಸರ್ಕಾರದ ಅಧಿಕಾರಿಗಳು ಸಾರ್ವಜನಿಕ ಸಾರಿಗೆಯಲ್ಲಿ ಓಡಾಡುವಂತೆ ಸೂಚಿಸಲಿ. ಅವರ ಕೇಂದ್ರ ಸಚಿವರಿಗೆ ತಾಕೀತು ಮಾಡಲಿ. ನಾವು ಮೊದಲು ನಡೆದುಕೊಂಡು ನಂತರ ಸಾಮಾನ್ಯ ಜನಕ್ಕೆ ಸಂದೇಶ ನೀಡಬೇಕು ಎಂದರು. ಮೊದಲು ತ್ಯಾಗವನ್ನು ಕೇಂದ್ರ ಸರ್ಕಾರದ ಸಚಿವರು, ಅಧಿಕಾರಿಗಳು, ಬಿಜೆಪಿ ಆಡಳಿತ ರಾಜ್ಯಗಳಲ್ಲಿರುವ ಅಧಿಕಾರಿಗಳಿಂದ, ಅವರ ಪಕ್ಷದ ಶಾಸಕರು, ನಾಯಕರು ಹಾಗೂ ಕಾರ್ಯಕರ್ತರಿಂದ ತ್ಯಾಗ ಆರಂಭವಾಗಲಿ. ನಂತರ ಬೇರೆಯವರಿಗೆ ತ್ಯಾಗದ ಸಲಹೆ ನೀಡಲಿ ಎಂದು ತಿರುಗೇಟು ನೀಡಿದರು.

> **ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರೊಂದಿಗೆ ರಾಜಕೀಯವಾಗಿ ಸಭೆ ಮಾಡಿದ್ದೇವೆ. ಅಧಿಕಾರಿಗಳನ್ನು ಕರೆದು ಕೆಲವು ಸೂಚನೆ ನೀಡಿದ್ದು, ಬೆಂಗಳೂರು ನಗರಕ್ಕೆ ದೊಡ್ಡ ಗ್ಯಾರಂಟಿಗಳನ್ನು ನೀಡುತ್ತಿದ್ದೇವೆ. ಈ ಬಗ್ಗೆ ಮೇ 13ರಂದು ಮಾಹಿತಿ ನೀಡುತ್ತೇವೆ.**
> ■ **ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ**

ಹುದ್ದೆ ಭರ್ತಿಗೆ ಸರ್ಕಾರ ಮೀನಾಮೇಷ: ಬಿವೈವಿ

ಬೆಂಗಳೂರು: ರಾಜ್ಯ ಸರ್ಕಾರ 56,432 ಹುದ್ದೆಗಳ ಭರ್ತಿಗೆ ಮೀನಾಮೇಷ ಎಣಿಸದೇ ಅಧಿಸೂಚನೆ ಹೊರಡಿಸಿ, ಅತೀ ಶೀಘ್ರದಲ್ಲಿ ಅಭ್ಯರ್ಥಿಗಳ ಆಯ್ಕೆಯಾಗುವಂತೆ ಕಾಳಜಿ ಪ್ರದರ್ಶಿಸಲಿ. ಇಲ್ಲದಿದ್ದರೆ ಈಗಾಗಲೇ ಹತಾಶೆಯ ಅಂಚಿನಲ್ಲಿರುವ ಲಕ್ಷಾಂತರ ನಿರುದ್ಯೋಗಿಗಳ ಆಕ್ರೋಶ ಆಸ್ಫೋಟವಾಗಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಎಚ್ಚರಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಅವರು ಪೋಸ್ಟ್ ಮಾಡಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕ ಲೋಕ ಸೇವಾ ಆಯೋಗ (ಕೆಪಿಎಸ್‌ಸಿ) ಅರ್ಹ ಪ್ರತಿಭಾವಂತ ನಿರುದ್ಯೋಗಿಗಳ ಪಾಲಿಗೆ ಕಲ್ಪವೃಕ್ಷವಾಗುವ ಬದಲು ಪಾಪಾಸುಕಳ್ಳಿಯಾಗಿ ಲಕ್ಷಾಂತರ ನಿರುದ್ಯೋಗಿಗಳ ಭವ್ಯ ಭವಿಷ್ಯವನ್ನು ಅತಂತ್ರ ಸ್ಥಿತಿಗೆ ಸಿಲುಕಿಸಿದ ಕರಾಳ ಇತಿಹಾಸವನ್ನು ಅಂಟಿಸಿಕೊಂಡಿದೆ ಎಂದು ಟೀಕಿಸಿದ್ದಾರೆ.

ನಿರುದ್ಯೋಗಿ ಯುವಜನರ ಬೃಹತ್ ಪ್ರತಿಭಟನೆಗೆ ಮಣಿದು 56,432 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಆರಂಭಿಸುವುದಾಗಿ ಸರ್ಕಾರ ಪ್ರಕಟಿಸಿದೆ. ಆದರೆ, ಈ ಸಂಬಂಧ ಇನ್ನೂ ಅಧಿಸೂಚನೆ ಹೊರಡಿಸಿಲ್ಲ. ಸರ್ಕಾರಿ ಯಂತ್ರವನ್ನು ಸಮರ್ಥವಾಗಿ ನಿಭಾಯಿಸಲು ಅರ್ಹ ಅಧಿಕಾರಿಗಳನ್ನು ನೇಮಿಸುವ ಸಾಂವಿಧಾನಿಕ ಹೊಣೆ ಹೊತ್ತಿರುವ ಲೋಕಸೇವಾ ಆಯೋಗ ಅಭ್ಯರ್ಥಿಗಳ ಆಯ್ಕೆಯಲ್ಲಿ ಪಾರದರ್ಶಕತೆ ವಿಫಲವಾಗಿ ಬ್ರಹ್ಮಾಂಡ ಭ್ರಷ್ಟಾಚಾರ, ಅಕ್ರಮ ಹಾಗೂ ದೋಷಪೂರಿತ ಪ್ರಕ್ರಿಯೆಗಳಿಂದ ಕುಖ್ಯಾತಿ ಪಡೆದಿದೆ ಎಂದಿದ್ದಾರೆ.



ಆಯ್ಕೆಗೆ ಸುಭದ್ರ ವ್ಯವಸ್ಥೆ ರೂಪಿಸಿ

ಆಯೋಗದ ಈ ದುರವಸ್ಥೆಗೆ ಅಂಕುಶ ಹಾಕಲು ಆಯೋಗದ ವಿರುದ್ಧದ ನ್ಯಾಯಾಲಯದ ಅನೇಕ ತೀರ್ಪುಗಳು ಭ್ರಷ್ಟ ವ್ಯವಸ್ಥೆಯನ್ನು ಬಯಲು ಮಾಡಿದೆ. ಕೆಲ ತಪ್ಪಿತಸ್ಥರ ಮುಖವಾಡಗಳು ಕೂಡ ಕಳಚಿ ಬಿದ್ದಿವೆ. ಇಷ್ಟಾಗಿಯೂ ಆಯೋಗದ ವ್ಯವಸ್ಥೆಗೆ ಕಾಯಕಲ್ಪ ನೀಡುವ ಪ್ರಯತ್ನ ಈವರೆವಿಗೂ ಸಾಧ್ಯವಾಗಿಲ್ಲ. ಸದ್ಯ ನೂತನ ತಂತ್ರಜ್ಞಾನ ಅಳವಡಿಸಿಕೊಂಡು ಅಭ್ಯರ್ಥಿಗಳ ಆಯ್ಕೆಗೆ ಸುಧಾರಣೆಗಳನ್ನು ತರುವುದಾಗಿ ಆಯೋಗದ ಮೂಲಗಳು ತಿಳಿಸಿವೆ. ಆದರೆ, ಇದನ್ನು ನಂಬುವ ಮನಸ್ಥಿತಿಯನ್ನು ಉದ್ಯೋಗಾಕಾಂಕ್ಷಿಗಳು ಕಳೆದುಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಆಯೋಗದ ಅಸ್ತಿತ್ವವನ್ನು ಪ್ರಶ್ನಿಸುವ ಪರಿಸ್ಥಿತಿ ಉದ್ಭವವಾಗಲಿದೆ ಎಂದು ವಿಜಯೇಂದ್ರ ಎಚ್ಚರಿಸಿದ್ದಾರೆ.

ಭಾರತ ಆರ್ಥಿಕವಾಗಿ ಬಲಿಷ್ಠ: ಜೋಶಿ

ಹುಬ್ಬಳ್ಳಿ: ಇಡೀ ವಿಶ್ವದಲ್ಲಿ ಜಾಗತಿಕ ಸಮಸ್ಯೆ ಎದುರಾಗಿದೆ. ಹಲವು ತಿಂಗಳು ಕಳೆದರು ದೇಶದಲ್ಲಿ ಯಾವುದೇ ಸಮಸ್ಯೆಯಾಗದಂತೆ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಉತ್ತಮವಾಗಿ ನಿರ್ವಹಣೆ ಮಾಡಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.



ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜೈವಿಕ ಅನಿಲ ಹೊಸ ಚಿಂತನೆಗಳ ಅನುಸರಿಸಲಾ ಗುತ್ತಿದೆ. ಎಲ್‌ಪಿಜಿ, ಕ್ರೋಡೈಲ್ ದರ ಹೆಚ್ಚಾದರೂ ಜನರಿಗೆ ಸಮಸ್ಯೆಯಾಗದಂತೆ ನೀಡಲಾಗುತ್ತಿದೆ. ಮುಂದೆ ದೇಶಕ್ಕೆ ದೊಡ್ಡ ಸಮಸ್ಯೆಯಾಗಬಾರದು ಎಂಬ ದೂರ ದೃಷ್ಟಿಯಿಂದ ಪ್ರಧಾನಿ ಮೋದಿ ಅವರು ಕರೆ ನೀಡಿದ್ದಾರೆ ಎಂದರು. ಇಡೀ ವಿಶ್ವಕ್ಕೆ ಅತೀ ದೊಡ್ಡ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿದ್ದರೂ ಸಹ ಭಾರತ ಆರ್ಥಿಕವಾಗಿ ಬಲಿಷ್ಠವಾಗಿದೆ. ಪ್ರಧಾನಿ ಮೋದಿ ಅವರ ಕರೆ ಎಲ್ಲರೂ ಪಾಲಿಸಬೇಕು. ಪೆಟ್ರೋಲ್, ಡೀಸೆಲ್ ಸಮಸ್ಯೆ ಎದುರಾಗಲ್ಲ ಎಂದು ತಿಳಿಸಿದರು.

ಬೆಂಗಳೂರು ಹಾಗೂ ಮುಂಬೈ ಮಧ್ಯೆ ವಂದೇ ಭಾರತ ರೈಲು ಜೂನ್‌ನಲ್ಲಿ ಆರಂಭಿಸಲಾಗುತ್ತಿದೆ. ವಿದ್ಯುತೀಕರಣ ಕಾಮಗಾರಿ ವೇಗವಾಗಿ ಸಾಗಿದ್ದು, ಭಾರತ ವಿಶ್ವದಲ್ಲಿ ವಿದ್ಯುತೀಕರಣ ಹೊಂದಿದ ರೈಲೆ ಸಂಪರ್ಕದಲ್ಲಿ 2 ನೇ ಸ್ಥಾನದಲ್ಲಿ ಇದೆ ಎಂದು ಹೇಳಿದರು.

ನಿಯೋಜನೆ ಆದೇಶ ಹಿಂಪಡೆಯಲು ಆಗ್ರಹ

ಬೆಂಗಳೂರು: ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯಭಾರ ಕಡಿಮೆ ಇರುವ ಉಪನ್ಯಾಸಕರನ್ನು ನಿಯೋಜನೆ ಮಾಡುವ ಆದೇಶವನ್ನು ಸರ್ಕಾರ ಕೂಡಲೇ ಹಿಂಪಡೆಯಬೇಕು ಎಂದು ಸರ್ಕಾರಿ ಪದವಿಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘಟನೆ ಆಗ್ರಹಿಸಿದೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಸಂಘಟನೆಯ ರಾಜ್ಯ ಕಾರ್ಯದರ್ಶಿ ರಾಜೇಶ್ ಭಟ್ ಅವರು, ಕಾರ್ಯಭಾರ ಕಡಿಮೆ ಇರುವ ಖಾಯಂ ಉಪನ್ಯಾಸಕರಿಗೆ ಹೆಚ್ಚುವರಿ ಕಾರ್ಯ ಭಾರವನ್ನು ನೀಡುವ ಹೆಸರಿನಲ್ಲಿ ಮೇ 7 ರಂದು ಆದೇಶ ಹೊರಡಿಸಲಾಗಿತ್ತು. 320 ವಿದ್ಯಾರ್ಥಿಗಳಿಗೆ 1 ಉಪನ್ಯಾಸಕರು (1:320 ಅನುಪಾತ) ಎಂಬ ಅನುಪಾತದ ಆಧಾರದ ಮೇಲೆ ಕಾರ್ಯ ಭಾರವನ್ನು ಪದವಿಪೂರ್ವ ಇಲಾಖೆ ಮತ್ತು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದು ತಿಳಿಸಿದ್ದಾರೆ. ಈ ಅನುಪಾತದ ಪ್ರಕಾರ ಓರ್ವ ಉಪನ್ಯಾಸಕರನ್ನು ಮೂರು ದಿನ ಒಂದು ಕಾಲೇಜಿಗೆ ಉಳಿದ ಮೂರು ದಿನ ಇನ್ನೊಂದು ಕಾಲೇಜಿಗೆ ನಿಯೋಜನೆ ಮಾಡಲು ಆದೇಶಿಸಲಾಗಿದೆ. ಇದು ಜಾರಿಗೆ ಬಂದರೆ ರಾಜ್ಯಾದ್ಯಂತ ಸಾವಿರಾರು ಜನ ಅನುಭವಿ ಹಾಗೂ ಪ್ರತಿಭಾವಂತ ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಂಡು ಬೀದಿ ಪಾಲಾಗುತ್ತಾರೆ ಎಂದು ಹೇಳಿದ್ದಾರೆ.

ಆದ್ದರಿಂದ ಸರ್ಕಾರ ಆದೇಶವನ್ನು ಹಿಂಪಡೆಯಬೇಕು. ಹಲವಾರು ವರ್ಷಗಳಿಂದ ಕೆಲಸ ಮಾಡುತ್ತಿರುವ ಅತಿಥಿ ಉಪನ್ಯಾಸಕರ ಸೇವೆಯನ್ನು ರಾಜ್ಯ ಸರ್ಕಾರ ಈ ಕೂಡಲೇ ಸಕ್ರಮಗೊಳಿಸಿ, ಅವರನ್ನು ಖಾಯಂ ಉಪನ್ಯಾಸಕರಾಗಿ ನೇಮಕ ಮಾಡಿಕೊಳ್ಳಬೇಕೆಂದರು.

ಮಿತವ್ಯಯದ ಸಂದೇಶ

ಗದಗ: ಇಸ್ರೇಲ್, ಅಮೇರಿಕಾ, ಇರಾನ್ ಯುದ್ಧ ಮುಗಿಯದ ಕಾರಣ ಮುಂಜಾಗ್ರತಾ ಕ್ರಮವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಪೆಟ್ರೋಲ್, ಡಿಸೇಲ್ ಮಿತವ್ಯಯದ ಸಂದೇಶ ಕೊಟ್ಟಿದ್ದಾರೆ. ಕಾಂಗ್ರೆಸ್‌ನವರಿಗೆ ತ್ಯಾಗ, ದೇಶ ಭಕ್ತಿ ಅನ್ನುವುದೇ ಗೊತ್ತಿಲ್ಲ. ಕಾಂಗ್ರೆಸ್‌ನವರಿಗೆ ಜನ ಮಾನಸದಲ್ಲಿ ದೇಶ ಭಕ್ತಿ ಆಳವಾಗಿ ಊರಿದೆ ಎಂಬುದು ಗೊತ್ತಿಲ್ಲ. ವಿರೋಧ ಮಾಡುವುದರ



ಸಲುವಾಗಿ ವಿರೋಧ ಮಾಡುತ್ತಾರೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಇರಾನ್ ಇಸ್ರೇಲ್, ಅಮೇರಿಕಾ ಯುದ್ಧ ನಡೆಯುತ್ತಿದೆ. ಗಲ್ಫ್ ರಾಷ್ಟ್ರದ ಯುದ್ಧ ಮುಗಿಯುವಂತೆ ಕಾಣುತ್ತಿಲ್ಲ. ಉಕ್ರೇನ್ ರಷ್ಯಾ ಯುದ್ಧ ಆದಾಗ ಬಹಳಷ್ಟು ಸಮಸ್ಯೆ ಆಗಿತ್ತು. ರಸಗೊಬ್ಬರ ಕಚ್ಚಾವಸ್ತುಗಳ ಸಮಸ್ಯೆ ಆಗಿತ್ತು. ಈಗ ಪೆಟ್ರೋಲ್, ಡಿಸೇಲ್, ಆಯಿಲ್ ಸಮಸ್ಯೆ ಆಗುತ್ತಿದೆ.

ಇರಾನ್ ದೇಶದ ಮೇಲೆ ಅವಲಂಬಿತ ವಾಗಿದ್ದೇವೆ. ಇಷ್ಟು ದಿನ ನರೇಂದ್ರ ಮೋದಿ ಅವರು ಅಂತಾರಾಷ್ಟ್ರೀಯ ಮಟ್ಟದ ವ್ಯಕ್ತಿತ್ವ ಉಪಯೋಗಿಸಿ ಕಳೆದ ಎರಡು ತಿಂಗಳು ಪೆಟ್ರೋಲ್ ಡಿಸೇಲ್, ಗ್ಯಾಸ್ ಸಮಸ್ಯೆ ಆಗದಂತೆ ನೋಡಿದ್ದರು. ಆಯಿಲ್ ಕಂಪನಿಗಳು ನಷ್ಟದಲ್ಲಿ ವಿತರಣೆ ಮಾಡಿ ದ್ದಾರೆ. ಯುದ್ಧ ಮುಗಿಯುತ್ತೆ ಎಂಬ ನಂಬಿಕೆ ಇತ್ತು. ಆದರೆ, ಯುದ್ಧ ಮುಗಿದ್ದಿಲ್ಲ. ಬರುವ ದಿನಗಳಲ್ಲಿ ಪೆಟ್ರೋಲ್ ಡಿಸೇಲ್ ಗ್ಯಾಸ್ ಸಂಕಷ್ಟ ಬರಹಬಹುದು. ಅಂತಾರಾಷ್ಟ್ರೀಯ ಮಟ್ಟದಲ್ಲಿ ದರಗಳು ಹತ್ತು ಪಟ್ಟು ಹೆಚ್ಚಿಗೆ ಆಗಿವೆ. ಅಮೆರಿಕಾ, ಚೀನಾ, ಶ್ರೀಲಂಕಾ, ಮಲೇಷಿಯಾ, ಪಾಕಿಸ್ತಾನ ಸೇರಿದಂತೆ ಹಲವು ರಾಷ್ಟ್ರದಲ್ಲಿ ದರ ಏರಿಕೆ ಆಗಿದೆ. ಭಾರತ ದರ ಹೆಚ್ಚಿಗೆ ಆಗದೆ ಇರುವ ದೇಶವಾಗಿದೆ. ಮುಂಜಾಗ್ರತಾ ಕ್ರಮವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಸಂದೇಶ ಕೊಟ್ಟಿದ್ದಾರೆ ಜನರು ನಮ್ಮ ಮಿತವ್ಯಯದಲ್ಲಿ ಬಳಕೆ ಮಾಡಬೇಕು ಎಂದರು.

ಮೀಸಲಾತಿ: 9ನೇ ಪರಿಚ್ಛೇದಕ್ಕೆ ಸೇರಿಸಲಿ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಮಸೂದೆ-2022 ಅನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸಲು ಕೇಂದ್ರ ಸರ್ಕಾರ ವಿಫಲವಾದರೆ ರಾಜ್ಯಾದ್ಯಂತ ಆಂದೋಲನ ನಡೆಸಲಾಗುವುದು ಎಂದು ಮಾಜಿ ಸಂಸದ ವಿ.ಎಸ್ ಉಗ್ರಪ್ಪ ಎಚ್ಚರಿಸಿದ್ದಾರೆ.

ನಗರದಲ್ಲಿ ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದ



ಅವರು, ರಾಜ್ಯದ ಮನವಿಗೆ ಕೇಂದ್ರ ಸರ್ಕಾರ ಯಾವುದೇ ಸ್ಪಂದನೆ ನೀಡಿಲ್ಲ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ.25 ರಷ್ಟಿರುವ ಎಸ್ಸಿ ಮತ್ತು ಎಸ್ಟಿ ಸಮುದಾಯಗಳಿಂದ ಮತ ಪಡೆದ ಕರ್ನಾಟಕದ ಬಿಜೆಪಿ ಸಂಸದರು ಮತ್ತು ಕೇಂದ್ರ ಸಚಿವರು ಈ ವಿಷಯದಲ್ಲಿ ಮೌನವಾಗಿದ್ದಾರೆ ಎಂದು ವಾಗ್ದಾಳಿ ನಡೆಸಿದರು. 2022ರಲ್ಲಿ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ನೇತೃತ್ವದ ಹಿಂದಿನ ಬಿಜೆಪಿ ಸರ್ಕಾರವು ಎಸ್ಸಿ ಮೀಸಲಾತಿ ಯನ್ನು ಶೇಕಡಾ 15ರಿಂದ ಶೇಕಡಾ 17ಕ್ಕೆ ಮತ್ತು ಎಸ್ಟಿ ಮೀಸಲಾತಿಯನ್ನು ಶೇ.3 ರಿಂದ ಶೇ.7ಕ್ಕೆ ಹೆಚ್ಚಿಸಿತ್ತು ಎಂದರು.

ಜನಸಂಖ್ಯೆಗೆ ತಕ್ಕ ಮೀಸಲಾತಿ ನೀಡಿ: ಸಂವಿಧಾನವು ಎಸ್ಸಿ ಮತ್ತು ಎಸ್ಟಿ ಸಮುದಾಯಗಳಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ಸ್ಪಷ್ಟವಾಗಿ ಒದಗಿಸಿದೆ. ಸಂಸತ್ತು, ರಾಜ್ಯ ವಿಧಾನಸಭೆಗಳು ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಸಾಂವಿಧಾನಿಕ ನಿಬಂಧನೆಗಳ ಅಡಿಯಲ್ಲಿ ಮೀಸಲಾತಿಯನ್ನು ಜಾರಿಗೆ ತರಲಾಗಿದೆ. ಉದ್ಯೋಗದಲ್ಲಿ ಮೀಸಲಾತಿಯನ್ನು ರಕ್ಷಿಸಲು ಏಕೆ ಹಿಂಜರಿಕೆ? ಎಂದು ಉಗ್ರಪ್ಪ ಪ್ರಶ್ನಿಸಿದರು.

ನೈರುತ್ಯ ರೈಲ್ವೆ ಆರ್‌ಪಿಎಫ್ ಸಿಬ್ಬಂದಿ ವಿಶೇಷ ಕಾರ್ಯಾಚರಣೆ ಅಕ್ರಮ ಟಿಕೆಟ್ ದಂಧೆಗೆ ರೈಲ್ವೆ ಸಿಬ್ಬಂದಿ

ರೈಲ್ವೆ ಅಕ್ರಮ ಟಿಕೆಟ್ ದಂಧೆಗೆ ಪೊಲೀಸ್ ಸಿಬ್ಬಂದಿ ಕಡಿವಾಣ

▶ ಅನುಪಾ ನಾಯಕ್

ಬೆಂಗಳೂರು: ಹಬ್ಬ, ಬೇಸಿಗೆ ರಜೆ, ಮದುವೆ ಸೀಸನ್‌ಗಳಲ್ಲಿ ರೈಲು ಟಿಕೆಟ್ ಬುಕ್ ಮಾಡುವವರ ಸಂಖ್ಯೆ ಅಧಿಕವಾಗಿರುತ್ತದೆ. ಇದನ್ನೇ ಅಸ್ತ್ರ ಮಾಡಿಕೊಳ್ಳುವ ದಲ್ಲಾಳಿಗಳು ಅಕ್ರಮ ಸಾಫ್ಟ್‌ವೇರ್ ಬಳಸಿ ಟಿಕೆಟ್ ಬುಕ್ ಮಾಡಿ, ಹೆಚ್ಚುವರಿ ಮೊತ್ತಕ್ಕೆ ಟಿಕೆಟ್ ಮಾರಾಟ ಮಾಡುತ್ತಾರೆ. ಇದರಿಂದ ನಿಜವಾದ ಪ್ರಯಾಣಿಕರಿಗೆ ಟಿಕೆಟ್ ಸಿಗದೇ ಪರದಾಟವಂತೂ ಖಚಿತ. ಹೀಗಾಗಿ

ದಿಗಂತ ವಿಶೇಷ

ಈ ಅಕ್ರಮ ಟಿಕೆಟ್ ದಂಧೆಗೆ ಕಡಿವಾಣ ಹಾಕಲು ನೈರುತ್ಯ ರೈಲ್ವೆ ಆರ್‌ಪಿಎಫ್ ಸಿಬ್ಬಂದಿ ವಿಶೇಷ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ನೈರುತ್ಯ ರೈಲ್ವೆಯ ಆರ್‌ಪಿಎಫ್ ಸಿಬ್ಬಂದಿಗಳು ನಿಜವಾದ ಪ್ರಯಾಣಿಕರಿಗೆ ರೈಲು ಟಿಕೆಟ್‌ಗಳ ನ್ಯಾಯಯುತ ಲಭ್ಯತೆಯನ್ನು ಖಚಿತಪಡಿಸಲು, ಟಿಕೆಟ್ ದಲ್ಲಾಳಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಇತ್ತೀಚೆಗೆ ನಡೆದ ಕಾರ್ಯಾಚರಣೆ ಅಡಿಯಲ್ಲಿ ಅಂದರೆ, ಕಳೆದ ನಾಲ್ಕು ತಿಂಗಳಲ್ಲಿ ಒಟ್ಟು 92 ಪ್ರಕರಣಗಳಲ್ಲಿ 23,29,740 ಮೌಲ್ಯದ ಟಿಕೆಟ್‌ಗಳನ್ನು ಆರ್‌ಪಿಎಫ್ ಸಿಬ್ಬಂದಿಗಳು ವಶಪಡಿಸಿಕೊಂಡಿದ್ದಾರೆ. ಜನವರಿಯಲ್ಲಿ 24 ದಲ್ಲಾಳಿಗಳನ್ನು ಬಂಧಿಸಿ, ಅವರಿಂದ 33,170 ಮೌಲ್ಯದ 23 ಲೈವ್ ಟಿಕೆಟ್ ಹಾಗೂ 82,812 ಮೌಲ್ಯದ 59 ಬಳಸಿದ ಟಿಕೆಟ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಫೆಬ್ರವರಿಯಲ್ಲಿ 23 ದಲ್ಲಾಳಿಗಳನ್ನು ಬಂಧಿಸಿ, 77,804 ಮೌಲ್ಯದ 48 ಲೈವ್ ಟಿಕೆಟ್, 97,496 ಮೌಲ್ಯದ 65 ಬಳಸಿದ ಟಿಕೆಟ್, ಮಾರ್ಚ್‌ನಲ್ಲಿ 28 ದಲ್ಲಾಳಿಗಳನ್ನು ಬಂಧಿಸಿ, 2,06,967 ಮೌಲ್ಯದ 65 ಲೈವ್ ಟಿಕೆಟ್, 15,88,185 ಮೌಲ್ಯದ 70 ಬಳಸಿದ ಟಿಕೆಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಏಪ್ರಿಲ್‌ನಲ್ಲಿ 17 ದಲ್ಲಾಳಿಗಳನ್ನು ಬಂಧಿಸಿ, 81,554 ಮೌಲ್ಯದ 22 ಲೈವ್ ಟಿಕೆಟ್ ಹಾಗೂ 1,61,752 ಮೌಲ್ಯದ 82 ಬಳಸಿದ ಟಿಕೆಟ್‌ಗಳನ್ನು ವಶಪಡಿಸಿಕೊಂಡಿದ್ದಾರೆ.



ನಾಲ್ಕು ತಿಂಗಳ ಉಪಲಬ್ಧ ಕಾರ್ಯಚರಣೆ ವಿವರ

ತಿಂಗಳು	ಪ್ರಕರಣ	ಟಿಕೆಟ್ ಮೌಲ್ಯ
ಜನವರಿ	24	1,15,982
ಫೆಬ್ರವರಿ	23	1,75,300
ಮಾರ್ಚ್	28	17,95,152
ಏಪ್ರಿಲ್	17	2,43,306
ಒಟ್ಟು	92	23,29,740

ಟಿಕೆಟ್ ದಲ್ಲಾಳಿಗಳ ವಿರುದ್ಧ ಸೂಕ್ತ ಕ್ರಮ

ಕರ್ನಾಟಕ ಮತ್ತು ಗೋವಾ ರಾಜ್ಯಗಳ ವಿವಿಧ ಪ್ರವಾಸ ಏಜೆನ್ಸಿಗಳು, ಟ್ರಾವೆಲ್ ಕಚೇರಿಗಳು, ಇ-ಸೇವಾ ಕೇಂದ್ರಗಳು, ಅನುಮಾನಾಸ್ಪದ ಸ್ಥಳಗ ಳಲ್ಲಿ ಹಾಗೂ 139 ಹೆಲ್ಪ್‌ಲೈನ್, ರೈಲ್ವೆಮದದ್ ಆಪ್ ಮೂಲಕ ಬಂದ ಪ್ರಯಾಣಿಕರ ದೂರಿನ ಆಧಾರದ ಮೇಲೆ ಆರ್‌ಪಿಎಫ್ ಮತ್ತು ವಾಣಿಜ್ಯ ವಿಭಾಗ ಜಂಟಿಯಾಗಿ ತೀವ್ರ ತಪಾಸಣೆ ನಡೆಸಿದ್ದಾರೆ. ಈ ವೇಳೆ ಅನಧಿಕೃತ ಟಿಕೆಟ್ ವ್ಯವಹಾರದಲ್ಲಿ ತೊಡಗಿರುವವರನ್ನು ಪತ್ತೆಹಚ್ಚಿ ಬಂಧಿಸಿ, ಕಾನೂನು ಕ್ರಮ ಕೈಗೊಳ್ಳುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು.

ಮಾದರಿಯ ಬೋಗಿ ಪೂರೈಸಲು ಒಪ್ಪಂದ

ಬೆಂಗಳೂರು: ಬೆಂಗಳೂರು ಉಪನಗರ ರೈಲು ಯೋಜನೆಯ ಕಾರಿಡಾರ್-2 ಮತ್ತು ಕಾರಿಡಾರ್- 4 ಕ್ಕೆ ಅಗತ್ಯವಿರುವ 153 ಹವಾನಿಯಂತ್ರಿತ ಬ್ರಾಡ್-ಗೇಜ್ ಮೆಟ್ರೊ ಮಾದರಿಯ ಬೋಗಿಗಳನ್ನು ಪೂರೈಸುವ ಸಂಬಂಧ ಕೆ-ರೈಡ್ ಚೆನ್ನೈನ ಬಿ-ರೈಡ್ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡಿದೆ.

ಈ ಬೃಹತ್ ಕಾರ್ಯಾದೇಶದ ಒಟ್ಟು ಮೊತ್ತ 1,513.75 ಕೋಟಿಗಳಾಗಿದ್ದು, ಭವಿಷ್ಯದಲ್ಲಿ ಬೆಂಗಳೂರು ಹಾಗೂ ಸುತ್ತಮುತ್ತಲಿನ ಜನತೆಗೆ ಇದೊಂದು ಅತ್ಯಂತ ವಿಶ್ವಾಸಾರ್ಹ ಮತ್ತು ಸುಸ್ಥಿರ ಸಾರಿಗೆ ವ್ಯವಸ್ಥೆಯಾಗಿ ಹೊರಹೊಮ್ಮಲಿದೆ. ಗುತ್ತಿಗೆಯ ಅನ್ವಯ, ಮುಂದಿನ 18 ತಿಂಗಳೊಳಗೆ ಐಸಿಎಫ್ ಸಂಸ್ಥೆಯು ಬೋಗಿಗಳ ಪೂರೈಕೆಯನ್ನು ಕಡ್ಡಾಯವಾಗಿ ಆರಂಭಿಸಬೇಕಿದೆ.

> **ಬೆಂಗಳೂರು ಉಪನಗರ ರೈಲು ಯೋಜನೆಯ ಪಾಲಿಗೆ ಈ ಕಾರ್ಯಾದೇಶವು ಒಂದು ಐತಿಹಾಸಿಕ ಮೈಲಿಗಲ್ಲಾಗಿದೆ. ಬಿ-ರೈಡ್ ಜೊತೆಗಿನ ಈ ಪಾಲುದಾರಿಕೆಯ ಮೂಲಕ, ಕಾರಿಡಾರ್ -2 ಮತ್ತು 4ರ ಟ್ರ್ಯಾಕ್ ಮತ್ತು ವ್ಯವಸ್ಥೆಗಳ ಮೂಲಸೌಕರ್ಯ ಕಾಮಗಾರಿ ಪೂರ್ಣಗೊಳ್ಳುವಷ್ಟರಲ್ಲಿ, ಅಗತ್ಯವಾಗಿರುವ ರೈಲು ಬೋಗಿಗಳು ಲಭ್ಯವಿರುವುದನ್ನು ನಾವು ಖಚಿತಪಡಿಸಿಕೊಳ್ಳುತ್ತಿದ್ದೇವೆ.**
> ■ **ಲಕ್ಷ್ಮಣ್ ಸಿಂಗ್, ವ್ಯವಸ್ಥಾಪಕ ನಿರ್ದೇಶಕ, ಕೆರೈಡ್**

ಸಂಪಾದಕೀಯ

ವಿಜಯ್ ಭಿನ್ನ ಹಾದಿ ತುಳಿಯಲಿ

ಕೊನೆಗೂ ತಮಿಳುನಾಡಿನ ಅತಂತ್ರ ಪರಿಸ್ಥಿತಿ ಕೊನೆಗೊಂಡಿದ್ದು ಬಹುಮತಕ್ಕೆ ಬೇಕಾದ ಸಂಖ್ಯೆಯನ್ನು ಗಳಿಸಲು ಚಿತ್ರನಟ ಜೋಸೆಫ್ ವಿಜಯ್ ಸಫಲರಾಗಿದ್ದಾರೆ. ರಾಜ್ಯಪಾಲರ ಆಹ್ವಾನದಂತೆ ವಿಜಯ್ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿಯೂ ಆಗಿದೆ. ಮುಂದಿನ ರಾಜಕೀಯ ಜೀವನ ಸುಲಭದ ಹಾದಿಯೇನಲ್ಲ, ಕಠಿಣ ಹಾದಿ ತಮ್ಮ ಮುಂದೆ ಕಾದಿದೆ ಎಂಬ ಸಂಕೇತವಂತೂ ವಿಜಯ್‌ಗೆ ಆರಂಭದಲ್ಲೇ ಲಭಿಸಿದೆ. ಬಹುಮತಕ್ಕೆ ಬೇಕಾದಷ್ಟೇ ಬೆಂಬಲ ಸಿಕ್ಕಿರುವುದರಿಂದ ಮೊತ್ತಮೊದಲಾಗಿ ವಿಧಾನಸಭೆಯಲ್ಲಿ ವಿಶ್ವಾಸಮತ ಸಾಬೀತುಪಡಿಸುವ ದೊಡ್ಡ ಸವಾಲು ಅವರ ಮೇಲಿದೆ.



ಎರಡು ಕ್ಷೇತ್ರ ಗಳಿಂದ ಗೆದ್ದಿರುವ ವಿಜಯ್ ಒಂದು ಸ್ಥಾನಕ್ಕೆ ರಾಜೀನಾಮೆ ನೀಡಿರುವುದರಿಂದ, ಪಕ್ಷದ ಒಬ್ಬರು ಸ್ಪೀಕರ್ ಆಗಿ ಕಾರ್ಯ ನಿರ್ವಹಿಸ ಬೇಕಾಗಿರುವುದರಿಂದ ಸಂಖ್ಯೆಯ ಕಸರತ್ತನ್ನು ನಾಜೂಕಿನಿಂದ ನಿಭಾಯಿಸಬೇಕಾಗಿದೆ. ತಕ್ಷಣಕ್ಕೆ ವಿಜಯ್ ಸರಕಾರವನ್ನು ಉರುಳಿಸಲು ಯಾರೂ ಬಯಸದಿರುವುದರಿಂದ ಸದನದಲ್ಲಿ ಬಹುಮತ ಸಾಧಿಸುವುದು ಹೆಚ್ಚೇನೂ ಕಷ್ಟವಾಗಲಾರದೇನೋ.

ಆದರೆ ವಿಜಯ್‌ರ ಮುಂದಿನ ದೊಡ್ಡ ಸವಾಲಿರುವುದು ಒಂದೆಡೆಯಿಂದ ತಾವು ನೀಡಿದ ಆಶ್ವಾಸನೆಗಳನ್ನು ನೆರವೇರಿಸುವಲ್ಲಿ ಹಾಗೂ ಇನ್ನೊಂದೆಡೆಯಿಂದ ಮೈತ್ರಿ ಸರಕಾರವನ್ನು ತೂಗಿಸಿಕೊಂಡು ಹೋಗುವುದರಲ್ಲಿ. ಚುನಾವಣಾ ಪೂರ್ವದಲ್ಲಿ ಸಾಕಷ್ಟು ಉಚಿತ ಕೊಡುಗೆಗಳನ್ನು ಘೋಷಿಸಿರುವುದರಿಂದ ಅದನ್ನು ಅನುಷ್ಠಾನಿಸುವುದು ಅವರಿಗೆ ಅನಿವಾರ್ಯವಾಗಿದೆ. ಇದೇವೇಳೆ, ಹಿಂದಿನ ಡಿಎಂಕೆ ಸರಕಾರವು ಸರಕಾರಿ ಬೊಕ್ಕಸವನ್ನು ಬಹುತೇಕ ಖಾಲಿ ಮಾಡಿರುವುದರಿಂದ ಅನುಷ್ಠಾನದ ಮುಂದೆ ದೊಡ್ಡ ಸವಾಲೂ ಇದೆ.

ಎಲ್ಲಕ್ಕಿಂತ ಮುಖ್ಯವಾಗಿ ಕಾಂಗ್ರೆಸ್ ಮತ್ತು ಎಡಪಕ್ಷಗಳ ಬೆಂಬಲವು ವಿಜಯ್‌ಗೆ ದೊಡ್ಡ ಶೂಲವಾಗಿ ಪರಿಣಮಿಸಲಿದೆ. ಅವುಗಳ ಧೋರಣೆಗಳು ಸಮಾಜವಿರೋಧಿಯಾಗಿವೆ. ಈಗಾಗಲೇ ಪ್ರಮಾಣವಚನ ಸಮಾರಂಭದಲ್ಲಿ ವಂದೇಮಾತರಂ ಗೀತೆ ಹಾಡಿದ್ದಕ್ಕಾಗಿ ಸಿಪಿಎಂ ಆಕ್ಷೇಪ ಎತ್ತಿದೆ. ವಿಜಯ್ ಅವರು ಕಾಂಗ್ರೆಸ್ ಮತ್ತು ಎಡಪಕ್ಷಗಳ ಒತ್ತಡಕ್ಕೊಳಗಾಗದೆ, ಅವುಗಳ ನೀತಿಯನ್ನು ಲೆಕ್ಕಿಸದೆ ತಮ್ಮದೇ ಸ್ವತಂತ್ರ ನಿಲುವಿನೊಂದಿಗೆ ಕಾರ್ಯ ನಿರ್ವಹಿಸಬೇಕಾಗಿರುವುದು ಎಲ್ಲಕ್ಕಿಂತ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ರಾಜಕೀಯ ಅನುಭವಿಗಳ ಸಲಹೆ ಪಡೆಯುವುದೊಳಿತು. ಕೇಂದ್ರ ಸರಕಾರದ ಜತೆ ಸಂಘರ್ಷಕ್ಕಿಳಿಯದೆ ಸಮನ್ವಯದಿಂದ ಕಾರ್ಯಾಚರಿಸುವುದೂ ಅವಶ್ಯವಾಗಿದೆ. ಹಿಂದಿನ ಡಿಎಂಕೆ ಸರಕಾರದಂತೆ ಪ್ರಾದೇಶಿಕ ಪ್ರತ್ಯೇಕತೆಯನ್ನು ಬೆಂಬಲಿಸದೆ, ಸನಾತನ ಧರ್ಮದ ದ್ವೇಷವನ್ನು ಪೋಷಿಸದೆ ಸಮರಸತೆಯಿಂದ ಹೊಣೆ ನಿಭಾಯಿಸಬೇಕಾಗಿದೆ. ದ್ವೇಷ ಭಾವನೆ ಬೆಳೆಸುವ 'ದ್ರಾವಿಡ ರಾಜಕೀಯ'ದಿಂದ ಬೇರೆಯೇ ಆದ ಭಿನ್ನ ಹಾದಿಯನ್ನು ವಿಜಯ್ ತುಳಿಯುವುದು ಒಳಿತು.

ಹಾರುವತಟ್ಟೆಗಳ ರಹಸ್ಯದ ಬಾಗಿಲು ತೆರೆದ ಅಮೆರಿಕ

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com



ಕತ್ತಲರಾತ್ರಿಯಲ್ಲಿ ಆಕಾಶದತ್ತ ಮುಖಮಾಡುವ ಪ್ರತಿಯೊಬ್ಬ ಮನುಷ್ಯನ ಮನಸ್ಸಿನಲ್ಲಿ ಒಂದಿಷ್ಟು ಪ್ರಶ್ನೆಗಳು ಮೂಡಿಯೇ ಮೂಡುತ್ತವೆ. ಈ ಬ್ರಹ್ಮಾಂಡದಲ್ಲಿ ನಾವು ಒಬ್ಬಂಟಿಯೇ ಅಥವಾ ಮೇಲೆ ಕಾಣುವ ಈ ಅಗಣಿತ ತಾರೆಗಳಲ್ಲಿ ನಮ್ಮಂತೆಯೇ ಇನ್ನೊಂದು ಸೌರವ್ಯೂಹವಿದ್ದು, ಅದರಲ್ಲೊಂದು ಗ್ರಹದಲ್ಲಿ ನಮ್ಮಂತೆಯೇ ಇನ್ನೊಂದು ನಾಗರಿಕತೆ ವಾಸಿಸುತ್ತಿರಬಹುದೇ? ಹಾಗೇನಾದರೂ ಇದ್ದರೆ ಯಾಕಿನ್ನೂ ಇದುವರೆಗೂ ಯಾರೂ ತಮ್ಮ ಇರುವಿನ ಬಗೆಗೊಂದು ಸುಳಿವನ್ನೂ ಕೊಟ್ಟಿಲ್ಲ ಅಥವಾ ಯಾಕೆ ನಮ್ಮನ್ನು ಮಾತನಾಡಿಸಲಿಕ್ಕೆ ಬಂದಿಲ್ಲ? ಎಂದು ನಮಗೆಲ್ಲರಿಗೂ ಒಂದಲ್ಲ ಒಂದು ಬಾರಿ ಅನ್ನಿಸಿಯೇ ಅನ್ನಿಸುತ್ತದೆ. ಆದರೆ, ಈ ಪ್ರಶ್ನೆ ಬೇರೆಲ್ಲ ಅನ್ಯಗ್ರಹಜೀವಿಗಳು ನಮಗಿಂತಾ ತಾಂತ್ರಿಕವಾಗಿ ಮುಂದುವರಿದವರಾಗಿರಬೇಕು ಎಂದು ಊಹಿಸಿಕೊಂಡು ಬಿಡುತ್ತದೆ. ಅವರು ನಮಗಿಂತಲೂ ತಂತ್ರಜ್ಞಾನದಲ್ಲಿ ಹಿಂದುಳಿದಿರಬಹುದು, ಅಥವಾ ಅವರ ತಂತ್ರಜ್ಞಾನಗಳು, ವಿಜ್ಞಾನಗಳು, ಮತ್ತವುಗಳ ನಿಯಮಗಳೇ ಬೇರೆಯಿರಬಹುದು. ತಂತ್ರಜ್ಞಾನದಲ್ಲಿ ಮುಂದುವರಿದರೂ ಬೇರೆ ಗ್ರಹಗಳಲ್ಲೂ ಜೀವಿಗಳಿರಬಹುದೇ ಎಂಬ ಪ್ರಶ್ನೆಯೇ ಇನ್ನೂ ಅವರಿಗೆ ಮೂಡದಿರಬಹುದು, ಅಥವಾ ಬೇರೆಯವರನ್ನು ಹುಡುಕಿಕೊಂಡು ಹೋಗುವ ಆಸಕ್ತಿಯೇ ಕಡಿಮೆಯಿರಬಹುದು. ನಮ್ಮ ಈ ಜಗತ್ತು ಅದೆಷ್ಟು ದೊಡ್ಡದೆಂದರೆ, ನಮ್ಮದೇ ಪಕ್ಕದ ಆಂಡ್ರೋಮಿಡಾ ಗೆಲಾಕ್ಸಿಯ ತಾರೆಯ ಸುತ್ತ ಸುತ್ತುತ್ತಿರುವ ಗ್ರಹವೊಂದರಲ್ಲಿ ನಾಗರಿಕತೆಯಿದ್ದರೂ ನಾವು ಅವರಿಗೆ ಕಂಡುಬರುವ ಸಾಧ್ಯತೆಯೇ 0.00001%. ಪಕ್ಕದ ಗೆಲ್ಯಾಕ್ಸಿ ಬಿಡಿ, ನಮ್ಮದೇ ಆಕಾಶಗಂಗೆ ಗೆಲ್ಯಾಕ್ಸಿಯಲ್ಲಿಯೇ, ನಮ್ಮಷ್ಟೇ ತಾಂತ್ರಿಕವಾಗಿ ಮುಂದುವರಿದ ಜೀವಿಗಳಿದ್ದರೂ ಅವರು ನಮ್ಮನ್ನು ಗಮನಿಸುವ ಸಾಧ್ಯತೆ 0.0001%.

ಹೋಗಲಿ, ಇಷ್ಟೆಲ್ಲ ಪ್ರಶ್ನೆ ಮಾಡುವ ನಾವೇನು ಸಾಧಿಸಿದ್ದೇವೆ? ನಾವಿನ್ನೂ ಗ್ರಹಗಳಿಗೆ ಅಥವಾ ಸೌರವ್ಯೂಹಗಳಿಗೆ ಭೇಟಿನೀಡಿದ್ದೇವೆ? ಇನ್ನೂ ನಮ್ಮದೇ ಚಂದ್ರನ ಮೇಲಷ್ಟೇ ಕಾಲಿಟ್ಟು ಬಂದಿರುವುದು. ನಮ್ಮ ಪಕ್ಕದ ಗ್ರಹಗಳ ಮೇಲಂತೂ ಇನ್ನೂ ಕಾಲೇ ಇಟ್ಟಿಲ್ಲ. ಅದಾದಮೇಲೆ ಯಾವ ಗ್ರಹದ ಮೇಲೂ ನಮ್ಮ ವಾಹನಗಳು ಇಳಿದಿಲ್ಲ. ನಮ್ಮ ಸೌರವ್ಯೂಹವನ್ನು ದಾಟಿ ಒಂದೇ ಒಂದು ಆಕಾಶಯಾನ ಹೋಗಿದೆ. ಹೌದು, ಆದರೆ ಅದೇನೂ ಅನ್ಯಗ್ರಹಜೀವಿಗಳ ಹುಡುಕಾಟದಲ್ಲಿ ಹೋಗಿಲ್ಲ ಅಥವಾ ಯಾವುದಾದರೂ ಅನ್ಯಗ್ರಹಜೀವಿಗಳ ಕೈಗೆ ಅದು ಸಿಕ್ಕರೂ ಅವರಿಗೆ ದಾರಿತೋರಿಸುತ್ತಾ ಭೂಮಿಗೆ ಕರೆತರಬಲ್ಲ ಯಾವ ಸೌಲಭ್ಯವನ್ನೂ ಹೊಂದಿಲ್ಲ. ಸದ್ಯಕ್ಕೆ ಅದೊಂದು ಬ್ರಹ್ಮಾಂಡದ ಅಗಾಧತೆಯಲ್ಲಿ ತೇಲುತ್ತಿರುವ ಒಂದು ಧೂಳಿನ ಕಣವಷ್ಟೆ. ಆದರೂ, ನಾವು ಇನ್ನೂ ಯಾಕೆ ಬರಲಿಲ್ಲವೆಂದು ಹುಚ್ಚುಹಿಡಿದವರಂತೆ ಹುಡುಕಾಡುತ್ತಾ, ಯಾರೋ ಬಂದಿರಬಹುದೆಂದು ಕನವರಿಸುತ್ತಿದ್ದೇವೆ.

ಆದರೆ, ಈ ಪ್ರಶ್ನೆಗೆ ಇಂಬುಕೊಡುವಂತೆ, ಕ್ರಿಸ್ತಪೂರ್ವದಿಂದಲೂ ಇಂದಿನವರೆಗೆ ಜಗತ್ತಿನಾದ್ಯಂತ ಹಲವಾರು ಬಾರಿ ಅನ್ಯಗ್ರಹ ಜೀವಿಗಳು ಮತ್ತವರ ವಾಹನಗಳು ಕಂಡುಬಂದಂತಹ ಹಲವಾರು ಘಟನೆಗಳು ದಾಖಲಾಗಿವೆ. ಅದರಲ್ಲಿ ಅರ್ಧಕ್ಕರ್ಧ ಸುಳ್ಳುಸುದ್ದಿಗಳು ಅಥವಾ ದೃಷ್ಟಿಭ್ರಮೆಗಳು ಎಂದುಕೊಂಡರೂ, ಹಲವಾರು ಘಟನಾವಳಿಗಳು ಮತ್ತು ಸಾಕ್ಷ್ಯಗಳು ಸುಳ್ಳೆಂದು ಅಲ್ಲಗಳೆಯಲಾಗದಷ್ಟು ಗಟ್ಟಿಯಾಗಿವೆ. ವಿಚಿತ್ರವಾಗಿಯೂ ಇದೇ ತೊಂಬತ್ತರ ದಶಕದಲ್ಲಿ ಪ್ರದೀಪ್ ಕೆಂಜಿಗೆ ಮತ್ತು ಪೂರ್ಣಚಂದ್ರ ತೇಜಸ್ವಿಯವರು ಬರೆದ ಫ್ಲೈಯಿಂಗ್ ಸಾಸರ್ ಎಂಬ ಪುಸ್ತಕ ಸರಣಿ ಕನ್ನಡದ ಓದುಗರಿಗೆ ಈ ವಿಚಾರದ ಬಗ್ಗೆ ಬಹಳಷ್ಟು ರಸವತ್ತಾದ ಮಾಹಿತಿಗಳನ್ನು ಉಣಬಡಿಸಿವೆ. ಈ ಅನ್ಯಗ್ರಹಜೀವಿ ಕುತೂಹಲಿಗಳ ಉತ್ಸಾಹಕ್ಕೆ ಇಂಬುಕೊಡುವಂತೆ, ಅಮೆರಿಕಾ ಸರ್ಕಾರವು ಇತ್ತೀಚೆಗೆ ಒಂದು ಐತಿಹಾಸಿಕ ಕ್ರಮ ಕೈಗೊಂಡಿದೆ. ಅದೇನೆಂದರೆ, ಯುಎಫ್‌ಒ (UFO) ಅಥವಾ ಯುಎಪಿ (UAP - Unidentified Anomalous Phenomena) ಬಗ್ಗೆ ತನ್ನ ಬಳಿಯಿದ್ದ ಮಾಹಿತಿಗಳಲ್ಲಿ ದೊಡ್ಡದೊಂದು ಭಾಗವನ್ನು 2026ರ ಮೇ ತಿಂಗಳಿನಿಂದ ಪೆಂಟಗನ್‌ನಿಂದ ಬಿಡುಗಡೆ ಮಾಡಿದೆ. ಈ ರೀತಿಯ ಮಾಹಿತಿಗಳು ಹೊರಬೀಳುವುದು ಅಪರೂಪವಾದರೂ, ಈ ಮುಂಚೆ ಸಣ್ಣಪುಟ್ಟ ಅಥವಾ ಒಂದೆರಡು ಘಟನೆಗಳನ್ನಷ್ಟೆ ಹೊರಬಿಡುತ್ತಿದ್ದ ಅಮೆರಿಕಾ ಸರ್ಕಾರ, ಈ ಬಾರಿ ಬಹುದೊಡ್ಡ ಮಾಹಿತಿಯ ಕಣಜವನ್ನೇ ಸಾರ್ವಜನಿಕರ ಅವಗಾಹನೆಗಾಗಿ ಬಿಡುಗಡೆ ಮಾಡಿದೆ. ಹಾಗೂ ಪ್ರತಿ ಕೆಲವು ವಾರಗಳಿಗೊಮ್ಮೆ ಹೊಸ ಫೈಲ್‌ಗಳು ಬರುತ್ತವೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಸದ್ಯಕ್ಕೆ ಈ ಫೈಲ್‌ಗಳು ಜಗತ್ತಿನಾದ್ಯಂತ ಸಂಚಲನ ಸೃಷ್ಟಿಸಿವೆ. ಇದು ಕೇವಲ ದಾಖಲೆಗಳ ಬಿಡುಗಡೆಯಲ್ಲ, ಬದಲಿಗೆ ಮಾನವ ಕುತೂಹಲದ ಒಂದು ಹೊಸ ಅಧ್ಯಾಯದ ಆರಂಭ.

ಹಲವು ದಶಕಗಳಿಂದ ಜನರ ಮನಸ್ಸಿನಲ್ಲಿ "ನಿಜವಾಗಿಯೂ ಅನ್ಯಗ್ರಹ ಜೀವಿಗಳು ಇದ್ದಾರೆಯೇ?", "ಅಮೆರಿಕ ಸರ್ಕಾರ ಏನನ್ನಾದರೂ ಮರೆಮಾಚಿತ್ತೇ?" ಎಂಬ ಪ್ರಶ್ನೆಗಳು ಕಾಡುತ್ತಲೇ ಇದ್ದವು. ಈಗ ಬಿಡುಗಡೆಯಾದ ಹೊಸ ದಾಖಲೆಗಳು ಈ ಕುತೂಹಲಕ್ಕೆ ಮತ್ತಷ್ಟು ಬೆಂಕಿ ಹಚ್ಚಿವೆ. ಕೆಲವರಿಗೆ ಇದು ವಿಜ್ಞಾನ ಯುಗದ ದೊಡ್ಡ ರಹಸ್ಯದ ಬಾಗಿಲು ತೆರೆಯುವ ಕ್ಷಣವಾಗಿದ್ದರೆ, ಮತ್ತೊಬ್ಬರಿಗೆ ಇದು ಸರ್ಕಾರದ ಪಾರದರ್ಶಕತೆಯ ಹೊಸ ಅಧ್ಯಾಯವಾಗಿದೆ. ಅಮೆರಿಕದ ರಕ್ಷಣಾ ಇಲಾಖೆ ಮತ್ತು ಹಲವು ಗುಪ್ತಚರ ಸಂಸ್ಥೆಗಳು ಸುಮಾರು 160ಕ್ಕೂ ಹೆಚ್ಚು ಡಿಕ್ಲಾಸಿಫೈಡ್ ದಾಖಲೆಗಳು, ಚಿತ್ರಗಳು, ವಿಡಿಯೋಗಳು ಮತ್ತು ಸಾಕ್ಷ್ಯಾಧಾರಗಳನ್ನು ಸಾರ್ವಜನಿಕರಿಗೆ ಬಿಡುಗಡೆ ಮಾಡಿವೆ. ಈ ದಾಖಲೆಗಳಲ್ಲಿ 1940ರ ದಶಕದಿಂದ ಹಿಡಿದು ಇತ್ತೀಚಿನ ವರ್ಷಗಳವರೆಗೆ ನಡೆದ ವಿಚಿತ್ರ ಆಕಾಶಘಟನೆಗಳ ಕುರಿತು ಮಾಹಿತಿಯನ್ನು ಒಳಗೊಂಡಿವೆ.

ಈ ಬಿಡುಗಡೆಗೆ ಮತ್ತಷ್ಟು ಕುತೂಹಲ ತಂದದ್ದು ಅಪೋಲೋ ಚಂದ್ರಯಾನ ಮಿಷನ್‌ಗಳ ಕೆಲವು ದಾಖಲೆಗಳು. 1972ರ ಅಪೋಲೋ 11, 12 ಮತ್ತು 17 ಮಿಷನ್‌ಗಳಲ್ಲಿ ಖಗೋಳಯಾತ್ರಿಗಳು ಚಂದ್ರನ ಸಮೀಪದಲ್ಲಿ ವಿಚಿತ್ರವಾಗಿ ತೇಲುತ್ತಿದ್ದ ಆಕಾರವೊಂದರ ಬಗ್ಗೆ ಕೆಲವು ಸಂದರ್ಭಗಳಲ್ಲಿ ಹೇಳಿದ್ದರು. ಅಮೆರಿಕ ಸರ್ಕಾರ ಹೆಚ್ಚಾಗಿ ಆ ಎಲ್ಲಾ ಸಂದರ್ಭಗಳ ಟೇಪ್‌ಗಳನ್ನು ವಶಪಡಿಸಿಕೊಂಡಿತ್ತು ಹಾಗೂ ಗಗನಯಾತ್ರಿಗಳಿಗೆ ಆ ಬಗ್ಗೆ ಬೇರೆಲ್ಲೂ ಮಾತನಾಡದಂತೆ ತಾಕೀತು ಮಾಡಿತ್ತು. ಈಗ ಅದೇ ಮಿಷನ್ ವೇಳೆ ಗಗನಯಾತ್ರಿಗಳು ತಮ್ಮ ನೌಕೆಯಲ್ಲಿದ್ದಾಗ ಕಂಡ ಬೆಳಕುಗಳು ಮತ್ತು ತುಂಡುಗಳ ಬಗ್ಗೆ ಮಾತನಾಡಿರುವ ಮಾತುಕತೆಯ ಧ್ವನಿತುಣುಕುಗಳು ಬಿಡುಗಡೆಯಾಗಿವೆ ಹಾಗೂ ಈಗ ಸಾರ್ವಜನಿಕರ ಗಮನ ಸೆಳೆದಿವೆ. ಕೆಲವು ಚಿತ್ರಗಳಲ್ಲಿ ಚಂದ್ರನ ಮೇಲ್ಮೈ ಸಮೀಪ ಕಾಣಿಸಿಕೊಂಡ ಅಜ್ಞಾತ ಆಕಾರಗಳೂ ಇದ್ದವೆಂದು ವರದಿಯಾಗಿದೆ. 1969ರ ಒಂದು ಟೆಕ್ನಿಕಲ್ ಡೀಬ್ರೀಫಿಂಗ್‌ನಲ್ಲಿ ನೀಲ್ ಆರ್ಮ್‌ಸ್ಟ್ರಾಂಗ್, ಬಜ್ ಆಲ್ಡ್ರಿನ್ ಮತ್ತು ಮೈಕಲ್ ಕಾಲಿನ್ಸ್ ಅವರ ನಡುವೆ ನಡೆದ ಚರ್ಚೆಯೂ ಇದೆ. ವಾಯುದಳದ ಪೈಲಟ್ಟುಗಳು ನೋಡಿದ ಅಗಾಧವೇಗದಲ್ಲಿ ಹಾರುವ ತಿರುಗುವ ಸಾಸರ್‌ಗಳು, ಲೋಹದ ವಸ್ತುಗಳು, ಮಧ್ಯ ಆಕಾಶದಲ್ಲಿ ತೇಲುತ್ತಿರುವ ಬೆಳಕಿನ ಉಂಡೆಗಳು ? ಇವುಗಳ ಹಲವಾರು ವಿವರಣೆಗಳಿವೆ.

ಅತ್ಯಂತ ಚರ್ಚೆಯಲ್ಲಿರುವ ವಿಷಯವೆಂದರೆ, ಈ ದಾಖಲೆಗಳಲ್ಲಿ ಹಲವಾರು ಸೇನಾ ಪೈಲಟ್‌ಗಳ ಸಾಕ್ಷ್ಯಗಳಿವೆ. ವೇಗವಾಗಿ ಚಲಿಸುವ, ನಮ್ಮ ತಂತ್ರಜ್ಞಾನಗಳ ಮಿತಿಯಲ್ಲಿ ನಾವು ಊಹಿಸಲೂ ಆಗದ ರೀತಿಯಲ್ಲಿ ದಿಕ್ಕುಬದಲಾವಣೆ ಮಾಡುವ, ಮಾನವ ತಂತ್ರಜ್ಞಾನದ ಗಡಿಯನ್ನು ಮೀರಿದಂತೆ ಕಂಡ ಕೆಲವು ವಸ್ತುಗಳನ್ನು ಅಮೆರಿಕದ ಯುದ್ಧವಿಮಾನ ಪೈಲಟ್‌ಗಳು ಕಂಡಿರುವುದಾಗಿ ವರದಿ ಮಾಡಿದ್ದಾರೆ. ಕೆಲವು ವಿಡಿಯೋಗಳಲ್ಲಿ ಆಕಾಶದಲ್ಲಿ ತೇಲುತ್ತಿದ್ದ ಗೋಳಾಕಾರದ ಬೆಳಕುಗಳು, "ಫುಟ್ಬಾಲ್" ಆಕಾರದ ವಸ್ತುಗಳು ಮತ್ತು ವಿಚಿತ್ರ ಚಲನೆಯನ್ನು ತೋರಿಸುವ ದೃಶ್ಯಗಳು ಕಂಡುಬಂದಿವೆ. ಆದರೆ, ಈ ದಾಖಲೆಗಳಲ್ಲಿ ಯಾವುದೇ ದೃಢವಾದ "ಅನ್ಯಗ್ರಹ ಜೀವಿಗಳ" ಸಾಕ್ಷ್ಯ ಸಿಕ್ಕಿಲ್ಲ ಎಂಬುದನ್ನು ಅಮೆರಿಕ ಸರ್ಕಾರ ಮತ್ತು ನಾಸಾ ಸ್ಪಷ್ಟಪಡಿಸಿವೆ. ಪ್ರಕರಣಗಳು ಇನ್ನೂ "ಅನಿರ್ಧರಿತ"ವಾಗಿಯೇ ಉಳಿದಿವೆ. ಇದೇ ಕಾರಣಕ್ಕೆ ಜನರಲ್ಲಿ ಕುತೂಹಲ ಕಡಿಮೆಯಾಗದೆ ಮತ್ತಷ್ಟು ಹೆಚ್ಚಾಗಿದೆ.

ಈ ಹೊಸ ದಾಖಲೆಗಳ ಮತ್ತೊಂದು ವಿಶೇಷತೆ ಎಂದರೆ, ಅಮೆರಿಕ ಸರ್ಕಾರ ಈಗ "ಪೂರ್ಣ ಪಾರದರ್ಶಕತೆ"ಯತ್ತ ಹೆಜ್ಜೆ ಇಡುತ್ತಿದೆ ಎಂಬ ಸಂದೇಶ ನೀಡಿರುವುದು. ಹೊಸ ಯುಎಫ್‌ಒ ವೆಬ್‌ಸೈಟ್ ಆರಂಭವಾದ ಮೊದಲ 12 ಗಂಟೆಗಳಲ್ಲೇ ಕೋಟ್ಯಂತರ ಜನರು ಅದನ್ನು ವೀಕ್ಷಿಸಿದ್ದಾರೆ. ಇದು ಯುಎಫ್‌ಒ ವಿಷಯದ ಮೇಲೆ ಜನರ ಆಸಕ್ತಿ ಎಷ್ಟಿದೆ ಎಂಬುದನ್ನು ತೋರಿಸುತ್ತದೆ. ಇದೀಗ ಪ್ರಮುಖ ಪ್ರಶ್ನೆ ಏನೆಂದರೆ ? ಮುಂದೇನು? ಭವಿಷ್ಯದಲ್ಲಿ ಇನ್ನಷ್ಟು ರಹಸ್ಯ ದಾಖಲೆಗಳು ಹೊರಬರಬಹುದೇ? ಅಮೆರಿಕದ ರಾಷ್ಟ್ರೀಯ ಆರ್ಕೈವ್ಸ್ ಈಗಾಗಲೇ "UAP Records Collection" ಎಂಬ ವಿಶೇಷ ಸಂಗ್ರಹವನ್ನು ರಚಿಸಿದ್ದು, ಇನ್ನೂ ಅನೇಕ ದಾಖಲೆಗಳನ್ನು ಹಂತ ಹಂತವಾಗಿ ಬಿಡುಗಡೆ ಮಾಡುವುದಾಗಿ ಹೇಳಿದೆ. ಹೀಗಾಗಿ ಈಗ "ರಹಸ್ಯ"ವೆಂದು ಕಾಣುತ್ತಿರುವ ಅನೇಕ ಘಟನೆಗಳಿಗೆ, ಭವಿಷ್ಯದಲ್ಲಿ ವೈಜ್ಞಾನಿಕವಾದ ಉತ್ತರಗಳು ಸಿಗುವ ಸಾಧ್ಯತೆಯಿದೆ. ಆದರೂ ಸಹ, ಈ ಹೊಸ ದಾಖಲೆಗಳು ಜನರ ಕಲ್ಪನೆಗೆ ಹೊಸ ಬಣ್ಣಗಳನ್ನು ತುಂಬಿವೆ. ಕೆಲವರಿಗೆ ಇದು ವಿಜ್ಞಾನ ಮತ್ತು ಅನ್ವೇಷಣೆಯ ಮಹತ್ವವನ್ನು ನೆನಪಿಸುವ ಘಟನೆಯಾದರೆ, ಇನ್ನೊಬ್ಬರಿಗೆ ಇದು "ನಾವು ಬ್ರಹ್ಮಾಂಡದಲ್ಲಿ ಒಬ್ಬರೇನಾ?" ಎಂಬ ಶಾಶ್ವತ ಪ್ರಶ್ನೆಗೆ ದಾರಿ ತೋರಿಸುವ ಹೊಸ ಪ್ರಯತ್ನವಾಗಿದೆ. ಇನ್ನಷ್ಟು ವಿಡಿಯೋಗಳು, ಸೇನಾ ದಾಖಲೆಗಳು ಮತ್ತು ಅಂತರಿಕ್ಷ ಮಿಷನ್ ಮಾಹಿತಿಗಳು ಹೊರಬಂದರೆ, ಮಾನವಕುಲದ ಬ್ರಹ್ಮಾಂಡದ ಬಗ್ಗೆ ಇರುವ ತಿಳುವಳಿಕೆಯೇ ಬದಲಾಗಬಹುದು. ಅಥವಾ ಕೊನೆಗೆ ಈ ಎಲ್ಲವೂ ನಮಗೆ ಸದ್ಯಕ್ಕೆ ಗೊತ್ತಿರುವ ವಿಜ್ಞಾನವೇ ಉತ್ತರಿಸಬಹುದಾದ ಸಾಮಾನ್ಯ ಘಟನೆಗಳೇ ಎಂಬುದೂ ಸಾಬೀತಾಗಬಹುದು.ಯುಎಫ್‌ಒಗಳ ರಹಸ್ಯ ಇನ್ನೂ ಸಂಪೂರ್ಣವಾಗಿ ಬಯಲಾಗಿಲ್ಲ. ಅದಕ್ಕಾಗಿಯೇ ಜಗತ್ತಿನ ಕೋಟ್ಯಂತರ ಜನರು ಇನ್ನೂ ಆಕಾಶವನ್ನು ಕುತೂಹಲದಿಂದ ನೋಡುವುದನ್ನು ನಿಲ್ಲಿಸಿಲ್ಲ.

ಇದರ ಬಗ್ಗೆ ನಿಮಗೂ ಹೆಚ್ಚಿನ ಕುತೂಹಲವಿದ್ದಲ್ಲಿ www.war.gov/UFO/ ಅಥವಾ www.archives.gov/research/topics/uapsಗೆ ಭೇಟಿ ಕೊಟ್ಟು, ಧ್ವನಿಮುದ್ರಿಕೆಗಳನ್ನು ಕೇಳಬಹುದು ಹಾಗೂ ಚಿತ್ರಗಳು, ವಿಡಿಯೋಗಳು ಮತ್ತು ನೋಡಬಹುದು.

ಮೈತ್ರಿ ಬಲಪಡಿಸುವ ಕಾರಣಗಳು

ಭವತು ಕೋಮಲಮತ್ರ ಮನಸ್ತವ ಪ್ರಕೃತಿ ನಿರ್ಮಲತಾಸ್ತು ಸದಾ ಧಿಯಿ ।
ವಚಸಿ ನಿಷ್ಕಪಟತಾ ಸದಾಸ್ತುತೇ ಭಜತಿ ಸರ್ವಜನಸ್ತವ ಮಿತ್ರತಾಮ್ ॥

-ಸುವಚನ ಶತಕಮ್

ನಿನ್ನ ಮನಸ್ಸು ಸದಾ ಮೃದುವಾಗಿರಲಿ, ಬುದ್ಧಿಯಲ್ಲಿ ಸ್ವಭಾವಸಿದ್ಧವಾದ ನಿರ್ಮಲತ್ವವಿರಲಿ. ಮಾತಿನಲ್ಲಿ ಕಪಟತೆ ಇಲ್ಲದಿರಲಿ. ಆಗ ಎಲ್ಲರೂ ನಿಮ್ಮ ಮೈತ್ರಿಯನ್ನು ಬಯಸುತ್ತಾರೆ – ಎಂಬುದು ಶ್ಲೋಕಾರ್ಥ.



ಶ್ಲೋಕ ಸಾಗರ
• ಡಾ.ಸೋಂದಾ ಭಾಸ್ಕರ ಭಟ್

ಮನುಷ್ಯ ಸಮಾಜಜೀವಿ. ಎಲ್ಲರೊಳು ಒಂದಾಗಿ ಬದುಕುವುದೇ ನಿಜವಾದ ಬದುಕು. ಆ ಬದುಕಿನಲ್ಲಿಯೇ ನೆಮ್ಮದಿಯಿದೆ, ಸಂತೋಷವಿದೆ. ಬದುಕು ಸಹ್ಯವಾಗಬೇಕಾದರೆ ಮೈತ್ರಿ ಅನಿವಾರ್ಯ. ಮಿತ್ರರನ್ನು ಹೊಂದಿದವರ ಜೀವನ ಚೆನ್ನಾಗಿರುತ್ತದೆ. ಅಂದರೆ ಚೆನ್ನಾಗಿ ಜೀವನ ನಿರ್ವಹಿಸಲು ಮಿತ್ರ ಸಂಕುಲ ಅನಿವಾರ್ಯ.

ಮಿತ್ರ ಪ್ರಾಪ್ತಿ ಸುಲಭವಲ್ಲ. ಇನ್ನಾವುದೋ ಕಾರಣಕ್ಕಾಗಿ ಮಿತ್ರರಾದವರು ಸದಾ ಇರುವುದಿಲ್ಲ. ತಮ್ಮ ಕಾರ್ಯವಾದ ಮೇಲೆ ಬಂದಂತೆಯೇ ತೆರಳಿಬಿಡುತ್ತಾರೆ. ಇದು ಉತ್ತಮ ಮಿತ್ರನ ಲಕ್ಷಣವಲ್ಲ. ಸನ್ಮೈತ್ರಿಯ ನೆಲೆಯೂ ಅಲ್ಲ. ಜೀವನದಲ್ಲಿ ಎಷ್ಟೊಂದು ಜನ ವಿಷಯಾಧಾರಿತವಾಗಿ ಮಿತ್ರರಾಗಿಲ್ಲ. ಆದರೆ ಕಾರ್ಯ ಸಿದ್ಧಿಯಾದ ಮೇಲೆ ಆ ಮೈತ್ರಿ ಉಳಿದಿಲ್ಲ. ಇದಕ್ಕೆ ಕಾರಣ ಯಾರೋ ಒಬ್ಬರು ಕಾರಣರಲ್ಲ. ಎರಡೂ ಕಡೆಯಿಂದ ಮೈತ್ರಿ ದೂರಾಗಲು ಕೊಡುಗೆಯಿರುತ್ತದೆ. ಯಾವ ಮೈತ್ರಿಯಲ್ಲಿ ಸ್ವಾರ್ಥ, ಕುಹಕ, ಸಮಯಸಾಧಕತನ, ಸ್ನೇಹದ ಕೊರತೆ, ಅಸಹಕಾರ ಮನೋಭಾವ ಇರುತ್ತವೆಯೋ ಅಂತ ಮೈತ್ರಿ ನಿರಂತರತೆಯನ್ನು ಕಾಯ್ದುಕೊಳ್ಳುವುದಿಲ್ಲ.

ಎಲ್ಲರೂ ನನ್ನನ್ನು ಪ್ರೀತಿಸಬೇಕು, ಮೆಚ್ಚಿಕೊಳ್ಳಬೇಕು, ನನ್ನನ್ನು ಹಚ್ಚಿಕೊಳ್ಳಬೇಕು ಎಂದು ಬಯಸುವುದಾದರೆ ಪ್ರಧಾನವಾಗಿ ಮೂರು ಪಥ್ಯವನ್ನು ಪಾಲಿಸಬೇಕು. ಕವಿಯು ಹೇಳಿದ ಮೂರು ಅಂಶಗಳನ್ನು ಶತಾಯ ಗತಾಯ ರೂಢಿಸಿಕೊಂಡು ಅಂತೆಯೇ ನಡೆದುಕೊಳ್ಳಬೇಕು. ಅವುಗಳೆಂದರೆ ಮೃದುವಾದ ಮನಸ್ಸು, ಬುದ್ಧಿಯಲ್ಲಿ ನಿರ್ಮಲತ್ವ ಹಾಗೂ ಮಾತಿನಲ್ಲಿ ನಿಷ್ಕಪಟತೆ.

ಮೃದುವಾದ ಮನಸ್ಸು ಹಾಗೂ ಮಾತು ಜನರನ್ನು ಆಕರ್ಷಿಸುತ್ತದೆ. ಇದು ನಡೆಯ ಮೇಲೆ ನೇರವಾಗಿ ಪ್ರಭಾವ ಬೀರುತ್ತದೆ. ನಿಷ್ಕಲ್ಮಷ ಮನಸ್ಸು ಹಾಗೂ ಮಾತುಗಳನ್ನು ಸಜ್ಜನರು ಮೆಚ್ಚಿಕೊಳ್ಳುತ್ತಾರೆ ಹಾಗೂ ಇಂತಹ ವ್ಯಕ್ತಿತ್ವವನ್ನು ಬಯಸುತ್ತಾರೆ. ಇಂಥವರ ಸಮೀಪವರ್ತಿಯಾಗಲು ಬಯಸುತ್ತಾರೆ. ಒಮ್ಮೆ ಸಾಮಿಪ್ಯಕ್ಕೆ ಬಂದ ಮೇಲೆ ಅಲ್ಲಿಯೇ ಚಿರಸ್ಥಾಯಿಯಾಗುತ್ತಾರೆ. ಬುದ್ಧಿ ನಿರ್ಮಲವಾಗಿರಬೇಕು. ಇದು ಸ್ವಭಾವಸಿದ್ಧವಾಗಿರಬೇಕು. ಸ್ವಾರ್ಥ ಚಿಂತನೆಯಿರ ಬಾರದು. ಉತ್ತಮರು ಬಯಸುವುದು ಈ ಬಗೆಯ ಸ್ವಭಾವವುಳ್ಳ ವ್ಯಕ್ತಿಗಳನ್ನು. ಕಪಟ ಎಲ್ಲದ, ವಂಚಿಸುವ ಮನೋಭಾವವಿಲ್ಲದವರನ್ನು ಸಮಾಜ ಆಧರಿಸುತ್ತದೆ. ಯಾರಿಗೂ ಮೋಸ ಮಾಡದ ಪರರಿಗೆ ಕೇಡು ಬಯಸದ ಬುದ್ಧಿಯುಳ್ಳವರು ಸ್ನೇಹಕ್ಕೆ ಅರ್ಹರಾದವರು. ಮೂರನೆಯದು ಮಾತು. ಅದರಲ್ಲಿಯೂ ಕಿಂಚಿತ್ತೂ ಕಪಟತೆ ಇಲ್ಲದ ಮಾತು. ಈ ಕಾರಣಕ್ಕಾಗಿಯೇ ಅಂಥಹ ವ್ಯಕ್ತಿ ಎಲ್ಲರಿಗೂ ಹತ್ತಿರವಾಗುತ್ತಾನೆ. ಈ ಮೂರು ಅಂಶಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡರೆ ಆತನು ಅಜಾತಶತ್ರು ವಾಗುತ್ತಾನೆ. ಸಜ್ಜನ ಲೋಕವು ಇಂಥವರ ಮೈತ್ರಿಗೆ ಹಾತೊರೆಯುತ್ತದೆ. ಆದ್ದರಿಂದ ಸಭ್ಯತೆಯನ್ನೂ ಶ್ರೇಷ್ಠತೆಯನ್ನೂ ಜನಾನುರಾಗವನ್ನೂ ತಂದುಕೊಡುವ ಈ ಮೂರು ಅಂಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸೋಣ.

ದೇಶಿ ಗೋವಿನ ಹಾಲು ಭೂಲೋಕದ ಅಮೃತ

ಧರಣಿ ಮಂಡಲ
• ಕೆ.ಎಸ್. ಶೈಲೇಶ್ ಹೊಳ್ಳ
shyleshholla@gmail.com



ನಾವು ಪ್ರತಿನಿತ್ಯ ಸೇವಿಸುವ ಆಹಾರದಲ್ಲಿ ಎರಡು ಭಾಗವಿದೆ. ಒಂದು ರಕ್ತಕ್ಕೆ ಬೇಕಾಗುವ ಶಕ್ತಿ, ಇನ್ನೊಂದು ಮೆದುಳಿಗೆ ಬೇಕಾಗುವ ಖನಿಜ ಸತ್ವಗಳು. ಇವೆರಡನ್ನು ಹೊಂದಿರುವ ಜಗತ್ತಿನ ಏಕೈಕ ಪೇಯ ದೇಶಿ ಗೋವಿನ ಹಾಲು. ಈ ಹಾಲು ಎಲ್ಲಾ ಖನಿಜ ಸತ್ವಗಳನ್ನು ಹೊಂದಿದ್ದು, ರಕ್ತಕ್ಕೆ ಬೇಕಾಗುವ ಶಕ್ತಿಯನ್ನು ಗ್ಲೂಕೋಸ್ ಮೂಲಕ ಒದಗಿಸುತ್ತದೆ. ಇದಕ್ಕೆ ಮುಖ್ಯ ಕಾರಣ ಗೋವು ಸೇವಿಸುವ ಹುಲ್ಲು. ಹುಲ್ಲು ಭೂಮಿಯಲ್ಲಿರುವ ಖನಿಜಗಳನ್ನು ಹೀರಿಕೊಳ್ಳುವ ವಿಶೇಷ ಗುಣವನ್ನು ಹೊಂದಿರುವುದರಿಂದ ಅಂತಹ ಹುಲ್ಲನ್ನು ತಿನ್ನುವ ಗೋವಿನ ಹಾಲಿನಲ್ಲೂ ಆ ಎಲ್ಲಾ ಗುಣ ಮತ್ತು ಖನಿಜ ಸತ್ವಗಳು ಅಡಕವಾಗಿರುತ್ತವೆ. ಆದ್ದರಿಂದ ದೇಶಿ ಹಸುವಿನ ಹಾಲು ಒಂದು ಪರಿಪೂರ್ಣ ಆಹಾರವಾಗಿದೆ.

ತಾಯಿಯ ಎದೆಹಾಲಿನ ನಂತರ ಜೀವಮಾನವಿಡಿ ನಾವು ಸೇವಿಸುವುದು ಗೋವಿನಹಾಲನ್ನು. ದೈನಂದಿನ ಆಹಾರಕ್ರಮದಲ್ಲಿ ಎಲ್ಲರೂ ಉಪಯೋಗಿಸುವ ಆಹಾರ ಪಾನೀಯಗಳಲ್ಲಿ ಹಾಲು ಅತಿ ಮುಖ್ಯವಾದುದಾಗಿದೆ. ಹಾಗಾಗಿ ವಿಶ್ವದಲ್ಲಿ ಅತಿ ಹೆಚ್ಚು ಗ್ರಾಹಕರನ್ನು ಹೊಂದಿರುವ ಉತ್ಪನ್ನಗಳಲ್ಲಿ ಹಾಲು ಸಹ ಒಂದಾಗಿದೆ. ಈ ಕಾರಣದಿಂದಲೇ ದೇಶಿ ಗೋವಿನ ಹಾಲನ್ನು ಭೂಲೋಕದ ಅಮೃತವೆಂದು ಹೇಳಲಾಗಿರುವುದು. ಇಂತಹ ಅಮೃತದ ಸೇವನೆಯಿಂದ ಆರೋಗ್ಯ ವೃದ್ಧಿಸುವುದಲ್ಲದೆ, ಮೂಳೆಗಳಲ್ಲಿನ ನೋವು ಸಹ ಕಡಿಮೆಯಾಗುತ್ತದೆ. ಹಾಗಾಗಿ ವಿಟಮಿನ್‌ಯುಕ್ತವಾದ ಈ ಪೇಯ ಮಕ್ಕಳಿಂದ ಹಿಡಿದು ಮುದುಕರವರೆಗೆ ಅತಿ ಸೂಕ್ತವಾದುದು. ಮಕ್ಕಳು ಎಲ್ಲಿಯವರೆಗೂ ಅನ್ನ ಪಾನಾದಿಗಳನ್ನು ಸೇವಿಸುವುದಿಲ್ಲವೋ, ಅಲ್ಲಿಯವರೆಗೂ ಆ ಕೂಸು ಹಾಲಿನಿಂದಲೇ ಜೀವಿಸಬೇಕಾಗುತ್ತದೆ. ಹಾಗಾಗಿ ಮಕ್ಕಳ ಏಕೈಕ ಪೋಷಕಾಂಶ ಹಾಲಾಗಿದೆ. ಅಷ್ಟೇ ಅಲ್ಲದೆ ಸಸ್ಯಾಹಾರಿಗಳಿಗೆ ದೊರಕುವ ಏಕೈಕ ಪ್ರಾಣಿಜನ್ಯ ಪ್ರೋಟಿನ್ ಸಹ ಇದೇ ಆಗಿದೆ. ಇತ್ತೀಚಿನ ಸಂಶೋಧನೆಯ ಪ್ರಕಾರ ಬೆಳೆಯುವ ಮಕ್ಕಳು ಕ್ಯಾಲ್ಸಿಯಂನ್ನು ತಮ್ಮ ಆಹಾರದಲ್ಲಿ ಸೇವಿಸದೆ ಇದ್ದಲ್ಲಿ ಮುಂದೆ ಮೂಳೆಗಳಲ್ಲಿ ಕ್ಯಾಲ್ಸಿಯಂ ಕೊರತೆಯಿರುವ ಹಾಗೂ ಸಂಧಿವಾತದಂತಹ ಸಮಸ್ಯೆಗಳಿಗೆ ಬೇಗನೆ ತುತ್ತಾಗುತ್ತಾರೆ. ಆದರೆ ಹಾಲಿನಲ್ಲಿ ಪಾಸ್ಪರಸ್ ಅಂಶವಿದ್ದು ಇದು ಗಟ್ಟಿ ಮುಟ್ಟಾದ ಮೂಳೆಯನ್ನು ಹೊಂದಲು ಅತಿ ಸಹಕಾರಿಯಾದುದಾಗಿದೆ. ಆದುದರಿಂದ ನಮ್ಮ ಪೂರ್ವಜರು ಹಾಲಿಗೆ ಬಾಲಜೀವನ ಎಂದು ಹೆಸರನ್ನಿಟ್ಟಿರುವುದು.

ಹಾಲಿನಷ್ಟು ಅತ್ಯುತ್ತಮ ಸಂತುಲಿತ, ಸಾತ್ವಿಕ ಮತ್ತು ಅನುಪಮ ಆರೋಗ್ಯವರ್ಧಕ ಆಹಾರ ಭೂಲೋಕದಲ್ಲಿ ಇನ್ನೊಂದಿಲ್ಲ ಎಂದು ಹೇಳಲಾಗುತ್ತದೆ. ಹೀಗಾಗಿಯೇ ಹಾಲು ಸರ್ವಜೀವಿಗಳ ಜೀವನಾಧಾರವಾಗಿರುವುದು. ಮತ್ತೊಂದು ವೈಶಿಷ್ಟವೇನೆಂದರೆ ಯಾವುದೇ ಪ್ರಾಣಿಯ ಹಾಲಿನಲ್ಲಿ ಸ್ವರ್ಣದ ಅಂಶವಿರುವುದಿಲ್ಲ. ಆದರೆ ಗೋವಿನ ಹಾಲಿನಲ್ಲಿ ಮಾತ್ರ ಸ್ವರ್ಣದ ಅಂಶ ಸಾಕಷ್ಟು ಕಂಡುಬರುತ್ತದೆ. ಇದಕ್ಕೆ ಇರಬೇಕು 'ಹಾಲು ಎಲ್ಲಿದೆಯೋ ಅಲ್ಲಿ ಬುದ್ಧಿ, ಬುದ್ಧಿ ಎಲ್ಲಿದೆಯೋ ಅಲ್ಲಿ ಜಯವಿದೆ' ಎಂಬುದಾಗಿ ಮನು ಹೇಳಿರುವುದು. ಪ್ರಾಚೀನ ವೈದ್ಯಕೀಯ ಪಿತಾಮಹರಾದ ಭಾಗಭಟ್ಟರು ಹಾಲಿನ ಮಹಿಮೆಯ ಬಗ್ಗೆ ಹೇಳುತ್ತಾ ಅದರಿಂದ ವಾಸಿಯಾಗುವ ಕಾಯಿಲೆಗಳ ಪಟ್ಟಿಯನ್ನೇ ನೀಡಿದ್ದಾರೆ. ಹಾಗೆಯೇ ದೇಹದ ಶಕ್ತಿಗೆ ಮತ್ತು ರಾಸಲೀಲೆಗೆ ಹಾಲು ಹೆಚ್ಚು ಸ್ಫೂರ್ತಿ ಮತ್ತು ಶಕ್ತಿದಾಯಕವೆಂದೂ ತಿಳಿಸಿದ್ದಾರೆ. ಅಷ್ಟೇ ಅಲ್ಲದೆ ಇತ್ತೀಚಿನ ವೈದ್ಯಕೀಯ ವಿಜ್ಞಾನವೂ ಸಹ ಹಾಲಿಗೆ ಹೆಚ್ಚು ಪ್ರಾಶಸ್ತ್ಯವನ್ನು ನೀಡಿ ಹಾಲು ಮನುಷ್ಯನ ಜೀವನಕ್ಕೆ ಅತಿ ಅವಶ್ಯಕವಾದ ಪೇಯ ಎಂಬುದನ್ನು ದೃಢೀಕರಿಸಿವೆ.

ಮುಖ್ಯವಾಗಿ ಹೃದ್ರೋಗಿಗಳಿಗೆ ಹಾಲು ಕವಚವಿದ್ದಂತೆ. ಕಾರಣ ಅದರಲ್ಲಿ ಅಗತ್ಯವಾದ ಸುವರ್ಣಾಂಶವಿರುವುದೇ ಆಗಿದೆ. ಹಾಗೆಯೇ ದೇಶಿ ಗೋವಿನ ಹಾಲಿನಿಂದ ಜೀರ್ಣಕ್ರಿಯೆ ಸುಲಭವಾಗುತ್ತದೆ. ರಾತ್ರಿ ಮಲಗುವ ವೇಳೆ ಬಿಸಿಯಾದ ದೇಶಿ ಗೋವಿನ ಹಾಲಿನೊಂದಿಗೆ ಒಂದು ಚಮಚ ತುಪ್ಪ ಸ್ವೀಕರಿಸುವುದರಿಂದ ದೇಹ ಆರೋಗ್ಯಕರವಾಗುತ್ತದೆ. ಅದರಲ್ಲೂ ಜ್ವರ ಬಂದಾಗ ಹಾಲನ್ನು ಸೇವಿಸುವುದರಿಂದ ದೇಹದ ಆರೋಗ್ಯ ಮತ್ತಷ್ಟು ಸುಧಾರಿಸುತ್ತದೆ. ಒಟ್ಟಿನಲ್ಲಿ ಹೇಳಬೇಕೆಂದರೆ ಹಾಲು ವಿಟಮಿನ್‌ಗಳಿಂದ ಸಮೃದ್ಧಿಯಾಗಿದೆ. ಹಾಲಿನಲ್ಲಿ ಎ, ಬಿ, ಬಿ2, ಡಿ2, ಎ(ಡಬ್ಲ್ಯೂ) ಜೀವಸತ್ವಗಳಿವೆ. ಎಂಟು ವಿಧವಾದ ಸಸಾರಜನಕ ವಸ್ತುಗಳು, ಹತ್ತು ರೀತಿಯ ಅಮೈನೊ ಆಮ್ಲಗಳು, ಹನ್ನೊಂದು ನಮೂನೆಯ ಸ್ನಿಗ್ಧ ಆಮ್ಲಗಳು, ಎಂಟು ಬಗೆಯ ಜೀವಾಣು ರಹಿತ ಕಣ್ವಗಳು ಮತ್ತು ಅಧಿಕ ಪ್ರಮಾಣದ ಕೆರೋಟಿನ್ ಇದೆ. ಸಾಮಾನ್ಯವಾಗಿ ಒಂದು ಬಿಂದು ಹಾಲಿನಲ್ಲಿ ಹತ್ತು ಕೋಟಿಗೂ ಹೆಚ್ಚು ಕೊಬ್ಬಿನ ಗುಳ್ಳೆಗಳಿರುತ್ತವೆ. ಈ ಕೊಬ್ಬಿನ ಕಣಗಳು ಬೆಳಕನ್ನು ಸಂಪೂರ್ಣವಾಗಿ ಆಂತರಿಕವಾಗಿ ಪ್ರತಿಫಲಿಸುವುದರಿಂದ ಹಾಲು ಶುಭ್ರ ಬಿಳಿ ಬಣ್ಣದಲ್ಲಿರುತ್ತದೆ. ಹಾಗೆಯೇ ಹಾಲಿನಲ್ಲಿ ಕೆಸೀನ್ ಎಂಬ ಪ್ರಮುಖ ಪ್ರೋಟಿನ್ ಇದೆ. ಇದು ಭೂಮಿಯ ಮೇಲಿನ ಸಕಲ ಪ್ರಾಣಿಗಳ ಸಮಗ್ರ ಬೆಳವಣಿಗೆಗೆ ಅತ್ಯವಶ್ಯಕವಾದುದಾಗಿದೆ. ಹಾಲಿನ ಮಹತ್ವದ ಕುರಿತಾದ ವಿವರಣೆಗಳು ನಮ್ಮ ಪ್ರಾಚೀನ ಗ್ರಂಥಗಳಲ್ಲಿ ಸಾಕಷ್ಟು ಕಂಡುಬರುತ್ತದೆ. ಹಾಲು ವೀರ್ಯವರ್ಧಕ, ಕಾಂತಿವರ್ಧಕ, ಮೈಥುನ ಶಕ್ತಿಯನ್ನು ಹೆಚ್ಚಿಸುವ ಇತ್ಯಾದಿ ಗುಣಗಳಿಂದ ಕೂಡಿರುವುದೆಂದು ಖವಾಸುಲ್ಲ ಅದ್ವಿಯಾ ಎಂಬ ಯುನಾನಿ ಗ್ರಂಥದಿಂದ ತಿಳಿದು ಬರುತ್ತದೆ. ಹಾಗೆಯೇ ಮಜರುಲ್ಲಾತ ಆಕರಿ ಎಂಬ ಗ್ರಂಥದಲ್ಲಿ ಆಕಳ ಹಾಲು ವೀರ್ಯ ಶಕ್ತಿ ಮತ್ತು ಬುದ್ಧಿ ವರ್ಧಕವಾಗಿರುವುದೆಂದು ಹೇಳಿರುವುದಲ್ಲದೆ ರಕ್ತ ಶೋಧಕವು ಆಗಿರುವುದೆಂದು ನಿರೂಪಿಸಿ ಅಶಕ್ತ ಪುರುಷರಿಗೆ ಅಮೃತದಂತಿರುವುದೆಂದು ವರ್ಣಿಸಲಾಗಿದೆ.

ಭಾರತೀಯ ಗೋತಳಿಗಳ ಹಾಲು ಹೆಚ್ಚು ಕೊಬ್ಬಿನಂಶ ಹೊಂದಿದ್ದು ಕಡಿಮೆ ಕೊಲೆಸ್ಟ್ರಾಲ್‌ನ್ನು ಹೊಂದಿರುತ್ತದೆ. ಇದಕ್ಕೆ ಪ್ರಮುಖ ಕಾರಣ ಅವುಗಳ ಬೆನ್ನಿನ ಡುಬ್ಬದಲ್ಲಿರುವ ಸೂರ್ಯಕೇತು ನಾಡಿ. ಇದು ಸೂರ್ಯನ ಕಿರಣವನ್ನು ಅಂಟೇನಾದ ರೀತಿ ಹೀರಿಕೊಂಡು ಅದರಲ್ಲಿನ ಅಂಶವನ್ನು ತನ್ನ ಉತ್ಪನ್ನಗಳಾದ ಗೋಮೂತ್ರ, ಗೋಮಯ ಮತ್ತು ಹಾಲಿನ ಮೂಲಕ ಹೊರಹಾಕುತ್ತದೆ. ಹೀಗಾಗಿ ದೇಶಿ ತಳಿಗಳ ಹಾಲು ಸೂರ್ಯನ ಬಿಸಿಲಿಗೆ ಪ್ರಚೋದನೆಗೊಂಡು ಹೆಚ್ಚು ಪೌಷ್ಟಿಕಾಂಶಯುಕ್ತವಾದ ಹಳದಿ ಬಣ್ಣದಿಂದ ಕೂಡಿರುತ್ತದೆ ಎಂದು ಹೇಳಲಾಗುತ್ತದೆ. ಕರೆಯುತ್ತಿದ್ದಂತೆ ಬಿಸಿಯಾಗಿರುವ ಗೋವಿನ ಹಾಲು ಕುಡಿಯಲು ರುಚಿಕರ ಹಾಗೂ ಶ್ರೇಷ್ಠವಾದುದಾಗಿದೆ. ಹಾಗೆಯೇ ಹಾಲನ್ನು ಆಗಾಗ ಕಾಯಿಸುತ್ತಿದ್ದರೆ ಅದು ವಿಷಯುಕ್ತವಾಗುತ್ತದೆ ಮತ್ತು ಸೇವನೆಗೆ ಯೋಗ್ಯವಾಗಿರುವುದಿಲ್ಲ ಎಂಬುದನ್ನು ವೈದ್ಯಕೀಯ ಲೋಕ ತಿಳಿಸುತ್ತದೆ. ವಿಜ್ಞಾನಿಗಳ ನಿರ್ಣಯದ ಪ್ರಕಾರ ಹಸುವಿನ ಹಾಲು ಉತ್ತಮವಾದ ಮತ್ತು ಪುಷ್ಟಿಕರವಾದ ಭೋಜನಕ್ಕೆ ಸಮಾನವಾದದ್ದಾಗಿದೆ. ಅದರಲ್ಲಿ ಶೇಕಡಾ 87ರಷ್ಟು ನೀರು, ಶೇಕಡಾ 4.6ರಷ್ಟು ಸಕ್ಕರೆ ಹಾಗೂ ಇನ್ನೂ ಹೆಚ್ಚಿನ ವಿಟಮಿನ್ನುಗಳಂತಹ ಪ್ರಯೋಜನಗಳೆಲ್ಲವೂ ಇದೆ ಎಂಬುದಾಗಿದೆ.

ಗುಜರಾತ್‌ನ ಗೀರ್, ಪಂಜಾಬ್‌ನ ಸೆಹವಾಲ್ ಜಗತ್ತಿನಲ್ಲಿಯೇ ಅತಿ ಹೆಚ್ಚು ಹಾಲನ್ನು ನೀಡುವ ತಳಿಗಳಾಗಿವೆ. ಭಾರತೀಯ ಮೂಲದ ಗೋತಳಿಗಳು ವಿದೇಶಿ ಮೂಲದ ತಳಿಗಳಿಗಿಂತ ಹೆಚ್ಚಿನ ಹಾಲನ್ನು ನೀಡುತ್ತವೆ. ಈ ಹಾಲು ವಿದೇಶಿ ದನಗಳು ನೀಡುವ ಹಾಲಿನ ಗುಣಮಟ್ಟಕ್ಕಿಂತ ಅತ್ಯಂತ ಉತ್ಕೃಷ್ಟವಾಗಿರುತ್ತದೆ ಎಂಬುದನ್ನು ರಾಷ್ಟ್ರೀಯ ಜಾನುವಾರು ವಂಶವಾಹಿ ಸಂಪನ್ಮೂಲಗಳ ಇಲಾಖೆಯ ಒಂದು ಸಮೀಕ್ಷೆ ಕೂಡ ದೃಢಪಡಿಸಿದೆ. ಇದಕ್ಕೆ ಪ್ರಮುಖ ಕಾರಣ ಅವುಗಳಲ್ಲಿನ ಆಲೀಲ್ ಜೀನ್. ಇದು ಭಾರತೀಯ ತಳಿಗಳಲ್ಲಿ ಶೇಕಡಾ 100 ರಷ್ಟಿದ್ದರೆ ವಿದೇಶಿ ತಳಿಗಳಲ್ಲಿ ಹೆಚ್ಚೆಂದರೆ ಶೇಕಡಾ 60ರಷ್ಟು ಮಾತ್ರ ಇರುತ್ತದೆ. ದೇಶಿ ಗೋವಿನ ಹಾಲು ಮತ್ತು ಅದರಿಂದ ಮಾಡಿದ ತುಪ್ಪದ ಮಹತ್ವ ಇತ್ತೀಚಿನ ದಿನಗಳಲ್ಲಿ ಜನಸಾಮಾನ್ಯರ ಅರಿವಿಗೂ ಬರುತ್ತಿದೆ. ಹೀಗಾಗಿ ಅವುಗಳಿಗಿಂದು ಎಲ್ಲಿಲ್ಲದ ಬೇಡಿಕೆ ಸೃಷ್ಟಿಯಾಗುತ್ತಿದೆ. ಎಷ್ಟು ಬೇಡಿಕೆ ಸೃಷ್ಟಿಯಾಗಿದೆಯೆಂದರೆ ಮಾರುಕಟ್ಟೆಯಲ್ಲಿ ಸಿಗುವ ಹಾಲಿಗಿಂತ ಹತ್ತು ಪಟ್ಟು ಹೆಚ್ಚಿನ ಬೆಲೆಗೆ ಕಾಳಸಂತೆಯಲ್ಲಿ ಬಿಕರಿಯಾಗುವಷ್ಟು. ಇಂದು ಸುಮಾರು 40 ರೂಪಾಯಿಗೆ ಸಿಗುವ ಹಾಲು ಭಾಗಶಃ ವಿದೇಶಿ ತಳಿಯ ಹಾಲಾಗಿರುವುದರಿಂದ ಜನ ದೇಶಿ ಗೋವಿನ ಹಾಲನ್ನು ಕೊಳ್ಳಲು ಮುಗಿಬೀಳುತ್ತಿದ್ದಾರೆ. ಇದರಿಂದ ಪ್ರತಿ ಲೀಟರ್ ದೇಶಿ ಹಾಲಿನ ಬೆಲೆ ಕೆಲವು ಭಾಗಗಳಲ್ಲಿ 400 ರೂಪಾಯಿಯನ್ನು ದಾಟಿದೆ ಎಂದರೆ ಆಶ್ಚರ್ಯವಾಗಬಹುದು. ರಾಜಸ್ಥಾನದ ಪಶುಸಂಗೋಪನ ಇಲಾಖೆಯ ಪೂರ್ವದ ನಿರ್ದೇಶಕರಾಗಿದ್ದ ಡಾ॥ ಭಂಡಾರಿಯವರ ಪ್ರಕಾರ ದೇಶಿ ಹಸುವಿನ ಹೊಟ್ಟೆಯಲ್ಲಿರುವ ವಿಶಿಷ್ಟ ಬ್ಯಾಕ್ಟೀರಿಯಾಗಳಿಂದ ಅದರ ಹಾಲು ತನ್ನ ವಿಶಿಷ್ಟತೆ ಹಾಗೂ ಮಾನವನಿಗೆ ಹೊಂದುವಂತಹ ಸತ್ವಗುಣಗಳಿಂದ ಕೂಡಿದೆ ಎಂದು ಹೇಳಿದ್ದಾರೆ. ಎಮ್ಮೆ ಹಾಲು ಹೆಚ್ಚು ಮಂದವಾಗಿ ಕಂಡರೂ, ದೇಶಿ ಹಸುವಿನ ಹಾಲಿನ ಸೇವನೆಯಿಂದ ಬುದ್ಧಿ ಶಕ್ತಿಯ ತೀಕ್ಷ್ಣತೆ, ದೈಹಿಕ ಚುರುಕುತನ ಹಾಗೂ ಭಾವನೆಗಳ ಸ್ಥಿರತೆಯನ್ನು ಮತ್ತು ಸೌಮ್ಯ ಗುಣಗಳನ್ನು ಹೊಂದಬಹುದಾಗಿದೆ ಎಂಬುದಾಗಿ ತಿಳಿಸಿದ್ದಾರೆ. ಇವರಂತೆ ಸಾಕಷ್ಟು ಸಂಶೋಧಕರು, ವೈದ್ಯರು, ವಿಜ್ಞಾನಿಗಳು ದೇಶಿ ಗೋವಿನ ಹಾಲನ್ನು ಕೊಂಡಾಡುತ್ತಾ ಭೂಲೋಕದ ಅಮೃತ ಎಂದು ಹೇಳಿದ್ದಾರೆ.

ಹಿಂದೂ ಒಗ್ಗಟ್ಟು ಸಾಧನೆಯ ಮಹತ್ವದ ಮೈಲಿಗಲ್ಲು !

ಮುಸ್ಲಿಮರನ್ನು ಓಲೈಸದ, ದೇಶದ ಹಿತಾಸಕ್ತಿಯನ್ನು ಬಲಿಗೊಡದ 'ನೈಜ ಸೆಕ್ಯುಲರ್' ಸರಕಾರ ರಚನೆಗಾಗಿ ಹಿಂದುಗಳು ಒಗ್ಗೂಡಿದ್ದಾರೆ.

ಅರುಣ್ ಆನಂದ್

ಪ. ಬಂಗಾಳದಲ್ಲಿ ಬಿಜೆಪಿಯ ಅಭೂತಪೂರ್ವ ಚುನಾವಣಾ ವಿಜಯವು 2029ರ ಲೋಕಸಭಾ ಚುನಾವಣೆಗೆ ಮುಂಚಿತವಾಗಿಯೇ 'ಮೋದಿ 4.0'ರ ಆರಂಭವನ್ನು ಸಂಕೇತಿಸಿದೆ.

2014ರಲ್ಲಿ ಬಿಜೆಪಿ ಲೋಕಸಭಾ ಚುನಾವಣೆಯನ್ನು ಗೆಲ್ಲುವ ಮೂಲಕ 'ಮೋದಿ 1.0' ಆರಂಭವಾಗಿತ್ತು. 2019ರಲ್ಲಿ ಇನ್ನಷ್ಟು ಹೆಚ್ಚು ಸ್ಥಾನ ಗಳಿಕೆಯೊಂದಿಗೆ ಮೋದಿ 2.0 ಯುಗ ಆರಂಭಗೊಂಡಿತು. ಆದರೆ 2024ರಲ್ಲಿ ಬಿಜೆಪಿ ಸರಕಾರ ರಚಿಸಿಕೊಂಡರೂ ಅದರ ಸ್ಥಾನವು 240ಕ್ಕಿಳಿದು ತುಸು ನಿರಾಶೆ ಅನುಭವಿಸಬೇಕಾಗಿತ್ತು. ಇದು ಪಕ್ಷ ಮತ್ತು ಸರಕಾರಕ್ಕೆ ಉಂಟಾದ ಸಣ್ಣದೊಂದು ಆಘಾತವಾಗಿತ್ತು.

ಅಲ್ಲಿಂದ ಬಳಿಕ ಮೋದಿ ಸರಕಾರ ಮತ್ತು ಬಿಜೆಪಿ ತನ್ನ ಲೋಪಗಳನ್ನು ಸರಿಪಡಿಸುವ ಕಾರ್ಯಕ್ಕೆ ಮುಂದಾಯಿತು. ಅದರ ಫಲವಾಗಿ ನಂತರದ ವಿಧಾನಸಭಾ ಚುನಾವಣೆಗಳಲ್ಲಿ ಮಹತ್ವದ ಗೆಲುವು ಸಿಗಲಾರಂಭಿಸಿತು. ಬಿಹಾರ ಮತ್ತು ಮಹಾರಾಷ್ಟ್ರದಲ್ಲಿ ಗೆಲುವು ಸಾಧಿಸಿದ ಬಿಜೆಪಿ, ಬಳಿಕ ದಿಲ್ಲಿಯಲ್ಲಿ ಆಪ್‌ನ್ನು ಸೋಲಿಸಿ ಗದ್ದುಗೆ ಹಿಡಿಯಿತು. 1993ರಲ್ಲಿ ಕೊನೆಯದಾಗಿ ದಿಲ್ಲಿಯನ್ನು ಗೆದ್ದಿದ್ದ ಬಿಜೆಪಿಗೆ ಕಳೆದ ವರ್ಷ ಮತ್ತೆ ದಿಲ್ಲಿ ಗದ್ದುಗೆ ವಶವಾಯಿತು.

ಇವೆಲ್ಲದರ ನಡುವೆಯೂ ಈಗ ಪ.ಬಂಗಾಳದಲ್ಲಿ ಗಳಿಸಿರುವ ಗೆಲುವು ಬಿಜೆಪಿ ಪಾಲಿನ ಮಹೋನ್ನತ ಸಾಧನೆಯಾಗಿದೆ. ಇದರಿಂದ ಪೂರ್ವ ಭಾರತದಲ್ಲಿ ಎಲ್ಲಾ ದಿಕ್ಕುಗಳಿಗೂ ಬಿಜೆಪಿಯ ವ್ಯಾಪ್ತಿ ವಿಸ್ತರಿಸಿದಂತಾಗಿದೆ.

ಪ.ಬಂಗಾಳ ಗೆಲ್ಲುವುದು ಬಿಜೆಪಿ ಪಾಲಿಗೆ ಅತ್ಯಂತ ಕಠಿಣ ಸವಾಲಾಗಿತ್ತು. ಏಕೆಂದರೆ ಪ.ಬಂಗಾಳದಲ್ಲಿ ಎಡಪಂಥೀಯ ಧೋರಣೆ ಆಳವಾಗಿ ಬೇರೂರಿತ್ತು. ವಿಪರ್ಯಾಸವೆಂದರೆ ಭಾರತೀಯ ಜನಸಂಘದ ಸ್ಥಾಪಕ ಡಾ. ಶ್ಯಾಮಪ್ರಸಾದ್ ಮುಖರ್ಜಿಯವರು ಪ.ಬಂಗಾಳದಲ್ಲಿ ಜನಿಸಿದವರು. ಸ್ವತಂತ್ರ ಭಾರತದ ಮೊತ್ತಮೊದಲ ಲೋಕಸಭಾ ಚುನಾವಣೆಯಲ್ಲಿ ಜನಸಂಘವು ಮೂರು ಸ್ಥಾನಗಳನ್ನು ಗೆದ್ದಿದ್ದು ಅದರಲ್ಲಿ ಎರಡು ಸ್ಥಾನಗಳು ಪ.ಬಂಗಾಳದಿಂದ ಲಭಿಸಿದ್ದವು.ಮೂವರು ವಿಜೇತರೆಂದರೆ ಡಾ. ಶ್ಯಾಮಪ್ರಸಾದ್ ಮುಖರ್ಜಿ (ಪ. ಬಂಗಾಳದ ಆಗ್ನೇಯ ಕಲ್ಕತ್ತಾ ಕ್ಷೇತ್ರ), ದುರ್ಗ ಚರಣ್ ಬ್ಯಾನರ್ಜಿ (ಪ.ಬಂಗಾಳದ ಮಿಡ್ನಾಪುರ್ ಕ್ಷೇತ್ರ) ಮತ್ತು ಉಮಾಶಂಕರ್ ತ್ರಿವೇದಿ (ರಾಜಸ್ಥಾನದ ಚಿತ್ತೂರ್ ಕ್ಷೇತ್ರ).

ಜಮ್ಮು-ಕಾಶ್ಮೀರದ 370ನೇ ವಿಧಿ ರದ್ಧತಿಗಾಗಿ ಹೋರಾಡುತ್ತಿದ್ದ ಶ್ಯಾಮಪ್ರಸಾದ್ ಮುಖರ್ಜಿಯವರು ಅನಿರೀಕ್ಷಿತ ದುರ್ಮರಣಕ್ಕೆ ಈಡಾದುದು ಕೆಲವು ದಶಕಗಳ ಕಾಲ ಜನಸಂಘವನ್ನೂ



ದುರ್ಬಲಗೊಳಿಸಿತು. 1980ರಲ್ಲಿ ಬಿಜೆಪಿ ರಚನೆಯಾದ ಬಳಿಕವೂ ಪಕ್ಷದ ಸಂಕಷ್ಟ ಮುಂದುವರಿದೇ ಇತ್ತು. ಪ.ಬಂಗಾಳದಲ್ಲಂತೂ ಮೊದಲಿಗೆ ಕಾಂಗ್ರೆಸ್, ಬಳಿಕ ಎಡಪಕ್ಷಗಳು ಆಳತೊಡಗಿದವು. 2000 ಇಸವಿಯ ಬಳಿಕ ಎಡಪಕ್ಷಗಳ ಜಾಗವನ್ನು ತೃಣಮೂಲ ಕಾಂಗ್ರೆಸ್ ಆಕ್ರಮಿಸಿತು.

ಮೊದಲಿಗೆ ಜನಸಂಘ ಹಾಗೂ ಬಳಿಕ ಬಿಜೆಪಿ ಪ.ಬಂಗಾಳದಲ್ಲಿ ರಾಜಕೀಯ ಅವಕಾಶ ಪಡೆಯಲು ಹೆಣಗಾಡುತ್ತಿರಬೇಕಾದರೆ ಪಕ್ಷದ ತಳಮಟ್ಟವನ್ನು ಭದ್ರಪಡಿಸುವಲ್ಲಿ ಆರೆಸ್ಸೆಸ್ ಪಾತ್ರ ದೊಡ್ಡದು. ಆರೆಸ್ಸೆಸ್ ತಳಮಟ್ಟದಲ್ಲಿ ತನ್ನ ಜಾಲವನ್ನು ವಿಸ್ತರಿಸತೊಡಗಿತು. ಹಲವಾರು ಸಂಘ ಪ್ರೇರಿತ ಸಂಸ್ಥೆಗಳು ಶಿಕ್ಷಣ, ಆರೋಗ್ಯ, ಸಂಸ್ಕೃತಿ, ಉದ್ಯೋಗ ಸೃಷ್ಟಿ, ಮಹಿಳಾ ಸಬಲೀಕರಣ ಮೊದಲಾದ ಕ್ಷೇತ್ರಗಳಲ್ಲಿ ಕಾರ್ಯಾಚರಿಸತೊಡಗಿದವು.

ಆದರೆ ಆರೆಸ್ಸೆಸ್ ಕೂಡಾ ಇದಕ್ಕಾಗಿ ಸಾಕಷ್ಟು ಬೆಲೆ ತೆರಬೇಕಾಯಿತು ಎನ್ನುವುದು ದುರಂತ. ಆರೆಸ್ಸೆಸ್‌ನ ಕೆಲವಾರು ಕಾರ್ಯಕರ್ತರು ಬಲಿಯಾಗಬೇಕಾಯಿತು. ಮೊದಲಿಗೆ ಎಡಪಕ್ಷ ಕಾರ್ಯಕರ್ತರು ಹಾಗೂ ಬಳಿಕ ತೃಣಮೂಲ ಕಾರ್ಯಕರ್ತರಿಂದ ಆರೆಸ್ಸೆಸ್ ಕಾರ್ಯಕರ್ತರ ಮೇಲೆ ದಾಳಿ ನಡೆಯಿತು. ಹಲವಾರು ಬಿಜೆಪಿ ಕಾರ್ಯಕರ್ತರು ಪ್ರಾಣ ತೆತ್ತರು.

ಕೇರಳ ಮತ್ತು ಪ.ಬಂಗಾಳಗಳಲ್ಲಿ ಆರೆಸ್ಸೆಸ್ ಮತ್ತು ಬಿಜೆಪಿ ಕಾರ್ಯಕರ್ತರು ತಮ್ಮ ಸೈದ್ಧಾಂತಿಕ ವಿರೋಧಿಗಳಿಂದ ಹೆಚ್ಚಿನ ಹಿಂಸೆ ಅನುಭವಿಸಬೇಕಾಯಿತು. 2021ರ ವಿಧಾನಸಭಾ ಚುನಾವಣೆಯ ಫಲಿತಾಂಶದ ಬಳಿಕವಂತೂ ಪ.ಬಂಗಾಳದಲ್ಲಿ ಮಹಿಳೆಯರು ಮಕ್ಕಳು ಸೇರಿದಂತೆ ಎಲ್ಲಾ ಹಿಂದುಗಳ ಮೇಲೂ ದೌರ್ಜನ್ಯ ನಡೆಯಿತು.

ಭಾರತದ ಚುನಾವಣಾ ಇತಿಹಾಸದಲ್ಲಿ ಆಡಳಿತ ಪಕ್ಷವೇ ಜನರಲ್ಲಿ ಈ ಬಗೆಯ ಭೀತಿ ತುಂಬಿದ ಬೇರೆ ನಿದರ್ಶನವಿಲ್ಲ. ಪ.ಬಂಗಾಳದಲ್ಲಿ ಜನರು ಬೇರೆ ಪಕ್ಷಗಳ ಹೆಸರನ್ನೂ ಕೂಡಾ ಎತ್ತಲಾರದಂತಹ ಪರಿಸ್ಥಿತಿ ನಿರ್ಮಾಣವಾಯಿತು. ಎಡಪಕ್ಷಗಳಿಂದ ಜಾರಿಗೆ ತರಲ್ಪಟ್ಟ ಈ ವ್ಯವಸ್ಥೆಯನ್ನು ಮಮತಾ ಬ್ಯಾನರ್ಜಿ ಇನ್ನೊಂದು ಸ್ತರ ಮೇಲೆತ್ತಿದರು. ವಿರೋಧ ಪಕ್ಷದ ಕಾರ್ಯಕರ್ತರಾರೂ ಸ್ವತಂತ್ರವಾಗಿ ತಿರುಗಾಡಲಾರದ ಪರಿಸ್ಥಿತಿ ಸೃಷ್ಟಿಸಲ್ಪಟ್ಟಿತು. ಇದು ಪಕ್ಷ ಮತ್ತು ಸರಕಾರದ ನಡುವಿನ ಅಂತರವನ್ನೂ ತೊಡೆದುಹಾಕಿತು.ಸರಕಾರಿ ಯಂತ್ರವು ತೃಣಮೂಲ ಕಾಂಗ್ರೆಸ್‌ನ ಇಷ್ಟಾನುಸಾರ ನಡೆಯುವಂತಾಯಿತು.

ಇಂತಹ ಪರಿಸ್ಥಿತಿಯಲ್ಲಿ ಪ.ಬಂಗಾಳದಲ್ಲಿ ಬೇರೆ ಪಕ್ಷಗಳು ಜಯಗಳಿಸುವುದು ಅಸಾಧ್ಯದ ಮಾತು. ಆದರೆ ಬಿಜೆಪಿ ತನ್ನ ಹೋರಾಟ ಮುಂದುವರಿಸಿತು. 15 ವರ್ಷಗಳ ಹಿಂದೆ ತನ್ನ ಪುಟ್ಟ ಖಾತೆ ತೆರೆದ ಬಿಜೆಪಿ ಇದೀಗ ಇಡೀ ರಾಜ್ಯವನ್ನೇ ತನ್ನ ವಶಕ್ಕೆ ತೆಗೆದುಕೊಂಡಿದೆ.

ಪ.ಬಂಗಾಳದಲ್ಲಿ ಮೂರನೇ ಒಂದು ಜನಸಂಖ್ಯೆ ಮುಸ್ಲಿಮರದ್ದು. ಅವರು ಬಿಜೆಪಿಯನ್ನು ವಿರೋಧಿಸುವ ಯಾವುದೇ ಪಕ್ಷವನ್ನು ಬೆಂಬಲಿಸುತ್ತಾರೆ. ಈ ಬಾರಿ ಕೂಡಾ ಅವರು ತಮ್ಮ ನಿಲುವನ್ನು ಬದಲಿಸಿರುವ ಸಾಧ್ಯತೆ ಕಡಿಮೆ. 2021ರಲ್ಲಿ ಟಿಎಂಸಿ ಪಕ್ಷವು ಮುಸ್ಲಿಮರು ನಿರ್ಣಾಯಕರಾಗಿರುವ 90 ಸ್ಥಾನಗಳಲ್ಲಿ 88 ಸ್ಥಾನಗಳನ್ನು ಗೆದ್ದಿತ್ತು. ಆದರೆ ಮೋದಿ ನೇತೃತ್ವದಲ್ಲಿ ಬಿಜೆಪಿ ಈಗ ವ್ಯತಿರಿಕ್ತ ಫಲಿತಾಂಶ ಸೃಷ್ಟಿಸಿದೆ.

ಹಿಂದೂ ಒಗ್ಗಟ್ಟಿನ ಹೊಸ ಯುಗಕ್ಕೆ ಪ.ಬಂಗಾಳ ಸಾಕ್ಷಿಯಾಗಿದೆ. ಇದು ಹಿಂದು ಮತಗಳ ಧ್ರುವೀಕರಣವಲ್ಲ. ಹಿಂದುಗಳು ಮುಸ್ಲಿಮರ ವಿರುದ್ಧವಾಗಿ ಒಗ್ಗಟ್ಟಾಗಿರುವುದೂ ಅಲ್ಲ. ಮುಸ್ಲಿಮರನ್ನು ಓಲೈಸದ, ದೇಶದ ಹಿತಾಸಕ್ತಿಯನ್ನು ಬಲಿಗೊಡದ 'ನೈಜ ಸೆಕ್ಯುಲರ್' ಸರಕಾರ ರಚನೆಗಾಗಿ ಒಗ್ಗೂಡಿದ್ದಾರೆ. ಮೋದಿಯವರ ನಾಯಕತ್ವದಲ್ಲಿ ವಿಶ್ವಾಸವಿರಿಸಿ ಬಿಜೆಪಿಯನ್ನು ಬೆಂಬಲಿಸಿದ್ದಾರೆ. ಆ ಮೂಲಕ ಮೋದಿಯವರ ಹಿಂದೆ ಹಿಂದುಗಳ ಧ್ರುವೀಕರಣ ಮತ್ತು ಒಗ್ಗಟ್ಟು ಭಾರತೀಯ ರಾಜಕಾರಣದ ಹೊಸ ಶಕೆಯನ್ನು ಹುಟ್ಟು ಹಾಕಿದೆ. ಇದು 'ಮೋದಿ 3.0' ನೆಟ್ಟ ಮಹತ್ವದ ಮೈಲಿಗಲ್ಲು.

ಕಿರುಸುದ್ದಿ

ಕೋಡಿ ಹೊಸಬೆಂಗ್ರೆ ಅಂಗನವಾಡಿ ಕೇಂದ್ರ ಪ್ರಾರಂಭೋತ್ಸವ

ಕೋಟ: ಕೋಡಿ ಗ್ರಾಮಪಂಚಾಯತ್ ವ್ಯಾಪ್ತಿಯ ಹೊಸಬೆಂಗ್ರೆ ಅಂಗನವಾಡಿ ಕೇಂದ್ರದಲ್ಲಿ ಬೇಸಿಗೆ ರಜೆ ಮುಗಿಸಿ ಅಂಗನವಾಡಿ ಕೇಂದ್ರ ಪುನರಾರಂಭೋತ್ಸವ ಕಾರ್ಯಕ್ರಮ ವಿಶಿಷ್ಟ ರೀತಿಯಲ್ಲಿ ನಡೆಯಿತು. ಅಂಗನವಾಡಿ ಕೇಂದ್ರವನ್ನು ತಳಿರು ತೋರಣದಿಂದ ಚೆಂದಗೊಳಿಸಿಕೊಂಡು ಪೋಷಕರೊಂದಿಗೆ ಮಕ್ಕಳನ್ನು ಪುಷ್ಪಸಿಂಚನ ಹಾಗೂ ಆರತಿ ಬೆಳಗುದರ ಜೊತೆ ಬರಮಾಡಿಕೊಳ್ಳಲಾಯಿತು.

ಅಂಗನವಾಡಿ ಮೇಲ್ವಿಚಾರಕಿ ಲಕ್ಷ್ಮೀ ದೀಪಾ ಬೆಳಗಿಸುದರೊಂದಿಗೆ ಮಕ್ಕಳಿಗೆ ಬಲೂನು ಹಾಗೂ ಸಿಹಿತಿಂಡಿ ನೀಡಿ ಸ್ವಾಗತಿಸಿ ಶುಭ ಹಾರೈಯಿಸಿದರು.

ಕೋಡಿ ಸಮನ್ವಯ ಸಂಜೀವಿನಿ ಮಾಜಿ ಅಧ್ಯಕ್ಷೆ ದೀಪಾಖಾರ್ವಿ, ಶಾರದಾ ಟಿ.ಕುಂದರ್ ಮತ್ತು ಪೋಷಕರು ಉಪಸ್ಥಿತರಿದ್ದರು. ಮಕ್ಕಳ ನಲಿಕಲಿಯೊಂದಿಗೆ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಕಾರ್ಯಕ್ರಮವನ್ನು ಅಂಗನವಾಡಿ ಶಿಕ್ಷಕಿ ಯಮುನಾ ಎಲ್ ಕುಂದರ್ ನಿರೂಪಿಸಿದರು.ಅಂಗನವಾಡಿ ಸಹಾಯಕಿ ಸವಿತಾ ವಂದಿಸಿದರು.

ಹಲ್ಲೆ: ವಕೀಲರ ದೂರು

ಬೈಂದೂರು: ಬಿಜೂರು ಗ್ರಾಮ ಪಂಚಾಯತ್ ಮಾಜಿ ಸದಸ್ಯ ರಾಘವೇಂದ್ರ ಗಾಣಿಗ ಎನ್ನುವವರು ನನ್ನ ಸಮವಸ್ತ್ರ ಎಳೆದು ಮೇಲೆ ಹಲ್ಲೆ ನಡೆಸಿರುವುದು ನನ್ನ ವಕೀಲ ವೃತ್ತಿಗೆ ಮಾಡಿರುವ ಅವಮಾನವಾಗಿದ್ದು, ಅವರು ಸಾರ್ವಜನಿಕವಾಗಿ ಕ್ಷಮೆಯಾಚಿಸಬೇಕು, ಬೈಂದೂರು ಶಾಸಕರು ಮಧ್ಯ ಪ್ರವೇಶಿಸಿ ನ್ಯಾಯ ದೊರಕಿಸಿಕೊಡಬೇಕು. ಇಲ್ಲದಿದ್ದರೆ ನ್ಯಾಯಕ್ಕಾಗಿ ಶಾಸಕರ ಕಚೇರಿ ಎದುರು ಧರಣಿ ಕುಳಿತುಕೊಳ್ಳುತ್ತೇನೆ ಎಂದು ನ್ಯಾಯವಾದಿ ಸಂತೋಷ್ ಕಾಡಿಂತಾರ ಬೈಂದೂರಿನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಹೇಳಿದರು. ನಮ್ಮ ಕುಟುಂಬಕ್ಕೆ ಸಂಬಂಧಿಸಿದ ರಸ್ತೆ ಜಾಗದ ವಿಷಯಕ್ಕೆ ಈ ಹಿಂದೆ ಮಾತುಕತೆ ನಡೆದಿತ್ತು. ಈ ವ್ಯಕ್ತಿ ಮಧ್ಯ ಬಂದು ಜಗಳ ಮಾಡಿದ್ದರು. ನಾನು ಕರ್ತವ್ಯ ಮುಗಿಸಿಕೊಂಡು ಬರುವಾಗ ಈ ಘಟನೆ ನಡೆದಿದ್ದು, ಅವರ ವರ್ತನೆಯಿಂದ ವಕೀಲರ ಸಮುದಾಯಕ್ಕೆ ಅವಮಾನವಾಗಿದೆ. ಈ ಘಟನೆ ಅತೀವ ನೋವುಂಟು ಮಾಡಿದ್ದಲ್ಲದೇ ಕೆಟ್ಟಪದಗಳನ್ನು ಬಳಸಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಇದರಿಂದ ನನ್ನ ಮಾನನಷ್ಟವಾಗಿದೆ. ಕೂಡಲೇ ರಾಘವೇಂದ್ರ ಗಾಣಿಗ ಸಾರ್ವಜನಿಕವಾಗಿ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದರು. ಈ ಕುರಿತು ದೂರು ನೀಡಿದ್ದರೂ ಪೊಲೀಸರು ಎಫ್ಐಆರ್ ಮಾಡುತ್ತಿಲ್ಲ ಎಂದು ಅವರು ಆರೋಪಿಸಿದ್ದಾರೆ. ಅಲ್ಲದೇ ಈ ಬಗ್ಗೆ ಶಾಸಕರಿಗೆ, ವಕೀಲರ ಸಂಘಕ್ಕೂ ಕೂಡ ದೂರು ನೀಡಲಾಗಿದೆ ಎಂದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ದಿ। ಜಯರಾಮ ಶೆಟ್ಟ್ರ ಸ್ಮರಣಾರ್ಥ ಮಕ್ಕಳು, ಬೊಗ್ರಬೆಟ್ಟು ಹೌಸ್, ಒಕ್ಕಾಡಿಗೋಳಿ – ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.
2. ಶಶಿಕಲಾ ಜಯರಾಮ ಆಚಾರ್ಯ, ಬೈಲು ಬೀಡಿನ ಬಳಿ, ಕೊಳಂಬೆ – ಕಿನ್ನಿಕಂಬಳ ಭಜನಾ ಮಂದಿರ ವಠಾರ.
3. ಹರೀಶ್ ಪೂಜಾರಿ, ಶ್ರೀ ಮಂತ್ರದೇವತೆ ಕ್ಷೇತ್ರ ಉಳ್ಳಂಜೆ, ಕಟೀಲು.
4. ದಿ। ವಾರಿಜಾಕ್ಷಿ ಈಶ್ವರ ಆಚಾರ್ಯ ಸ್ಮರಣಾರ್ಥ ಮಕ್ಕಳು, 'ಗಾಯತ್ರಿ ಶ್ರೀ', ಕಟೀಲು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
5. ಲಕ್ಷ್ಮಣ ಭಂಡಾರಿ, ಗುಡ್ಡೆಹೌಸ್, ಅತ್ತೂರು, ಕೆಮ್ರಾಲ್ ವಯಾ ಪಕ್ಷಿಕೆರೆ, ಹಳೆಯಂಗಡಿ.
6. ದಯಾನಂದ ಶೆಟ್ಟಿ, 'ಮಾತೃ ಛಾಯ', ತಾಳಿಪಾಡಿ ಹೌಸ್, ಮಲ್ಲಿ ಲೇಔಟ್, ಗಾಂಧಿನಗರ, ಕಾವೂರು.
7. ದಿ। ಮಹಾಬಲ ಶೆಟ್ಟ್ರ ಸ್ಮರಣಾರ್ಥ ಕಸ್ತೂರಿ ಎಂ. ಶೆಟ್ಟಿ ಮತ್ತು ಮಕ್ಕಳು – ಕಾವೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ವಠಾರ..

ಶ್ರೀ ಧರ್ಮಸ್ಥಳ ಮೇಳ
ಕಾವಡಿಯಲ್ಲಿ
ಶ್ರೀ ರವೀಂದ್ರ ಶೆಟ್ಟಿ, ಸಿರಿಮನಿ ಹೌಸ್, ಕಾವಡಿ

ಶ್ರೀ ಸಾಲಿಗ್ರಾಮ ಮೇಳ
ಹೊಸಕೊಪ್ಪ ಕೋಟೀಶ್ವರ ದೇವಸ್ಥಾನದಲ್ಲಿ
ವೀರ ಬರ್ಬರೀಕ-ತರಣಸೇನ

ಶ್ರೀ ಪೆರ್ಡೂರು ಮೇಳ
ಯಲ್ಲಾಪುರದಲ್ಲಿ

ಶ್ರೀ ಹನುಮಗಿರಿ ಮೇಳ
ಮೂಡುಬಿದಿರೆಯಲ್ಲಿ

ಶ್ರೀ ಪಾವಂಜೆ ಮೇಳ
ಯಲ್ಲಾರಗದ್ದೆ ಆನೆಕೋಡು ಗ್ರಾಮ, ಯಲ್ಲಾಪುರ ತಾಲೂಕುನಲ್ಲಿ -**ಶ್ರೀ ದೇವಿ ಮಹಾತ್ಮೆ**



ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಸಂರಕ್ಷಣಾ ಸಮಿತಿಯ ವತಿಯಿಂದ ದೇವಾಲಯಕ್ಕೆ ಅಕ್ಕಿ ಹಾಗೂ ಇನ್ನಿತರ ಸುವಸ್ತುಗಳನ್ನು ಅನ್ನದಾನಕ್ಕಾಗಿ ಆಡಳಿತ ಕಚೇರಿಯಲ್ಲಿ ಸಮರ್ಪಣೆ ಮಾಡಲಾಯಿತು. ಸಮಿತಿಯ ವಾರ್ಷಿಕದ ಹಿನ್ನಲೆಯಲ್ಲಿ ದೇವರಿಗೆ ಮಹಾಪೂಜೆ, ಗಣಪತಿಗೆ ರಂಗಪೂಜೆ, ಸುಬ್ರಹ್ಮಣ್ಯ ಸ್ವಾಮಿಗೆ ಪೂಜೆ, ದೇವಿಗೆ ಪೂಜೆ, ರಕ್ತೇಶ್ವರಿ ಗುಡಿಯಲ್ಲಿ ತಂಬಿಲ, ಪ್ರಧಾನ ದೈವಗಳಿಗೆ ತಂಬಿಲ ಮಾಡಲಾಯಿತು.

ಇಂದು ಪುತ್ತೂರು ತಾಲೂಕಿನ ವಿವಿಧೆಡೆ ವಿದ್ಯುತ್ ನಿಲುಗಡೆ

ಪುತ್ತೂರು: ರಸ್ತೆ ಅಗಲೀಕರಣ ಕಾಮಗಾರಿ ನಿಮಿತ್ತ ಮೆಸ್ಕಾಂ 110/33/11 ಕೆ.ವಿ. ಪುತ್ತೂರು ವಿದ್ಯುತ್ ಉಪಕೇಂದ್ರದಿಂದ ಹೊರಡುವ ದರ್ಬೆ, ಪುತ್ತೂರು ಟೌನ್ ಓಲ್ಡ್, ಕೆಮ್ಮಾಯಿ ಮತ್ತು ವಾಟರ್ ಸಪ್ಲೈ ಫೀಡರ್‌ನಲ್ಲಿ ಮೇ 12ರಂದು ಮಂಗಳವಾರ ಪೂರ್ವಾಹ್ನ 10ರಿಂದ ಅಪರಾಹ್ನ 5.30 ಗಂಟೆಯವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುವುದು.

ಆದುದರಿಂದ, 110/33/11 ಕೆ.ವಿ. ಪುತ್ತೂರು ವಿದ್ಯುತ್ ಉಪಕೇಂದ್ರದಿಂದ ಹೊರಡುವ ಫೀಡರ್‌ನಿಂದ ವಿದ್ಯುತ್ ಸರಬರಾಜಾಗುವ ಕೆಎಸ್ಆರ್‌ಟಿಸಿ, ಟ್ಯಾಕ್ಸಿ ಸ್ಟಾಂಡ್, ದೇವಣ್ಣ ಕಿಣಿ ಬಿಲ್ಡಿಂಗ್, ರೂಪಾ ಕಾಂಪ್ಲೆಕ್ಸ್, ಅಕ್ಷಯ ಮೋಟಾರ್ಸ್, ಸಿಟಿ ಸೆಂಟರ್, ಕಲ್ಲಾರೆ, ದರ್ಬೆ ಸರ್ಕಲ್, ಅಶ್ವಿನಿ ಹೋಟೆಲ್, ಬೀರಮಲೆ, ಮಕ್ಕಳ ಮಂಟಪ, ಹನುಮಾನ್ ಮಿಲ್, ಐಬಿ, ಸಿಟಿಬಿ ರೋಡ್, ಎ.ಪಿ.ಎಂ.ಸಿ. ರೋಡ್, ಸಾಮೆತ್ತಡ್ಕ, ಎಂ.ಟಿ. ರೋಡ್, ಚಿಕ್ಕಪುತ್ತೂರು, ಮಡಿವಾಳಕಟ್ಟೆ, ಕೋರ್ಟ್ ರೋಡ್, ಮಿನಿ ವಿಧಾನ ಸೌಧ, ಚೇತನಾ ಹಾಸ್ಪಿಟಲ್, ಪರ್ಲಡ್ಕ, ಬೈಪಾಸ್, ಗೋಳಿಕಟ್ಟೆ, ಕುಂಜೂರು ದೇವಸ್ಥಾನ, ತೆಂಕಿಲ, ಬಪ್ಪಳಿಗೆ, ಬಾಲವನ, ಉರ್ಲಾಂಡಿ, ಸರಕಾರಿ ಆಸ್ಪತ್ರೆ, ಕರ್ಮಲ, ಬೊಳುವಾರು, ಬೀರ್ನಹಿತ್ಲು, ಚಿಕ್ಕಮುಡ್ನೂರು, ಕೆಮ್ಮಾಯಿ ಮಹಾವಿಷ್ಣು ದೇವಸ್ಥಾನ, ಬಡಾವು, ಸಾಲ್ಮರ ಮತ್ತು ನೆಕ್ಕಿಲಾಡಿ ನೀರು ಸರಬರಾಜು ಘಟಕ ಪರಿಸರದ ವಿದ್ಯುತ್ ಬಳಕೆದಾರರು ಗಮನಿಸಿ ಸಹಕರಿಸಿವಂತೆ ಕೋರಲಾಗಿದೆ.

ಬೊಳುವಾರಿನಲ್ಲಿ ಕಾಮಗಾರಿ

ನಗರದ ಬೊಳುವಾರು ಎಂಬಲ್ಲಿ ರಸ್ತೆ ಅಗಲೀಕರಣ ಕಾಮಗಾರಿ ನಿಮಿತ್ತ ವಿದ್ಯುತ್ ಮಾರ್ಗದ ಸ್ಥಳಾಂತರ ಕಾಮಗಾರಿ ಇರುವುದರಿಂದ ಮೇ 12 ರಂದು ಮಂಗಳವಾರ ಪೂರ್ವಾಹ್ನ 10 ರಿಂದ ಸಾಯಂಕಾಲ 5.30ರವರೆಗೆ ಪುತ್ತೂರು–ಕಡಬ–ಸುಬ್ರಹ್ಮಣ್ಯ ಹಾಗೂ 33 ಕೆ.ವಿ. ಪುತ್ತೂರು–ಸವಣೂರು –ನೆಲ್ಯಾಡಿ ವಿದ್ಯುತ್ ಮಾರ್ಗದ ವಿದ್ಯುತ್ ನಿಲುಗಡೆ ಮಾಡಲಾಗುವುದು. ಆದ್ದರಿಂದ 33/11ಕೆ.ವಿ. ಕಡಬ ವಿದ್ಯುತ್ ಉಪಕೇಂದ್ರ, 33/11 ಕೆ.ವಿ. ನೆಲ್ಯಾಡಿ ವಿದ್ಯುತ್ ಉಪಕೇಂದ್ರ ಹಾಗೂ 33/11 ಕೆ.ವಿ. ಸವಣೂರು ವಿದ್ಯುತ್ ಉಪಕೇಂದ್ರದಿಂದ ಹೊರಡುವ ಎಲ್ಲಾ 11 ಕೆ.ವಿ. ಫೀಡರ್‌ಗಳಿಂದ ವಿದ್ಯುತ್ ಸರಬರಾಜಾಗುವ ವಿದ್ಯುತ್ ಬಳಕೆದಾರರು, ಹಾಗೂ 33/11 ಕೆ.ವಿ. ಬಿಂದು ವಿದ್ಯುತ್ ಉಪಕೇಂದ್ರದವರು ಗಮನಿಸಿ ಸಹಕರಿಸುವಂತೆ ಮೆಸ್ಕಾಂ ಪ್ರಕಟನೆ ವಿನಂತಿಸಿದೆ.

ಬಂಟ್ವಾಳ | ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಗೆ ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ತಾಕೀತು

ನೀರು ಪೂರೈಕೆಗೆ ಪ್ರಥಮ ಆದ್ಯತೆ ನೀಡಿ

ಬಂಟ್ವಾಳ: ತಾಲೂಕಿನಲ್ಲಿ ಕುಡಿಯುವ ನೀರು ಪೂರೈಕೆಯನ್ನು ಪ್ರಥಮ ಆದ್ಯತೆಯ ನೆಲೆಯಲ್ಲಿ ಮಾಡಬೇಕು, ಯಾವುದೇ ತಾಂತ್ರಿಕ ಸಮಸ್ಯೆಗಳಿದ್ದಲ್ಲಿ ಸಂವಹನ ನಡೆಸಿ ಬಗೆಹರಿಸಿಕೊಂಡು ಕ್ರಮ ಕೈಗೊಳ್ಳುವಂತೆ ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪಾಡಿ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಸೋಮವಾರ ಬಂಟ್ವಾಳ ತಾ.ಪಂ.ನ ಎಸ್‌ಜಿಎಸ್‌ವೈ ಸಭಾಂಗಣದಲ್ಲಿ ಕ್ಷೇತ್ರದ ವ್ಯಾಪ್ತಿಯಗ್ರಾ.ಪಂ.ವ್ಯಾಪ್ತಿಯಲ್ಲಿ ತುರ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ಪರೀಶಿಲನಾ ಸಭೆಯ ಅಧ್ಯಕ್ಷತೆ ವಹಿಸಿ ಶಾಸಕರು ಮಾತನಾಡಿದರು.

ಕುಡಿಯುವ ನೀರಿನ ವಿಚಾರದಲ್ಲಿ ಯಾವುದೇ ರೀತಿಯ ಉದಾಸೀನ ತೋರದೆ ಕಾರ್ಯ ಪ್ರವೃತ್ತರಾಗಬೇಕಲ್ಲದೆ ಜಲಜೀವನ್ ಮಿಷನ್, ಬಹುಗ್ರಾಮ ಯೋಜನೆ ಸಮಸ್ಯೆಯಿಂದ ನೀರಿನ ಲಭ್ಯತೆಯಲ್ಲಿ ಉಂಟಾಗಿರುವ ಅಡಚಣೆ ಕುರಿತು ವರದಿ ನೀಡುವಂತೆಯೂ ಅಧಿಕಾರಿಗಳಿಗೆ ಶಾಸಕರು ಸೂಚಿಸಿದರು.



ತಾಲೂಕಿನ ಪ್ರತಿಯೊಂದು ಗ್ರಾಮಾಡಳಿತ ಅಧಿಕಾರಿಗಳೊಂದಿಗೆ ಸಂವಹನ ನಡೆಸಿದ ಶಾಸಕರು, ನೀರಿನ ವಿಚಾರದಲ್ಲಿ ಯಾವುದೇ ಕೊರತೆಯಾಗದಂತೆ ಹಾಗೂ ಲಭ್ಯ ಅನುದಾನ ಬಳಸಿಕೊಂಡು ತುರ್ತು ಕಾರ್ಯವನ್ನು ಮಾಡಬೇಕು ಎಂದು ತಿಳಿಸಿದರು. ಬಂಟ್ವಾಳ ತಹಸೀಲ್ದಾರ್ ಮಂಜುನಾಥ್, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಸಚಿನ್ ಕುಮಾರ್, ಗ್ರಾಪಂ ಆಡಳಿತಾಧಿಕಾರಿಗಳು, ವಿವಿಧ ಇಲಾಖಾಧಿ ಕಾರಿಗಳು ಆಗಮಿಸಿ ಪೂರಕ ಮಾಹಿತಿ ನೀಡಿದರು.

ಒಡೆದ ಪೈಪ್‌ಲೈನ್‌ಗಳು

ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯಿಂದಾಗಿ ಪೈಪ್‌ಲೈನ್‌ಗಳು ಒಡೆದು ಗೋಳ್ತಮಜಲು, ಬಾಳ್ತಿಲ ಸಹಿತ ಕೆಲವುಗ್ರಾ.ಪಂ.ವ್ಯಾಪ್ತಿಯಲ್ಲಿಕುಡಿಯುವ ನೀರಿಗೆ ತೊಂದರೆಯಾಗಿದೆ ಎಂದು ಪಿಡಿಒಗಳು ಶಾಸಕರ ಗಮನಕ್ಕೆ ತಂದರು. ಈ ಬಗ್ಗೆ ಹೆದ್ದಾರಿ ಇಲಾಖಾಧಿಕಾರಿಗಳನ್ನು ಕರೆಸಿ ಸಭೆ ನಡಿಸಿ ಪರಿಹಾರ ಕಂಡುಕೊಳ್ಳಲಾಗುವುದು ಎಂದು ಶಾಸಕ ರಾಜೇಶ್ ನ್ಯಾಕ್ ತಿಳಿಸಿದರಲ್ಲದೆ ಉಳಿದಂತೆ ಸಮಸ್ಯೆಗಳಿದ್ದರೆ ಜಲಜೀವನ್ ಮಿಷನ್ ಮತ್ತು ಮೆಸ್ಕಾಂ ಅಧಿಕಾರಿಗಳು ಹಾಗೂ ಇಒ ಅವರು ತಹಸೀಲ್ದಾರ್ ನೇತೃತ್ವದಲ್ಲಿ ಸಭೆ ನಡೆಸಿ ಪರಿಹಾರ ಕಂಡುಕೊಳ್ಳುವಂತೆ ಸೂಚಿಸಿದರು.

ಮುಂಜಾಗ್ರತಾ ಕ್ರಮ ಕೈಗೊಳ್ಳಿ

ಮಳೆಗಾಲವು ನಮ್ಮ ಮುಂದಿದ್ದು, ಅಪಾಯಕಾರಿ ಮರ, ಗೆಲ್ಲುಗಳ ತೆರವು, ನೀರು ಹರಿಯುವ ತೋಡಿನ ಹೂಳು ಎತ್ತವುದು, ಸ್ವಚ್ಛತೆಯ ಬಗ್ಗೆಯೂ ಈಗಿಂದೀಗಲೇ ಕ್ರಮ ಕೈಗೊಳುವುದು ಸೇರಿದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಮುಂದಾಗುವಂತೆ ಶಾಸಕರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಶಾಲೆ, ಅಂಗನವಾಡಿಗಳಿಗೆ ರಜೆ ಇರುವುದರಿಂದ ಅವುಗಳ ಸಣ್ಣಪುಟ್ಟ ದುರಸ್ತಿ, ನೀರಿನ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸಿಡುವಂತೆ ತಾ.ಪಂ. ಕಾರ್ಯ ನಿರ್ವಹಣಾಧಿಕಾರಿ ಸಚ್ಚಿನ್ ಕುಮಾರ್ ಸೂಚಿಸಿದರು.

ಜಕ್ರಿಬೆಟ್ಟಿನಿಂದ ಸಂಗಬೆಟ್ಟುವಿಗೆ ನೀರು

ಪುರಸಭಾ ವ್ಯಾಪ್ತಿಯ ಜಕ್ರಿಬೆಟ್ಟುವಿನಲ್ಲಿ ಡ್ಯಾಂ ನಿರ್ಮಾಣವಾದ ಬಳಿಕ ನಗರ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಿಗೆ ಕುಡಿಯುವ ನೀರಿಗೆ ಸಮಸ್ಯೆ ಇಲ್ಲ, ಬಂಟ್ವಾಳದಿಂದಲೇ ಮಂಗಳೂರು, ಉಳ್ಳಾಲದ ಜನತೆಗೂ ಅಗತ್ತ ಬಿದ್ದಲ್ಲಿ ಇಲ್ಲಿಂದನೀರುಪೂರೈಕೆಮಾಡಲಾಗುತ್ತಿದೆ. ಹಿಂದೆಲ್ಲಾ ನೀರಿಗಾಗಿ ಸಮಸ್ಯೆ ಇದ್ದುದನ್ನು ನೆನಪಿಸಿದ ಶಾಸಕರು, ಸಂಗಬೆಟ್ಟು ವ್ಯಾಪ್ತಿಯ ಕೆಲ ಭಾಗಗಳಿಗೆ ಹೊರತು ಪಡಿಸಿದರೆ ನೀರಿನ ಸಮಸ್ಯೆ ಕಡಿಮೆ ಇದ್ದು,ಪ್ರಸ್ತುತ ವಿತರಣಾ ವ್ಯವಸ್ಥೆಯನ್ನು ಬಲಪಡಿಸಬೇಕಾಗಿದೆ ಎಂದರು.

ಜಕ್ರಿಬೆಟ್ಟು ಡ್ಯಾಂನಿಂದ ನೀರಿನ ಸಮಸ್ಯೆ ಇರುವ ಸಂಗಬೆಟ್ಟು ವ್ಯಾಪ್ತಿಯ ಕೆಲ ಭಾಗಗಳಿಗೆ ನೀರು ಪೂರೈಸುವ ನಿಟ್ಟಿನಲ್ಲಿ ಸಾಧ್ಯತೆಯನ್ನು ಪರಿಶೀಲಿಸಿ ಯೋಜನೆ ರೂಪಿಸಿ ಪ್ರಸ್ತಾವನೆ ಸಲ್ಲಿಸುವಂತೆ ಇಂಜಿನಿಯರ್‌ಗಳಿಗೆ ಶಾಸಕರು ಸೂಚಿಸಿದರು. ಫಲ್ಗುಣಿ ನದಿಯಲ್ಲಿನೀರು ಬತ್ತಿ ಹೋಗಿದ್ದರಿಂದ ಸಂಗಬೆಟ್ಟು ಪರಿಸರದ ಕೆಲ ಭಾಗದಲ್ಲಿ ನೀರಿನ ಸಮಸ್ಯೆಯಿರುವುದನ್ನು ಸಭೆಯ ಗಮನಸೆಳೆಯಲಾಯಿತು. ಇದಕ್ಕೆ ಪ್ರತಿಕ್ರಿಯಿಸಿದ ಶಾಸಕರು, ವಿದ್ಯುತ್ ಉತ್ಪಾದನಾ ಘಟಕದಿಂದಾಗಿ ನೀರಿನ ಲಭ್ಯತೆ ಕಡಿಮೆಯಾಗಿದೆ. ಇಂತಹ ಸಂದರ್ಭದಲ್ಲಿ ಈ ಘಟಕಗಳಿಗೆ ಅವಕಾಶ ನೀಡಬಾರದೆಂಬ ನಿಯಮ ಇದೆ. ಈ ಹಿಂದೆ ನೀರು ಬತ್ತಿಹೋದಾಗ ಜನರಿಗೆ ಟ್ಯಾಂಕರ್ ಮೂಲಕ ನೀರು ಪೂರೈಸಿದ್ದೆ. ಆಗಲೂ ವಿದ್ಯುತ್ ಘಟಕದ ವಿರುದ್ಧ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಕನಿಷ್ಠ ಅವರಿಗೆ ನೋಟೀಸು ಕೂಡ ಜಾರಿ ಮಾಡಿರಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕೇಪು ವಸತಿ ಶಾಲೆ ನೀರಿನ ಸಮಸ್ಯೆ ಎದುರಿಸುತ್ತಿರುವ ಬಗ್ಗೆ ಪಿಡಿಒ ಅವರು ಸಭೆಯ ಗಮನಸೆಳೆದರು. ಬದಲಿ ವ್ಯವಸ್ಥೆ ಕಲ್ಪಿಸುವಂತೆ ಶಾಸಕರು ಸೂಚಿಸಿದರು. ವಿವಿಧ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿಗಳು ಸಮಸ್ಯೆಗಳ ಕುರಿತು ಗಮನ ಸೆಳೆದರು. ಗ್ರಾ.ಪಂ.ಗಳ ಆಡಳಿತಾಧಿಕಾರಿಗಳು ಹಾಜರಿದ್ದರು.

ಸಾಲಿಗ್ರಾಮ ದೇವಸ್ಥಾನದ ಜ್ಞಾನ ಮಂದಿರದಲ್ಲಿ ವಸಂತ ವೇದ ಶಿಬಿರದ ಸಮಾರೋಪ



ಕೋಟ: ಸಾಲಿಗ್ರಾಮ ಶ್ರೀ ಗುರು ನರಸಿಂಹದೇವಸ್ಥಾನದಜ್ಞಾನಮಂದಿರದಲ್ಲಿ ವಸಂತ ವೇದ ಶಿಬಿರದ ಸಮಾರೋಪ ಕಾರ್ಯಕ್ರಮ ಇತ್ತೀಚೆಗೆ ಜರಗಿತು.

ಕಾರ್ಯಕ್ರಮದಲ್ಲಿ ಶ್ರೀ ಗುರು ನರಸಿಂಹ ದೇವಸ್ಥಾನದ ಅಧ್ಯಕ್ಷ ಪ್ರಕಾಶ ಕಾರಂತ ಮಾತನಾಡಿ ನಮ್ಮ ಆಚಾರ, ವಿಚಾರ, ಸಂಸ್ಕೃ ತಿ ಹಾಗೂ ಸಂಸ್ಕಾರಯುತ ಬದುಕಿಗೆ ಶ್ರೀ ದೇವಳದ ವತಿಯಿಂದ ಮೂರು ವಾರಗಳ ನಡೆದ ವಸಂತ ವೇದ ಶಿಬಿರ ಅತ್ಯಂತ ಯಶಸ್ವೀಯಾಗಿ ಜರಗಿದೆ ಎಂದು ದೇಗುಲದ ಪರವಾಗಿ ಕೃತಜ್ಞತೆ ಸಲ್ಲಿಸಿದರು.

ಶಿಬಿರಾರ್ಥಿಗಳ ವೇದ ಘೋಷದಿಂದ ಆರಂಭಗೊಂಡ ಸಮಾರಂಭದಲ್ಲಿ ಶಿಬಿರದ ಸಂಕ್ಷಿಪ್ತ ವರದಿಯನ್ನು ದೇವಸ್ಥಾನದ ಆಡಳಿತ ಮಂಡಳಿಯ ಉಪಾಧ್ಯಕ್ಷ ಸಿ. ಚಂದ್ರಶೇಖರ ಉಪಾಧ್ಯ ಮಂಡಿಸಿದರು.

ಸಹ ಪ್ರಬಂಧಕ ಗಣೇಶ ಭಟ್ಟ ಶಿಬಿರಾರ್ಥಿಗಳಿಗೆ ಬಹುಮಾನ ಮತ್ತು ಪ್ರಮಾಣ ಪತ್ರ ಪಟ್ಟಿ ವಾಚಿಸಿದರು. ಕೂ.ಮ.ಜ ಕೇಂದ್ರ ಸಂಸ್ಥೆಯ ಅಧ್ಯಕ್ಷ ಹೆಚ್. ಸತೀಶ ಹಂದೆ ಅಧ್ಯಕ್ಷತೆಯಲ್ಲಿ ವಹಿಸಿದ್ದರು.

ವೇದಿಕೆಯಲ್ಲಿ ಆಡಳಿತ ಮಂಡಳಿಯ ಪೂರ್ವ ಅಧ್ಯಕ್ಷ ಎ.ಜಗದೀಶ ಕಾರಂತ, ಉದ್ಯಮಿ ರಘುನಾಥ ಸೋಮಯಾಜಿ, ದೇವಸ್ಥಾನದ ಆಡಳಿತ ಮಂಡಳಿಯ ಸದಸ್ಯರಾದ ಕೆ.ತಾರಾನಾಥ ಹೊಳ್ಳ, ಚಂದ್ರಶೇಖರ ನಾವಡ, ಪ್ರಸನ್ನ ತುಂಗ,ಸಾಲಿಗ್ರಾಮ ಅಂಗಸಂಸ್ಥೆಯ ಕಾರ್ಯದರ್ಶಿ ಮಹಾಬಲ ಹೇರ್ಳೆ ಮುಂತಾದವರು ಉಪಸ್ಥಿತರಿದ್ದರು. ನಿಗಮಾಗಮ ಶಾಲೆಯ ಅಧ್ಯಾಪಕ ವಾದಿರಾಜ ಐತಾಳ ಸಹಕರಿಸಿದರು. ವೇದಿಕೆಯಲ್ಲಿದ್ದ ಗಣ್ಯರು ಶ್ರೀ ಗುರು ನರಸಿಂಹ ದೇವಳದ ಶ್ರೀ ಗುರು ನರಸಿಂಹ ನಿಗಮಾಗಮ ವೇದಪಾಠ ಶಾಲೆಯಲ್ಲಿ ಐದು ವರ್ಷಗಳ ಕಾಲ ಋಗ್ವೇದ ವೇದ ಅಧ್ಯಯನವನ್ನು ಮತ್ತು ಸಂಸ್ಕೃತ ಪಾಠವನ್ನು ಕಲಿತು ಪೂರ್ಣಗೊಳಿಸಿದ ಶ್ರೀವತ್ಸ, ಶ್ರೀಕಾಂತ ಹಾಗೂ ವರುಣ ಇವರುಗಳನ್ನು ಸನ್ಮಾನಿಸಲಾಯಿತು. ದಾನಿ ಸುಧೀಂದ್ರ, ಬೆಂಗಳೂರು ಇವರನ್ನು ಗುರುತಿಸಲಾಯಿತು. ದೇವಸ್ಥಾನದ ಆಡಳಿತ ಮಂಡಳಿಯ ಕಾರ್ಯದರ್ಶಿ ಪರಶುರಾಮ ಭಟ್ಟ ವಂದನಾರ್ಪಣೆ ಮತ್ತು ಸಾಮೂಹಿಕ ಐಕ್ಯ ಮಂತ್ರ ಪಠಣದೊಂದಿಗೆ ಸಂಪನ್ನಗೊಂಡ ಕಾರ್ಯಕ್ರಮದ ನಿರ್ವಹಣೆಯನ್ನು ಸಹಾಯಕ ಸಿಬ್ಬಂದಿ ಅಖಿಲೇಶ ಐತಾಳ ಗೈದರು.

ಮಕ್ಕಳ ರಂಗತರಬೇತಿ ಶಿಬಿರ | ನಾಟಕ ಪ್ರದರ್ಶನ

ಮಕ್ಕಳನ್ನು ರಂಗಭೂಮಿಯಲ್ಲಿ ತೊಡಗಿಸಿ

ಬೈಂದೂರು: ಅವಸರದಬದುಕಿನಲ್ಲಿ ಇಂದು ನಾವು ಕಲೆ, ಸಾಹಿತ್ಯ, ಸಂಗೀತ ಮೊದಲಾದುವನ್ನು ಮರೆಯುತ್ತಿದ್ದೇವೆ. ರಂಗಭೂಮಿಯಲ್ಲಿ ತಮ್ಮ ಮಕ್ಕಳನ್ನು ತೊಡಗಿಸಲು ಹೆತ್ತವರು ಹಿಂದೇಟು ಹಾಕುತ್ತಿದ್ದು, ಅಂಕ ತೆಗೆಯುವ ಯಂತ್ರವನ್ನಾಗಿ ರೂಪಿಸುತ್ತಿದ್ದಾರೆ. ಜೀವನದ ಒತ್ತಡ, ಗೊಂದಲಗಳನ್ನುಕಡಿಮೆ ಮಾಡಿಕೊಳ್ಳಲು ನಾಟಕ, ಸಂಗೀತ, ಯಕ್ಷಗಾನದಂತಹ ಕಲಾಪ್ರಕಾರಗಳು ಸಹಕಾರಿಯಾಗಿವೆ ಎಂದು ಕಂಬದಕೋಣೆಯ ಸಂವೇದನಾ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಸುಬ್ರಹ್ಮಣ್ಯ ಭಟ್ ಹೇಳಿದರು.

ಇಲ್ಲಿನ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲಾ ಮೈದಾನದಲ್ಲಿ ನಡೆದ ರಂಗಸ್ಥಳ ಉಪ್ಪುಂದ ಇದರ 17ನೇ ವಾರ್ಷಿಕೋತ್ಸವ, ದಿ. ಯು. ರಘುರಾಮ ಶೆಟ್ಟಿ ಸಂಸ್ಮರಣೆ ಹಾಗೂ ಮಕ್ಕಳ ರಂಗ ತರಬೇತಿ ಶಿಬಿರದಲ್ಲಿ ರೂಪುಗೊಂಡ ನಾಟಕ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದರು.

ರಂಗಕರ್ಮಿ ಹಾಗೂ ಶಿಬಿರದ ನಿರ್ದೇಶಕ ಸತ್ಯನಾ ಕೊಡೇರಿ ಮಾತನಾಡಿ, ರಂಗಭೂಮಿಕ್ಷೇತ್ರ ಆಗಾದ ಹಿನ್ನೆಲೆಯನ್ನು ಹೊಂದಿದ್ದು, ಸ್ವಕೇಂದ್ರಿತ ಸಮಾಜ ನಿರ್ಮಾಣವಾಗುತ್ತಿರುವ ಕಾಲಘಟ್ಟದಲ್ಲಿ ಗ್ರಾಮೀಣ ಪ್ರದೇಶದಲ್ಲಿ ನಡೆಯುತ್ತಿರುವರಂಗಚಟುವಟಿಕೆಗಳು ಮುಖ್ಯ ಎಂದೆನಿಸಿಕೊಳ್ಳುತ್ತವೆ. ಪ್ರತಿಭಾವಂತರಿಗೆ ರಂಗ ಭೂಮಿಯಲ್ಲಿ ವಿಪುಲ ಅವಕಾಶಗಳಿದ್ದು, ಸದ್ಬಳಕೆ ಮಾಡಿಕೊಳ್ಳುವ ಇಚ್ಛಾಶಕ್ತಿ ಮುಖ್ಯವಾಗಿರುತ್ತದೆ. ಭಾಷೆ, ಉಚ್ಚಾರವನ್ನು ತಿದ್ದುವ, ಮಾತನಾಡುವ ಅವಕಾಶ ಇರುವುದು ರಂಗಭೂಮಿಯಲ್ಲಿ ಮಾತ್ರ. ಪ್ರಾದೇಶಿಕ ಭಾಷಾ ಸೊಗಡನ್ನು ರಂಗಭೂಮಿಯಲ್ಲಿ ಅಳವಡಿಸಿಕೊಂಡರೆ ಸುಲಭವಾಗಿ ಜನರ ಮನಸ್ಸನ್ನು ತಟ್ಟಲು ಸಾಧ್ಯವಿದೆ ಎಂದರು.



ರಂಗಸ್ಥಳ ಅಧ್ಯಕ್ಷ ಯು. ರಾಜಾರಾಮ ಭಟ್ ಅಧ್ಯಕ್ಷತೆ ವಹಿಸಿದ್ದರು. 70–80ರ ದಶಕದ ಸುಮಾರು 12 ಹಿರಿಯ ಕಲಾವಿದರಿಗೆ ರಂಗಭೂಮಿ ಗೌರವ ಸಮರ್ಪಿಸಲಾಯಿತು. ಸಿಎಎ ಅಂತರಾಷ್ಟ್ರೀಯ ಟ್ಯಾಲೆಂಟ್ ಹಂಟ್ 2025ರ ಚಿನ್ನದ ಪದಕ ವಿಜೇತ ಹಾಗೂ 2026ರ ಕಲಾಮಿತ್ರ ಪ್ರಶಸ್ತಿ ಪುರಸ್ಕೃತ ಕಲಾವಿದ ಉಪ್ಪುಂದ ಮಂಜುನಾಥ ಮಯ್ಯ ಇವರನ್ನು ಸನ್ಮಾನಿಸಲಾಯಿತು.

ಹಿರಿಯ ರಂಗಕರ್ಮಿ ಬಿ. ಗಣೇಶ ಕಾರಂತ್, ಧಾರವಾಡ ಉದ್ಯಮಿ ಯು. ಪ್ರಶಾಂತ ಶೆಟ್ಟಿ, ವಿಶ್ವನಾಥ ಶೆಟ್ಟಿ ಸಹೋದರರು, ಶಾಲಾ ಮುಖ್ಯಶಿಕ್ಷಕ ಸುಧಾಕರ ದೇವಾಡಿಗ ಇದ್ದರು. ಸಂಸ್ಥೆಯ ಉಪಾಧ್ಯಕ್ಷ ಸ್ವಾಗತಿಸಿ, ಗೌರವಾಧ್ಯಕ್ಷ ರಾಮಕೃಷ್ಣ ದೇವಾಡಿಗ ನಿರೂಪಿಸಿದರು. ನಂತರ ಮಕ್ಕಳ ರಂಗ ತರಬೇತಿ ಶಿಬಿರದಲ್ಲಿ ರೂಪುಗೊಂಡ ಕುಪ್ಪಳ್ಳಿ ತಿಪ್ಪೇರಾಯ ನಾಟಕ ಪ್ರದರ್ಶನಗೊಂಡಿತು.

ಮುಲ್ಕಿ ಸಮುದಾಯ ಆರೋಗ್ಯ ಕೇಂದ್ರ ತಾಲೂಕು ಆಸ್ಪತ್ರೆಯಾಗಿ ಮೇಲ್ದರ್ಜೆಗೆ; ಸದನದಲ್ಲಿ ಪ್ರಸ್ತಾಪ : ಶಾಸಕ ಉಮಾನಾಥ ಕೋಟ್ಯಾನ್

ಮುಲ್ಕಿ: ಸಮುದಾಯ ಆರೋಗ್ಯ ಕೇಂದ್ರದಲ್ಲಿ ಆರೋಗ್ಯ ರಕ್ಷಾ ಕಾರ್ಯಕಾರಿ ಸಮಿತಿಯ ಸದಸ್ಯರ ಸಭೆ ಶಾಸಕ ಉಮಾನಾಥ ಕೋಟ್ಯಾನ್ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯಲ್ಲಿ ಶಾಸಕ ಉಮಾನಾಥ ಕೋಟ್ಯಾನ್ ಮಾತನಾಡಿ, ಮುಲ್ಕಿ ಸಮುದಾಯ ಆರೋಗ್ಯ ಕೇಂದ್ರ ಬಡವರಿಗೆ ಉತ್ತಮ ಸ್ಪಂದನೆ ನೀಡುತ್ತಿದೆ, ಸರಕಾರಿ ಆಸ್ಪತ್ರೆ ಎಂಬ ತಾತ್ಸಾರ ಮನೋಭಾವ ಬಿಟ್ಟು ಜನರು ಆಸ್ಪತ್ರೆಯ ಅಭಿವೃದ್ಧಿಗೆ ಸಹಕಾರ ಕೊಡುವುದರ ಜೊತೆಗೆ ಆಸ್ಪತ್ರೆಯ ಸಿಬ್ಬಂದಿಗಳು ಜನರ ಕಷ್ಟಗಳಿಗೆ ಸ್ಪಂದಿಸುವ ಕಾರ್ಯವಾಗಬೇಕು ಎಂದರು.

ಅವರು ಮಾತನಾಡಿ 138 ವರ್ಷಗಳ ಇತಿಹಾಸವಿರುವ ಆರೋಗ್ಯ ಕೇಂದ್ರವನ್ನು ತಾಲೂಕು ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಲು ತಾವು ಪಕ್ಷಾತೀತವಾಗಿ ಪ್ರಯತ್ನಿಸುತ್ತಿರುವುದಾಗಿ ಹಾಗೂ ಈ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡುವುದಾಗಿ ಹೇಳಿದರು.

ಮುಲ್ಕಿ ಸಮುದಾಯ ಆರೋಗ್ಯ ಕೇಂದ್ರದ ವೈದ್ಯರಾದ ಡಾ. ಸುನಿಲ್ ಜತ್ತನ್ನ ಮಾತನಾಡಿ 138 ವರ್ಷಗಳ ಇತಿಹಾಸವಿರುವ ಮುಲ್ಕಿ ಸಮುದಾಯ ಆರೋಗ್ಯ ಕೇಂದ್ರವನ್ನು ತಾಲೂಕು ಆಸ್ಪತ್ರೆಯಾಗಿ ಮೇಲ್ದರ್ಜೆಗೆ ಏರಿಸಬೇಕು, ಆಸ್ಪತ್ರೆಗೆ ಸಿಬ್ಬಂದಿ ಕೊರತೆ, ವಸತಿಗೃಹದ ಬಳಿಯ ಕೊಳವೆಬಾವಿಯಿಂದ ನೀರು ಪೂರೈಕೆಯ ಸಂಪರ್ಕ ವ್ಯವಸ್ಥೆ ಕಲ್ಪಿಸಬೇಕು, ಆಸ್ಪತ್ರೆಗೆ ಸುಣ್ಣ ಬಣ್ಣ ಬಳೆದು ನವೀಕರಣಗೊಳಿಸುವುದು, ದ್ರವ ತ್ಯಾಜ್ಯದ ವಿಲೇವಾರಿಗೆ ಸೂಕ್ತ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವುದು, ವಿದ್ಯುತ್ ಸಂಪರ್ಕದ ವಯರ್ ಗಳು, ಓರಿಯಂಟಲ್ ಟ್ಯಾಂಕ್, ಹಳೆಯದಾಗಿದ್ದು ದುರಸ್ತಿ ಕಾರ್ಯ ನಡೆಸಬೇಕು, ಜೈವಿಕ ವೈದ್ಯಕೀಯ ತ್ಯಾಜ್ಯದ ಶೇಖರಣೆಗಾಗಿ ಹೊಸ ಕೊಠಡಿ ಅಗತ್ಯ, ಆಸ್ಪತ್ರೆಯ ವಾರ್ಡ್ ಗಳಲ್ಲಿ ಮೇಲ್ಛಾವಣಿ ಸೋರಿಕೆಯಾಗುತ್ತಿದ್ದು ದುರಸ್ತಿಗೊಳಿಸಬೇಕು ಎಂಬ ಬೇಡಿಕೆಯನ್ನು ಮಂಡಿಸಿ ಸರ್ವರ ಸಹಕಾರ ಕೋರಿದರು.



ಆರೋಗ್ಯ ರಕ್ಷಾ ಕಾರ್ಯಕಾರಿ ಸಮಿತಿಯ ಸದಸ್ಯರಾದ ಪುತ್ತು ಬಾವ, ಪುಷ್ಪರಾಜ ಕೊಲಕಾಡಿ, ರಮೇಶ್ ಅಮೃತಾನಂದಮಯಿ ನಗರ, ಮುಲ್ಕಿ ನಪಂ ಮಾಜೀ ಅಧ್ಯಕ್ಷರುಗಳಾದ ಸುನಿಲ್ ಆಳ್ವ ,ಸತೀಶ್ ಅಂಚನ್,ಸುಭಾಷ್ ಶೆಟ್ಟಿ, ಮಾಜೀ ಸದಸ್ಯ ಶೈಲೇಶ್ ಕುಮಾರ್, ಮುಲ್ಕಿ ಪೊಲೀಸ್ ಇನ್ಸ್ಪೆಕ್ಟರ್ ಮಂಜುನಾಥ್ ಬಿ ಎಸ್, ವೈದ್ಯರುಗಳಾದ ಡಾ. ಲೆವಿನಾ, ಡಾ. ಕೃಷ್ಣಪ್ರಸಾದ್, ಡಾ. ಜಗದೀಶ್, ಡಾ. ಸಂಗೀತಾ, ಡಾ. ದಿವ್ಯ ರಾವ್,ಡಾ.ವೇಣುಗೋಪಾಲ್, ಮುಕ್ಕ ಆಸ್ಪತ್ರೆಯ ಎಚ್.ಒ.ಡಿ. ಡಾ. ಶ್ರೀ ವಿದ್ಯಾಭಟ್, ಜಿ.ಪಂ.ಇಂಜಿನಿಯರ್ ಪ್ರಶಾಂತ್ ಆಳ್ವ, ತಾ..ಪಂ. ಇ. ಒ. ಗುರುದತ್, ದೈಹಿಕ ಶಿಕ್ಷಣ ಪರಿವೀಕ್ಷಣಾಧಿಕಾರಿ ನಿತಿನ್ ಪುತ್ರನ್, ನರ್ಸಿಂಗ್ ಸ್ಟಾಫ್ ಶಾಂತಿ ಫೆರ್ನಾಂಡೀಸ್, ರಚನಾ ಇಂದ್ರ ಮೀರಾ ಕಾಮತ್ ಮತ್ತಿತರರು ಉಪಸ್ಥಿತರಿದ್ದರು.

- ಮುಲ್ಕಿ ಸಮುದಾಯ ಆರೋಗ್ಯ ಕೇಂದ್ರ ಬಡವರಿಗೆ ಉತ್ತಮ ಸ್ಪಂದನೆ ನೀಡುತ್ತಿದೆ
- 138 ವರ್ಷಗಳ ಇತಿಹಾಸವಿರುವ ಮುಲ್ಕಿ ಸಮುದಾಯ ಆರೋಗ್ಯ ಕೇಂದ್ರವನ್ನು ತಾಲೂಕು ಆಸ್ಪತ್ರೆಯಾಗಿ ಮೇಲ್ದರ್ಜೆಗೆ ಏರಿಸಬೇಕು
- ವಸತಿಗೃಹದ ಬಳಿಯ ಕೊಳವೆ ಬಾವಿಯಿಂದ ನೀರು ಪೂರೈಕೆಯ ಸಂಪರ್ಕ ವ್ಯವಸ್ಥೆ ಕಲ್ಪಿಸಬೇಕು,

ಕಾರ್ಯಕ್ರಮದಲ್ಲಿ ಆಸ್ಪತ್ರೆಯ ಕ್ಷ ಕಿರಣ ವಿಭಾಗದಲ್ಲಿ ನೂತನವಾಗಿ ಅಳವಡಿಸಿರುವ ಸಿ ಆರ್ ಸಿಸ್ಟಮ್ ಹಾಗೂ ದಂತ ಎಕ್ಸ್ ರೇ ಗಳನ್ನು ಶಾಸಕ ಉಮಾನಾಥ ಕೋಟ್ಯಾನ್ ಉದ್ಘಾಟಿಸಿದರು, ದಂತ ವಿಭಾಗದಲ್ಲಿ ಮುಕ್ಕ ಶ್ರೀನಿವಾಸ ಆಸ್ಪತ್ರೆಯ ಸಹಯೋಗದೊಂದಿಗೆ ಎಂಡೋ ಡೆಂಟಿಸ್ಟ್ ಹಾಗೂ ರೂಟ್ ಕ್ಯಾನಲ್ ಟ್ರೀಟ್ಮೆಂಟ್ ಆರಂಭಿಸಲು ತೀರ್ಮಾನಿಸಲಾಯಿತು ಮತ್ತು ಸಮುದಾಯ ಆಸ್ಪತ್ರೆ ಅಭಿವೃದ್ಧಿಗೆ ಸಹಕಾರ ನೀಡಿದ ನಿವೃತ್ತ ತಾ.ಪಂ. ಕಾರ್ಯನಿರ್ವಹಣಾಧಿಕಾರಿ ಕುಸುಮಾಧರ ಅವರನ್ನು ಗೌರವಿಸಲಾಯಿತು.

ಗುತ್ತಿಗಾರು: ಚೆಸ್ ತರಬೇತಿ ಕಾರ್ಯಾಗಾರ ಸಂಪನ್ನ



ಸುಬ್ರಹ್ಮಣ್ಯ: ಅಮರ ತಾಲೂಕು ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್ ಸಹಯೋಗದೊಂದಿಗೆ ಗುತ್ತಿಗಾರು ಗ್ರಾಮ ಪಂಚಾಯತ್ ಸಭಾಭವನದಲ್ಲಿ ಅರಿವು ಕೇಂದ್ರ ಗುತ್ತಿಗಾರು ಗ್ರಾಮ ಪಂಚಾಯತ್, ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರದ ಅಂಗವಾಗಿ ವಿದ್ಯಾರ್ಥಿಗಳಿಗೆ ನಡೆದ ಉಚಿತ ಚೆಸ್ ತರಬೇತಿ ಕಾರ್ಯಗಾರ ಸಮಾಪನಗೊಂಡಿತು.

ಸಮಾರೋಪ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ಆಡಳಿತಾಕಾರಿ ದೇವರಾಜ್ ಮುತ್ಲಾಜೆ, ಪಂಚಾಯತ್ ಪಿಡಿಒ ಅಜಿತ್ ಜಿ.ಕೆ., ಗ್ರಂಥಾಲಯ ಮೇಲ್ವಿಚಾರಕಿ ಅಭಿಲಾಷ ಮೋಟ್ನೂರು, ಅಮರ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಚಂದ್ರಶೇಖರ್ ಕಡೋಡಿ, ಚೆಸ್ ಶಿಕ್ಷಕ ರಮೇಶ್ ಕರಂಗಿಲಡ್ಕ ಉಪಸ್ಥಿತರಿದ್ದರು.

40 ಮಂದಿ ಮಕ್ಕಳು ಶಿಬಿರದ ಸದುಪಯೋಗ ಪಡೆದುಕೊಂಡರು. ಭಾಗವಹಿಸಿದ ಎಲ್ಲಾ ಮಕ್ಕಳಿಗೆ ಸಮಾರೋಪ ಸಮಾರಂಭದಲ್ಲಿ ಪ್ರಮಾಣಪತ್ರ ವಿತರಿಸಲಾಯಿತು.

ಮರಳು ಸಾಗಾಟ: ಲಾರಿ ಚಾಲಕ ಸೆರೆ

ಮಂಜೇಶ್ವರ: ಹೊಳೆಯಿಂದ ಅನಧಿಕೃತವಾಗಿ ಮರಳು ಸಾಗಾಟ ನಡೆಸುತ್ತಿದ್ದ ಲಾರಿಯನ್ನು ಮಂಜೇಶ್ವರ ಪೊಲೀಸರು ವಶಪಡಿಸಿ ಚಾಲಕನನ್ನು ಸೆರೆ ಹಿಡಿದಿದ್ದಾರೆ. ಲಾರಿ ಚಾಲಕ ಮಂಗಳೂರು ಪನೆಲ್ ಪಜೀರ್ ವಂಟೆಮಜಲ್ ನಿವಾಸಿ ರಸಾದ್ (18) ಬಂಧಿತನಾಗಿದ್ದಾನೆ. ಭಾನುವಾರ ವರ್ಕಾಡಿ ಗ್ರಾಮದ ಕೋಣೆಬಯಲು ಎಂಬಲ್ಲಿ ಮಂಜೇಶ್ವರ ಠಾಣಾ ಪೊಲೀಸರು ಮತ್ತು ಉಪ್ಪಳ ಕಂಟ್ರೋಲ್ ರೂಮ್‌ನ ಪೊಲೀಸರು ವಾಹನ ತಪಾಸಣೆ ನಡೆಸುತ್ತಿದ್ದಾಗ ಮರಳು ಹೇರಿಕೊಂಡು ಲಾರಿ ಬಂದಿದ್ದು, ಅದನ್ನು ತಪಾಸಣೆ ನಡೆಸಿದಾಗ ಅಕ್ರಮ ಮರಳು ಸಾಗಾಟ ಪತ್ತೆಯಾಯಿತು.

ಸಾರ್ವಜನಿಕ ಅವಗಾಹನೆಗೆ

ದ.ಕ. ಜಿಲ್ಲಾ, ಬೆಳ್ತಂಗಡಿ ತಾಲೂಕು, ಗರ್ಡಾಡಿ ಗ್ರಾಮದ 1-99/6 ಮಿತ್ತೊಟ್ಟು ಮನೆ ನಿವಾಸಿ ದಿ। ಡಿ. ರಾಜು ಪೂಜಾರಿ ಎಂಬವರ ಪತ್ನಿ, 57 ವರ್ಷ ಪ್ರಾಯದ, **ಯಮುನಾ** ಎಂಬವಳಾದ ನಾನು ತಿಳಿಸುವುದೇನೆಂದರೆ,

ನನ್ನ ಗಂಡನ ಸರಿಯಾದ ಹೆಸರು **ಡಿ. ರಾಜು ಪೂಜಾರಿ (D. RAJU POOJARY)** ಎಂದಾಗಿರುತ್ತದೆ. ಆದರೆ ನನ್ನ ಮತದಾರರ ಗುರುತಿನ ಚೀಟಿಯಲ್ಲಿ ನನ್ನ ಗಂಡನ ಹೆಸರು **ಕೊರಗಪ್ಪ** ಎಂದು ನಮೂದಾಗಿರುತ್ತದೆ.

ಆದರೆ ನನ್ನ ಬೀಡಿ ದಾಖಲೆಗಳಲ್ಲಿ ಹಾಗೂ ನನ್ನ ಭವಿಷ್ಯ ನಿಧಿ ಖಾತೆ ಯಲ್ಲಿ ನನ್ನ ಗಂಡನ ಹೆಸರು **ಕೊರಗಪ್ಪ ಪೂಜಾರಿ ದಿ. (KORAGAPAPPA POOJARY LATE)** ಎಂದು ನಮೂದಾಗಿರುತ್ತದೆ.

ನನ್ನ ಗಂಡನ ಮರಣ ಪ್ರಮಾಣ ಪತ್ರದಲ್ಲಿ **ಡಿ. ರಾಜು (D. RAJU)** ಎಂದು ನಮೂದಾಗಿರುತ್ತದೆ.

ಮೇಲ್ಕಾಣಿಸಿದ ಎಲ್ಲಾ ಹೆಸರುಗಳು ನನ್ನ ಗಂಡನಿಗೆ ಸಂಬಂಧಪಟ್ಟವುಗಳೇ ಆಗಿರುತ್ತವೆ. ಆಧಾರ್‌ಕಾರ್ಡ್ ನಲ್ಲಿರುವಂತೆ ಮುಂದಿನ ನನ್ನ ಎಲ್ಲಾ ವ್ಯವಹಾರಗಳನ್ನು ನಡೆಸುತ್ತೇನೆ ಎಂದು ದಿನಾಂಕ 08-05-2026 ರಂದು ನೋಟರಿ ಕೆ. ಭಾಸ್ಕರ ಹೊಳ್ಳ ಬೆಳ್ತಂಗಡಿ ಎಂಬವರಲ್ಲಿ ಪ್ರಮಾಣೀಕರಿಸಿರುತ್ತೇನೆ.

ಸಾರ್ವಜನಿಕ ಪ್ರಕಟನೆ

ನನ್ನ ಕಕ್ಷಿಗಾರರಾದ ಬಂಟ್ವಾಳ ತಾಲೂಕು ಮೂಡಪಡುಕೋಡಿ ಗ್ರಾಮದ ಬಂಗೇರಕೆರೆ ಎಂಬಲ್ಲಿ ವಾಸಿಸಿಕೊಂಡು ಬರುವ ಉಮೇಶ್ ಇವರ ಪತ್ನಿ ಪ್ರೇಮ ಇವರು ಮೂಡುಪಡುಕೋಡಿ ಗ್ರಾಮದ ಇರ್ವತ್ತೂರು ಗ್ರಾಮ ಪಂಚಾಯತ್ ವ್ಯಾಪ್ತಿಗೆ ಒಳಪಟ್ಟ ಸ.ನಂ.166/1A2-0.64 ಎಕ್ರೆ ಕೃಷಿ ಭೂಮಿ ಮತ್ತು ಮೂಡುಪಡುಕೋಡಿ ಗ್ರಾಮದ ಇರ್ವತ್ತೂರು ಗ್ರಾಮ ಪಂಚಾಯತ್ ವ್ಯಾಪ್ತಿಗೆ ಒಳಪಟ್ಟ ಸ.ನಂ. 166/1AP1(166/1A2)-0.10ಎಕ್ರೆ, ಕೃಷಿಯೇತರ ಭೂಮಿಯನ್ನು ದಿನಾಂಕ 23/05/2006 ರಂದು ಬಂಟ್ವಾಳ ಸ.ರಿ. ಆಫೀಸಿನ 1ನೇ ಪುಸ್ತಕದ ದಸ್ತಾವೇಜು ನಂಬ್ರ BNT-1-00400-2006-07 ಆಗಿ CD No.BNTD12ನೇದ್ದರಲ್ಲಿ ನೋಂದಣಿಯಾದ ಸ್ಥಿರಾಸ್ತಿಯ ದಾನ ಪತ್ರದಂತೆ ಪಡಕೊಂಡಿರುತ್ತಾರೆ. ದಿನಾಂಕ 10/12/1991 ರಂದು ನನ್ನ ಕಕ್ಷಿಗಾರರ ತಾಯಿ ಶ್ರೀಮತಿ ಸೀತು ಹೆಂಗ್ಸುರವರು ಹೆಚ್ಚಿನ ವಿಸ್ತೀರ್ಣವುಳ್ಳ ಮೇಲೆ ಹೇಳಿದ ಭೂಮಿಯನ್ನು ಕೊಡಂಬೆಟ್ಟು ಗ್ರಾಮದ ಶಿವಯ್ಯ ಪೂಜಾರಿ ಇವರ ಮಗ ಚೆನ್ನಪ್ಪ ಪೂಜಾರಿಯವರು ದಿನಾಂಕ 19/11/1984 ರಲ್ಲಿ ಬಂಟ್ವಾಳ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರಿಂದ ಯಥಾರ್ಥಿಸಲ್ಪಟ್ಟ ಜನರಲ್ ಪವರ್ ಆಫ್ ಅಟರ್ನಿ ಮೇರೆಗೆ ಸದ್ರಿಯವನ ಏಜೆಂಟನಾಗಿ ಮೂಡಪಡುಕೋಡಿ ಗ್ರಾಮದ ಚೆನ್ನಯ್ಯ ಪೂಜಾರಿಯವರ ಮಗ ರಾಮ ಪೂಜಾರಿ ಇವರು ಖಂಡಿತ ಕ್ರಯ ದಸ್ತಾವೇಜನ್ನು ಬರೆದುಕೊಟ್ಟಿರುತ್ತಾರೆ. ಸದ್ರಿ ಮೇಲೆ ಹೇಳಿದ ಸಾಮಾನ್ಯ ಅಧಿಕಾರ ಪತ್ರವು ನನ್ನ ಕಕ್ಷಿಗಾರರಿಂದ ಕಳೆದುಹೋಗಿರುತ್ತದೆ. ಆದ್ದರಿಂದ ಸದ್ರಿ ಮೇಲೆ ಹೇಳಿದ ಮೂಲ ಸಾಮಾನ್ಯ ಅಧಿಕಾರ ಪತ್ರವು ಯಾರಿಗಾದರೂ ದೊರಕಿದಲ್ಲಿ ಅಥವಾ ಅದರ ಬಗ್ಗೆ ಯಾವುದಾದರೂ ಕ್ಲೈಮುಗಳು ಇದ್ದಲ್ಲಿ ಅಥವಾ ಮೇಲೆ ಹೇಳಿದ ಭೂಮಿಗೆ ಸಂಬಂಧಪಟ್ಟ ಹಾಗೆ ಯಾವುದೇ ರೀತಿಯ ಕ್ಲೈಮ್‌ಗಳು ಇದ್ದಲ್ಲಿ, ಈ ಕೆಳಗೆ ಕಾಣಿಸಿದ ವಕೀಲರ ವಿಳಾಸಕ್ಕೆ 15 ದಿನ ಒಳಗೆ ತಮ್ಮ ಕ್ಲೈಮ್‌ನ್ನು ಸಲ್ಲಿಸತಕ್ಕದ್ದು. ನಂತರ ಬಂದ ಯಾವುದೇ ಕ್ಲೈಮುಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಈ ಮೂಲಕ ಸಾರ್ವಜನಿಕವಾಗಿ ಪ್ರಕಟನೆಯನ್ನು ಮಾಡಿರುವುದಾಗಿದೆ.

ಸಹಿ/- ಕೆ.ವಿ. ಭಟ್
ಬಿ.ಕಾಂ., ಎಲ್‌ಎಲ್.ಬಿ.
ಸಂಜೀವಿ ಕಾಂಪ್ಲೆಕ್ಸ್, ಸಿವಿಲ್ ಕೋರ್ಟ್ ಎದುರು, ಬಂಟ್ವಾಳ, ದ.ಕ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರವರ ಕಾರ್ಯಾಲಯ,
ಸರ್.ಎಂ. ವಿಶ್ವೇಶ್ವರಯ್ಯ ರಸ್ತೆ, ಧಾರವಾಡ-580001
ಕಛೇರಿ : 0836-2447090, ಇ-ಮೇಲ್ : kwbcen@gmail.com

ಟೆಂಡರ್ ಪ್ರಕಟಣೆ (ಎಲೆಕ್ಟ್ರಾನಿಕ್ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಕಾಮಗಾರಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಅರ್ಹರಿರುವ ಸಂಸ್ಥೆ/ಗುತ್ತಿಗೆದಾರರಿಂದ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ (ದ್ವಿ-ಟೆಂಡರ್ ದಾಖಲೆ ಪದ್ಧತಿಯಲ್ಲಿ) ಟೆಂಡರ್ ಆಹ್ವಾನಿಸಲಾಗಿದೆ. ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:108 ದಿನಾಂಕ : 07-05-2026. ಕಾಮಗಾರಿಯ ಹೆಸರು:-ಅಮೃತ್-2.0 ಯೋಜನೆ ಅಡಿ ಗದಗ-ಬೆಟಗೇರಿ ನಗರಗಳ ನೀರು ಸರಬರಾಜು ವ್ಯವಸ್ಥೆಗೆ ಅಭಿವೃದ್ಧಿ ಕಲ್ಪಿಸುವ ಕಾಮಗಾರಿ ಹಾಗೂ 5 ವರ್ಷಗಳ ನಿರ್ವಹಣೆ ಮತ್ತು ದುರಸ್ತಿ (1 ವರ್ಷದ DLP ಒಳಗೊಂಡು) DBOT ಮಾದರಿಯಲ್ಲಿ (ಇಡುಗಂಟು ಟೆಂಡರ್- ವೇರಿಯೇಷನ್ ಇರುವುದಿಲ್ಲಾ) INDENT NO: KUWSDB/2026-27/WS/WORK_INDENT509. ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡುವುದು ಅಥವಾ ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಚೇರಿಯನ್ನು ಸಂಪರ್ಕಿಸಬಹುದು.

ಸಹಿ/- ಮುಖ್ಯ ಅಭಿಯಂತರರು,
ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/152/2026-27 ಕನನೀಸ ಮತ್ತು ಒಚ ಮಂಡಳಿ, ಧಾರವಾಡ

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಛೇರಿ, ವಿದ್ಯುತ್ ಭವನ, ಗೋಪನಕೊಪ್ಪ, ಹುಬ್ಬಳ್ಳಿ-580023.
E-mail: seepmc.hescom@gmail.com
eepmc1.hescom@gmail.com ; eep3.hescom@gmail.com
website: www.hescom.karnataka.gov.in
CIN No: U31401KA2002SGCO30437

No: HESCOM/SEE(PMC)/EE-P1&P3/AEE-2&3/2026-27/CYS-1385 Date: 11-05-2026

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಮೂಲಕ ಮಾತ್ರ)

ಅಧೀಕ್ಷಕ ಇಂಜನೀಯರ (ವಿ), ಪಿಎಮ್ಸಿ, ನಿಗಮ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರಿಂದ ಪೂರ್ಣ ಗುತ್ತಿಗೆ ಆಧಾರದಡಿಯಲ್ಲಿ ಕೆಳಕಂಡ ಕಾಮಗಾರಿಗೆ ಟೆಂಡರಗಳನ್ನು ಆಹ್ವಾನಿಸಲಾಗಿದೆ.

1) Particulars: 11ಕೆವಿ ವಿದ್ಯುತ್ ಮಾರ್ಗಗಳವಾಹಕ ಬದಲಾವಣೆ ಕಾಮಗಾರಿಗಳು.

Bid indent No for SC Category: HESCOM/2026-27/EL/WORK_INDENT 1120, 1121, 1131, 1149 & 1200 **(5 Packages).**

Bid indent No for ST Category: HESCOM/2026-27/EL/WORK_INDENT 1130 & 1177 **(2 Packages).**

Bid indent No for CAT-II-A: HESCOM/2026-27/EL/WORK_INDENT 1134. 1147 & 1175 **(3 Packages).**

Bid indent No for Others: HESCOM/2026-27/EL/WORK_INDENT 1118, 1119, 1122, 1123, 1124, 1125, 1126, 1127, 1128, 1129, 1132, 1133, 1135, 1136, 1137, 1138, 1139, 1140, 1141, 1142, 1143, 1144, 1145, 1146, 1148, 1176, 1178, 1179, 1180, 1181, 1182, 1183, 1184, 1185, 1186, 1187, 1188, 1189, 1190, 1191, 1192, 1193, 1194, 1195, 1196, 1197, 1198, 1199, 1201, 1202, 1203, 1204, 1205, 1206 & 1207 **(55 Packages).**

2) Particulars: ಹೊಸ 11ಕೆವಿ ವಿದ್ಯುತ್ ಮಾರ್ಗಗಳ ನಿರ್ಮಾಣ

Bid indent No for SC Category: HESCOM/2026-27/EL/WORK_INDENT 1161 **(1Package).**

Bid indent No for CAT-I: HESCOM/2026-27/EL/WORK_INDENT 1163 **(1 Package).**

Bid indent No for CAT-II-A: HESCOM/2026-27/EL/WORK_INDENT 1098 & 1174 **(2 Packages).**

Bid indent No for Others: 1150, 1151, 1153, 1154, 1155, 1156, 1152, 1157, 1158, 1159, 1160, 1162, 1164, 1165, 1166, 1167, 1168, 1169, 1170, 1171, 1172 & 1173 **(22 Packages).**

ಸದರಿ ಟೆಂಡರಗಳ ಪೂರ್ಣ ವಿವರಗಳನ್ನು ವೆಬ್‌ಸೈಟ್: **www.kppp.karnataka.gov.in** ರಲ್ಲಿ ದಿನಾಂಕ: **11.05.2026 ರ 5:00 ಗಂಟೆ** ನಂತರ ಪಡೆಯಬಹುದು.

ಅಧೀಕ್ಷಕ ಇಂಜಿನೀಯರರು(ವಿ)
ವಾಸಾಸಂಇ/ಧಾ/ದಿಶಾ/161/2026-27 (ಪಿಎಮ್‌ಸಿ), ಹೆಸ್ಕಾಂ, ಹುಬ್ಬಳ್ಳಿ.

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರವರ ಕಚೇರಿ, ಕ.ನೀ.ನಿ.ನಿ., ಮ.ಬ.ದ.ಕಾ.ನಿ. ವಿಭಾಗ, ನಂ. 3, ಬ್ಯಾಹಟ್ಟಿ, ತಾ॥ ಹುಬ್ಬಳ್ಳಿ, ಜಿ॥ ಧಾರವಾಡ - 580 023.
ದೂ. : 0836-2315225, ಇ-ಮೇಲ್ : eemrbcc3byt@gmail.com

ಸಂಖ್ಯೆ : ಕ.ನೀ.ನಿ.ನಿ./ಮ.ಬ.ದ.ವಿ.-3/ಎ.ಇ.-1/ಇ-ಟೆಂಡರ್/2026-27/209
ದಿನಾಂಕ : 11-05-2026

ಟೆಂಡರ್ ಪ್ರಕಟಣೆ (2ನೇ ಕರೆ)

(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ., ಬೆಂಗಳೂರು ರವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕ.ನೀ.ನಿ.ನಿ., ಮ.ಬ.ದ.ಕಾ.ನಿ. ವಿಭಾಗ, ಸಂ. 3, ಬ್ಯಾಹಟ್ಟಿ ವ್ಯಾಪ್ತಿಯ 4701 ಅಡಿ ಈ ಕೆಳಗೆ ನಮೂದಿಸಿರುವ ಇಂಡೆಂಟ್ ನಂಬರಿನ 01 ಕಾಮಗಾರಿಗೆ ಶೇಕಡಾವಾರು ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.

ವರ್ಕ್ ಇಂಡೆಂಟ್ ನಂಬರ್ : 3929.

ಕಾಮಗಾರಿಯ ಅಂದಾಜು ಮೊತ್ತ : ರೂ. 100.00 ಲಕ್ಷಗಳು,
ಇ.ಎಂ.ಡಿ. ಮೊತ್ತ : ರೂ. 1,70,000/-.

ಇ-ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ದಿನಾಂಕ : 30-05-2026 ರ ಸಂಜೆ 4.00 ತನಕ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 02-06-2026 ರ ಬೆಳಿಗ್ಗೆ 11.00 ರಿಂದ. ಹಾಗೂ ಕಾಮಗಾರಿವಾರು ಇತರೆ ವಿವರಗಳನ್ನು ದಿನಾಂಕ : 12-05-2026 ರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ ಮುಖೇನ http://kppp.karnataka.gov.in ಮೂಲಕ ಪಡೆಯಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ : 0836-2315225 ನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಕ.ನೀ.ನಿ.ನಿ., ಮ.ಬ.ದ.ಕಾ.ನಿ., ವಿಭಾಗ ನಂ. 3,
ಡಿಐಪಿಆರ್/ಧಾರವಾಡ/159/ಮಣಿಪಾಲ್/2026-27 ಬ್ಯಾಹಟ್ಟಿ.

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರರವರ ಕಛೇರಿ, ತುಂ.ಮೇ.ಯೋ. ವಿಭಾಗ,
ಶಿವಮೊಗ್ಗ. ಫೋನ್ ನಂ. 08182-254832

1.ಟೆಂಡರ್ ಪ್ರಕಟಣೆ ಸಂಖ್ಯೆ: ಕನೀನಿನಿ/ತುಂ.ಮೆ.ಯೋ./ವಿ/ಪಿಬಿ-2/ಟೆಂಡರ್/36 Call4 ದಿನಾಂಕ: 07.05.2026
2.ಟೆಂಡರ್ ಪ್ರಕಟಣೆ ಸಂಖ್ಯೆ: ಕನೀನಿನಿ/ತುಂ.ಮೆ.ಯೋ./ವಿ/ಪಿಬಿ-1/ಟೆಂಡರ್/04 ದಿನಾಂಕ: 07.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ., ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರು ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಪಿ.-ಪೋರ್ಟಲ್ ಪದ್ಧತಿಯ ಮೂಲಕ ಲೆಕ್ಕ ಶೀರ್ಷಿಕೆ 4701-ತುಂಗಾ ಮೇಲ್ದಂಡೆ ಯೋಜನೆ ಅಡಿಯಲ್ಲಿ ಬರುವ ಎರಡು(02) ಕಾಮಗಾರಿಗಳಿಗೆ ಹಾಗೂ 2700/2701-ಉಬ್ರಾಣಿ ಅಮೃತಾಪುರ ಯೋಜನೆ ಅಡಿಯಲ್ಲಿ ಬರುವ ಒಂದು(01) Consultancy ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ.

(1) ಅಂದಾಜು ಪತ್ರಿಕೆಯಂತೆ ಟೆಂಡರಿಗೆ ಇಡಲಾದ ಮೊತ್ತ ರೂ.253.49 ಲಕ್ಷಗಳು (ಇ. ಸಂಖ್ಯೆ 3743 Call4), ರೂ.420.03 ಲಕ್ಷಗಳು(ಇ.ಸಂಖ್ಯೆ 3744 Call4) ಮತ್ತು ರೂ.7.04 ಲಕ್ಷಗಳು(ಇ.ಸಂಖ್ಯೆ 0461) (ಜಿ.ಎಸ್.ಟಿ ಹೊರತುಪಡಿಸಿ)

(2) ಟೆಂಡರ್ ಕುರಿತ ಪ್ರಶ್ನೆಗಳಿಗಾಗಿ/ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ: 13.05.2026 17.30 ಘಂಟೆಯವರೆಗೆ.

(3) ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ: 07.05.2026 ರಿಂದ 16.05.2026 ಸಾಯಂಕಾಲ 17.30 ಘಂಟೆಯವರೆಗೆ (ಕಚೇರಿ ವೇಳೆಯಲ್ಲಿ)

ಟೆಂಡರನ್ನು ತೆರೆಯುವ ದಿನಾಂಕ / ಕಾಮಗಾರಿಯ ವಿವರಗಳು /ಇ.ಎಂ.ಡಿ. ಮೊತ್ತ/ ಟೆಂಡರ್‌ನ ನಿಯಮಗಳು ಮತ್ತು ಷರತ್ತುಗಳು / ಗುತ್ತಿಗೆದಾರರ ದರ್ಜೆ ಇತ್ಯಾದಿ ಹೆಚ್ಚಿನ ವಿವರಗಳಿಗಾಗಿ ಟೆಂಡರ್ ಅಧಿಸೂಚನೆಯಲ್ಲಿ ಪಡೆಯಬಹುದು ಅಥವಾ ಕೆಳಗೆ ಸಹಿ ಮಾಡಿರುವವರ ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ಸಹಿ/-
ಕಾರ್ಯಪಾಲಕ ಇಂಜಿನೀಯರರು,
ಕನೀನಿನಿ, ತುಂ.ಮೆ.ಯೋ. ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ನಂ.42-05/ಝೇಂಕಾರ್/2026-27

ಕಾರ್ಯಪಾಲಕ ಅಭಿಯಂತರರವರ ಕಛೇರಿ,

ಲೋಕೋಪಯೋಗಿ ಇಲಾಖೆ, ವಿದ್ಯುತ್ ವಿಭಾಗ, ಕೆ.ಆರ್. ವೃತ್ತ, ಬೆಂಗಳೂರು.
ದೂರವಾಣಿ ಸಂಖ್ಯೆ: 080-22112809
ಸಂ.ಕಾ.ಇಂ(ವಿ)/ಲೋ.ಇ/ವಿದ್ಯುತ್/2026-27/181 ದಿನಾಂಕ: 11.05.2026

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ ಈ ಕೆಳಕಂಡ ಕಾಮಗಾರಿಯನ್ನು **KW-2 STD** ಷರತ್ತುಗೊಳಪಟ್ಟಂತೆ ಮೊದಲನೆ ಟೆಂಡರ್ ಕರೆಯನ್ನು ಕೆ.ಪಿ.ಪಿ.ಪಿ ಮೂಲಕ ಆಹ್ವಾನಿಸಲಾಗಿದೆ. ಕಾಮಗಾರಿಯ ವಿವರ ಕೆಳಕಂಡಂತಿವೆ.

Sl. No.	Work Indents	Work Value (Rs. in Lakhs)
1	Providing CCTV system with AI feature cameras for the Security Measures in the premises of Honorable Chief Minister Residence Cauvery and Home office Krishna at K.K.Road, Bengaluru PWD/2025-26/EL/WORK_INDENT35318	29.37

ಮೇಲಿನ ಟೆಂಡರ್‌ಗಳಲ್ಲಿ ಭಾಗವಹಿಸಲು ಇಚ್ಚಿಸುವವರು ವೆಬ್‌ಸೈಟ್ **https://kppp.karnataka.gov.in** ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ದಿನಾಂಕ: **11.05.2026** ರಿಂದ **19.05.2026, 16:00 ಗಂಟೆಯವರೆಗೆ** ಹಾಗೂ ಭರ್ತಿ ಮಾಡಿದ ಟೆಂಡರ್ ಹಿಂತಿರುಗಿಸುವ ದಿನಾಂಕ: **19.05.2026** ರಂದೆ **16:00** ಗಂಟೆಯವರೆಗೆ ನಿಗದಿಪಡಿಸಲಾಗಿದೆ. ಟೆಂಡರ್ ವಿವರಗಳನ್ನು **Karnataka Public Procurement Portal** ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು(ವಿ).
ವಾಸಾಸಂಇ/ಉನಿ-ಸಿ.ಪಿ/590/ಕೆಎಸ್‌ಎಂಸಿಎ/2026-27

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜಿನಿಯರವರ ಕಛೇರಿ,

ಲೋ.ಇ. ಉಡುಪಿ ವಿಭಾಗ - ಉಡುಪಿ - 576101
ದೂರವಾಣಿ & ಫ್ಯಾಕ್ಸ್: (0820) 2531802
ನಂ. ಪಿಡಬ್ಲ್ಯೂಡಿ:ಯುಡಿಎನ್:ಎನ್‌ಐಟಿ: 03:2026-27: ಎಇ-2 ದಿನಾಂಕ: 11.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

202-27ನೇ ಸಾಲಿನ ರೂ. 42.25 ಮತ್ತು 158.74 ಲಕ್ಷದ 5054-80-190-0-01-132-ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ ಮತ್ತು 5054-ಜಿಲ್ಲಾ ಮುಖ್ಯ ರಸ್ತೆ ಸುಧಾರಣೆಯಡಿಯ 2 ಕಾಮಗಾರಿಗಳಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರಿಂದ "ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್" "kppp.karnataka.gov.in" ಮುಖಾಂತರ ಟೆಂಡರನ್ನು ಕರ್ನಾಟಕ ಟ್ರಾನ್ಸ್‌ಫರೆನ್ಸಿ ಇನ್ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಆ್ಯಕ್ಟ್ - 2023ರಲ್ಲಿ ನಿರೂಪಿತ ಶರ್ತಗೊಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದ್ದು, ಇ-ಪ್ರೋಕ್ಯೂರ್ಮೆಂಟ್ ಪೋರ್ಟಲ್ "kppp.karnataka.gov.in" ಮುಖಾಂತರ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:20.05.2026 ರ ಸಂಜೆ 5.30ರ ವರೆಗೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ

ಕರ್ನಾಟಕಸರ್ಕಾರ

ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,ಬೀದರ್.

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವಾವಿದ್ಯಾಲಯ, ಕರ್ನಾಟಕ ಬೆಂಗಳೂರು ರವರಿಗೆ ಸಂಯೋಜನೆಗೊಂಡಿದ್ದು, ಭಾರತ ಸರ್ಕಾರ ನವದೆಹಲಿ ರವರಿಂದ ಅಂಗೀಕೃತಗೊಂಡಿರುತ್ತದೆ.
ದೂರವಾಣಿ ಸಂಖ್ಯೆ : 08482-228366 & ಫ್ಯಾಕ್ಸ್ : 08482-240322
Website :www.bimsbidar.karnataka.gov.in& E-mail Id : directorbrimsbidar2007@gmail.com

ಸಂಖ್ಯೆ : ಬೀವೈವಿಸಂ/ಟೆಂಡರ್/ವಾರ್ತಾಪತ್ರಿಕೆ/ಸಿಆರ್- /2026-27 ದಿನಾಂಕ :07-05-2026

ಟೆಂಡರ್ ಪ್ರಕಟಣೆ

ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೋಧಕ್ ಆಸ್ಪತ್ರೆ ಬೀದರಗೆ ಬೇಕಾಗಿರುವ Supply Equipments, Diet and STP to Brims Teaching Hospital Bidar ಗಳ ಸರಬರಾಜುವಿಗಾಗಿ ಇ-ಟೆಂಡರ್ ಕರೆಯಲಾಗಿದೆ.ಇಚ್ಛೆಯುಳ್ಳ ಏಜೇನ್ಸಿಯವರು ಇ-ಟೆಂಡರ್ ನಲ್ಲಿ ನಮೂದಿಸಿದ ಸಮಯದ ಅನುಗುಣವಾಗಿ ಟೆಂಡರ್ ಭರಿಸಲು ಅವಕಾಶ ವಿರುತ್ತದೆ. ಹಾಗೂ ಇ-ಸಂಗ್ರಹಣೆಯಪೋರ್ಟಲ್ ಮೂಲಕ ಸದರಿ ಟೆಂಡರಿನ ವಿವರ ವೀಕ್ಷಿಸಬಹುದು/ಡೌನಲೋಡ್ ಮಾಡಿಕೊಂಡು ಇ-ಪ್ರೋಕ್ಯೂಮೇರ್ಂಟ್ ಮೂಲಕ ಸಲ್ಲಿಸಬಹುದುwww.kppp.karnataka.gov.in ಮತ್ತು ಟೆಂಡರಿನ ಬಗ್ಗೆ ಹೆಚ್ಚಿನ ಮಾಹಿತಿಯನ್ನುಈ ಸಂಸ್ಥೆಯ ಅಂತರ್ಜಾಲ ತಾಣವಾದ www.bimsbidar.karnataka.gov.inನಲ್ಲಿ ಸಹನೋಡಬಹುದಾಗಿದೆ.

ಕ್ರ.ಸಂ	ಟೆಂಡರ್ ವಿವರ	ಇಂಡೆಂಟ್ ಸಂಖ್ಯೆ	ಇ.ಎಂ.ಡಿ.	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1.	SUPPLY OF EQUIPMENTS TO BLOOD BANK DEPARTMENT BRIMS BIDAR	DME/2026-27/IND2298	39,000	16-05-2026 Upto 05:30
2.	Supply, Installation and Commissioning of HD Video Bronchoscope System UNDER KKRDB FOR THE YEAR - 2025-26	DME/2026-27/IND2149 CALL-2	82,425	16-05-2026 Upto 05:30
3.	E –Procurement for Providing Catering Services (Diet Prepared Food) for In patients of Brims Teaching Hospital Bidar for the year 2026-27.	DME/2026-27/SE0737/ CALL-2	2,62,500	06-06-2026 Upto 05:30
4.	Operation and Annual Maintenance of 450 KLD STP with allied components for dispose of the sewage and medical waste at BRIMS Attached Teaching Hospital (District Hospital) BIDAR. (Including man power and Chemicals)	DME/2026-27/SE0738	72,500	22-05-2026 Upto 05:30

1. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸು ವವಿಳಾಸ : ನಿರ್ದೇಶಕರು, ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್ 2. ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಗಳಲ್ಲಿ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾವಣೆಗಳು ಕೇವಲ ವಿದ್ಯುನ್ಮಾನ ಸಂಗ್ರಹಣೆ www.kppp.karnataka.gov. ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ನಿರ್ದೇಶಕರು
ವಾ.ಸಾ.ಸಂ.ಇ/ಬೀದರ/31/ಕೆ.ಎಸ್.ಎಂ.ಸಿ.&ಎ/2026-27 ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಬೀದರ.

ಲೋಕೋಪಯೋಗಿ ಇಲಾಖೆ, ಗುಣ ಭರವಸೆ ವಿಭಾಗ, ಹಾಸನ

ಅಲ್ಪಾವಧಿ ಟೆಂಡರ್ ಪ್ರಕಟಣೆ:01/2026-27
ದಿನಾಂಕ: 11.05.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಲೋ.ಇ, ಗುಣ ಭರವಸೆ ವಿಭಾಗ, ಹಾಸನ ರವರಿಂದ ಲೋ.ಇ, ಗುಣ ಭರವಸೆ ವಿಭಾಗ ಹಾಸನ ಹಾಗೂ ಉಪವಿಭಾಗಗಳಾದ ಹಾಸನ ಮತ್ತು ಮಂಗಳೂರು ಕಛೇರಿಗಳಿಗೆ ಅಗತ್ಯವಿರುವ ಚಾಲಕ ಸಹಿತ ವಾಹನ ಸೇವೆಗಳನ್ನು ಹಾಗೂ ಮಾನವ ಸಂಪನ್ಮೂಲ ಸೇವೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸಂಸ್ಥೆಯಿಂದ ಪಡೆಯಲು ಏಕ-ಲಕೋಟೆ ಪದ್ಧತಿಯಲ್ಲಿ ಸ್ಪರ್ಧಾತ್ಮಕ ಟೆಂಡರ್‌ನ್ನು -portal ಅಂತರ್ಜಾಲದಲ್ಲಿ ಕರೆಯಲಾಗಿದ್ದು, ದಿನಾಂಕ:19-05-2026 ಸಂಜೆ 5.30 ಗಂಟೆಯವರೆಗೆ ಟೆಂಡರ್‌ನ್ನು ನಿಗದಿತ ನಮೂನೆಗಳನ್ನು https://kppp.karnataka.gov.in ನಲ್ಲಿ Download ಮಾಡಿ ಅವಶ್ಯಕ ಮಾಹಿತಿಗಳೊಂದಿಗೆ ಹಾಗೂ ನಿಗದಿತ EMD ಯೊಂದಿಗೆ Upload ಮಾಡಬಹುದಾಗಿರುತ್ತದೆ. ದಿನಾಂಕ: 18-05-2026 ರವರೆಗೆ ಬಿಡ್ಡುದಾರರು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ: 21-05-2026 ರಂದು ಬೆಳಿಗ್ಗೆ 11.00 ಗಂಟೆಯ ನಂತರ ಟೆಂಡರ್‌ನ್ನು ತೆರೆಯಲಾಗುವುದು. ಒಂದು ವೇಳೆ ತಿದ್ದುಪಡಿ ಉಂಟಾದಲ್ಲಿ ಸದರಿ, ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಎಲ್ಲಾ ಟೆಂಡರ್‌ಗಳನ್ನು ಅಥವಾ ಯಾವುದಾದರೂ ಒಂದು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಲೋ.ಇ,
ಗುಣ ಭರವಸೆ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/118/ಕೆಎಸ್‌ಎಂಸಿಎ/2026-27

ಪುತ್ತೂರು ಮಾರುಕಟ್ಟೆ ಧಾರಣೆ

11-05-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	: 445 - 475	ಹಳೆ ಕರಿಗೋಟು	: 255 - 285
ಚೋಲ್ ಅಡಿಕೆ	: 525 - 550	ಹಸಿ ಕೊಕ್ಕೋ	: 70 - 105
ಡಬಲ್ ಚೋಲ್	: 525 - 550	ಒಣ ಕೊಕ್ಕೋ	: 270 - 320
ಹೊಸ ಪಟೋರ	: 355 - 405	**ಕಾಳುಮೆಣಸು ಧಾರಣೆ**	
ಹಳೆ ಪಟೋರ	: 375 - 405	ಕಾಳುಮೆಣಸು	: 450 - 685
ಹೊಸ ಉಳ್ಳಿ	: 120 - 295	**ರಬ್ಬರ್ ಧಾರಣೆ : ಗ್ರೇಡ್**	
ಹಳೆ ಉಳ್ಳಿ	: 110 - 295	ಆರ್‌ಎಸ್‌ಎಸ್ 1	- 251.00
ಹೊಸ ಕೋಕಾ	: 325 - 345	ಆರ್‌ಎಸ್‌ಎಸ್ 2	- 211.00
ಹಳೆ ಕೋಕಾ	: 325 - 345	ಸ್ಕ್ರಾಪ್ 1	- 151.00
ಹೊಸ ಕರಿಗೋಟು	: 255 - 285	ಸ್ಕ್ರಾಪ್ 2	- 140.00

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಭಾಗ್ಯತಾರ (ನಂ.BT-53) ಡ್ರಾ ಮೇ 11ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
BH 109041 (IRINJALAKKUDA)

Consolation Prize Rs.5,000/-
BA 109041 BB 109041 BC 109041 BD 109041
BE 109041 BF 109041 BG 109041 BJ 109041
BK 109041 BL 109041 BM 109041

2nd Prize Rs.30,00,000/- [30 Lakhs]
BJ 242045 (KOTTAYAM)

3rd Prize Rs.5,00,000/- [5 Lakhs]
BJ 580425 (THRISSUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0017 0246 0896 0904 1263 3655 4704 5077 5464 6283 6424 7141 7673 7717 7767 8816 8991 9426 9828

5th Prize Rs.2,000/-
1373 1935 2013 5016 5953 9476

6th Prize Rs.1,000/-
0040 0800 0916 1004 1295 1607 1857 2163 2456 3406 4564 4824 6130 6204 6668 6732 7030 7830 8285 8497 8750 8752 8755 8972 9481

7th Prize Rs.500/-
0018 0217 0364 0398 0517 0827 0984 1247 1413 1704 1746 1748 1781 2228 2330 2901 2927 2931 3143 3157 3210 3289 3365 3435 3577 3855 3866 4026 4316 4345 4363 4383 4401 4617 4969 5006 5058 5695 5725 5821 5888 5978 5983 6174 6676 6717 6877 6893 6924 7021 7202 7302 7400 7444 7605 7803 7920 7926 7968 8038 8199 8200 8243 8273 8313 8354 8434 8569 8670 8722 9107 9260 9420 9542 9865 9984

8th Prize Rs.200/-
0011 0021 0193 0649 0792 0830 1179 1436 1632 1842 1965 2042 2074 2192 2211 2213 2220 2526 2619 2821 2937 3004 3028 3073 3185 3312 3402 3681 3840 3854 3892 4047 4494 4513 4581 4681 4694 4771 4788 4858 4979 5146 5223 5231 5333 5563 5589 5596 5598 5727 5833 5945 6017 6132 6462 6474 6614 6667 6699 6770 6811 6896 7004 7110 7115 7217 7218 7223 7253 7256 7381 7622 7684 7718 7964 8121 8194 8195 8230 8471 8612 8739 8839 8858 8894 8980 9043 9224 9580 9591 9595 9637 9723 9874

9th Prize Rs.100/-
0100 0221 0372 0435 0456 0469 0476 0559 0668 0686 0786 0844 0865 0880 1013 1041 1137 1190 1279 1280 1305 1308 1319 1323 1351 1405 1549 1569 1620 1640 1693 1890 1915 2046 2114 2317 2349 2590 2591 2595 2641 2645 2741 2810 2870 3064 3235 3257 3309 3324 3544 3589 3691 3752 3801 3838 3894 3897 4001 4063 4123 4155 4163 4266 4395 4511 4516 4612 4652 4675 4815 4841 4966 5024 5029 5082 5090 5163 5176 5339 5353 5424 5495 5904 6011 6019 6024 6051 6110 6142 6166 6236 6248 6259 6321 6327 6338 6469 6523 6524 6546 6547 6671 6771 6778 6782 6817 6948 6974 7003 7066 7067 7122 7128 7405 7459 7610 7625 7693 7699 7758 7788 7814 7919 7995 8119 8187 8348 8370 8378 8532 8842 9070 9081 9182 9251 9488 9496 9597 9608 9671 9725 9773 9891

IN THE COURT OF THE II ADDL. CIVIL JUDGE MANGALURU

O.S. No. 1428/2024

Between:
MANJAYYA PAKKALA ...PLAINTIFF
AND
VENKATESH & OTHERS :DEFENDANTS

PUBLIC NOTICE

To:
Defendant No.2
Smt. Prema G. Shenava,
Wife of Late Ganesh Shenava,
Aged about 65 years,
Residing at pacchangeri House, Karnire Village and post, Via Mulki,
Mangaluru Taluk, D.K.

Take notice that the suit is filed by the Plaintiff herein for the injunction against the defendants in respect of the plaint Schedule Property as now stands posted for your appearance on **27/06/202 at 11.00 A.M.** before this court.

If you fail to appear before the above court on the said date and time, the court will proceed further in the above suit placing you exparte. Therefore, you are hereby requested to appear before the above court in person or through your advocate on the said date and time without fail.

Given under my hand and seal of the Court on this 02nd day of MAY 2026.

(By order of the Court)
Sd/- Chief Ministerial Officer
Court of the Civil Judge and JMFC, Mangalore
Sd/- (K.Ganesh Shenoy)
Advocate for Plaintiff

ಕರ್ನಾಟಕ ಸರ್ಕಾರ

ರಾಷ್ಟ್ರೀಯ ಆರೋಗ್ಯ ಅಭಿಯಾನ

ಜಿಲ್ಲಾ ಯೋಜನಾ ಅಭಿವೃದ್ಧಿ ಅಧಿಕಾರಿಗಳ ಕಛೇರಿ

ನಂ.308, ಮೂರನೇ ಮಹಡಿ, ಜಿಲ್ಲಾಡಳಿತ ಭವನ, ಶ್ರೀ ಬಿ.ರಾಚಯ್ಯ ಜೋಡಿ ರಸ್ತೆ, ಚಾಮರಾಜನಗರ ಜಿಲ್ಲೆ - 571313
Email ID: dpdochamarajanagar@gmail.com ದೂರವಾಣಿ ಸಂಖ್ಯೆ: 08226-355162
ಸಂಖ್ಯೆ : ಜಿಆಕುಕ/ಚಾ.ನ/ಸಿ.ಪಿ.ಹೆಚ್.ಸಿ-ಯು.ಹೆಚ್.ಸಿ/01/2026-27, ದಿನಾಂಕ : 07/05/2026

ಇ-ಟೆಂಡರ್ ಪ್ರಕಟಣೆ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ರಾಷ್ಟ್ರೀಯ ಆರೋಗ್ಯ ಅಭಿಯಾನ 15ನೇ ಹಣಕಾಸು ಆಯೋಗದಡಿಯಲ್ಲಿ ಚಾಮರಾಜನಗರ ಜಿಲ್ಲೆಯ ವಿವಿಧ ಆರೋಗ್ಯ ಸಂಸ್ಥೆಗಳಿಗೆ ಅಗತ್ಯವಿರುವ ಉಪಕರಣಗಳನ್ನು 2026-2027ನೇ ಸಾಲಿಗೆ ಪೂರೈಸಲು ಅರ್ಹ ಸಂಸ್ಥೆಗಳಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನಮೂನೆ, ಇ.ಎಂ.ಡಿ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳಿಗಾಗಿ ವೆಬ್ ಸೈಟ್ www. https://kppp.karnataka.gov.in/ ನಲ್ಲಿ ನೋಡಬಹುದಾಗಿದೆ.

ಟೆಂಡರ್ ಹೆಸರು		15ನೇ ಹಣಕಾಸು ಆಯೋಗದಡಿಯಲ್ಲಿ ಚಾಮರಾಜನಗರ ಜಿಲ್ಲೆಯ ವಿವಿಧ ಆರೋಗ್ಯ ಸಂಸ್ಥೆಗಳಿಗೆ ಅಗತ್ಯವಿರುವ ಉಪಕರಣಗಳನ್ನು ಖರೀದಿಸಲು.
ಟೆಂಡರ್ ಅರ್ಜಿ ಹಾಕಲು ಆರಂಭದ ದಿನಾಂಕ	:	ದಿನಾಂಕ :07.05.2026 ವೇಳೆ:10:30AM
ಫ್ರೀ ಬಿಡ್ ಮೀಟಿಂಗ್ ಮತ್ತು ಮಾದರಿ ಪರಿಶೀಲನೆ	:	ದಿನಾಂಕ :19.05.2026 ವೇಳೆ:11:00AM
ಟೆಂಡರ್ ಅರ್ಜಿ ಹಾಕಲು ಅಂತಿಮ ದಿನಾಂಕ	:	ದಿನಾಂಕ :08.06.2026 ವೇಳೆ:4:00PM
ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ	:	ದಿನಾಂಕ :09.06.2026 ವೇಳೆ:4:10PM
ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ	:	ದಿನಾಂಕ :12.06.2026 ವೇಳೆ:4:00PM
ಟೆಂಡರ್ ತೆರೆಯುವುದು/ಫ್ರೀ ಬಿಡ್ ಮೀಟಿಂಗ್	:	ಜಿಲ್ಲಾ ಆಡಳಿತ ಭವನ, ಮೂರನೇ ಮಹಡಿ, ನಂ.307, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಸಭಾಂಗಣ, ಚಾಮರಾಜನಗರ

ಸಹಿ/- ಸದಸ್ಯ ಕಾರ್ಯದರ್ಶಿ
ಜಿಲ್ಲಾ ಆರೋಗ್ಯ ಮತ್ತು ಕು.ಕ.ಸೊಸೈಟಿ
ಸಂ:ವಾಸಾಸಂಇ:ಚಾ.ನಗರ:97:2026-27 ಚಾಮರಾಜನಗರ

ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತ

ಮಂಗಳೂರು ವಿಭಾಗ, ಮಂಗಳೂರು

(ಕರ್ನಾಟಕ ಸರಕಾರದ ಅಧೀನಕ್ಕೊಳಪಟ್ಟಿದೆ)
ವಿಭಾಗೀಯ ವ್ಯವಸ್ಥಾಪಕರವರ ಕಚೇರಿ, ಅಬ್ಬಕ್ಕನಗರ, 1ನೇ ಮುಖ್ಯ ರಸ್ತೆ, ಕೊಟ್ಟಾರ, ಮಂಗಳೂರು-6
Ph: 0824-4630576 email: kcdcmlrdivision@gmail.com
ಸಂಖ್ಯೆ: ಕೆಸಿಡಿಸಿ:ಮಂವಿ:ನೆ.ಕಾಮಗಾರಿ:RKVY:2026-27 ದಿನಾಂಕ: 11-05-2026

ಸಂಕ್ಷಿಪ್ತ ಇ-ಟೆಂಡರ್ ಅಧಿಸೂಚನೆ

ಈ ಮೂಲಕ ಸಾರ್ವಜನಿಕರಿಗೆ/ ಕರ್ನಾಟಕ ಗೇರು ಅಭಿವೃದ್ಧಿ ನಿಗಮದ/ ಅರಣ್ಯ ನೋಂದಾಯಿತ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, 2026-27ನೇ ಸಾಲಿಗೆ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY) ಇವರಿಂದ ಅನುದಾನ ಬಿಡುಗಡೆಯಾಗುವ ನಿರೀಕ್ಷೆಯ ಮೇರೆಗೆ ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ಮಂಗಳೂರು ವಿಭಾಗದ ವ್ಯಾಪ್ತಿಗೆ ಒಳಪಡುವ ಲಗತ್ತೀಕರಿಸಿದ ಅನುಬಂಧ-1ರಲ್ಲಿ ನಮೂದಿಸಿದ ಗೇರು ನೆಡುತೋಪುಗಳಲ್ಲಿ ಪುನಶ್ಚೇತನ ಕಾಮಗಾರಿಗಳನ್ನು ನಿರ್ವಹಿಸಲು ಅನುಭವ ಹೊಂದಿರುವವರು ಅಥವಾ ಅಂಗೀಕೃತ ಸಂಸ್ಥೆಗಳಿಂದ ಮಾತ್ರ ಕರ್ನಾಟಕ ಸರಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ಇ-ಟೆಂಡರನ್ನು ಆಹ್ವಾನಿಸಲಾಗಿದೆ.

ಮೊದಲನೇ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 26-05-2026 ಅಪರಾಹ್ನ 4.00PM ಗಂಟೆ, ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ: 27-05-2026 ಅಪರಾಹ್ನ 04.30 PM ಗಂಟೆ.

ಒಂದು ವೇಳೆ ಮೇಲೆ ಹೇಳಿದ ದಿನಾಂಕದಂದು ಯಾವ ಗುತ್ತಿಗೆದಾರರೂ ಟೆಂಡರು ಹಾಕದಿದ್ದಲ್ಲಿ, ಇದೇ ಟೆಂಡರು ಪ್ರಕ್ರಿಯೆಯನ್ನು ಮುಂದುವರಿಸಿ, ಮರು ಟೆಂಡರನ್ನು ದಿನಾಂಕ: 04-06-2026 ರವರೆಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ಕರೆಯಲಾಗಿದೆ ಎಂದು ಭಾವಿಸತಕ್ಕದ್ದು.

ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ವಿಭಾಗೀಯ ವ್ಯವಸ್ಥಾಪಕರು ಕರ್ನಾಟಕ ಗೇರು ಅಭಿವೃದ್ಧಿ ನಿಗಮ ಕೊಟ್ಟಾರ ಚೌಕಿ ಮಂಗಳೂರು ಇವರ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ವಿಭಾಗೀಯ ವ್ಯವಸ್ಥಾಪಕರು,
ಕೆಸಿಡಿಸಿ, ಮಂಗಳೂರು ವಿಭಾಗ
DIPR/DK/KSMCA/184/26-27 dt: 11.05.2026

ಗ್ರೀನ್ ಸರ್ಕಲ್ ಪರಿಸರ ಸಂಘಟನೆ ತೀವ್ರ ಆತಂಕ

ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಕೆರೆ ಪರಿಸರ ಹಾನಿ



• **ಬೆಂಗಳೂರು:** ಯಲಹಂಕ ಸಮೀಪದ ಅವಲಹಳ್ಳಿ ಕೆರೆಯ ನೈಸರ್ಗಿಕ ಪರಿಸರ ವ್ಯವಸ್ಥೆ ಮತ್ತು ಭದ್ರತೆಗೆ ಧಕ್ಕೆ ಉಂಟಾಗಿರುವ ಬಗ್ಗೆ ಗ್ರೀನ್ ಸರ್ಕಲ್ ಪರಿಸರ ಸಂಘಟನೆ ತೀವ್ರ ಆತಂಕ ವ್ಯಕ್ತಪಡಿಸಿದೆ. ಈ ಕುರಿತು ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಕೆರೆ ವಿಭಾಗದ ಮುಖ್ಯ ಇಂಜಿನಿಯರ್‌ಗೆ ಪತ್ರ ಬರೆದಿರುವ ಸಂಘಟನೆಯು, ಕೆರೆಯ ರಕ್ಷಣೆಗಾಗಿ ಕೈಗೊಂಡಿರುವ ಕ್ರಮಗಳು ಅಧಿಕಾರಿಗಳ ನಿರ್ಲಕ್ಷ್ಯದಿಂದ ಕೆರೆ ಪರಿಸರ ಹಾಳಾಗುತ್ತಿದೆ ಎಂದು ದೂರಿದೆ.

ಕೆರೆಯ ಸುತ್ತಮುತ್ತಲಿನ ಹುಲ್ಲುಗಾವಲು ಪ್ರದೇಶವು ಕೇವಲ ಗಿಡಗಂಟಿಗಳಲ್ಲ, ಬದಲಾಗಿ ಕೆರೆಗೆ ಬರುವ ಕೊಳಚೆ ನೀರನ್ನು ಸೋಸುವ ನೈಸರ್ಗಿಕ ಫಿಲ್ಟರ್‌ಗಳಾಗಿ ಕೆಲಸ ಮಾಡುತ್ತಿದ್ದವು. ಅಲ್ಲದೆ ಸುಮಾರು ೨೦೦ಕ್ಕೂ ಹೆಚ್ಚು ಜಾತಿಯ ಪಕ್ಷಿಗಳು ವಾಸಿಸುತ್ತಿದ್ದವು. ಆದರೆ, ಇತ್ತೀಚೆಗೆ ಜೆಸಿಬಿ ಯಂತ್ರಗಳ ಅವೈಜ್ಞಾನಿಕ ಓಡಾಟದಿಂದಾಗಿ ಈ ಸೂಕ್ಷ್ಮ ಹುಲ್ಲುಗಾವಲು ಪರಿಸರ ಸಂಪೂರ್ಣ ನಾಶವಾಗಿದೆ. ಈ ಕೂಡಲೇ ಪರಿಸರ ತಜ್ಞರಿಂದ ಕೆರೆಯನ್ನು ಪರಿಶೀಲಿಸಿ, ನಶಿಸಿರುವ ಹುಲ್ಲುಗಾವಲನ್ನು ಮರುಸ್ಥಾಪಿಸಬೇಕು ಎಂದು ಆಗ್ರಹಿಸಿದರು.

ಕೆರೆಯಲ್ಲಿ ಹೂಳೆತ್ತುವ ಹಾಗೂ ಕಳೆ ತೆಗೆಯುವ ಕಾಮಗಾರಿಗಾಗಿ ಯಂತ್ರಗಳನ್ನು ಒಳಗೆ ಬಿಡಲು ಜಿಬಿಎ ನಿರ್ಮಿಸಿದ್ದ ಅಧಿಕೃತ ಬೇಲಿಯನ್ನು ಕಿತ್ತುಹಾಕಲಾಗಿದೆ. ಕೆರೆಯ ಉತ್ತರ ಭಾಗದಲ್ಲಿ ದೊಡ್ಡ ಗೇಟ್ ಇದ್ದರೂ ಸಹ, ಬೇಲಿಯನ್ನು ಕಿತ್ತು ಯಂತ್ರಗಳನ್ನು ಒಳಗೆ ಬಿಟ್ಟಿರುವುದು ಸಂಶಯಾಸ್ಪದವಾಗಿದೆ. ಇದರಿಂದಾಗಿ ಸಾರ್ವಜನಿಕ ಹಣ ಪೋಲಾಗುತ್ತಿರುವುದಲ್ಲದೆ, ಬೇಲಿ ಇಲ್ಲದ ಕಾರಣ ಕೆರೆಯ ಪ್ರದೇಶವು ಮತ್ತೆ ಮದ್ಯಪಾನ ಹಾಗೂ ಅನೈತಿಕ ಚಟುವಟಿಕೆಗಳ ತಾಣವಾಗುವ ಭೀತಿ ಎದುರಾಗಿದೆ ಎಂದು ಗ್ರೀನ್ ಸರ್ಕಲ್ ಪತ್ರದಲ್ಲಿ ಅಸಮಾಧಾನ ವ್ಯಕ್ತಪಡಿಸಿದೆ.

ಹಲವು ವರ್ಷದಿಂದ ಸ್ಥಳೀಯ ನಿವಾಸಿಗಳು ಹೋರಾಟ ಮಾಡುತ್ತಿದ್ದರೂ, ಕೆರೆಗೆ ನೇರವಾಗಿ ಹರಿಯುತ್ತಿರುವ ಕೊಳಚೆ ನೀರಿನ ಸಮಸ್ಯೆಗೆ ಮುಕ್ತಿ ಸಿಕ್ಕಿಲ್ಲ. ಜಿಬಿಎ, ಸ್ಥಳೀಯ ಪಂಚಾಯತ್ ಮತ್ತು ಜಲಮಂಡಳಿ ನಡುವಿನ ಸಮನ್ವಯದ ಕೊರತೆಯಿಂದಾಗಿ ಈ ಸಮಸ್ಯೆ ಬಗೆಹರಿಯುತ್ತಿಲ್ಲ. ಇದರೊಂದಿಗೆ ಕೆರೆಗೆ ನೀರು ತರುವ ಪ್ರಮುಖ ಮೂಲವಾದ ರಾಜಕಾಲುವೆಯ ಜೀರ್ಣೋದ್ಧಾರ ಕಾಮಗಾರಿಯೂ ನೆನೆಗುದಿಗೆ ಬಿದ್ದಿದೆ ಎಂದು ಪತ್ರದಲ್ಲಿ ಮಾಹಿತಿ ನೀಡಿದೆ.

ಕಳೆದ ಐದು ವರ್ಷಗಳಿಂದ ಶ್ರಮವಹಿಸಿ ಉಳಿಸಿಕೊಂಡು ಬಂದಿದ್ದ ಕೆರೆಯ ಹಸಿರು ಸಂಪತ್ತು ಇಂದು ಅಧಿಕಾರಿಗಳ ಬೇಜವಾಬ್ದಾರಿಯಿಂದ ಅಪಾಯದಲ್ಲಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳದಿದ್ದರೆ ಹೋರಾಟ ತೀವ್ರಗೊಳಿಸುವುದಾಗಿ ಸಾರ್ವಜನಿಕರು ಮತ್ತು ಗ್ರೀನ್ ಸರ್ಕಲ್ ಸಂಘಟನೆ ಎಚ್ಚರಿಕೆ ನೀಡಿದೆ.



ಬಿಜೆಪಿ ರಾಜ್ಯಾಧ್ಯಕ್ಷ ಬಿವೈ.ವಿಜಯೇಂದ್ರ ಸೋಮವಾರ ರಾತ್ರಿ ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಆಗಮಿಸಿದ್ದು, ಬಿಜೆಪಿ ಸುಳ್ಯ ಮಂಡಲ ಮತ್ತು ಸುಬ್ರಹ್ಮಣ್ಯ ಗ್ರಾಮ ಸಮಿತಿ ವತಿಯಿಂದ ಸ್ವಾಗತಿಸಲಾಯಿತು. ಈ ಸಂದರ್ಭ ಶಾಸಕಿ ಭಾಗೀರಥಿ ಮುರುಳ್ಯ, ಮಾಜಿ ಸಚಿವ ಅಂಗಾರ, ಸುಳ್ಯ ಮಂಡಲ ಬಿಜೆಪಿ ಅಧ್ಯಕ್ಷ ವೆಂಕಟ್ ವಳಲಂಬೆ, ಸುಬ್ರಹ್ಮಣ್ಯ ಗ್ರಾಮ ಸಮಿತಿ ಪ್ರಮುಖ್ ರಾಜೇಶ್ ಎನ್.ಎಸ್, ಪ್ರಮುಖರಾದ ಕೃಷ್ಣ ಶೆಟ್ಟಿ ಕಡಬ, ದಿನೇಶ್ ಸಂಪ್ಯಾಡಿ, ದಿಲೀಪ್, ಶ್ರೀಕುಮಾರ್ ಬಿಲದ್ವಾರ, ಗಿರೀಶ್ ಆಚಾರ್ಯ ಪೈಲಾಜೆ, ಅಶೋಕ್ ಕಡಬ, ಭರತ್ ನೆಕ್ರಾಜೆ, ಅಚ್ಯುತ ಗೌಡ, ಯಶೋಧಕೃಷ್ಣ ಮೊಟೆಲ, ಅಶೋಕ್ ಕುಮಾರ್ ಮೂಲೆಮಜಲು ಸೇರಿದಂತೆ ಕಾರ್ಯಕರ್ತರು ಉಪಸ್ಥಿತರಿದ್ದರು.

ಕಿರುಸುದ್ದಿ

ಮದ್ಯದ ಬೆಲೆ ಪರಿಷ್ಕರಣೆಗೆ ಸರಕಾರಕ್ಕೆ ಒತ್ತಾಯ

• **ಬೆಂಗಳೂರು:** ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಭೀತಿಯಿಂದಾಗಿ ಜಾಗತಿಕವಾಗಿ ಇಂಧನ ಮತ್ತು ಕಚ್ಚಾ ವಸ್ತುಗಳ ಬೆಲೆ ಗಗನಕ್ಕೇರಿದ್ದು, ಮದ್ಯದ ಬೆಲೆ ಪರಿಷ್ಕರಣೆಗೆ ಅವಕಾಶ ನೀಡುವಂತೆ ಅಂತಾರಾಷ್ಟ್ರೀಯ ಸ್ಪಿರಿಟ್ಸ್ ಮತ್ತು ವೈನ್ ಅಸೋಸಿಯೇಷನ್ ಆಫ್ ಇಂಡಿಯಾ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದೆ. ತೈಲ, ನೈಸರ್ಗಿಕ ಅನಿಲ, ಕಲ್ಲಿದ್ದಲು ಮತ್ತು ಪೆಟ್ರೋಕೆಮಿಕಲ್ ಬೆಲೆಗಳಲ್ಲಿನ ತೀವ್ರ ಏರಿಕೆಯಿಂದಾಗಿ ಬಾಟಲಿ ಮತ್ತು ಪ್ಯಾಕೇಜಿಂಗ್ ವೆಚ್ಚಗಳು ವಿಪರೀತವಾಗಿ ಹೆಚ್ಚಿವೆ. ಉತ್ಪಾದನಾ ವೆಚ್ಚವು ಮಿತಿ ಮೀರಿರುವುದರಿಂದ, ಕೇವಲ ಕಾರ್ಯಾಚರಣೆಯ ದಕ್ಷತೆಯಿಂದ ಇದನ್ನು ಸರಿದೂಗಿಸಲು ತಯಾರಕರಿಗೆ ಅಸಾಧ್ಯವಾಗಿದೆ. ಹಾಗಾಗಿ ರಾಜ್ಯ ಸರ್ಕಾರವು ವಾಸ್ತವ ಸ್ಥಿತಿಯನ್ನು ಪರಿಗಣಿಸಿ ಬೆಲೆ ಪರಿಷ್ಕರಣೆಗೆ ಅನುಮತಿ ನೀಡಬೇಕೆಂದು ಸಂಸ್ಥೆಯು ಆಗ್ರಹಿಸಿದೆ. ಈ ಕುರಿತು ಮಾತನಾಡಿದ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಂಜಿತ್ ಪಾಧಿ, ಪಶ್ಚಿಮ ಏಷ್ಯಾದಲ್ಲಿನ ನಿರಂತರ ಬಿಕ್ಕಟ್ಟು ಮತ್ತು ಜಾಗತಿಕ ಮಾರುಕಟ್ಟೆಯ ಏರಿಳಿತಗಳಿಂದಾಗಿ ಉತ್ಪಾದನೆ, ಪ್ಯಾಕೇಜಿಂಗ್, ಸಾಗಾಣಿಕೆ ಮತ್ತು ಇಂಧನ ವೆಚ್ಚಗಳಲ್ಲಿ ತೀವ್ರ ಏರಿಕೆಯಾಗಿದೆ. ಕಳೆದ ಎರಡು ವರ್ಷಗಳಲ್ಲಿ ಗಾಜಿನ ಬಾಟಲಿ, ಮುಚ್ಚಳ, ಲೇಬಲ್ ಬೆಲೆ ಗಣನೀಯವಾಗಿ ಹೆಚ್ಚಾಗಿದ್ದು, ಪ್ರಸ್ತುತ ಇರುವ ದರ ಪಟ್ಟಿಯಲ್ಲಿ ಉದ್ಯಮ ನಡೆಸಲು ಸಾಧ್ಯವಾಗುತ್ತಿಲ್ಲ. ರಾಜ್ಯದ ಅಬಕಾರಿ ಆದಾಯ ಹಾಗೂ ಒಟ್ಟಾರೆ ಆರ್ಥಿಕತೆಗೆ ಉದ್ಯಮವು ನೀಡುತ್ತಿರುವ ಗಣನೀಯ ಕೊಡುಗೆಯನ್ನು ಮುಂದುವರಿಸಲು ಸರ್ಕಾರವು ಬೆಲೆ ಏರಿಕೆಯ ಪ್ರಸ್ತಾವನೆಯನ್ನು ಸಕಾರಾತ್ಮಕವಾಗಿ ಪರಿಗಣಿಸಬೇಕು ಎಂದು ಹೇಳಿದ್ದಾರೆ.

ಬೇಡಿಕೆ ಈಡೇರಿಕೆಗೆ ಆಗ್ರಹ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ಮತ್ತು ಐದು ಪಾಲಿಕೆಗಳ ಅಧಿಕಾರಿ, ನೌಕರರ ಸಮಸ್ಯೆ, ಬೇಡಿಕೆ ಈಡೇರಿಕೆಗಾಗಿ ಉಪ ಮುಖ್ಯಮಂತ್ರಿಗಳ ಗಮನ ಸೆಳೆಯಲು ಪೋಸ್ಟ್ ಕಾರ್ಡ್ ಚಳವಳಿ ನಡೆಸಲಾಗುತ್ತದೆ.



ಸಮಸ್ಯೆ ಬಗೆಹರಿಯದೇ ಹೋದರೆ ಪ್ರತಿಭಟನೆಯನ್ನು ನಡೆಸಲಾಗುವುದು ಎಂದು ಬೆಂಗಳೂರು ಪ್ರಾಧಿಕಾರ–ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ತಿಳಿಸಿದೆ. ಈ ಬಗ್ಗೆ ಮಾಧ್ಯಮಕ್ಕೆ ಮಾಹಿತಿ ನೀಡಿರುವ ಸಂಘದ ಅಧ್ಯಕ್ಷ ಎ.ಅಮೃತ್ ರಾಜ್, ಜಿಬಿಎ ಕಚೇರಿ ಆವರಣದಲ್ಲಿರುವ ನೌಕರರ ಭವನದಲ್ಲಿ ತುರ್ತು ಸಭೆ ನಡೆಸಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಆಯುಕ್ತರ ಕಚೇರಿಯಲ್ಲಿ ಸೌಲಭ್ಯಗಳ ಪಡೆಯುವ ಕಡತದಲ್ಲಿ ವಿನಾಕಾರಣ ವಿಳಂಬವಾಗುತ್ತಿದೆ. ಮೃತಪಟ್ಟ ಅಧಿಕಾರಿ, ನೌಕರರ ಕುಟುಂಬದವರಿಗೆ ನಿವೃತ್ತಿ ವೇತನ ಉಪದಾನ ಮತ್ತು ಇನ್ನಿತರ ಆರ್ಥಿಕ ಸೌಲಭ್ಯವನ್ನು ಪಾಲಿಕೆಯಿಂದ ನೀಡುವುದಕ್ಕೆ ವಿಳಂಬವಾಗುತ್ತಿದ್ದು, ಕುಟುಂಬದವರು ಸಂಕಷ್ಟ ಎದುರಿಸುತ್ತಿದ್ದಾರೆ. ಸಭೆಯಲ್ಲಿ ಪಾಲಿಕೆ ನೌಕರರಿಗೆ ನಿಗದಿತ ದಿನಾಂಕದಂದು ವೇತನ ಪಾವತಿ ಬಗ್ಗೆ ಕ್ರಮವಹಿಸಬೇಕೆಂದರು.

ಸಂಚಾರ ನಿಯಮ ಉಲ್ಲಂಘಿಸಿದರೆ ಜೋಕೆ | ವಾಹನ ಸವಾರರ ಮನೆಗೆ ಬರಲಿದೆ ನೋಟಿಸ್

ಎಐ ಮೂಲಕ ಟ್ರಾಫಿಕ್ ನಿಯಂತ್ರಣ

▸ ಚಂದನ್ ಲಕ್ಕೂರು

ದಿಗಂತ ವಿಶೇಷ

• **ಬೆಂಗಳೂರು:** ಸಿಲಿಕಾನ್ ಸಿಟಿಯ ರಸ್ತೆಗಳಲ್ಲಿ ಸಂಚಾರ ನಿಯಮ ಉಲ್ಲಂಘಿಸಿ ಪೊಲೀಸರ ಕಣ್ಣು ತಪ್ಪಿಸಬಹುದು ಎಂದುಕೊಂಡರೆ ಅದು ನಿಮ್ಮ ಭ್ರಮೆ. ಏಕೆಂದರೆ ಬೆಂಗಳೂರು ಸಂಚಾರ ಪೊಲೀಸರು ಈಗ ಕೃತಕ ಬುದ್ಧಿಮತ್ತೆ (ಎಐ) ಮತ್ತು ಅತ್ಯಾಧುನಿಕ ಕ್ಯಾಮೆರಾ ಮೂಲಕ ನಗರದಾದ್ಯಂತ ಹದ್ದಿನ ಕಣ್ಣಿನ ಕಾವಲು ಹಾಕಿದ್ದಾರೆ.

ನಗರದ ಸಂಚಾರ ದಟ್ಟಣೆಯನ್ನು ವೈಜ್ಞಾನಿಕವಾಗಿ ನಿಯಂತ್ರಿಸಲು ಸಂಚಾರ ಪೊಲೀಸರು ಅತ್ಯಾಧುನಿಕ ತಂತ್ರಜ್ಞಾನದ ಮೊರೆ ಹೋಗಿದ್ದಾರೆ. ಈಗಾಗಲೇ ಕೆ.ಆರ್. ಸರ್ಕಲ್, ಚಾಲುಕ್ಯ ಸರ್ಕಲ್, ಟೌನ್ ಹಾಲ್, ಮಾರತಹಳ್ಳಿ, ವೈಟ್‌ಫೀಲ್ಡ್ ಸೇರಿದಂತೆ ನಗರದ ಸುಮಾರು 85 ಕ್ಕೂ ಹೆಚ್ಚು ಪ್ರಮುಖ ಜಂಕ್ಷನ್‌ಗಳಲ್ಲಿ ಎಐ ಆಧಾರಿತ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಸದ್ಯ 447ಕ್ಕೂ ಹೆಚ್ಚು ಇಂಟೆಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಮ್ (ಐಟಿಎಂಎಸ್) ಹಾಗೂ ರೆಡ್ ಲೈಟ್ ವಯೋಲೇಶನ್ ಡಿಟೆಕ್ಷನ್ (ಆರ್‌ಎಲ್‌ವಿಡಿ) ಕ್ಯಾಮೆರಾಗಳು ಕೆಲಸ ಮಾಡುತ್ತಿದ್ದು ಶೀಘ್ರದಲ್ಲೇ ಈ ಸಂಖ್ಯೆಯನ್ನು ಮತ್ತಷ್ಟು ಹೆಚ್ಚಿಸಲು ಇಲಾಖೆ ನಿರ್ಧರಿಸಿದೆ.

ದಂಡ ವಿಧಿಸುವ ಡಿಜಿಟಲ್ ಪದ್ಧತಿ: ವಾಹನ ಸವಾರ ನಿಯಮ ಉಲ್ಲಂಘಿಸಿದ ತಕ್ಷಣ ಈ ಎಐ ಕ್ಯಾಮೆರಾಗಳು, ಆ ವಾಹನದ ನಂಬರ್ ಪ್ಲೇಟ್ ಅನ್ನು ಸ್ಕ್ಯಾನ್ ಮಾಡುತ್ತವೆ. ಕೇವಲ ಫೋಟೋ ಮಾತ್ರವಲ್ಲದೆ, ಉಲ್ಲಂಘನೆಯ 5 ರಿಂದ 10 ಸೆಕೆಂಡ್‌ಗಳ ವಿಡಿಯೋ ಸಾಕ್ಷ್ಯವನ್ನೂ ಸೆರೆಹಿಡಿಯುತ್ತವೆ. ಈ ಮಾಹಿತಿಯು ತಕ್ಷಣವೇ ಕೇಂದ್ರೀಯ ಸರ್ವರ್‌ಗೆ ರವಾನೆಯಾಗುತ್ತದೆ. ಅಲ್ಲಿನ ಸಿಬ್ಬಂದಿ ಇದನ್ನು ಪರಿಶೀಲಿಸಿದ ಕೂಡಲೇ ವಾಹನ ಮಾಲೀಕರ ಮೊಬೈಲ್‌ಗೆ ಫೋಟೋ ಮತ್ತು ವಿಡಿಯೋ ಲಿಂಕ್ ಸಮೇತ ದಂಡದ ಮೊತ್ತದ ಸಂದೇಶ ರವಾನೆಯಾಗುತ್ತದೆ.




18ಸಾವಿರ ಪ್ರಕರಣ ದಾಖಲು

ಈ ಡಿಜಿಟಲ್ ವ್ಯವಸ್ಥೆಯಿಂದಾಗಿ ದಿನಕ್ಕೆ ಅಂದಾಜು 15,000ದಿಂದ 18,000 ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳು ದಾಖಲಾಗುತ್ತಿವೆ. ತಂತ್ರಜ್ಞಾನದ ಈ ಬಿಗಿ ಕಾವಲಿನಿಂದಾಗಿ ಸವಾರರಲ್ಲಿ ಭಯ ಮತ್ತು ಶಿಸ್ತು ಮೂಡುತ್ತಿದೆ. ನಿಯಮ ಉಲ್ಲಂಘನೆಗಳ ಸಂಖ್ಯೆ ಕ್ರಮೇಣ ಇಳಿಕೆಯಾಗುತ್ತಿದೆ. ರಸ್ತೆಯಲ್ಲಿ ಪೊಲೀಸರು ಇಲ್ಲದಿದ್ದರೂ ನಿಯಮ ಪಾಲಿಸುವುದು ಕಡ್ಡಾಯ ಎಂಬ ಅರಿವು ಸಾರ್ವಜನಿಕರಲ್ಲಿ ಮೂಡುತ್ತಿದೆ.

ಡ್ರೋನ್ ಮತ್ತು ಅಸ್ತ್ರಂ ತಂತ್ರಜ್ಞಾನದ ಬಲ

ಕೇವಲ ರಸ್ತೆ ಬದಿಯ ಕ್ಯಾಮೆರಾಗಳಷ್ಟೇ ಅಲ್ಲದೆ, 10 ಪೊಲೀಸ್ ಉಪವಿಭಾಗಗಳಲ್ಲಿ ಡ್ರೋನ್ ಕ್ಯಾಮೆರಾವನ್ನು ಬಳಸಲಾಗುತ್ತಿದೆ. ವಿಶೇಷವಾಗಿ ಬೆಳಗ್ಗೆ ಮತ್ತು ಸಂಜೆಯ ಸಂಚಾರ ದಟ್ಟಣೆ ಸಮಯದಲ್ಲಿ ಈ ಡ್ರೋನ್‌ಗಳು ಮೇಲಿನಿಂದ ಗಮನಿಸಿ ಮಾಹಿತಿ ನೀಡುತ್ತವೆ. ಇದರೊಂದಿಗೆ ಅಸ್ತ್ರಂ ಎಂಬ ಸ್ಮಾರ್ಟ್ ಎಂಜಿನ್ ಮೂಲಕ ಪೊಲೀಸರಿಗೆ ಪ್ರತಿ 15 ನಿಮಿಷಕ್ಕೊಮ್ಮೆ ಸಂಚಾರಿ ದಟ್ಟಣೆಯ ಮುನ್ಸೂಚನೆ ಸಿಗುತ್ತದೆ.

ನಗರದಲ್ಲಿ ಸಂಚಾರ ಶಿಸ್ತನ್ನು ಕಾಪಾಡಲು ತಂತ್ರಜ್ಞಾನಕ್ಕೆ ಹೆಚ್ಚಿನ ಒತ್ತು ನೀಡುತ್ತಿದ್ದೇವೆ. ಸದ್ಯ ನಗರದಾದ್ಯಂತ 447 ಐಟಿಎಂಎಸ್ ಹಾಗೂ ಆರ್‌ಎಲ್‌ವಿಡಿ ಕ್ಯಾಮೆರಾ ಕಾರ್ಯನಿರ್ವಹಿಸುತ್ತಿವೆ. ಈ ತಂತ್ರಜ್ಞಾನದ ನೆರವಿನಿಂದ ಪ್ರತಿದಿನ ಸರಾಸರಿ 15 ರಿಂದ 18 ಸಾವಿರ ನಿಯಮ ಉಲ್ಲಂಘನೆ ಪ್ರಕರಣವನ್ನು ದಾಖಲಿಸಲಾಗುತ್ತಿದೆ. ಇದರಲ್ಲಿ ಪ್ರಮುಖವಾಗಿ ಹೆಲ್ಮೆಟ್ ರಹಿತ ಚಾಲನೆ ಹಾಗೂ ಸಿಗ್ನಲ್ ಜಂಪ್ ಪ್ರಕರಣಗಳೇ ಹೆಚ್ಚಾಗಿ ಕಂಡುಬರುತ್ತಿವೆ.



■ ಕಾರ್ತಿಕ್ ರೆಡ್ಡಿ, ಜಂಟಿ ಪೊಲೀಸ್ ಆಯುಕ್ತರು (ಸಂಚಾರ ವಿಭಾಗ)

758 ಪ್ರಕರಣ ದಾಖಲು

ಸಂಚಾರ ನಿಯಮ ಉಲ್ಲಂಘಿಸುವವರ ವಿರುದ್ಧ ಬೆಂಗಳೂರು ಸಂಚಾರ ಪೊಲೀಸರು ಮೇ 4ರಿಂದ 10ರವರೆಗೆ ನಗರದ 53 ಸಂಚಾರ ಠಾಣಾ ವ್ಯಾಪ್ತಿಗಳಲ್ಲಿ ವಿಶೇಷ ಕಾರ್ಯಾಚರಣೆ ನಡೆಸಲಾಗಿದೆ. ಮದ್ಯಪಾನ ಮಾಡಿ ವಾಹನ ಚಲಾಯಿಸಿದ ಹಾಗೂ ಅತಿವೇಗವಾಗಿ ವಾಹನ ಓಡಿಸಿದ ಸವಾರರ ವಿರುದ್ಧ ಒಟ್ಟು 758 ಪ್ರಕರಣವನ್ನು ದಾಖಲಿಸಿಕೊಂಡಿದ್ದಾರೆ. ಈ ವಿಶೇಷ ಕಾರ್ಯಾಚರಣೆಯ ಅವಧಿಯಲ್ಲಿ ಸಂಚಾರ ಪೊಲೀಸರು ನಗರದಾದ್ಯಂತ ಒಟ್ಟು 45,272 ವಿವಿಧ ಮಾದರಿ ವಾಹನವನ್ನು ತಪಾಸಣೆಗೊಳಪಡಿಸಿದ್ದಾರೆ. ಈ ಪೈಕಿ ಮದ್ಯಪಾನ ಮಾಡಿ ವಾಹನ ಚಲಾಯಿಸಿದವರ ವಿರುದ್ಧವೇ ಬರೋಬ್ಬರಿ 579 ಪ್ರಕರಣ ದಾಖಲಾಗಿವೆ. ಅತಿವೇಗವಾಗಿ ವಾಹನ ಚಲಾಯಿಸಿ ರಸ್ತೆ ಸುರಕ್ಷತೆಗೆ ಧಕ್ಕೆ ತಂದ 179 ಮಂದಿಯ ವಿರುದ್ಧ ಪ್ರಕರಣ ದಾಖಲಿಸಿ, ಒಟ್ಟು 1,80,000 ರೂ.ದಂಡವನ್ನು ವಸೂಲಿ ಮಾಡಲಾಗಿದೆ.

ಡಿವೈಡರ್‌ಗೆ ಬೈಕ್ ಡಿಕ್ಕಿ: ಸವಾರ ಸಾವು

• **ಬೆಂಗಳೂರು:** ನಗರದಲ್ಲಿ ಅತಿವೇಗದ ಚಾಲನೆ ಮತ್ತೊಂದು ಜೀವವನ್ನು ಬಲಿಪಡೆದಿದೆ. ಪಾಲಿ ರೈಡ್‌ಗೆ ತೆರಳಿದ್ದ ಯುವಕನೊಬ್ಬ ವೇಗ ವಾಗಿ ಬೈಕ್ ಚಲಾಯಿಸಿದ ಪರಿಣಾಮ, ನಿಯಂತ್ರಣ ತಪ್ಪಿ ಮೇಲ್ಸೇತುವೆಯ ಗೋಡೆಗೆ ಡಿಕ್ಕಿ ಯಾಗಿ ಸ್ಥಳದಲ್ಲೇ ಮೃತಪಟ್ಟಿರುವ ದಾರುಣ ಘಟನೆ ಸಂಭವಿಸಿದೆ.

ಬಾಣಸವಾಡಿ ಮೂಲದ ಲಕ್ಷ್ಯ ಕುಮಾರ್ (19) ಮೃತಪಟ್ಟ ದುರ್ದೈವಿ. ಈತನೊಂದಿಗೆ ಬೈಕ್‌ನಲ್ಲಿ ಹಿಂಬದಿ ಸವಾರನಾಗಿ ಪ್ರಯಾಣಿ ಸುತ್ತಿದ್ದ ಆರ್ಯನ್ ಎಂಬ ಯುವಕನಿಗೂ ತೀವ್ರ ಗಾಯಗಳಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಘಟನೆಗೆ ಸಂಬಂಧಿಸಿದಂತೆ ಚಿಕ್ಕಜಾಲ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸೋಮವಾರ ಬೆಳಗಿನ ಜಾವ ಸುಮಾರು 3.55ರಿಂದ 4.15ರ ಅವಧಿಯಲ್ಲಿ ಈ ಅಪಘಾತ ಸಂಭವಿಸಿದೆ. ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಕಡೆಯಿಂದ ನಗರದ ಒಳಭಾಗಕ್ಕೆ ಬಳ್ಳಾರಿ ರಸ್ತೆಯ ಮೂಲಕ ಬರು ತ್ತಿದ್ದಾಗ, ವಿದ್ಯಾನಗರದ ಮೇಲ್ಸೇತುವೆಯ ಮೇಲೆ ಈ ದುರಂತ ನಡೆದಿದೆ.

ಕೆಟಿಎಂ 900 ಬೈಕ್‌ನಲ್ಲಿ ಅತೀ ವೇಗವಾಗಿ ತೆರಳುತ್ತಿದ್ದ ಯುವಕರು, ಮೇಲ್ಸೇತುವೆಯ ತಿರುವಿನಲ್ಲಿ ವೇಗವನ್ನು ನಿಯಂತ್ರಿಸಲು ಸಾಧ್ಯವಾಗದೆ ಗೋಡೆಗೆ ಡಿಕ್ಕಿ ಹೊಡೆದಿದ್ದಾರೆ. ಡಿಕ್ಕಿಯ ರಭಸಕ್ಕೆ ಬೈಕ್ ಚಲಾಯಿಸುತ್ತಿದ್ದ ಲಕ್ಷ್ಯ ಕುಮಾರ್‌ನನ್ನು ದೂರಕ್ಕೆ ಎಸೆಯಲ್ಪಟ್ಟು ಸ್ಥಳದಲ್ಲೇ ಪ್ರಾಣ ಬಿಟ್ಟಿದ್ದಾನೆ. ವಿಷಯ ತಿಳಿದ ತಕ್ಷಣ ಸ್ಥಳಕ್ಕೆ ಧಾವಿಸಿದ ಸಂಚಾರ ಪೊಲೀಸರು, ಮೃತದೇಹ ವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿ ಗಾಯಾಳು ವನ್ನು ಆಸ್ಪತ್ರೆಗೆ ಸೇರಿಸುವ ವ್ಯವಸ್ಥೆ ಮಾಡಿದ್ದಾರೆ.


ಅತಿವೇಗವೇ ಈ ಅಪಘಾತಕ್ಕೆ ನೇರ ಕಾರಣ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ.

ಶಿಥಿಲ ಗೋಡೆ, ಕಟ್ಟಡಗಳ ತೆರವುಗೊಳಿಸಲು ಕ್ರಮ

• **ಬೆಂಗಳೂರು:** ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಶಿಥಿಲಗೊಂಡ ಗೋಡೆ ಹಾಗೂ ಕಟ್ಟಡಗಳ ಪಟ್ಟಿ ಮಾಡಿ, ತೆರವುಗೊಳಿಸುವಂತೆ ಅಧಿಕಾರಿಗಳಿಗೆ ರಾಜೇಂದ್ರ ಚೋಳನ್ ನಿರ್ದೇಶನ ನೀಡಿದ್ದಾರೆ. ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಇಂಜಿನಿಯರಿಂಗ್ ಹಾಗೂ ಕಂದಾಯ ವಿಭಾಗದ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನ ಸಭೆ ನಡೆಸಿದ ಅವರು, ಪಾಲಿಕೆಯ ವ್ಯಾಪ್ತಿಯಲ್ಲಿ ಶಿಥಿಲಗೊಂಡ, ಅಪಾಯಕಾರಿ ಸ್ಥಿತಿಯಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಸ್ವತ್ತುಗಳ ಕಂಪೌಂಡ್ ಗೋಡೆಗಳು ಹಾಗೂ ಕಟ್ಟಡವನ್ನು ಪಟ್ಟಿಮಾಡಿ, ಸಾರ್ವಜನಿಕ ಸುರಕ್ಷಾ ದೃಷ್ಟಿಯಿಂದ ತುರ್ತಾಗಿ ತೆರವು ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಮುಂಗಾರು ಮಳೆಗಾಲಕ್ಕೂ ಮುಂಚಿತವಾಗಿ ರಸ್ತೆ ಪಕ್ಕದಲ್ಲಿ ಚರಂಡಿಗಳಲ್ಲಿ ಹೂಳು ತೆಗೆಯುವ ಕಾಮಗಾರಿಯನ್ನು ಆದಷ್ಟು ಬೇಗ ಮುಕ್ತಾಯಗೊಳಿಸಿ, ಚರಂಡಿಗಳಲ್ಲಿ ಮಳೆ ನೀರು ಸರಾಗವಾಗಿ ಹರಿಯುವ ಹಾಗೆ ಕ್ರಮ ವಹಿಸಲು ಹೇಳಿದ್ದಾರೆ.

ಕೋಟ್ಯಂತರ ರೂ.ವಂಚನೆ: ಬಿಜೆಪಿ ದೂರು

• **ಬೆಂಗಳೂರು:** ಕಾನೂನು ಬಾಹಿರವಾಗಿ ಎ ಖಾತಾವನ್ನು ಮಾಡಿ ಕೊಡುವ ಮೂಲಕ ಪಾಲಿಕೆಗೆ ಕೋಟ್ಯಂತರ ರೂಪಾಯಿ ವಂಚಿಸಿರುವ ಹೇರೋಹಳ್ಳಿ ಉಪ ವಿಭಾಗದ ಸಹಾಯಕ ಕಂದಾಯ ಅಧಿಕಾರಿ ಮಂಜುಳಾ ವಿರುದ್ಧ ಬಿಜೆಪಿ ಮುಖಂಡ ಎನ್.ಆರ್.ರಮೇಶ್ ಲೋಕಾಯುಕ್ತಕ್ಕೆ ದೂರು ನೀಡಿದ್ದಾರೆ.



ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ದಾಖಲೆ ಬಿಡುಗಡೆ ಮಾಡಿ ಮಾತನಾಡಿದ ಅವರು, ಯಶವಂತಪುರ ವಿಧಾನಸಭಾ ಕ್ಷೇತ್ರದ ಹೇರೋಹಳ್ಳಿ ಗ್ರಾಮದಲ್ಲಿರುವ 4.20 ಎಕರೆ ವಿಸ್ತೀರ್ಣದ ಸ್ವತ್ತಿನಲ್ಲಿ ಹಾಲಿ ಹಾಸಿ ರೊಬ್ಬರ ಅಪ್ಪ ಬಿಡಿಎ ನಕ್ಷೆ ಮಂಜೂರಾತಿಯನ್ನೇ ಪಡೆಯದೆ ಅನಧಿಕೃತ ಬಡಾವಣೆ ನಿರ್ಮಾಣ ಮಾಡಿದ್ದಾರೆ. ಬಡಾವಣೆ ನಿರ್ಮಿಸಿರುವ ಜಾಗದ ಬಗ್ಗೆ ನ್ಯಾಯಾಲಯದಲ್ಲಿ ಕುಟುಂಬಸ್ಥರ ನಡುವೆ ವ್ಯಾಜ್ಯ ನಡೆಯುತ್ತಿದ್ದರೂ ಸಹ ಕಾನೂನು ಬಾಹಿರವಾಗಿ ಖಾತಾಗಳನ್ನು ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಅವಿವಾಹಿತರೊಬ್ಬರ ಮಾಲೀಕತ್ವಕ್ಕೆ ಸೇರಿದ್ದ ಜಾಗದಲ್ಲಿ ಪತ್ನಿ, ಮಗಳು ಇದ್ದಾರೆ ಎಂದು ನಕಲಿ ದಾಖಲೆ ಸೃಷ್ಟಿಸಲಾಗಿದೆ ಎಂದು ಅವಿವಾಹಿತರೊಬ್ಬರ ಸಹೋದರನ ಮಗಳು ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದಾರೆ. ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿರುವ ಸ್ವತ್ತಿನಲ್ಲಿ ಅಕ್ರಮ ಬಡಾವಣೆ ಯನ್ನು ನಿರ್ಮಿಸಲಾಗಿದೆ. ಬಿಡಿಎಯಿಂದ ನಕ್ಷೆ ಮಂಜೂರಾತಿ ಪಡೆಯದೆ ಅಕ್ರಮವಾಗಿ ಬಡಾವಣೆ ನಿರ್ಮಿಸಿದ್ದರೂ ಸಹ ಎಆರ್‌ಒ ಮಂಜುಳಾ ಅವರು ಎ ಖಾತಾ ಮಾಡಿಕೊಟ್ಟಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಕಾನೂನು ಬಾಹಿರವಾಗಿ ವಿಂಗಡಿಸಿರುವ 50 ನಿವೇಶನಗಳಿಗೆ ಖಾತಾಗಳನ್ನು ಈ ಹಿಂದೆಯೇ ಮಾಡಿರುವ ಹಾಗೆ ದಾಖಲೆಗಳನ್ನು ತಿದ್ದಲಾಗಿದೆ. ಅಧಿಕೃತ ಬಡಾವಣೆಯಾಗಿದ್ದಲ್ಲಿ ಈ 50 ನಿವೇಶನಗಳಿಗೆ ಎ ಮತ್ತು ಇ ಖಾತಾ ಮಾಡಿ ಕೊಟ್ಟಿದ್ದರೆ ಕನಿಷ್ಠ ಆರೇಳು ಕೋಟಿ ರೂಪಾಯಿ ಸುಧಾರಣಾ ಶುಲ್ಕ ಪಾಲಿಕೆಗೆ ಸಂದಾಯವಾಗುತ್ತಿತ್ತು ಎಂದು ತಿಳಿಸಿದ್ದಾರೆ.

ಅವರೆ ಮಂಜುಳಾ ಅವರು ಲಂಚ ಪಡೆದು ಈ ರೀತಿ ಕರ್ತವ್ಯಲೋಪ ಮಾಡಿದ್ದಾರೆ. ಅವರ ವಿರುದ್ಧ ಹಲವಾರು ದೂರುಗಳು ದಾಖಲಾಗಿದ್ದರೂ ಸಹ, ಇದುವರೆಗೂ ಅವರ ವಿರುದ್ಧ ಯಾವುದೇ ಕ್ರಮ ತೆಗೆದು ಕೊಳ್ಳದೇ ಇರುವುದು ಹಲವು ಅನುಮಾನಗಳಿಗೆ ಎಡೆಮಾಡಿ ಕೊಟ್ಟಿದೆ.ಹೀಗಾಗಿ ಮಂಜುಳಾ ಅವರ ವಿರುದ್ಧ ಲೋಕಾಯುಕ್ತದಲ್ಲಿ ಭ್ರಷ್ಟಾಚಾರ, ವಂಚನೆ, ಅಧಿಕಾರ ದುರುಪಯೋಗ ನಡೆದಿದೆ.

ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ

ಮುಂದಿನ ಚುನಾವಣೆಯಲ್ಲಿ ಬಿಜೆಪಿಗೆ 150ಕ್ಕೂ ಅಧಿಕ ಸ್ಥಾನ

• **ಕುಶಾಲನಗರ:** ರಾಜ್ಯ ಸರಕಾರದ ಜನ ವಿರೋಧಿ ನೀತಿಯ ವಿರುದ್ಧ ಜನ ಸಿಡಿದೆದ್ದು ಸಂಘಟನಾತ್ಮಕವಾಗಿ ಕಾರ್ಯ ನಿರ್ವಹಿಸಿ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕೊಡಗು ಸೇರಿದಂತೆ ರಾಜ್ಯದ 150ಕ್ಕೂ ಹೆಚ್ಚು ಸ್ಥಾನವನ್ನು ಬಿಜೆಪಿ ಗಳಿಸಲಿದೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ವಿಶ್ವಾಸ ವ್ಯಕ್ತಪಡಿಸಿದರು.



ಕೊಡುಮಂಗಳೂರು ಗ್ರಾ.ಪಂ. ವ್ಯಾಪ್ತಿಯ ಚಿಕ್ಕತ್ತೂರು ಗ್ರಾಮದಲ್ಲಿರುವ ಖಾಸಗಿ ಸಭಾಂಗಣದಲ್ಲಿ ನಡೆಯುತ್ತಿರುವ ಪಂಡಿತ ದೀನದಯಾಳ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನದ ಸಂದರ್ಭ ಸುದ್ದಿಗಾರರೊಂದಿಗೆ ಮಾತನಾಡಿದರು.

ಮುಂದೆ ರಾಜ್ಯದಲ್ಲಿ ಸಂಘಟನೆ, ಜನಪರಹೋರಾಟ, ಜನರ ವಿಶ್ವಾಸದಿಂದ, ಮೋದಿ ಸರ್ಕಾರದ ಜನ ಕಲ್ಯಾಣ ಯೋಜನೆಗಳು ನಮ್ಮ ಸೈದ್ಧಾಂತಿಕ ಅಧಿಷ್ಠಾನದ ಯೋಜನೆಯ ಮೂಲಕ ಜನರ ಮನಮುಟ್ಟುವಂತೆ ಮಾಡುವ ಮೂಲಕ ಸ್ಥಾನ ಗಳಿಸಬಹುದಾಗಿದೆ ಎಂದರು.

ಈ ಸರಕಾರ ಜನರ ಸಮಸ್ಯೆಗಳನ್ನು ಪರಿಹರಿಸುವ ಬದಲು ಕುರ್ಚಿ ಸಮಸ್ಯೆಯಲ್ಲಿ ಸಿಲುಕಿ ಒದಡುತ್ತಿದೆ. ನೌಕರರ ಆತ್ಮಹತ್ಯೆಯಲ್ಲಿ ಸರಕಾರ ಮೊದಲ ಸ್ಥಾನ, ರೈತರ ಆತ್ಮಹತ್ಯೆಯಲ್ಲಿ ಎರಡನೇ ಸ್ಥಾನ, ಜೊತೆಗೆ ರಾಜ್ಯದ ಕುಡಿಯುವ ನೀರಿನ ಸಮಸ್ಯೆಗಳನ್ನು ಬಗೆ ಹರಿಸಲು ಸಾಧ್ಯವಾಗದ ರೀತಿಯಲ್ಲಿ ಸರಕಾರದ ನಡೆಯುತ್ತಿದೆ ಎಂದು ದೂರಿದರು.

ರಾಜ್ಯದಲ್ಲಿ ಜ್ವಲಂತ ಸಾರ್ವಜನಿಕ ಸಮಸ್ಯೆಗಳು ಬಂದಾಗ ಕುರ್ಚಿ ಸಮಸ್ಯೆಯನ್ನೇ ಸಾರ್ವಜನಿಕ ಸಮಸ್ಯೆಗಳನ್ನಾಗಿ ಮಾಡಿ ಪ್ರಮುಖವಾದ ಸಾರ್ವಜನಿಕ ಸಮಸ್ಯೆಗಳು ಮರೆಮಾಚ ಹೋಗುತ್ತಿವೆ. ಇದರಿಂದಾಗಿ ರಾಜ್ಯದ ಜನರ ವಿಶ್ವಾಸ, ಜನಪರ ಯೋಜನೆಯ ಮೂಲಕ ಕಾರ್ಯಕರ್ತರನ್ನು ಹುರಿದುಂಬಿಸಿ ಸಿದ್ಧರಾಗಿದ್ದೇವೆ ಎಂದು ಸಿ.ಟಿ.ರವಿ ತಿಳಿಸಿದರು.

ರಾಷ್ಟ್ರೀಯ ಸೇವಾ ಯೋಜನೆಯಿಂದ ಸಮಾಜದ ಸ್ವಾಸ್ಥ್ಯ ಸಾಧ್ಯ : ಡಾ. ಶೇಷಪ್ಪ

• **ಮಂಗಳೂರು :** ರಾಷ್ಟ್ರೀಯ ಸೇವಾ ಯೋಜನೆಯಿಂದ ಸಮಾಜದ ಸ್ವಾಸ್ಥ್ಯ ಸಾಧ್ಯ. ರಾಷ್ಟ್ರೀಯ ಸೇವಾ ಯೋಜನೆ ವಿದ್ಯಾರ್ಥಿಗಳಿಗೆ ಸಂಸ್ಕಾರಯುತ ಜೀವನ ಮೌಲ್ಯಗಳನ್ನು ಕಲಿಸುವ ಮೂಲಕ ಅವರ ಸರ್ವತೋಮುಖ ವ್ಯಕ್ತಿತ್ವ ವಿಕಾಸಕ್ಕೆ ಕಾರಣವಾಗುತ್ತಿದೆ ಎಂದು ಮಂಗಳೂರು ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್. ಸಂಯೋಜಕ ಡಾ. ಶೇಷಪ್ಪ ಹೇಳಿದರು.

ಬಾಳುದಪದವು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ಆಚಾರಿಪಲ್ಕೆ ಗ್ರಾಮದಲ್ಲಿ ಹಮ್ಮಿಕೊಂಡಿರುವ ರಾಷ್ಟ್ರೀಯ ಸೇವಾ ಯೋಜನೆ (ಎನ್.ಎಸ್.ಎಸ್.) ವಾರ್ಷಿಕ ವಿಶೇಷ ಶಿಬಿರದಲ್ಲಿ ಅವರು ಮಾತನಾಡಿದರು.

ಏಳು ದಿನಗಳ ಶಿಬಿರವು ವಿದ್ಯಾರ್ಥಿಗಳಿಗೆ ದೊರೆತ ಅಪೂರ್ವ ಅವಕಾಶವಾಗಿದ್ದು, ಇದನ್ನು ಸದುಪಯೋಗಪಡಿಸಿಕೊಂಡು ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಜಾಗೃತಿ, ಪರಿಸರ ಸಂರಕ್ಷಣೆ, ಸಾಮಾಜಿಕ ಕಾಳಜಿ ಹಾಗೂ ಲೋಕೋಪಯೋಗಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯ ಅಪ್ಪುರ್ರೈ ಹೆರ್ಕಾಡಿ ಅವರು ದೀಪ ಬೆಳಗಿಸಿದರು.



ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯ ನವೀನ್ ಚಂದ್ರ ಶೆಟ್ಟಿ, ಗ್ರಾಮದ ಮುಖ್ಯಸ್ಥರಾದ ಕರುಣೇಂದ್ರ ಪೂಜಾರಿ, ಕೇಶವ ಪೂಜಾರಿ, ಶಾಲೆಯ ಮುಖ್ಯೋಪಾಧ್ಯಾಯ ಮರ್ಸಿನ್ ಮೇಥಿ ಪಾಯಸ್ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲ ಡಾ. ಮಹೇಶ್ ಕೆ.ಬಿ. ವಹಿಸಿದ್ದರು.

ಕಾಲೇಜಿನ ಹಿರಿಯ ಪ್ರಾಧ್ಯಾಪಕ ಹಾಗೂ ವಿದ್ಯಾರ್ಥಿ ಕ್ಷೇಮಪಾಲನ ಸಮಿತಿಯ ಸಂಚಾಲಕ ಪ್ರೊ. ಶ್ರೀಧರ್ ಕೆ., ಆಚಾರಿಪಲ್ಕೆ ಸರ್ಕಾರಿ ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷ ದಯಾನಂದ ಗೌಡ, ಮಾಜಿ ಗ್ರಾಮ ಪಂಚಾಯತ್ ಸದಸ್ಯ ಲಕ್ಷ್ಮಿ ನಾರಾಯಣ ಗೌಡ, ಉದ್ಯಮಿ ಗಂಗಾಧರ ಪೂಜಾರಿ ಅಮುಂಜ್ಯಗುತ್ತು, ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯ ಪ್ರವೀಣ್ ಗಟ್ಟಿ, ಅಧ್ಯಾಪಕ ಸುನೀಲ್, ಸಹ ಶಿಬಿರಾಧಿಕಾರಿಗಳಾದ ಡಾ. ಉದಯಕುಮಾರ ಸಿ.ಆರ್. ಹಾಗೂ ದಿನೇಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಲೋಹಿತ್ ಕೆ.ಸಿ. ಅವರು ಮಾರ್ಗದರ್ಶನ ನೀಡಿದರು.

ಶಿಬಿರಾಧಿಕಾರಿಗಳಾದ ಡಾ. ಪುಟ್ಟಲಕ್ಷ್ಮಮ್ಮ ಸ್ವಾಗತಿಸಿದರು. ಐಕ್ಯೂಎಸಿ ಸಂಯೋಜಕ ಡಾ. ವಿಶಾಲ್ ಪಿಂಟೋ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಮತ್ತೊಬ್ಬ ಶಿಬಿರಾಧಿಕಾರಿ ಡಾ. ಮಧು ಎ.ಎಸ್. ಅವರು ವಂದನಾರ್ಪಣೆ ಮಾಡಿದರು.

ಕರ್ನಾಟಕ ಸರ್ಕಾರ
ರಾಯಚೂರು ಮಹಾನಗರ ಪಾಲಿಕೆ
E-mail:itstaff_ulb_raichurn@yahoo.com Website:-www.raichurcity.gov.in
Phone No:08532-226768 Fax No:08532-226316
No. CCR/ENG/TS/CF/2026-27 Date :06/05/2026

ಟೆಂಡರ್ ಅಧಿಸೂಚನೆ (KPPP 2.0 ವಿಧಾನದಲ್ಲಿ)

ಕೆಳಕಂಡ ಅನುದಾನದಡಿ ಸೂಚಿಸಲಾದ ಕಾಮಗಾರಿಗಳಿಗೆ KPPP 2.0 ವಿಧಾನದಲ್ಲಿ ಟೆಂಡರ್ ಅಧಿಸೂಚನೆಗಳನ್ನು ಆಹ್ವಾನಿಸಲಾಗುತ್ತಿದೆ ಎಂದು ತಿಳಿಸಲಾಗುತ್ತದೆ. ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ತಮ್ಮ ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ (www.kppp.karnataka.gov.in) ಮೂಲಕ ಸಲ್ಲಿಸಬಹುದು. ಹೆಚ್ಚಿನ ವಿವರಗಳನ್ನು ರಾಯಚೂರು ಮಹಾನಗರ ಪಾಲಿಕೆ ಅಧಿಕೃತ ಜಾಲತಾಣ (http://www.raichurcity.mrc.gov.in) ದಲ್ಲಿಯೂ ಪಡೆಯಬಹುದು.

Sl. No	Grant Details	Name of Work	Indent Number
1	DC Office GRANT	The Making, Supply and Erection of 12 feet Height bronze Statue of late Dr.B R.Ambedkar in Raichur City. **Estimate Cost Rs. 65.00 Lakhs.**	DMA/2026-27/IND6250
2	SFC Grant	Construction of Tensile Roofing Structure to Existing Gallery at Mahila Samaja Open Auditorium In Raichur City. **Estimate Cost Rs. 76.44 Lakhs.**	DMA/2026-27/OW/WORK_INDENT57404/CALL-2
3	2026-27 Corporation Fund	Operation and Maintenance of street lights in ward no 1 to 35 in Raichur City. Estimate Cost Rs. 248.00 Lakhs.	DMA/2026-27/SE7840
4		LEAKAGE MAINTENANCE OF WATER SUPPLY DISTRIBUTION NETWORK IN RAICHUR CITY CORPORATION. Estimate Cost Rs. 100.00 Lakhs.	DMA/2026-27/WS/WORK_INDENT58184
5		CONSTRUCTION OF DOG SHELTER AND ABC CENTRE IN RAICHUR CITY Estimate Cost Rs. 150.00 Lakhs.	DMA/2026-27/BD/WORK_INDENT58187

ಸಹಿ/- ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ರಾಯಚೂರು.
DIP/RCR/59KSMCA/61/2026-27

ಕಿರುಸುದ್ದಿ


ಯುವತಿ ನಾಪತ್ತೆ



• **ಮಂಗಳೂರು:** ಪಚ್ಚನಾಡಿ ಗ್ರಾಮದ ಭಟ್ರಕೋಡಿ ಬಾಡಿಗೆ ಮನೆಯಲ್ಲಿ ವಾಸವಿದ್ದ ಪಲ್ಲವಿ (21) ಎಂಬಾಕೆ ನಗರದ ಫಳ್ನೀರ್ ಎಂಬಲ್ಲಿ ಕಾಲ್ ಸೆಂಟರ್ ನಲ್ಲಿ ಕೆಲಸ ಮಾಡಿಕೊಂಡಿದ್ದು, ಮೇ 10ರಂದು ಮನೆಯಿಂದ ಕೆಲಸಕ್ಕೆಂದು ಹೋದವರು ವಾಪಸು ಮನೆಗೆ ಬಾರದ ಕಾರಣ ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಕಾಣೆಯಾದವರ ಬಗ್ಗೆ ಮಾಹಿತಿ ಪತ್ತೆಯಾದಲ್ಲಿ ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆ ಸಂಪರ್ಕಿಸುವಂತೆ ಠಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಎಂ.ಇ.ಗಂಗಾಧರ ಆಚಾರ್ಯ



ಮಂಜೇಶ್ವರ: ಮಂಗಲ್ಪಾಡಿ ಪ್ರತಾಪನಗರ ನಿವಾಸಿ ಆರ್‌ಎಸ್‌ಎಸ್, ಬಿಜೆಪಿ ಹಿರಿಯ ಕಾರ್ಯಕರ್ತ ಎಂ.ಇ.ಗಂಗಾಧರ ಆಚಾರ್ಯ (65) ಅಲ್ಪಕಾಲದ ಅಸೌಖ್ಯದಿಂದ ಶನಿವಾರ ಮಧ್ಯಾಹ್ನ ಸ್ವಗೃಹದಲ್ಲಿ ನಿಧನ ಹೊಂದಿದರು. ಅವರು ಹಿರಿಯ ಮರದ ಕೆಲಸಗಾರರಾಗಿದ್ದರು. ಬಿಎಂಎಸ್ ನಿರ್ಮಾಣ ಘಟಕದ ಜಿಲ್ಲಾ ಮಾಜಿ ಉಪಾಧ್ಯಕ್ಷರು, ಶ್ರೀ ಗಾಯತ್ರಿ ವಿಶ್ವಕರ್ಮ ಸಮಾಜ ಸಭಾ ಪ್ರತಾಪನಗರ ಮಂಗಲ್ಪಾಡಿ ಇದರ ಮಾಜಿ ಅಧ್ಯಕ್ಷರೂ ಆಗಿದ್ದರು. ಮೃತರು ದಿ.ಈಶ್ವರ ಆಚಾರ್ಯ ಮತ್ತು ದಿ.ಪದ್ಮಾವತಿ ದಂಪತಿಯ ಪುತ್ರನಾಗಿದ್ದು, ಪತ್ನಿ ಕಲಾವತಿ, ಮಕ್ಕಳಾದ ಯಶಸ್ವಿನಿ, ಕೀರ್ತಿಶ್ರೀ, ಮಿಥುನ್ ಆಚಾರ್ಯ. ಸಹೋದರ ಸಹೋದರಿಯರಾದ ಜನಾರ್ಧನ ಆಚಾರ್ಯ, ಮಾಧವ ಆಚಾರ್ಯ, ಯಮುನ, ಲೀಲಾವತಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಕಿಶೋರ್ ಕುಮಾರ್



ಮಂಗಳೂರು: ನಗರದ ಮಣ್ಣಗುಡ್ಡೆ ಬಳಿಯ ನಿವಾಸಿ ಕಿಶೋರ್ ಕುಮಾರ್ (58) ಅವರು ಮೇ 11ರಂದು ಅಸೌಖ್ಯದಿಂದ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಅವರು ಪತ್ನಿ ಹಾಗೂ ಪುತ್ರಿಯನ್ನು ಅಗಲಿದ್ದಾರೆ. ಮಣ್ಣಗುಡ್ಡೆಯಲ್ಲಿ ಹೂ ಮಾರಾಟದ ಅಂಗಡಿ ನಡೆಸುತ್ತಿದ್ದ ಅವರು ಹೂವಿನ ಅಲಂಕಾರದಲ್ಲಿ ತನ್ನ ವಿಶೇಷ ನೈಪುಣ್ಯತೆಯಿಂದ ಜನಪ್ರಿಯತೆ ಗಳಿಸಿದ್ದರು. ಪರಿಸರದಲ್ಲಿ ಶವ ಸಂಸ್ಕಾರದ ಸಿದ್ಧತೆ ಮತ್ತಿತರ ಸಾಮಾಜಿಕ ಸೇವಾ ಕಾರ್ಯಗಳಲ್ಲಿ ಅವರು ಸಕ್ರಿಯರಾಗಿದ್ದರು.

ಹೇಮಾ



• **ಕೈಕಂಬ :** ಕುಪ್ಪೆಪದವು ಕಿಲೆಂಜಾರು ಅರಮನೆ ಸರಕಾರಿ ಪ್ರೌಢಶಾಲೆಯಲ್ಲಿ ಕಳೆದ 20 ವರ್ಷಗಳಿಂದ ಬಿಸಿಯೂಟ ಅಡುಗೆ ಸಹಾಯಕಿಯಾಗಿದ್ದ ಹೇಮಾ (60) ಅವರು ಅನಾರೋಗ್ಯದಿಂದ ಸ್ವಗೃಹದಲ್ಲಿ ಸೋಮವಾರ ನಿಧನ ಹೊಂದಿದರು. ಪತಿಯನ್ನು ಅಗಲಿರುವ ಹೇಮಾರಿಗೆ ಮಕ್ಕಳಿಲ್ಲದಿದ್ದರೂ, ಶಾಲಾ ಮಕ್ಕಳಲ್ಲಿ ಅಪಾರ ಪ್ರೀತಿ ತೋರಿಸುತ್ತಿದ್ದರು. ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಸುಧೀರ್ ಜೈನ್ , ಶಿಕ್ಷಕ ವೃಂದ, ವಿದ್ಯಾವರ್ಧಕ ಸಂಘದ ಅಧ್ಯಕ್ಷ ಅಜಿತ್ ಕುಮಾರ್ ಜೈನ್, ಕಾರ್ಯದರ್ಶಿ ಶೇಖ್ ಅಬ್ದುಲ್ಲ, ಉದ್ಯಮಿ ಜಗದೀಶ್ ಕುಲಾಲ್ ಹಾಗೂ ಅಪಾರ ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.

ಮಹಾಬಲ ಭಟ್



ಮಂಜೇಶ್ವರ: ಹೊಸಂಗಡಿ ಬಳಿಯ ಅಂಗಡಿಪದವ್ ನಿವಾಸಿ ಮಂಜೇಶ್ವರ ಗ್ರಾಮ ಪಂಚಾಯತ್ ನಿವೃತ್ತ ಕಾರ್ಯದರ್ಶಿ ಮಹಾಬಲ ಭಟ್ (85) ಶನಿವಾರ ಮಧ್ಯಾಹ್ನ ಸ್ವಗೃಹದಲ್ಲಿ ನಿಧನ ಹೊಂದಿದರು. ಅವರು ಬದಿಯಡ್ಕ, ಪುತ್ತಿಗೆ ಸಹಿತ ವಿವಿಧ ಪಂಚಾಯತ್‌ಗಳಲ್ಲಿ ಕಾರ್ಯದರ್ಶಿಯಾಗಿ ಸೇವೆ ಸೇವೆ ಸಲ್ಲಿಸಿ ಮಂಜೇಶ್ವರ ಪಂಚಾಯತ್‌ನಲ್ಲಿ ನಿವೃತ್ತಿ ಹೊಂದಿದ್ದರು. ಅಲ್ಲದೆ ಕೆಎಸ್‌ಎಸ್‌ಪಿಯು ಮಂಜೇಶ್ವರ ಘಟಕದ ಸದಸ್ಯರೂಆಗಿದ್ದಾರೆ. ಮೃತರು ಪತ್ನಿ ರೇವತಿ, ಮಕ್ಕಳಾದ ಗಣೇಶ, ಪಾರ್ವತಿ ಅವರನ್ನು ಅಗಲಿದ್ದಾರೆ.

ಜನಾರ್ದನ ಯು.

ಮಂಜೇಶ್ವರ: ಉದ್ಯಾವರ ಮಾಡ ಶ್ರೀ ಅರಸು ಮಂಜಿಷ್ಣಾರ್ ದೈವ ಕ್ಷೇತ್ರದ ನಿವೃತ್ತ ಮೈಕ್ ಆಪರೇಟರ್ ಜನಾರ್ದನ ಯು. (70) ಸೋಮವಾರ ಮುಂಜಾನೆ ನಿಧನ ಹೊಂದಿದರು. ಮಂಜಪ್ಪ ಮತ್ತು ಪೂವಮ್ಮ ದಂಪತಿಯ ಪುತ್ರನಾದ ಮೃತರು ಎಸ್‌ಎನ್‌ಡಿಪಿ, ಮಾಡ ತೀಯಾ ಸಮಾಜದ ಮುಖಂಡರಾಗಿದ್ದರು. ಮಾಡ ಕ್ಷೇತ್ರದಲ್ಲಿ ಕಳೆದ 35 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದರು. ಮೃತರು ಪತ್ನಿ ಕಮಲಾಕ್ಷಿ, ಮಕ್ಕಳಾದ ನಿತಿನ್, ದೀಪಿಕಾ ಅವರನ್ನು ಅಗಲಿದ್ದಾರೆ.



ದಕ್ಷಿಣ ಕನ್ನಡ ಜಿಲ್ಲೆಗೆ ಸೋಮವಾರ ಆಗಮಿಸಿದ ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಿಕಾರಿಪುರ ಶಾಸಕ ಬಿ.ವೈ.ವಿಜಯೇಂದ್ರ ಅವರನ್ನು ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ದಕ್ಷಿಣ ಕನ್ನಡ ಬಿಜೆಪಿ ವತಿಯಿಂದ ಪಕ್ಷದ ಮುಖಂಡರು ಸ್ವಾಗತಿಸಿದರು. ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಸಂಸದ ಕ್ಯಾ.ಬ್ರಿಜೇಶ್ ಚೌಟ, ಶಾಸಕರಾದ ವೇದವ್ಯಾಸ ಕಾಮತ್, ಡಾ.ವೈ.ಭರತ್ ಶೆಟ್ಟಿ, ಹರೀಶ್ ಪೂಂಜ, ವಿಧಾನ ಪರಿಷತ್ ಶಾಸಕ ಕಿಶೋರ್ ಕುಮಾರ್ ಪುತ್ತೂರು, ಮುಖಂಡರಾದ ಸಂದೇಶ್ ಶೆಟ್ಟಿ, ಹರಿಕೃಷ್ಣ ಬಂಟ್ವಾಳ್, ಯತೀಶ್ ಆರ್ವಾರ, ಪ್ರೇಮಾನಂದ ಶೆಟ್ಟಿ ಸೇರಿದಂತೆ ಪಕ್ಷದ ನಾಯಕರು, ಕಾರ್ಯಕರ್ತರು ಇದ್ದರು.

ಕೇರಳದಲ್ಲಿ ಸರಕಾರ ರಚನೆ | ಆರ್‌ಎಸ್‌ಪಿ – ಆರ್‌ಎಂಪಿ ಆಗ್ರಹ

ಅರ್ಹ ಪ್ರಾತಿನಿಧ್ಯ ನಮಗೂ ಬೇಕು

• **ಕಾಸರಗೋಡು:** ಹತ್ತು ವರ್ಷಗಳ ಕಾಯುವಿಕೆಯ ಬಳಿಕ ಪ್ರಚಂಡಬಹುಮತದೊಂದಿಗೆ ಆರಿಸಲ್ಪಟ್ಟ ಯುಡಿಎಫ್ ಸಚಿವ ಸಂಪುಟದಲ್ಲಿ ನಮಗೂ ಅರ್ಹ ಪ್ರಾತಿನಿಧ್ಯ ನೀಡಬೇಕೆಂಬ ಪರೋಕ್ಷವಾಗಿ ಯುಡಿಎಫ್ ಘಟಕ ಪಕ್ಷಗಳಾದ ಆರ್‌ಎಂಪಿ ಮತ್ತು ಆರ್‌ಎಸ್‌ಪಿ ಸೂಚಿಸಿವೆ.

ಕಲ್ಲಿಕೋಟೆ ಜಿಲ್ಲೆಯ ವಡಗರ ವಿಧಾನಸಭಾ ಕ್ಷೇತ್ರದಿಂದ ಆರ್‌ಎಂಪಿ ನಾಯಕಿ ಕೆ.ಕೆ.ರಮಾ ಆ ಕ್ಷೇತ್ರದಿಂದ ಸತತ ಎರಡನೇ ಬಾರಿ ಆಯ್ಕೆಗೊಂಡಿದ್ದಾರೆ. ನಿಮಗೆ ಯುಡಿಎಫ್ ಸಚಿವ ಸಂಪುಟ ದಲ್ಲಿ ಸಚಿವರಾಗಲು ಅಗ್ರಹವಿದೆಯೇ ಎಂದು ಸುದ್ದಿಗಾರರು ಪ್ರಶ್ನಿಸಿದಾಗ ಆ ವಿಷಯದಲ್ಲಿ ನಮ್ಮ ಪಕ್ಷ ಈ ತನಕ ಯಾವುದೇ ತೀರ್ಮಾನ ಕೈಗೊಂಡಿಲ್ಲ. ಪಕ್ಷದ ಸಭೆ ಕರೆದು ಈ ವಿಷಯದ ಬಗ್ಗೆ ಚರ್ಚೆ ನಡೆಸಲಾಗುವುದು. ಅದೇನೇ ಇದ್ದರೂ ಸಚಿವ ಸಂಪುಟದಲ್ಲಿ ನಮಗೂ ಅರ್ಹ ಪ್ರಾತಿನಿಧ್ಯ ಲಭಿಸಲಿದೆಯೆಂಬ ಮೂಲಕ ತಮಗೂ ಸಚಿವ ಸ್ಥಾನ ಲಭಿಸಬೇಕೆಂದು ಪರೋಕ್ಷವಾಗಿ ತಮ್ಮ ಮನದಾಳದ ಇಂಗಿತವನ್ನು ಕೆ.ಕೆ.ರಮಾ ವ್ಯಕ್ತಪಡಿಸಿದ್ದಾರೆ.

ಇದರ ಹೊರತಾಗಿ ಚುನಾವಣೆಯಲ್ಲಿ ಮೂರು ಕ್ಷೇತ್ರಗಳಲ್ಲಿ ಯುಡಿಎಫ್‌ನ ಇನ್ನೊಂದು ಘಟಕ ಪಕ್ಷವಾದ ಆರ್‌ಎಸ್‌ಪಿ ಗೆದ್ದಿದೆ. ಆರ್‌ಎಸ್‌ಪಿ ಈ ಬಾರಿ ಐದು ಕ್ಷೇತ್ರಗಳಲ್ಲಿ ಸ್ಪರ್ಧಿಸಿತ್ತು. ಕೂಡಾ ಯುಡಿಎಫ್ ಸಚಿವ ಸಂಪುಟದಲ್ಲಿ ಆ ಪೈಕಿ ಚವರ, ಇರವಿಪುರಂ ಮತ್ತು ಕುನ್ನತ್ತೂರು ಎಂಬ ಕ್ಷೇತ್ರಗಳಲ್ಲಿ ಗೆದ್ದಿದೆ. ಇದರಿಂದಾಗಿ ಆರ್‌ಎಸ್‌ಪಿಗೆ ಅರ್ಹ ಪ್ರಾತಿನಿಧ್ಯ ಲಭಿಸಲಿದೆಯೆಂಬ ನಿರೀಕ್ಷೆಯನ್ನು ವ್ಯಕ್ತಪಡಿಸಿದೆ. ಹಾಗೆ ನಡೆದಲ್ಲಿ ಆರ್‌ಎಸ್‌ಪಿ ನೇತಾರ ಶಿಬು ಬೇಬಿ ಜೋನ್‌ರಿಗೆ ಸಚಿವ ಸ್ಥಾನ ಲಭಿಸುವ ಸಾಧ್ಯತೆ ಇದೆ. ಅವರು ಆರ್‌ಎಸ್‌ಪಿಯ ರಾಜ್ಯ ಕಾರ್ಯದರ್ಶಿಯೂ ಆಗಿದ್ದಾರೆ.

ಆರ್‌ಎಂಪಿ ನಾಯಕಿ ಕೆ.ಕೆ.ರಮಾ ವಡಗರ ವಿಧಾನ ಸಭಾ ಕ್ಷೇತ್ರದಲ್ಲಿ ಯುಡಿಎಫ್ ಬೆಂಬಲಿತ ಪಕ್ಷೇತರ ಉಮೇದ್ವಾರರಾಗಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದಾರೆ. ಅಲ್ಲದೆ ಸಿಪಿಎಂ ಪಕ್ಷವನ್ನು ಬಿಟ್ಟು ಹೊರಬಂದ ಮಾಜಿ ಸಚಿವ ಜಿ.ಸುಧಾಕರನ್ ಅಂಬಲಪುಳ ಕ್ಷೇತ್ರದಲ್ಲೂ ತಳಿಪರಂಬ ಕ್ಷೇತ್ರದಲ್ಲಿ ಕೆ.ಗೋವಿಂದನ್ ಮತ್ತು ಪಯ್ಯನ್ನೂರಿ ನಲ್ಲಿ ಕುಂಞಿಕೃಷ್ಣನ್ ಕೂಡಾ ಯುಡಿಎಫ್ ಬೆಂಬಲಿತ, ಪಕ್ಷೇತರ ಉಮೇದ್ವಾರರಾಗಿ ಸ್ಪರ್ಧಿಸಿ ಗೆದ್ದು ಬಂದಿದ್ದಾರೆ. ಈ ಪೈಕಿ ಜಿ.ಸುಧಾಕರನ್ ಕೂಡಾ ಸಚಿವ ಸ್ಥಾನ ಆಕಾಂಕ್ಷಿಯಾಗಿದ್ದಾರೆ.

ಹಿಂದುಳಿದ ವರ್ಗದ ಬಡ ವಿದ್ಯಾರ್ಥಿಗಳಿಗೆ ಅವಕಾಶ

ಸರ್ಕಾರದಿಂದಲೇ ನೀಟ್ ತರಬೇತಿ

• **ಮಂಗಳೂರು:** ಹಿಂದುಳಿದ ವರ್ಗಕ್ಕೆ ಸೇರಿದ ಬಡ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ತರಬೇತಿ ನೀಡಲು ರಾಜ್ಯ ಸರ್ಕಾರವೇ ಸೂಕ್ತ ತರಬೇತಿ ನೀಡಲು ನಿರ್ಧರಿಸಿದೆ.

ಸರ್ಕಾರಿ ಶಾಲೆಗಳಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಪ್ರತಿಭಾನ್ವಿತ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಈ ಅವಕಾಶ ದೊರೆಯಲಿದೆ. ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ವಸತಿ ಸಹಿತ ಪಿಯುಸಿ ಜತೆ ನೀಟ್, ಜೆಇಇ, ಸಿಇಟಿ ಪರೀಕ್ಷಾ ಪೂರ್ವ ತರಬೇತಿ ನೀಡುವ ಯೋಚನೆ ಸರ್ಕಾರದ್ದು, ಈ ಕುರಿತ ಎಲ್ಲಾ ಕಾರ್ಯಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೂಲಕ ನಡೆಯಲಿದೆ.

ಪ್ರತಿ ಜಿಲ್ಲೆಯಿಂದ 15 ಮಂದಿಗೆ ಅವಕಾಶ

ಯೋಜನೆಯ ಕುರಿತಂತೆ ಈಗಾಗಲೇ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸುತ್ತೋಲೆಯನ್ನು ರವಾನಿಸಲಾಗಿದೆ. ರಾಜ್ಯದ ಪ್ರತಿ ಜಿಲ್ಲೆಯಿಂದ ತಲಾ15 ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಆಯ್ಕೆ ಮಾಡಿ ಕಳುಹಿಸುವಂತೆ ತಿಳಿಸಲಾಗಿದೆ. ಸದ್ಯದ ಮಾಹಿತಿಯ ಪ್ರಕಾರ ಬೆಂಗಳೂರಿನಲ್ಲಿ ವಸತಿಯುತ ಪಿಯುಸಿ (ವಿಜ್ಞಾನ ವಿಭಾಗದಲ್ಲಿ) ಶಿಕ್ಷಣದ ಜತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುವ ವ್ಯವಸ್ಥೆ ನಡೆಯಲಿದೆ. 2026–27 ಹಾಗೂ 2027–28ನೇ ಸಾಲಿನವರೆಗೆ ಎರಡು ವರ್ಷಗಳ ತರಬೇತಿ ಯೋಜನೆ ಇದಾಗಿದೆ.

ಸರ್ಕಾರಿ ಶಾಲೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ್ದ ಪ್ರತಿ ಜಿಲ್ಲೆಯಿಂದ 15 ವಿದ್ಯಾರ್ಥಿಗಳಂತೆ 31 ಜಿಲ್ಲೆಗಳಿಗೆ 465 ವಿದ್ಯಾರ್ಥಿಗಳು ಹಾಗೂ 35 ವಿದ್ಯಾರ್ಥಿಗಳನ್ನು ಇಲಾಖಾ ಸಚಿವರ ವಿವೇಚನಾ ಕೋಟಾದಡಿ ಆಯ್ಕೆ ಮಾಡಲು ನಿರ್ಧರಿಸಲಾಗಿದೆ. ಹೀಗಾಗಿ ಪ್ರಸಕ್ತ ಸಾಲಿನಲ್ಲಿ ಒಟ್ಟು 500 ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಸರ್ಕಾರ ಯೋಜನೆ ರೂಪಿಸಿದೆ.



ಪ್ರವರ್ಗವಾರು ಮೀಸಲಾತಿ

ಪ್ರವರ್ಗ 1ರಡಿ ಓರ್ವ ಮಹಿಳೆ (ಬಾಲಕಿ), 1 ಮೆರಿಟ್ ಆಧಾರಿತ ಸೇರಿ ಶೇ. 15ರಷ್ಟು, 2ಎಯಡಿ ಎರಡು ಮಹಿಳೆ (ಬಾಲಕಿ), ಆರು ಮೆರಿಟ್ ಆಧರಿತ ಸೇರಿ ಶೇ. 53, 3ಎ ಮತ್ತು 3 ಬಿ ಯಡಿ ತಲಾ ಒಂದು ಮಹಿಳೆ ಮತ್ತು ಮೆರಿಟ್ ಆಧರಿತ ಸೇರಿ ತಲಾ ಶೇ. 15ರಷ್ಟು ಮೀಸಲಾತಿಯಡಿ ಆಯ್ಕೆ ನಡೆಯಲಿದೆ. ಇದಲ್ಲದೆ ಯಾವುದೇ ಪ್ರವರ್ಗದಲ್ಲಿ ಹೆಚ್ಚು ಅಂಕ ಗಳಿಸಿರುವ ಓರ್ವ ವಿಶೇಷ ಚೇತನ ವಿದ್ಯಾರ್ಥಿಗೆ ಅವಕಾಶ ಕಲ್ಪಿಸಬೇಕಾಗಿದೆ.

ಈ ರೀತಿಯಾಗಿ ಪ್ರತಿ ಜಿಲ್ಲೆಯಿಂದ ಒಟ್ಟು 15 ಪ್ರತಿಭಾನ್ವಿತ ವಿದ್ಯಾರ್ಥಿಗಳ ಆಯ್ಕೆಗೆ ಮಾರ್ಗಸೂಚಿಯನ್ನು ನೀಡಲಾಗಿದೆ. ಯಾವುದಾದರೂ ಪ್ರವರ್ಗದಲ್ಲಿ ಮಹಿಳಾ ವಿದ್ಯಾರ್ಥಿಗಳು ಲಭ್ಯವಿಲ್ಲದಿದ್ದಾಗ ಉಳಿಕೆಯಾಗುವ ಸ್ಥಾನವನ್ನು ಅದೇ ಪ್ರವರ್ಗದ ಮೆರಿಟ್ ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಬಹುದಾಗಿದೆ. ವಿಶೇಷ ಚೇತನ ವಿದ್ಯಾರ್ಥಿಗಳು ಇಲ್ಲದಿದ್ದರೆ ಮೀಸಲಾತಿ ಅನ್ವಯ ನಿಗದಿತ ಪ್ರವರ್ಗಕ್ಕೆ ಹಂಚಿಕೆ ಮಾಡುವಂತೆ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಆಯ್ಕೆಗೆ ಮಾನದಂಡಗಳೇನು?

ಭಾರತದ ಪ್ರಜೆಯಾಗಿದ್ದು, ಕರ್ನಾಟಕದ ಖಾಯಂ ನಿವಾಸಿಯಾಗಿರುವ ಕರ್ನಾಟಕ ಸರಕಾರ ಅಧಿಸೂಚಿಸಿರುವ ಹಿಂದುಳಿದ ವರ್ಗಗಳ ಪ್ರವರ್ಗ 1, 2ಎ, 3ಎ ಅಥವಾ 3ಬಿ ಜಾತಿಗೆ ಸೇರಿದ ಎಸ್ಸೆಸೆಲ್ಸಿಯಲ್ಲಿ ಅತ್ಯಧಿಕ ಅಂಕ ಗಳಿಸಿದವರಿಗೆ ಆದ್ಯತೆ. ವಿದ್ಯಾರ್ಥಿ ಮತ್ತು ಕುಟುಂಬದ ವಾರ್ಷಿಕ ಆದಾಯ 8 ಲಕ್ಷ ರೂಗಳ ಒಳಗಿರಬೇಕು. ಎಸ್ಸೆಸೆಲ್ಸಿಯನ್ನು ವಿದ್ಯಾರ್ಥಿಯು ಸರ್ಕಾರಿ ವಸತಿ ರಹಿತ ಶಾಲೆಯಲ್ಲಿ ಪೂರೈಸಿದ್ದು, ಗಣಿತ ಮತ್ತು ವಿಜ್ಞಾನ ವಿಷಯದಲ್ಲಿ ತಲಾ ಕನಿಷ್ಠ 90 ಅಂಕಗಳನು ಪಡೆದಿರಬೇಕು. ಜಿಲ್ಲಾಧಿಕಾರಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಎಸ್ಸೆಸೆಲ್ಸಿ ಫಲಿತಾಂಶ ಪ್ರಕಟವಾದ ತಕ್ಷಣ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಪ್ರವರ್ಗವಾರು ಮೀಸಲಾತಿ ಮತ್ತು ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಬೇಕು. ಆಯ್ಕೆಯಾದ ವಿದ್ಯಾರ್ಥಿಗಳ ಪೋಷಕರ ಜತೆ ಮಾತನಾಡಿ ಅವರ ಒಪ್ಪಿಗೆ ಪಡೆದು ಆಯ್ಕೆ ಪಟ್ಟಿಯನ್ನು ಆಯುಕ್ತರ ಕಚೇರಿಗೆ ಕಳುಹಿಸಬೇಕು.

ಪೈಸಾರಿ: ವಸತಿರಹಿತ ಕಾರ್ಮಿಕರ

ಅಹೋರಾತ್ರಿ ಧರಣಿ 11 ನೇ ದಿನಕ್ಕೆ



• **ಸೋಮವಾರಪೇಟೆ:** ನಿವೇಶನ ರಹಿತ ಬಡವರಿಗೆ ನಿವೇಶನ ನೀಡುವಂತೆ ಒತ್ತಾಯಿಸಿ, ಕರ್ನಾಟಕ ಬಹುಜನ ಕಾರ್ಮಿಕ ಸಂಘಟನೆಯ ನೇತೃತ್ವದಲ್ಲಿ ಕುಂಬೂರು ಗ್ರಾಮದ ಪೈಸಾರಿ ಜಾಗದಲ್ಲಿ ವಸತಿರಹಿತ ಕಾರ್ಮಿಕರು ನಡೆಸುತ್ತಿರುವ ಅಹೋರಾತ್ರಿ ಧರಣಿ 11 ನೇ ದಿನಕ್ಕೆ ಕಾಲಿಟ್ಟಿದೆ.

ಸೋಮವಾರವೂ ಜನಪ್ರತಿನಿಧಿಗಳು ಮತ್ತು ಜಿಲ್ಲಾಡಳಿತದ ಯಾವುದೇ ಅಧಿಕಾರಿಗಳು ಧರಣಿ ನಿರತರನ್ನು ಭೇಟಿ ಮಾಡಿ ಚರ್ಚಿಸಿಲ್ಲ. ಮಹಿಳಾ ಸಂಘಟನೆಗಳ ಪ್ರಮುಖರು ಧರಣಿ ಸ್ಥಳಕ್ಕೆ ಆಗಮಿಸಿ ಹೋರಾಟದ ಬಗ್ಗೆ ಮಾತನಾಡಿದರು. ಸಂಘಟನೆಯ ಅಧ್ಯಕ್ಷ ಕೆ.ಮೊಣ್ಣಪ್ಪ ಮಾತನಾಡಿ, ಕಳೆದ 25 ವರ್ಷಗಳಿಂದಲೂ ಸೂರಿಗಾಗಿ ಶ್ರಮಿಕರು ಹೋರಾಟ ಮಾಡುತ್ತಿದ್ದಾರೆ. ಆದರೆ ನಿವೇಶನ ರಹಿತ ಬಡವರಿಗೆ ನಿವೇಶನ ನೀಡಿಲ್ಲ. ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡ ಉಳ್ಳವರಿಗೆ ಹಕ್ಕುಪತ್ರಗಳನ್ನು ನೀಡುತ್ತಿದ್ದಾರೆ. ಯುವ ನಾಯಕ ಡಾ.ಮಂತರ್‌ಗೌಡ ಅವರಾದರೂ ಬಡವರಿಗೆ ನಿವೇಶನ ಕೊಡಿಸಲು ಪ್ರಯತ್ನಿಸುತ್ತಾರೆ ಎಂಬ ನಂಬಿಕೆಯಿತ್ತು. ಆದರೆ 11 ದಿನಕಳೆದರೂ ಶಾಸಕರು ಧರಣಿ ಸ್ಥಳಕ್ಕೆ ಬಂದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಅಹೋರಾತ್ರಿ ಧರಣಿಯ ಬಗ್ಗೆ ಸಂಘಟನೆ ರಾಜ್ಯ ನಾಯಕರಿಗೆ ಮಾಹಿತಿ ನೀಡಿದ್ದೇವೆ. ಕಂದಾಯ ಮಂತ್ರಿ ಮತ್ತು ಕರ್ನಾಟಕ ಮುಖ್ಯ ಕಾರ್ಯದರ್ಶಿಗಳೊಂದಿಗೆ ನಾಯಕರು ಮಾತನಾಡಿದ್ದಾರೆ. ರಾಜ್ಯ ನಾಯಕರು ಧರಣಿ ಸ್ಥಳಕ್ಕೆ ಬಂದ ನಂತರ ಉಪವಾಸ ಸತ್ಯಗ್ರಹದ ಬಗ್ಗೆ ತೀರ್ಮಾನ ಮಾಡಲಿದ್ದೇವೆ. ನಮಗೂ ಬದುಕುವ ಹಕ್ಕಿದೆ. ಸಂವಿಧಾನ ಶ್ರಮಿಕರಿಗೂ ಸಮಾನ ಹಕ್ಕುಗಳನ್ನು ನೀಡಿದೆ ಎಂದು ಹೇಳಿದರು.

ಪಡುಬಿದ್ರಿ, ದೇವಸ್ಥಾನಕ್ಕೆ ಕಟೀಲಿನ ಕಮಲಾದೇವಿಪ್ರಸಾದ ಆಸ್ರಣ್ಣ ಭೇಟಿ



• **ಪಡುಬಿದ್ರಿ:** ಸಮಗ್ರವಾಗಿ ಜೀರ್ಣೋದ್ಧಾರಗೊಂಡು ಶಿಲಾಮಯ, ಕಾಷ್ಠ ಶಿಲ್ಪದೊಂದಿಗೆ ಕಂಗೊಳಿಸುವ ಪಡುಬಿದ್ರಿಯ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇಗುಲವು ಅತ್ಯಂತ ಸುಂದರವಾಗಿ ಡಾ।ಕೆ.ಪ್ರಕಾಶ್ ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಕಡಿಮೆ ಅವಧಿಯಲ್ಲಿ ಪುನರ್ ನವೀಕರಣಗೊಂಡಿರುವುದು, ಭಕ್ತರೆಲ್ಲರ ಸುಕೃತ. ಸಹಸ್ರ ವರ್ಷ ಇತಿಹಾಸವುಳ್ಳ ಪಡುಬಿದ್ರಿ ದೇವಸ್ಥಾನವು ಮತ್ತೆ ಸಹಸ್ರವರ್ಷಗಳ ಕಾಲ ಭಕ್ತರ ಮನೋವಾಂಛೆಯನ್ನು ಪೂರೈಸುವ ಶಕ್ತಿಕೇಂದ್ರವಾಗಲಿ ಎಂದು ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಅನುವಂಶಿಕ ಅರ್ಚಕ ಕಮಲಾದೇವಿಪ್ರಸಾದ ಆಸ್ರಣ್ಣ ಅವರು ಹೇಳಿದರು.

ಅವರು ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನಕ್ಕೆ ಮೇ 9ರಂದು ಆಗಮಿಸಿದ ಸಂದರ್ಭದಲ್ಲಿ ಪಡುಬಿದ್ರಿಗೂ ತಮಗೂ ಅವಿನಾಭಾವ ಸಂಬಂಧವೂ ಇದೆ. ಹಾಗಾಗಿ ಪಡುಬಿದ್ರಿಯ ಒಡೆಯ ಮಹಾಲಿಂಗೇಶ್ವರ ಮತ್ತು ಇಷ್ಟಾರ್ಥಸಿದ್ಧಿ ಮಹಾಗಣಪತಿಯ ದರ್ಶನಕ್ಕಾಗಿ ತಾನು ಕುಟುಂಬ ಸಮೇತನಾಗಿ ಬಂದಿರುವುದಾಗಿಯೂ ಹೇಳಿದರು.

ಶ್ರೀ ದೇವಸ್ಥಾನಕ್ಕಾಗಮಿಸಿದ ಕಮಲಾದೇವಿಪ್ರಸಾದ ಆಸ್ರಣ್ಣ ದಂಪತಿಗೆ ಶ್ರೀ ದೇಗುಲದ ಅರ್ಚಕ ಎಚ್. ಪದ್ಮನಾಭ ಭಟ್ ಶಾಲು ಹೊದಿಸಿ ಸನ್ಮಾನಿಸಿ ದೇವರ ಗಂಧಪ್ರಸಾದಗಳನ್ನಿತ್ತರು.

ಈ ಸಂದರ್ಭದಲ್ಲಿ ಸದಾನಂದ ಆಸ್ರಣ್ಣ ಕಟೀಲು, ಜೀರ್ಣ??ದ್ಧಾರ ಸಮಿತಿಯ ಕಾರ್ಯದರ್ಶಿ ಶ್ರೀನಾಥ್ ಹೆಗ್ಡೆ ನಡ್ಸಾಲ್ ಗುತ್ತು, ಬ್ರಹ್ಮಕಲಶೋತ್ಸವ ಸಮಿತಿಯ ಪದಾಧಿಕಾರಿಗಳಾದ ಸುರೇಶ್ ರಾವ್ ವೈ., ವಿಷ್ಣುಮೂರ್ತಿ ಆಚಾರ್ಯ ಪಾದೆಬೆಟ್ಟು, ರಮಾಕಾಂತ ರಾವ್, ಮುರಳೀನಾಥ ಶೆಟ್ಟಿ, ಜಯ ಎಸ್. ಶೆಟ್ಟಿ ಪದ್ರ, ದಾನಿಗಳಾದ ಮುಂಬಯಿನ ಉದಯ ಕೆ. ಶೆಟ್ಟಿ ಪದ್ರ ಹಾಗೂ ದಿನೇಶ್ ಕೆ. ಶೆಟ್ಟಿ ಪದ್ರ, ಪ್ರಕಾಶ್ ಶೆಟ್ಟಿ ಪಡುಹಿತ್ಲು ಮತ್ತಿತರರಿದ್ದರು.

ಉಡುಪಿ: ಶ್ರೀಕೃಷ್ಣ ಮಂತ್ರ ಲೇಖನ ಯಜ್ಞಕ್ಕೆ ಶೀರೂರು ಶ್ರೀಗಳಿಂದ ಚಾಲನೆ



• **ಉಡುಪಿ:** ಶ್ರೀಕೃಷ್ಣ ಮಠದ ರಾಜಾಂಗಣದಲ್ಲಿ ಶ್ರೀಕೃಷ್ಣ ಮಂತ್ರ ಲೇಖನ ಯಜ್ಞವನ್ನು ಪರ್ಯಾಯ ಶ್ರೀ ಶೀರೂರು ಮಠಾಧೀಶ ಶ್ರೀವೇದವರ್ಧನ ತೀರ್ಥ ಶ್ರೀಪಾದರು ಉದ್ಘಾಟಿಸಿದರು. ಬಳಿಕ ಆಶೀರ್ವಚನ ನೀಡಿದ ಅವರು, ಯಾವುದೇ ಒಂದು ಪಾಠವನ್ನು ಅಥವಾ ಜಪವನ್ನು ಕೇವಲ ಬಾಯಲ್ಲಿ ಹೇಳಿದರೆ ಅದು ಪೂರ್ತಿ ಮನಸ್ಸಿನಲ್ಲಿ ಇಲ್ಲದೇ ಹೋಗಬಹುದು, ಅದಕ್ಕೋಸ್ಕರ ಪುನರಪಿ ಬರೆಯುತ್ತಾ ಇದ್ದಲ್ಲಿ ಅದು ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೇ ನಿಲ್ಲುತ್ತದೆ. ಅದಕ್ಕೋಸ್ಕರ ಶ್ರೀಕೃಷ್ಣ ಮಂತ್ರವನ್ನು ಪುಸ್ತಕದಲ್ಲಿ ಬರೆದು, ಅದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ಈ ಯಜ್ಞವನ್ನು ಪ್ರಾರಂಭಿಸಿದ್ದೇವೆ. ನಾಡಿನ ಎಲ್ಲ ಜನರು ಲೇಖನ ಯಜ್ಞದಲ್ಲಿ ಪಾಲ್ಗೊಂಡು ದೇವರ ಅನುಗ್ರಹವನ್ನು ಪಡೆಯ ಬೇಕು ಎಂದರು.

ಗೌರವಾನ್ವಿತ ಅತಿಥಿಗಳಾಗಿ ಬೆಂಗಳೂರಿನ ಇಸ್ಕಾನ್‌ನ ಉಪಾಧ್ಯಕ್ಷ ಚಂಚಲಪತಿ ದಾಸರು ಲೇಖನ ಹೊತ್ತಿಗೆಯನ್ನು ಉದ್ಘಾಟಿಸಿ, ಕೃಷ್ಣ ಮಂತ್ರ ಜಪದ ಮಹಿಮೆಯನ್ನು ವರ್ಣಿಸಿದರು.

ಬೆಂಗಳೂರಿನ ವಿದ್ಯಾ ಪೂರ್ಣಪ್ರಜ್ಞ ವಿದ್ಯಾಪೀಠದ ನಿವೃತ್ತ ಪ್ರಾಂಶುಪಾಲರಾದ ಮಹಾ ಮಹೋಪಾಧ್ಯಾಯ ವಿದ್ವಾನ್ ಹರಿದಾಸ ಭಟ್ಟರು, ಕಲಿಯುಗದಲ್ಲಿ ಕೃಷ್ಣ ಮಂತ್ರದ ಮಹಿಮೆ ಮತ್ತು ಅದರಿಂದ ಆಗುವ ಪ್ರಯೋಜನವನ್ನು ವಿವರಿಸಿ ಹರಸಿದರು. ಅಭ್ಯಾಗತರಾಗಿ ಉಡುಪಿಯ ಶಾಸಕ ಯಶ್‌ಪಾಲ್ ಸುವರ್ಣ ಹಾಗೂ ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶೀರೂರು ಮಠದ ದಿವಾನರಾದ ಡಾ. ಉದಯಕುಮಾರ್ ಸರಳತ್ತಾಯ ಸ್ವಾಗತಿಸಿದರು. ಆಸ್ಥಾನ ವಿದ್ವಾಂಸರಾದ ಆನಂದತೀರ್ಥ ಆಚಾರ್ಯರು ಕಾರ್ಯಕ್ರಮವನ್ನು ನಿರೂಪಿಸಿದರು.

ಪುತ್ತೂರು ದೇವಳದಲ್ಲಿ ಸೀಯಾಳಾಭಿಷೇಕ



• **ಪುತ್ತೂರು:** ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ವಠಾರದ ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿ ವತಿಯಿಂದ ಇತಿಹಾಸ ಪ್ರಸಿದ್ಧ ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಸೋಮವಾರ ದೇವರಿಗೆ ಸೀಯಾಳಾಭಿಷೇಕ ನಡೆಯಿತು.

ಲೋಕ ಕಲ್ಯಾಣಾರ್ಥ ಮತ್ತು ಕಾಲ ಕಾಲಕ್ಕೆ ಮಳೆ, ಬೆಳೆಗಾಗಿ ಹಾಗೂ ದೇಶ ಕಾಯುವ ಸೈನಿಕರಿಗೆ ಹೆಚ್ಚಿನ ಶಕ್ತಿಯನ್ನು ಒದಗಿಸುವಂತೆ ಪ್ರಾರ್ಥಿಸಿ ದೇವರಿಗೆ ಅಭಿಷೇಕ ನೆರವೇರಿಸಲಾಯಿತು. ಬೆಳಗ್ಗೆ 9.30ರಿಂದ ಆರಂಭಗೊಂಡ ಸೀಯಾಳಾಭಿಷೇಕ್ಕೆ ಭಕ್ತರು ಸೀಯಾಳವನ್ನು ಹೆಚ್ಚಿನ ಸಂಖ್ಯೆಯಲ್ಲಿ ತಂದೊಪ್ಪಿಸಿದರು. ಈ ಸಂದರ್ಭ ಗಣೇಶೋತ್ಸವ ಸಮಿತಿ ಪದಾಧಿಕಾರಿಗಳು, ಭಕ್ತಾದಿಗಳು ಉಪಸ್ಥಿತರಿದ್ದರು.

ಜಗದ್ಗುರು ಶ್ರೀ ಶಂಕರ ಭಗವತ್ಪಾದಾಚಾರ್ಯರ ಪಂಚಲೋಹದ ಪ್ರತಿಮೆ ಪ್ರತಿಷ್ಠಾಪನೆ, ಕುಂಭಾಭಿಷೇಕ

ಶಂಕರ ತತ್ವ ಪಾಲನೆ ಸಂಕಷ್ಟಗಳಿಗೆ ಪರಿಹಾರ: ಶ್ರೀ



• **ಕಾಸರಗೋಡು:** ಶ್ರೀ ಶಂಕರ ಭಗವತ್ಪಾದಾವರ ತತ್ವಗಳ ಪಾಲನೆ ಆತ್ಮೋದ್ಧಾರದೊಂದಿಗೆ ಸಕಲ ಸಂಕಷ್ಟಗಳಿಗೆ ಪರಿಹಾರ ಸಾಧ್ಯವಾಗುವುದಾಗಿ ಶೃಂಗೇರಿ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠದ ಜಗದ್ಗುರು ಶ್ರೀ ಭಾರತೀ ತೀರ್ಥ ಪಾದಂಗಳವರ ತತ್ಕರಕಮಲ ಸಂಜಾತ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಹೇಳಿದ್ದಾರೆ.

ಜಗದ್ಗುರುಶ್ರೀಶಂಕರಾಚಾರ್ಯಸಂಸ್ಥಾನಶ್ರೀಮದ್ ಎಡನೀರು ಮಠದಲ್ಲಿ ನೂತನವಾಗಿ ನಿರ್ಮಿಸಿದ ಶಿಲಾಮಯ ಮಂಟಪದಲ್ಲಿ ಜಗದ್ಗುರು ಶ್ರೀ ಶಂಕರ ಭಗವತ್ಪಾದಾಚಾರ್ಯರ ಪಂಚಲೋಹದ ಪ್ರತಿಮೆಯ ಪ್ರತಿಷ್ಠಾಪನೆಯೊಂದಿಗೆ ಕುಂಭಾಭಿಷೇಕ ನೆರವೇರಿಸಿ, ಮಂದಿರ ಸೋಮವಾರ ಲೋಕಾರ್ಪಣೆಗೈದು ಅವರು ಆಶೀರ್ವಚನ ನೀಡಿದರು. ಇದೇ ಸಂದರ್ಭ ಶ್ರೀ ಮಠದ ಆನಂದ ಭಾರತೀ ಪ್ರಕಾಶನದ ಲಾಂಛನವನ್ನು ಶೃಂಗೇರಿ ಜಗದ್ಗುರುಗಳು ಬಿಡುಗಡೆಗೊಳಿಸಿದರು.

ಅಪೂರ್ವ ಭತ್ತದ ತಳಿಗಳ ಸಂಗ್ರಹ ಹಾಗೂ ಸಂಶೋಧನೆಗಾಗಿ ಪದ್ಮಭೂಷಣ ಪಡೆದ ಸತ್ಯನಾರಾಯಣ ಬೇಳೇರಿ ಅವರ ಮುಂದಿನ ಸಂಶೋಧನೆಗೆ ನೆರವಾಗುವ ನಿಟ್ಟಿನಲ್ಲಿ ಸ್ಥಾಪಿಸಲ್ಪಟ್ಟ ಬೆಳ್ಳೂರು ನೆಟ್ಟಣಿಗೆಯ ಅತಿಕಾರ ಟ್ರಸ್ಟ್‌ನ ಲಾಂಛನ ಬಿಡುಗಡೆಗೊಳಿಸಿ, ಸತ್ಯನಾರಾಯಣ ಬೇಳೇರಿ ಅವರನ್ನು ಶಾಲು ಹೊದಿಸಿ, ಸ್ಮರಣಿಕೆ ನೀಡ ಗೌರವಿಸಿದರು. ಪ್ರತಿಮೆ ಸ್ಥಾಪನೆಗೆ ಕೊಡುಗೆ ನೀಡಿದ ರಾಜೀವ ಆಗಸ್ತ್ಯಮೂಲೆ ಅವರನ್ನು ಗೌರವಿಸಲಾಯಿತು. ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಆಶೀರ್ವಚನ ನೀಡಿದರು. ಕಾಸರಗೋಡು ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್, ಉದುಮ ಶಾಸಕ ಕೆ.ನೀಲಕಂಠನ್, ಶೃಂಗೇರಿ ಮಠದ ವಿದ್ವಾಂಸರು, ಪುರೋಹಿತರು, ಶ್ರೀಮಠದ ಉಪಶಾಖೆಗಳ ಆಡಳಿತಾಧಿಕಾರಿಗಳು ಉಪಸ್ಥಿತರಿದ್ದರು.

ಶ್ರೀಮಠದ ಪುರೋಹಿತರಿಂದ ವೈದಿಕ ಪ್ರಾರ್ಥನೆ, ಬಳ್ಳಪದವು ಯೋಗೀಶ್ ಶರ್ಮ ಅವರಿಂದ ಸಂಗೀತ ಪ್ರಾರ್ಥನೆ ನಡೆಯಿತು. ಹಿರಣ್ಯ ವೆಂಕಟೇಶ್ವರ ಭಟ್ ಪ್ರಾಸ್ತಾವಿಕ ಮಾತುಗಳನ್ನಾಡಿ, ಕಾರ್ಯಕ್ರಮ ನಿರೂಪಿಸಿದರು.

ಶ್ರೀ ಮಠದ ಪ್ರಬಂಧಕ ರಾಜೇಂದ್ರ ಕಲ್ಲೂರಾಯ ಶೃಂಗೇರಿ ಜಗದ್ಗುರುಗಳಿಗೆ ಫಲಪುಷ್ಪ ಸಮರ್ಪಿಸಿದರು. ಡಾ.ಟಿ.ಶ್ಯಾಮ್ ಭಟ್ ಸ್ವಾಗತಿಸಿ, ಸ್ವರ್ಣೋದ್ಯಮಿ ಬಲರಾಮ ಆಚಾರ್ಯ ಪುತ್ತೂರು ವಂದಿಸಿದರು. ಕಾರ್ಯಕ್ರಮದ ಅಂಗವಾಗಿ ಶ್ರೀ ರುದ್ರಹವನ, ದಕ್ಷಿಣಾ ಮೂರ್ತಿ ಹವನ, ಶ್ರೀ ಗೋಪಾಲಕೃಷ್ಣಹವನ ನಡೆಯಿತು.

ಐಪಿಎಲ್ ಹವಾ 19
ಚುಟುಕು ಕ್ರಿಕೆಟ್ ಹಬ್ಬ
11
ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಮಂಗಳವಾರ, 12 ಮೇ 2026
ಮಂಗಳೂರು



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ	11	7	4	0	14	+1.103
ಹೈದರಾಬಾದ್	11	7	4	0	14	+0.737
ಗುಜರಾತ್	11	7	4	0	14	+0.228
ಪಂಜಾಬ್	10	6	3	1	13	+0.571
ಚೆನ್ನೈ	11	6	5	0	12	+0.185
ರಾಜಸ್ಥಾನ	11	6	5	0	12	+0.082
ಕೆಕೆಆರ್	10	4	5	1	9	-0.169
ದಿಲ್ಲಿ	11	4	7	0	8	-1.154
ಮುಂಬೈ	11	3	8	0	6	-0.585
ಲಖನೌ	11	3	8	0	6	-0.907

ಮುಂಬೈ ವಿರುದ್ಧ ಆರ್‌ಸಿಬಿ, ಲಖನೌ ವಿರುದ್ಧ ಚೆನ್ನೈ ಗೆಲುವು ದಾಖಲಿಸಿರುವ ನಂತರ ಇಂಡಿಯನ್ ಪ್ರೀಮಿಯರ್ ಲೀಗ್ ಕುತೂಹಲ ಹಂತಕ್ಕೆ ತಲುಪಿದೆ. ನಾಲ್ಕೈದು ತಂಡಗಳು ಸಮಾನ ಪ್ರದರ್ಶನ ನೀಡುತ್ತಿರುವ ಬೆನ್ನಲ್ಲೇ ಪಂದ್ಯಾವಳಿಯ ಪ್ಲೇಆಫ್ ಪೈಪೋಟಿ ಹೆಚ್ಚಿದೆ. ಪಂದ್ಯಾವಳಿಯ ಮೊದಲಾರ್ಧದಲ್ಲಿ ಪಂಜಾಬ್, ರಾಜಸ್ಥಾನ, ಬೆಂಗಳೂರು ಮತ್ತು ಹೈದರಾಬಾದ್ ತಂಡಗಳು ಮೇಲುಗೈ ಸಾಧಿಸಿದ್ದವು. 40 ಪಂದ್ಯಗಳ ಮುಕ್ತಾಯಕ್ಕೆ ನಾಲ್ಕು ಸ್ಥಾನಗಳಲ್ಲಿ ತಂಡಗಳು ಫಿಕ್ಸ್ ಅನ್ನುವ ಲೆಕ್ಕಾಚಾರಗಳು ಮೂಡಿದ್ದವು. ಆದರೆ ಇತ್ತೀಚಿಗಿನ 15 ಪಂದ್ಯಗಳು ಮುಕ್ತಾಯಗೊಂಡ ನಂತರ ಅಂಕಪಟ್ಟಿಯೇ ಬದಲಾದಂತಿದೆ. ಹಾಗಿದ್ದರೆ ಲೆಕ್ಕಾಚಾರವೇನು?

ಅಂಕಪಟ್ಟಿ ಸೆಣಸಾಟ ಗೆಲ್ಲುವವರ್‍ಯಾರು?

ಎರಡನೇ ಅರ್ಧದ ಆರಂಭದಲ್ಲೂ ಪಂಜಾಬ್, ಆರ್‌ಸಿಬಿ ಮತ್ತು ರಾಜಸ್ಥಾನ ತಂಡಗಳೇ ಮೇಲಿದ್ದವು. ನಾಲ್ಕನೇ ಸ್ಥಾನದಲ್ಲಿದ್ದ ಹೈದರಾಬಾದ್ ಗೆಲುವುಗಳೊಂದಿಗೆ ಮೇಲೆದ್ದಿತು. ಸತತ ಮೂರು ಗೆಲುವಿನ ನಂತರ ತಟ್ಟನೆ ಮೊದಲನೇ ಸ್ಥಾನಕ್ಕೇರಿತ್ತು. ಅತ್ತ ರಾಜಸ್ಥಾನ ಸೋಲುಗಳಲ್ಲಿ ಸಿಲುಕಿಕೊಂಡರೆ, ಆರ್‌ಸಿಬಿ ಕೂಡ ಒಂದೆರಡು ಪಂದ್ಯ ಎರಡನೇ ಸುತ್ತಿನ ಪಂದ್ಯಗಳಲ್ಲಿ ಸೋತಿದೆ. ಹೀಗಿರುವಾಗ ಮೊದಲಿಗೆ ಕೆಳಗಿದ್ದ ಗುಜರಾತ್ ಗೆಲುವಿನ ದಂಡಯಾತ್ರೆ ಶುರು ಮಾಡಿತು. ಬಂದ ತಂಡಗಳನ್ನೆಲ್ಲಾ ಸೋಲಿಸುತ್ತಾ ಪ್ರಾಬಲ್ಯ ಪ್ರದರ್ಶಿಸಿದ ಗುಜರಾತ್ ಇದೀಗ ನಂಬರ್ 2 ಸ್ಥಾನಕ್ಕೂ ಫೈಟ್ ಕೊಡುತ್ತಿದೆ. ಮತ್ತೊಂದೆಡೆ ಕೊನೆಯ ಸ್ಥಾನದಲ್ಲಿದ್ದ ಚೆನ್ನೈ ಸೂಪರ್ ಕಿಂಗ್ಸ್ ಹ್ಯಾಟ್ರಿಕ್ ಗೆಲುವುಗಳೊಂದಿಗೆ ಕಂಬ್ಯಾಕ್ ಮಾಡಿದೆ. ಉತ್ತಮ ರನ್‌ರೇಟ್ ಹೊಂದಿದ ನಂತರ ಲಖನೌ ವಿರುದ್ಧ ಗೆದ್ದು, ರಾಜಸ್ಥಾನವನ್ನು ಕೆಳಕ್ಕೆ ನೂಕಿ ಐದನೇ ಸ್ಥಾನದಲ್ಲಿರಿತು. ಎಲ್ಲಾ ಲೆಕ್ಕಾಚಾರಗಳನ್ನು ನೋಡಿದರೆ ಇನ್ನೂ ಟಾಪ್ 4 ತಂಡಗಳು ನಿರ್ಧರಿಸಲಾಗಿಲ್ಲ. 6 ತಂಡಗಳಿಗೆ ಅವಕಾಶ ಹೊಂದಿರುವ ಬೆನ್ನಲ್ಲೇ 16 ಅಂಕವೇ ಪ್ಲೇಆಫ್ ಅವಕಾಶ ಕೊಡುತ್ತದೆ ಎಂಬ ಮಾತೂ ಇಲ್ಲ. ಹೀಗಿರುವಾಗ ಯಾರಿಗೆ ಎಷ್ಟು ಅವಕಾಶವಿದೆ?

ರಾಯಲ್ ಚಾಲೆಂಜರ್ಸ್ ಬೆಂಗಳೂರು

ಮುಂಬೈ ಇಂಡಿಯನ್ಸ್ ವಿರುದ್ಧ ಗೆದ್ದ ನಂತರ ಟೇಬಲ್ ಟಾಪರ್ ಆಗಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಉತ್ತಮ ರನ್‌ರೇಟ್ ಹೊಂದಿರುವುದರಿಂದ 1 ಪಂದ್ಯದಲ್ಲಿ ಗೆದ್ದರೆ ಟಾಪ್ 4 ಸ್ಥಾನ ಖಚಿತವಾಗಲಿದೆ. ಎರಡರಲ್ಲಿ ಗೆದ್ದರೆ, ಟಾಪ್ 2 ಅವಕಾಶ ಪಡೆಯಬಹುದು.

- ಅಂಕಪಟ್ಟಿಯಲ್ಲಿ ಸ್ಥಾನ: 1(14 ಅಂಕ)
- ಉಳಿದ ಪಂದ್ಯ:3; ಕೆಕೆಆರ್, ಪಂಜಾಬ್, ಹೈದರಾಬಾದ್
- ರನ್‌ರೇಟ್: +1.103
- ಪ್ಲೇಆಫ್‌ಗೇರಲು ಬೇಕಾದ ಅಂಕ: 2
- ಟಾಪ್ 2ಗೇರಲು ಬೇಕಾದ ಅಂಕ: 4-6
- ಪ್ಲೇಆಫ್ ಸಾಧ್ಯತೆ: ಶೇ. 94.82

ಗುಜರಾತ್ ಟೈಟಾನ್ಸ್

ಗೆಲುವಿನೋಟ ಮುಂದುವರಿಸಿರುವ ಗುಜರಾತ್ ಇತ್ತೀಚಿಗಿನ ಪಂದ್ಯಗಳಲ್ಲಿ ಬಲಿಷ್ಠ ತಂಡಗಳನ್ನು ಸೋಲಿಸಿದೆ. ಭಾನುವಾರದ ಮೊದಲು ಗುಜರಾತ್ 2ನೇ ಸ್ಥಾನದಲ್ಲಿತ್ತು. ಇನ್ನೂ ಮೂರು ಪಂದ್ಯಗಳನ್ನು ಹೊಂದಿರುವ ಗಿಲ್ ಪಡೆ ಅಗ್ರ ಎರಡಲ್ಲಿರುವ ಅವಕಾಶವನ್ನೂ ಹೊಂದಿದೆ.

- ಅಂಕಪಟ್ಟಿಯಲ್ಲಿ ಸ್ಥಾನ: 3(14 ಅಂಕ)
- ಉಳಿದ ಪಂದ್ಯ:3; ಹೈದರಾಬಾದ್, ಕೆಕೆಆರ್, ಚೆನ್ನೈ
- ರನ್‌ರೇಟ್: +0.228
- ಪ್ಲೇಆಫ್‌ಗೇರಲು ಬೇಕಾದ ಅಂಕ: 2-4
- ಟಾಪ್ 2ಗೇರಲು ಬೇಕಾದ ಅಂಕ: 4-6
- ಪ್ಲೇಆಫ್ ಸಾಧ್ಯತೆ: ಶೇ. 87.53



ಚೆನ್ನೈ ಸೂಪರ್ ಕಿಂಗ್ಸ್

ಮೊದಲಾರ್ಧದ 7 ಪಂದ್ಯಗಳಲ್ಲಿ ಕೇವಲ ಎರಡು ಗೆದ್ದಿದ್ದ ಚೆನ್ನೈ ನಂತರದ ಪಂದ್ಯಗಳಲ್ಲಿ ಸೋತಿದ್ದು ಒಂದರಲ್ಲಿ ಮಾತ್ರ. ಹಿಂದಿನ ಮೂರು ಪಂದ್ಯಗಳಲ್ಲಿ ಗೆದ್ದ ನಂತರ ಪಂದ್ಯಾವಳಿಯ ಪ್ಲೇಆಫ್ ರೇಸ್‌ನಲ್ಲಿ ಸ್ಪರ್ಧಿಯಾಗಿದೆ. ಟಾಪ್ 2ಕ್ಕೂ ಹೋಗುವ ಅವಕಾಶ ಇನ್ನೂ ಹೊಂದಿದೆ.

- ಅಂಕಪಟ್ಟಿಯಲ್ಲಿ ಸ್ಥಾನ: 5(12 ಅಂಕ)
- ಉಳಿದ ಪಂದ್ಯ:3; ಲಖನೌ, ಹೈದರಾಬಾದ್, ಗುಜರಾತ್
- ರನ್‌ರೇಟ್: +0.185
- ಪ್ಲೇಆಫ್‌ಗೆ ಬೇಕಾದ ಅಂಕ: ಕನಿಷ್ಠ 4
- ಟಾಪ್ 2ಗೇರಲು ಬೇಕಾದ ಅಂಕ: 6
- ಪ್ಲೇಆಫ್ ಸಾಧ್ಯತೆ: ಶೇ. 58.47

ಸನ್‌ರೈಸರ್ಸ್ ಹೈದರಾಬಾದ್

ಗೆಲುವಿನ ನಾಗಾಲೋಟದೊಂದಿಗೆ ಎರಡನೇ ಸ್ಥಾನದಲ್ಲಿರುವ ಸನ್ ತಂಡವು, ಒಂದು ಪಂದ್ಯದಲ್ಲಿ ಗೆದ್ದರೆ ಬಹುತೇಕ ಪ್ಲೇಆಫ್‌ಗೇರಲಿದೆ. ರನ್‌ರೇಟ್ ವಿಚಾರವಾಗಿ ಅಲ್ಪ ಹಿಂದಿರುವುದರಿಂದ 2 ಗೆದ್ದರೆ ಪ್ಲೇಆಫ್ ಗ್ಯಾರಂಟಿ. ಟಾಪ್ 2ಗೇರುವ ಅವಕಾಶವನ್ನೂ ಹೊಂದಿದೆ.

- ಅಂಕಪಟ್ಟಿಯಲ್ಲಿ ಸ್ಥಾನ: 2(14 ಅಂಕ)
- ಉಳಿದ ಪಂದ್ಯ:3; ಗುಜರಾತ್, ಚೆನ್ನೈ, ಬೆಂಗಳೂರು
- ರನ್‌ರೇಟ್: +0.737
- ಪ್ಲೇಆಫ್‌ಗೇರಲು ಬೇಕಾದ ಅಂಕ: 2-4
- ಟಾಪ್ 2ಗೇರಲು ಬೇಕಾದ ಅಂಕ: 4-6
- ಪ್ಲೇಆಫ್ ಸಾಧ್ಯತೆ: ಶೇ. 91.74

ಪಂಜಾಬ್ ಕಿಂಗ್ಸ್

ಇನ್ನು ಮೊದಲಾರ್ಧದಲ್ಲಿ ಮೊದಲನೇ ಸ್ಥಾನದಲ್ಲಿ ಗಟ್ಟಿಯಾಗಿ ಕೂತಿದ್ದ ಪಂಜಾಬ್ ಕಿಂಗ್ಸ್ ತಂಡವು ಸತತ ಮೂರು ಪಂದ್ಯಗಳಲ್ಲಿ ಸೋತಿದ್ದು ದೊಡ್ಡ ಹಿನ್ನಡೆ ಅನುಭವಿಸಿದೆ. ತಂಡದ ಸೋಲು ನಾಲ್ಕನೇ ಸ್ಥಾನಕ್ಕೆ ಕೆಡವಿದ್ದು, ಮೇಲೇಳಬೇಕಾದರೆ ಗೆಲುವುಗಳನ್ನು ಸಾಧಿಸಲೇಬೇಕಿದೆ.

- ಅಂಕಪಟ್ಟಿಯಲ್ಲಿ ಸ್ಥಾನ: 4(13 ಅಂಕ)
- ಉಳಿದ ಪಂದ್ಯ:4; ದಿಲ್ಲಿ, ಮುಂಬೈ, ಆರ್‌ಸಿಬಿ, ಲಖನೌ
- ರನ್‌ರೇಟ್: +0.571
- ಪ್ಲೇಆಫ್‌ಗೇರಲು ಬೇಕಾದ ಅಂಕ: 2-4
- ಟಾಪ್ 2ಗೇರಲು ಬೇಕಾದ ಅಂಕ: 4-6
- ಪ್ಲೇಆಫ್ ಸಾಧ್ಯತೆ: ಶೇ. 84.69

ರಾಜಸ್ಥಾನ ರಾಯಲ್ಸ್

ಕಳೆದ ಪಂದ್ಯಗಳಲ್ಲಿ ಸೋತ ನಂತರ ಕೆಳಬಿದ್ದಿರುವ ರಾಜಸ್ಥಾನ ಎಲ್ಲಾ ಪಂದ್ಯಗಳಲ್ಲಿ ಗೆಲ್ಲಲೇಬೇಕಾದ ಒತ್ತಡಕ್ಕೆ ಬಿದ್ದಿದೆ. ಆರನೇ ಸ್ಥಾನದಲ್ಲಿರುವ ರಾಜಸ್ಥಾನ ಮೂರು ಪಂದ್ಯಗಳಲ್ಲಿ ಗೆದ್ದರೆ ಮೇಲೇರುವ ಅವಕಾಶ ಹೊಂದಿದೆ.

- ಅಂಕಪಟ್ಟಿಯಲ್ಲಿ ಸ್ಥಾನ: 6(12 ಅಂಕ)
- ಉಳಿದ ಪಂದ್ಯ:3; ದಿಲ್ಲಿ, ಲಖನೌ, ಮುಂಬೈ
- ರನ್‌ರೇಟ್: +0.082
- ಪ್ಲೇಆಫ್‌ಗೇರಲು ಬೇಕಾದ ಅಂಕ: 4
- ಟಾಪ್ 2ಗೇರಲು ಬೇಕಾದ ಅಂಕ: 6
- ಪ್ಲೇಆಫ್ ಸಾಧ್ಯತೆ: ಶೇ. 54.33

ದಿಲ್ಲಿ ಮತ್ತು ಕೆಕೆಆರ್ ತಂಡಗಳು ಅಧಿಕೃತವಾಗಿ ಹೊರಬೀಳದ ಕಾರಣ ಅವುಗಳೂ ಪ್ಲೇಆಫ್‌ಗೇರುವ ಅವಕಾಶ ಹೊಂದಿವೆ. ಒಂದು ವೇಳೆ ಒಂದು ದೊಡ್ಡ ಮಿರ್‍ಯಾಕಲ್ ಆದಾಗ ಮತ್ತು ರನ್‌ರೇಟ್ ವಿಚಾರದಲ್ಲಿ ದೊಡ್ಡ ಮುನ್ನಡೆ ಸಾಧಿಸಿದಾಗ ಮಾತ್ರ ಸಾಧ್ಯವಾಗಲಿದೆ.

ಹೊರಬಿದ್ದ ಮುಂಬೈ-ಲಖನೌ

ಭಾನುವಾರ ನಡೆದಿರುವ ಪಂದ್ಯಗಳಲ್ಲಿ ಸೋತ ಲಖನೌ ಸೂಪರ್ ಜೈಂಟ್ಸ್ ಮತ್ತು ಮುಂಬೈ ಇಂಡಿಯನ್ಸ್ ತಂಡಗಳು ಪಂದ್ಯಾವಳಿಯಿಂದ ಹೊರಬಿದ್ದಿದ್ದು, ಔಪಚಾರಿಕತೆಗೆ ಪಂದ್ಯಗಳನ್ನಾಡಲಿವೆ. ಐಪಿಎಲ್‌ನಲ್ಲಿ 16 ಅಂಕಗಳು ಪ್ಲೇಆಫ್ ಗ್ಯಾರಂಟಿ ಕೊಡುವುದು ವಾಡಿಕೆಯಾದರೂ ಕಳೆದ ಕೆಲ ವರ್ಷಗಳಲ್ಲಿ ಏಳು ಪಂದ್ಯಗಳನ್ನು ಗೆದ್ದು ಪ್ಲೇಆಫ್ ಗೇರಿರುವ ಉದಾಹರಣೆಗಳೂ ಇವೆ. ಹೀಗಿರುವಾಗ ಒಂದು ಕೊನೆಯ ಮಿರ್‍ಯಾಕಲ್ ಅವಕಾಶಕ್ಕಾಗಿ ಲಖನೌ ಮತ್ತು ಮುಂಬೈ ಕಾಯುತ್ತಿದ್ದವು. ಭಾನುವಾರ 8ನೇ ಸೋಲನ್ನು ಕಂಡಿರುವ ಎರಡೂ ತಂಡಗಳು ಪಂದ್ಯಾವಳಿಯಿಂದ ಹೊರಬಿದ್ದಿವೆ.

ಕಿರುಸುದ್ದಿ

ಏಕದಿನದಲ್ಲೂ ಭಾರತವೇ ನಂಬರ್ 1

ಹೊಸದಿಲ್ಲಿ: ಇತ್ತೀಚೆಗೆ ಯಾವುದೇ ಅಂತಾರಾಷ್ಟ್ರೀಯ ಪಂದ್ಯವಾಡದಿದ್ದರೂ ತನ್ನ ನಂಬರ್ 1 ಸ್ಥಾನದಲ್ಲಿ ಭಾರತ ಬದ್ಧವಾಗಿದೆ. ಏಕದಿನ ರ್‍ಯಾಂಕಿಂಗ್ ಪಟ್ಟಿ ಪರಿಷ್ಕೃತಗೊಂಡಿದ್ದು, ಐಸಿಸಿ ತನ್ನ ವಾರ್ಷಿಕ ಏಕದಿನ ರ್‍ಯಾಂಕಿಂಗ್ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಟೀಂ ಇಂಡಿಯಾ ಯಾವುದೇ ಅಂತಾರಾಷ್ಟ್ರೀಯ ಪಂದ್ಯಗಳನ್ನು ಆಡದಿದ್ದರೂ, 118 ಅಂಕಗಳೊಂದಿಗೆ ನಂಬರ್ 1 ಸ್ಥಾನದಲ್ಲೇ ರಾರಾಜಿಸುತ್ತಿದೆ. ನ್ಯೂಜಿಲೆಂಡ್ ಎರಡನೇ ಸ್ಥಾನದಲ್ಲಿದ್ದು, ಪಾಕಿಸ್ತಾನ ಐದನೇ ಸ್ಥಾನಕ್ಕೆ ಕುಸಿದಿದೆ. ಕೆಲವು ದಿನಗಳ ಹಿಂದೆ ಟೆಸ್ಟ್ ಮತ್ತು ಟಿ20 ಅಂತಾರಾಷ್ಟ್ರೀಯ ಶ್ರೇಯಾಂಕಗಳಲ್ಲಿ ವಾರ್ಷಿಕ ಬದಲಾವಣೆಗಳನ್ನು ಪ್ರಕಟಿಸಿದ ನಂತರ, ಐಸಿಸಿ ಮೇ 11 ರಂದು ವಾರ್ಷಿಕ ಏಕದಿನ ರ್‍ಯಾಂಕಿಂಗ್ ಪಟ್ಟಿಯನ್ನು ಪ್ರಕಟಿಸಿದೆ. ಪ್ರತಿ ವರ್ಷ, ಮೇ ತಿಂಗಳಲ್ಲಿ, ಐಸಿಸಿ ಶ್ರೇಯಾಂಕ ಪಟ್ಟಿಯನ್ನು ಬಿಡುಗಡೆ ಮಾಡುತ್ತದೆ.

ಸುಬ್ರಹ್ಮಣ್ಯಂ ಬದರಿನಾಥ್ ವಿವಾದಾತ್ಮಕ ಹೇಳಿಕೆ

ಮುಂಬೈ: ಆರ್‌ಸಿಬಿ ಹಾಗೂ ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದ ನಡುವೆ ವೀಕ್ಷಕ ವಿವರಣೆ ನೀಡುತ್ತಿದ್ದ ಮಾಜಿ ಕ್ರಿಕೆಟಿಗ ಸುಬ್ರಹ್ಮಣ್ಯಂ ಬದರಿನಾಥ್ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ಆರ್‌ಸಿಬಿ ಆಲ್‌ರೌಂಡರ್ ಕೃಣಾಲ್ ಪಾಂಡ್ಯ ಮಧ್ಯದಲ್ಲಿ ಬ್ಯಾಟಿಂಗ್ ಮಾಡುತ್ತಿದ್ದಾಗ, ಅವರು ಸೆಳೆತದಿಂದ ಬಳಲುತ್ತಿದ್ದರು. ಕಾಲು ಹಿಡಿದುಕೊಂಡು ನೆಲಕ್ಕೆ ಬಿದ್ದರು. ಎಂಐ ವಿಕೆಟ್ ಕೀಪರ್ ರಯಾನ್ ರಿಕೆಲ್ಟನ್ ಅವರಿಗೆ ಸಹಾಯ ಮಾಡಲು ಬಂದರು. ಈ ವೇಳೆ ವೀಕ್ಷಕ ವಿವರಣೆ ನೀಡುತ್ತಿದ್ದ ಬದರಿನಾಥ್, ಆಟದ ಸಂದರ್ಭದಲ್ಲಿ ಅವರನ್ನು ಸಾಯಲು ಬಿಡುವ' ಬಗ್ಗೆ ಯೋಚಿಸುತ್ತಿದ್ದೆ ಎಂದಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದೆ.

ಜೂ. ಬ್ಯಾಡ್ಮಿಂಟನ್: ಅಭಿನವ್, ತನ್ವಿಗೆ ಜಯ

ಬೆಂಗಳೂರು: ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ ಆಶ್ರದಲ್ಲಿ ನಡೆದ ಜೂನಿಯರ್ ಬ್ಯಾಡ್ಮಿಂಟನ್ ರ್‍ಯಾಂಕಿಂಗ್ ಪಂದ್ಯಾವಳಿ ಮುಕ್ತಾಯಗೊಂಡಿದೆ. ವಿವಿಧ ವಿಭಾಗಗಳಲ್ಲಿ ರಾಷ್ಟ್ರದ ಯುವ ಆಟಗಾರರು ಮಿಂಚಿ ಗಮನ ಸೆಳೆದರು. ಅಂಡರ್-19 ವಿಭಾಗದಲ್ಲಿ ಅಭಿನವ್ ಗಾರ್ಗ್ ಮೊದಲ ಸ್ಥಾನ ಗಳಿಸಿದರೆ, ಜ್ಞಾನ ಎರಡನೇ ಸ್ಥಾನ ಗಳಿಸಿದರು. ಅಖೀಲ್ ರೆಡ್ಡಿ, ಹಾರ್ದಿಕ್ ಕ್ರಮವಾಗಿ ಮುಂದಿನ ಸ್ಥಾನ ಪಡೆದರು. ಮಹಿಳೆಯರ ಅಂಡರ್-19 ವಿಭಾಗದಲ್ಲಿ ತನ್ವಿ ಪತ್ರಿ ಮೊದಲನೇ ಸ್ಥಾನ ಗಳಿಸಿದರೆ, ಸಹಿನಾ ಮನಿಮುಥು ಎರಡನೇ ಸ್ಥಾನ ಪಡೆದರು. ಅಕ್ಷಿತಾ, ಆದರ್ಶಿನಿ ಮುಂದಿನ ಸ್ಥಾನಗಳನ್ನು ಪಡೆದರು. ಮಿಶ್ರ ಡಬಲ್ಸ್‌ನಲ್ಲಿ ಪುನೀತ್-ಆದಿಥಿ ಜೋಡಿ ಮೊದಲನೇ ಸ್ಥಾನ ಗಳಿಸಿದರೆ, ಸಾಯಿ-ರಿಶಿತಾ ಜೋಡಿ ಎರಡನೇ ಸ್ಥಾನ ಗಳಿಸಿದರು. ಅಲಿ-ಶಾಂಭವಿ, ಜಂಗ್ಜೀತ್-ಏಂಜಲ್ ಮುಂದಿನ ಸ್ಥಾನ ಪಡೆದರು. ಪುರುಷರ ಡಬಲ್ಸ್ ವಿಭಾಗದಲ್ಲಿ ಪವನ್-ಪುನೀತ್ ಮೊದಲನೇ ಸ್ಥಾನ, ಅನನ್ಯಾನ್-ಜೈಸನ್ ಎರಡನೇ ಸ್ಥಾನ ಗಳಿಸಿದರು. ಮಹಿಳೆಯರ ಡಬಲ್ಸ್‌ನಲ್ಲಿ ದಿಯಾ-ಬುರಾನಿ ಗೆದ್ದುಕೊಂಡರೆ, ಅನುಷ್ಕಾ-ದಿಕ್ಷಿತಾ ರನ್ನರ್-ಅಪ್ ಸ್ಥಾನ ಗಳಿಸಿದರು.

ಆರ್‌ಸಿಬಿ ಕೋಚ್ ಫ್ಲವರ್‌ಗೆ ದಂಡ

ರಾಯ್ಪುರ: ಇಂಡಿಯನ್ ಪ್ರೀಮಿಯರ್ ಲೀಗ್‌ನ 54ನೇ ಪಂದ್ಯದ ವೇಳೆ ಅಸಭ್ಯ ಪದಗಳನ್ನು ಬಳಸಿದ ಕಾರಣಕ್ಕಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮುಖ್ಯ ಕೋಚ್ ಆ್ಯಂಡಿ ಫ್ಲವರ್ ಅವರಿಗೆ ಪಂದ್ಯದ ಶುಲ್ಕದ ಶೇ. 15 ರಷ್ಟು ದಂಡ ವಿಧಿಸಲಾಗಿದೆ. ಮುಂಬೈ ವಿರುದ್ಧದ ಪಂದ್ಯದ ವೇಳೆ ಅಂಪೈರ್ ನೀಡಿದ ತೀರ್ಪಿಗೆ ಅಸಮಾಧಾನ ವ್ಯಕ್ತ ಪಡಿಸಿದ ಆ್ಯಂಡಿ, ನಾಲ್ಕನೇ ಅಂಪೈರ್‌ನೊಂದಿಗೆ ಅಸಭ್ಯ ಪದಗಳನ್ನು ಬಳಸಿದ್ದಾರೆ. ಈ ಪಂದ್ಯದ 17ನೇ 2ನೇ ಎಸೆತವನ್ನು ಕೃನಾಲ್ ಪಾಂಡ್ಯ ಸಿಕ್ಸರ್‌ನತ್ತ ಬಾರಿಸಿದ್ದರು. ಆದರೆ ಚೆಂಡು ಬೌಂಡರಿ ಲೈನ್ ದಾಟುವ ಮುನ್ನ ನಮನ್ ಧೀರ್ ಹಿಡಿದಿದ್ದರು. ಅಲ್ಲದೆ ಅದನ್ನು ರಿಲೇ ಕ್ಯಾಚ್‌ಗಾಗಿ ತಿಲಕ್ ವರ್ಮಾರತ್ತ ಎಸೆದಿದ್ದರು.

ಭೇಷ್ ಭುವನೇಶ್ವರ್!



- ಥ್ರಿಲ್ಲಿಂಗ್ ಪಂದ್ಯ ಗೆದ್ದ ಆರ್‌ಸಿಬಿ
- ಕೃಣಾಲ್ ಆಟಕ್ಕೆ ಮಣಿದ ಮುಂಬೈ

ರಾಯ್ಪುರ: ಬೌಲಿಂಗ್‌ನಲ್ಲಿ 4 ವಿಕೆಟ್ ಪಡೆದಿದ್ದ ಭುವನೇಶ್ವರ್ ಕುಮಾರ್ ಬ್ಯಾಟಿಂಗ್ ಗಿಳಿದಾಗ ತಂಡ ಸಂಕಷ್ಟದಲ್ಲಿತ್ತು. ಗೆಲ್ಲುವುದಕ್ಕೆ 11 ರನ್ ಬೇಕಿದ್ದವು. ಶೇಫರ್ಡ್ ವಿಕೆಟ್ ಕೊಟ್ಟಿದ್ದರು. ಗೆಲ್ಲಲು ಮಾಡಬೇಕಾದ ಸರ್ವಸ್ವವನ್ನು ಆಗಲೇ ಮಾಡಿದ್ದ ವೇಗಿ ಭುವಿ ಚಮತ್ಕಾರ ರೂಪದಲ್ಲಿ ಸಿಕ್ಸರ್ ಬಾರಿಸಿಬಿಟ್ಟರು. ಕೊನೆಯ ಬಾಲ್‌ನಲ್ಲಿ ಬೇಕಿತ್ತು 2 ರನ್. ರಸೀಖ್ ಹೊಡೆದ ಬಾಲು ಫೀಲ್ಡರ್‌ನಿಂದ ಕೀಪರ್ ಕೈಗೆ ಸೇರುವ ಹೊತ್ತಿಗಾಗಲೇ ಎರಡು ರನ್ ಪೂರೈಸಿದ್ದ ಆರ್‌ಸಿಬಿ ಥ್ರಿಲ್ಲರ್ ಗೆದ್ದು ಬೀಗಿತು.

ಬೌಲಿಂಗ್ ಮಾಡುವಾಗ ಭುವನೇಶ್ವರ್ ಕುಮಾರ್ ದಾಳಿಗೆ ತತ್ತರಿಸಿದ ಮುಂಬೈ ನಮನ್ (47) ಮತ್ತು ತಿಲಕ್ ವರ್ಮಾ(57) ಅವರ ಬ್ಯಾಟಿಂಗ್‌ನೊಂದಿಗೆ 20 ಓವರ್‌ಗಳಲ್ಲಿ 166 ರನ್ ಗಳಿಸಿತು. ಭುವನೇಶ್ವರ್ 4, ಜೋಶ್, ಶೇಫರ್ಡ್, ರಸೀಖ್ ತಲಾ ಒಂದರಂತೆ ಆರ್‌ಸಿಬಿ 7 ವಿಕೆಟ್ ಪಡೆಯಿತು. ಗುರಿ ಬೆನ್ನತ್ತುವಾಗ ಆರ್‌ಸಿಬಿ ಕೂಡ ಆಘಾತದಲ್ಲೇ ಆಲೆದಾಡಿತು. ವಿಕೆಟ್‌ಗಳನ್ನು ಬೇಗನೇ ಕಳೆದುಕೊಂಡ ನಂತರ ತಂಡಕ್ಕೆ ಕೃಣಾಲ್(73) ಆಸರೆಯಾದರು. ಕೊನೆಯ ಓವರ್‌ನಲ್ಲಿ ಭುವಿ ಮತ್ತೆ ಚಮತ್ಕಾರ ಮಾಡಿದರು. ಈ ಬಾರಿ ಬ್ಯಾಟ್‌ಸ್ವಿಂಗ್ ಮಾಡಿದ ಅವರು, ಸಿಕ್ಸರ್ ಬಾರಿಸಿ ಪಂದ್ಯ ಗೆಲ್ಲಿಸಿದರು. 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡ ಆರ್‌ಸಿಬಿ 167 ರನ್‌ಗಳಿಸಿ ಪಂದ್ಯ ಗೆದ್ದಿದೆ. ರಾಯ್ಪುರದ ಪಿಚ್ ಎರಡೂ ತಂಡಕ್ಕೂ ಕಾಟ ನೀಡಿತು. ಬ್ಯಾಟಿಗರಿಗೆ ಹೈರಾಣಕ್ಕೆ ಕೆಡವಿತು. ಒಂದೊಂದು ರನ್‌ಗೂ ಪರದಾಟ ನಡೆಸುತ್ತಿದ್ದರು. ಪವರ್‌ಪ್ಲೇನಲ್ಲಿ ಮುಂಬೈ ಇಂಡಿಯನ್ಸ್ 3 ವಿಕೆಟ್ ಕಳೆದುಕೊಂಡು 53 ರನ್ ಗಳಿಸಿತು. ಮಧ್ಯಮ ಓವರ್‌ಗಳಲ್ಲಿ ಮುಂಬೈಗೆ ತಿಲಕ್, ನಮನ್ ಸಾಥ್ ಸಿಕ್ಕಿತು. ಅಲ್ಲಿ 83 ರನ್ ಗಳಿಸಿ 2 ವಿಕೆಟ್ ಕಳೆದುಕೊಂಡಿತು. ಆರ್‌ಸಿಬಿಗೆ ಕೃಣಾಲ್-ಬೆಥೆಲ್ ಆಸರೆಯಾದರು. ಆರ್‌ಸಿಬಿ 84 ರನ್ ಗಳಿಸಿ 3 ವಿಕೆಟ್ ಕಳೆದುಕೊಂಡಿತು. ಕೊನೆಯ ಓವರ್‌ಗಳಲ್ಲಿ ಮುಂಬೈ 30, ಆರ್‌ಸಿಬಿ 36 ರನ್ ಗಳಿಸಿತು. ಈ ಗೆಲುವಿನೊಂದಿಗೆ ಆರ್‌ಸಿಬಿ ಮೊದಲನೇ ಸ್ಥಾನಕ್ಕೇರಿದರೆ, ಮುಂಬೈ ಪಂದ್ಯಾವಳಿಯಿಂದ ಅಧಿಕೃತವಾಗಿ ಹೊರಬಿದ್ದಿತು.

ಪಂಜಾಬ್‌ನಿಂದ ದೊಡ್ಡ ಗುರಿ

ಧರ್ಮಶಾಲಾ: ಪ್ರಿಯಾಂಶ್ ಆರ್ಯ, ಶ್ರೇಯಸ್ ಅಯ್ಯರ್ ಅವರ ಅಬ್ಬರದ ಬ್ಯಾಟಿಂಗ್ ನಂತರ ಸೂರ್ಯಾಂಶ್ ಬಿರುಸಿನ ಫಿನಿಶ್ ಕೊಟ್ಟಿದ್ದು, ಪಂಜಾಬ್ ಕಿಂಗ್ಸ್ ಗೆಲ್ಲಲೇಬೇಕಾದ ಪಂದ್ಯದಲ್ಲಿ ಕಠಿಣ ಗುರಿ ನೀಡಿತು.

ಹ್ಯಾಟ್ರಿಕ್ ಸೋಲಿನ ನಂತರ ಬ್ಯಾಟಿಂಗ್ ಗಿಳಿದ ಪಂಜಾಬ್‌ಗೆ ಪ್ರಿಯಾಂಶ್(56) ಭದ್ರ ಅಡಿಪಾಯ ಹಾಕಿಕೊಟ್ಟರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಗಿಳಿದ ಶ್ರೇಯಸ್ ಅಯ್ಯರ್(59) ಭದ್ರ ಸ್ಕೋರ್ ಅನ್ನು ಕೊನೆಯ ಓವರ್‌ವರೆಗೂ ವಿಸ್ತರಿಸಿದರು. ಕೂಪರ್(37) ಮಿಂಚಿದಂತೆ ಕೊನೆಯ ಓವರ್‌ಗಳಲ್ಲಿ ಸೂರ್ಯಾಂಶ್ (21★) ಅಬ್ಬರಿಸಿದರು. ಪರಿಣಾಮ 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡ ಪಂಜಾಬ್ 210 ರನ್ ಗಳಿಸಿದೆ.

ಮಿಂಚಿದ ಶ್ರೇಯಸ್-ಪ್ರಿಯಾಂಶ್: ಟಾಸ್ ಸೋತ ಪಂಜಾಬ್ ಬ್ಯಾಟಿಂಗ್ ಗಿಳಿಯಿತು. ಎರಡು ಸೋಲುಗಳ ನಂತರ ಅಗ್ರ ಕ್ರಮಾಂಕಿತ ಬ್ಯಾಟಿಗರು ತಾಳ್ಮೆಯಿಂದ ಬ್ಯಾಟಿಂಗ್ ಮಾಡಿದರು. ಪ್ರಭಸಿಮ್ರನ್ ನಿಂತರೂ ಪ್ರಿಯಾಂಶ್ ಅಲ್ಪ ಸಮಯದ ನಂತರ ತಮ್ಮ ಅಸಲು ಆಟಕ್ಕೆ ಬಂದರು. ಸ್ಫೋಟಕ ಸಿಕ್ಸರ್‌ಗಳನ್ನು ಬಾರಿಸಿದ ಅವರು, ಪವರ್‌ಪ್ಲೇನಲ್ಲಿ ಅರ್ಧಶತಕ ಬಾರಿಸಿದರು. ಅತ್ತ ಪ್ರಭಸಿಮ್ರನ್ 15 ಬಾಲ್‌ಗಳಲ್ಲಿ 18 ರನ್ ಗಳಿಸಿದ್ದರು. ಪವರ್‌ಪ್ಲೇ ಮುಕ್ತಾಯಕ್ಕೆ ಪಂಜಾಬ್ 72 ರನ್ ಗಳಿಸಿತು. ಮೂರನೇ ಕ್ರಮಾಂಕದಲ್ಲಿ ಶ್ರೇಯಸ್ ಅಯ್ಯರ್ ಬಂದರು. ನಿಧಾನವಾಗಿ ಅವರು ಸೆಟ್ ಆಗುತ್ತಲೆ 56 ರನ್ ಗಳಿಸಿದ್ದ ಪ್ರಿಯಾಂಶ್ ವಿಕೆಟ್ ಒಪ್ಪಿಸಿದರು. ಕೂಪರ್-ಶ್ರೇಯಸ್ ಕೊಂಚ ಹೊತ್ತು ಉತ್ತಮ ಬ್ಯಾಟಿಂಗ್ ಮಾಡಿದರು. ನಿಧಾನವಾಗಿ ಸ್ಕೋರ್ ಹಿಗ್ಗಿಸುತ್ತಾ ಬಂದ ಈ ಜೋಡಿ 83 ರನ್ ಜೊತೆಯಾಟ ನಿರ್ಮಿಸಿತು. ಶ್ರೇಯಸ್ ಅಯ್ಯರ್ ಅರ್ಧಶತಕ ಬಾರಿಸಿದರು.



ಮಧ್ಯಮ ಓವರ್‌ಗಳಲ್ಲಿ ಪಂಜಾಬ್ 90 ರನ್ ಗಳಿಸಿತು. ಕೂಪರ್ 38 ರನ್‌ಗೆ ವಿಕೆಟ್ ಒಪ್ಪಿಸಿದರು. ಮುಂದೆ ಬಂದ ಸ್ಟೋನಿಸ್ 2ನೇ ಬಾಲ್‌ನಲ್ಲಿ, ಶಶಾಂಕ್ ಮೊದಲನೇ ಬಾಲ್‌ನಲ್ಲೇ ವಿಕೆಟ್ ಒಪ್ಪಿಸಿದರು. ಡೆತ್ ಓವರ್‌ನ ಅಂತಿಮ ಎರಡು ಓವರ್‌ನಲ್ಲಿ ಸೂರ್ಯಾಂಶ್ ಅಬ್ಬರಿಸಿದರು. ಬರುತ್ತಲೇ ಬೌಂಡರಿ ಬಾರಿಸಿದ ಅವರು, ಆಡಿದ 8 ಎಸೆತದಲ್ಲಿ 2 ಬೌಂಡರಿ, 2 ಸಿಕ್ಸರ್ ಬಾರಿಸಿದರು. 21 ರನ್ ಗಳಿಸಿ ಸ್ಕೋರ್ ಹಿಗ್ಗಿಸಿದರು. ಕೊನೆಯವರೆಗೂ ಔಟಾಗದೇ ಉಳಿದ ಶ್ರೇಯಸ್ 59 ರನ್ ಗಳಿಸಿದರು. ಇದರಲ್ಲಿ 3 ಸಿಕ್ಸರ್, 5 ಬೌಂಡರಿ ಸೇರಿವೆ.

ಶೂಟಿಂಗ್: ನೂಪುರ್ ಕುಮ್ರಾವತ್ ಚಾಂಪಿಯನ್

ಭೂಪಾಲ್: ಭೋಪಾಲ್‌ನಲ್ಲಿರುವ ಮಧ್ಯಪ್ರದೇಶ ರಾಜ್ಯ ಶೂಟಿಂಗ್ ಅಕಾಡೆಮಿಯಲ್ಲಿ ನಡೆಯುತ್ತಿರುವ 24ನೇ ಕುಮಾರ್ ಸುರೇಂದ್ರ ಸಿಂಗ್ ಸ್ಮಾರಕ ಶೂಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಮಧ್ಯಪ್ರದೇಶದ ನೂಪುರ್ ಕುಮ್ರಾವತ್ ಮಹಿಳೆಯರ 50 ಮೀಟರ್ ರೈಫಲ್ ಪ್ರೋನ್ ಐಎಸ್‌ಎಸ್‌ಎಫ್ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ನೂಪುರ್ 624.3 ಅಂಕಗಳನ್ನು ಕಲೆಹಾಕಿ ಮಹಿಳಾ ವಿಭಾಗದಲ್ಲಿ ಅಗ್ರಸ್ಥಾನ ಪಡೆದರು. ಆರ್ಮಿ ಮಾರ್ಕ್ಸ್‌ಮ್ಯಾನ್‌ಶಿಪ್ ಯುನಿಟ್‌ನ ಪ್ರಿಯಾ 623.9 ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆದರೆ, ಮಹಾರಾಷ್ಟ್ರದ ಭಕ್ತಿ ಭಾಸ್ಕರ್ ಖಾಮ್ಕರ್ 622.2 ಅಂಕಗಳೊಂದಿಗೆ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟರು. ಜೂನಿಯರ್ ಮಹಿಳಾ ವಿಭಾಗದಲ್ಲಿ ತಮಿಳುನಾಡಿನ ಎಂ.ಎ. ಅಕ್ಷತಾ ಐಶ್ವರ್ಯ 618.2 ಅಂಕಗಳೊಂದಿಗೆ ಚಿನ್ನದ ಪದಕ ಗೆದ್ದರು. ಪಂಜಾಬ್‌ನ ನಿಮ್ರತ್ ಕೌರ್ ಬ್ರಾರ್ 617.7 ಅಂಕಗಳೊಂದಿಗೆ ಬೆಳ್ಳಿ ಪದಕ ಪಡೆದರೆ, ಮಧ್ಯಪ್ರದೇಶದ ಪ್ರಥಾ ರಾಥೋಡ್ 617.6 ಅಂಕಗಳೊಂದಿಗೆ ಕಂಚಿನ ಪದಕ ಜಯಿಸಿದರು. ಇದೇ ವೇಳೆ ಯುವ ಮಹಿಳಾ ವಿಭಾಗದಲ್ಲೂ ಎಂ.ಎ. ಅಕ್ಷಥಾ ಐಶ್ವರ್ಯ ಮತ್ತೊಮ್ಮೆ ಅಗ್ರಸ್ಥಾನ ಪಡೆದು ದ್ವಿತೀಯ ಸಾಧನೆ ಮಾಡಿದರು. 618.2 ಅಂಕಗಳೊಂದಿಗೆ ಅವರು ವಿಭಾಗದಲ್ಲಿ ಮೇಲುಗೈ ಸಾಧಿಸಿದರೆ, ನಿಮ್ರತ್ ಕೌರ್ ಬ್ರಾರ್ ಎರಡನೇ ಮತ್ತು ಪ್ರಥಾ ರಾಥೋಡ್ ಮೂರನೇ ಸ್ಥಾನ ಪಡೆದರು.

ಸ್ಕ್ವ್ಯಾಷ್: ಚೇತ್ರೋನಿಗೆ ಸೋಲು

ಹೊಸದಿಲ್ಲಿ: ನಂಬರ್ 1 ಸ್ಥಾನದ ಮುಸ್ತಫಾ ಅಸಲ್ ವಿರುದ್ಧ ಸೋತ ಭಾರತದ ಭರವಸೆಯ ಸ್ಕ್ವ್ಯಾಷ್ ಆಟಗಾರ ವೀರ್ ಚೇತ್ರೋನಿ ಗಿಜಾದಲ್ಲಿ ನಡೆದ ವಿಶ್ವ ಸ್ಕ್ವ್ಯಾಷ್ ಚಾಂಪಿಯನ್‌ಶಿಪ್‌ನಿಂದ ಹೊರಬಿದ್ದರು. ಮೊದಲಿನಿಂದಲೂ ಹಿಡಿತ ಸಾಧಿಸಿದ ಮುಸ್ತಫಾ, ಮೂರೇ ಸೆಟ್‌ಗಳಲ್ಲಿ ಗೆಲುವು ತಮ್ಮದಾಗಿಸಿಕೊಂಡರು. ಮೊದಲನೇ ಸೆಟ್‌ನಲ್ಲಿ ಉತ್ತಮ ಪ್ರದರ್ಶನದೊಂದಿಗೆ 5-11 ರಿಂದ ಗೆದ್ದ ಮುಸ್ತಫಾ, ಎರಡನೇ ಸೆಟ್‌ನಲ್ಲಿ 11-2, ಮೂರನೇ ಸೆಟ್ ಅನ್ನು 11-4ರಿಂದ ಗೆದ್ದರು.

ಮುಂಬೈ ತಂಡದಿಂದ ದೂರ ಸರಿದರೇ ಹಾರ್ದಿಕ್?



- ಸಾಮಾಜಿಕ ಜಾಲತಾಣದ ಖಾತೆಗೆ ಪಾಂಡ್ಯ ಅನ್‌ಫಾಲೋ
- ತಂಡದೊಂದಿಗೆ ಪ್ರಯಾಣಿಸದ ನಾಯಕ: ಭಾರೀ ಚರ್ಚೆ

ಮುಂಬೈ: ಮುಂಬೈ ಇಂಡಿಯನ್ಸ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ, ಮುಂಬೈ ಇಂಡಿಯನ್ಸ್ ಅಧಿಕೃತ ಖಾತೆ, ರೋಹಿತ್ ಶರ್ಮ, ಸೂರ್ಯಕುಮಾರ್ ಯಾದವ್ ಮತ್ತು ಬೂಮ್ರಾ ಅವರನ್ನು ಅನ್‌ಫಾಲೋ ಮಾಡಿದ್ದಾರೆ.


ಪಂದ್ಯಾವಳಿಯುದ್ದಕ್ಕೂ ಭಾರೀ ಹಿನ್ನಡೆ ಅನುಭವಿಸಿರುವ ಮುಂಬೈ ಇಂಡಿಯನ್ಸ್ ತಂಡದಲ್ಲಿ ಭಿನ್ನಾಭಿಪ್ರಾಯಗಳು ಹುಟ್ಟಿರುವ ಸಂಶಯ ಮೂಡಿದೆ. ಆಡಿರುವ ಪಂದ್ಯಗಳಲ್ಲಿ ಬ್ಯಾಟ್ ಅಥವಾ ಬಾಲ್ ಮೂಲಕ ಮಿಂಚಿಲ್ಲ. ಈ ಬೆನ್ನಲ್ಲೇ ಗಾಯವನ್ನೂ ಮಾಡಿಕೊಂಡಿರುವ ಅವರು, 2 ಪಂದ್ಯದಲ್ಲಿ ತಂಡದಲ್ಲಿರಲಿಲ್ಲ. ಗಮನಾರ್ಹವಾಗಿ ತಂಡದೊಂದಿಗೆ ಪ್ರಯಾಣವನ್ನೇ ಮಾಡಿಲ್ಲ. ಗಾಯಗೊಂಡವರು ಸಾಮಾನ್ಯವಾಗಿ ತಂಡದಲ್ಲಿದ್ದರೂ, ಪಾಂಡ್ಯ ಮುಂಬೈ ತಂಡದೊಂದಿಗೆ ಕಾಣಿಸಿಕೊಂಡಿಲ್ಲ.

ಈ ನಡುವೆ ತಂಡದ ಖಾತೆ ಜತೆಗೆ ಪ್ರಮುಖ ಆಟಗಾರರ ಖಾತೆಗಳನ್ನು ಅನ್‌ಫಾಲೋ ಮಾಡಿರುವ ಪಾಂಡ್ಯ ತಂಡದಲ್ಲಿ ಒಳಜಗಳವಿರುವ ಸಂಶಯ ಮೂಡಿಸಿದ್ದಾರೆ. ಇದಲ್ಲದೆ, ಮುಂಬೈನೊಂದಿಗಿನ ತಮ್ಮ ಭವಿಷ್ಯದ ಬಗ್ಗೆಯೂ ಅನುಮಾನಗಳು ಹುಟ್ಟಿವೆ. ಈ ನಡುವೆಯೇ ಮುಂಬೈ ಇಂಡಿಯನ್ಸ್, ಹಾರ್ದಿಕ್ ಅವರ ಜತೆಗೆ ಮೈದಾನದಲ್ಲಿ ಮಾಡಿದ ಅಸಭ್ಯ ವರ್ತನೆಯಿಂದಾಗಿ ಬಿಸಿಸಿಐಗೆ ಸೂಚನೆ ಕೊಟ್ಟಿರುವುದು ತಂಡ ಮತ್ತು ಹಾರ್ದಿಕ್ ನಡುವೆ ವಿವಾದಕ್ಕೆ ಕಾರಣವಾಗಿದೆ ಎಂಬ ಮಾತುಗಳು ಕೇಳಿಬಂದಿವೆ. ಆದಾಗ್ಯೂ ಆರ್‌ಸಿಬಿ ವಿರುದ್ಧದ ಸೋಲಿನ ನಂತರ ಮಾತನಾಡಿರುವ ತಂಡದ ಕೋಚ್, ಮಹೇಲಾ ಜಯವರ್ಧನೆ ಪಾಂಡ್ಯಗೆ ಬೆನ್ನು ನೋವಿದೆ. ಸ್ವಲ್ಪ ಸಮಯ ತೆಗೆದುಕೊಳ್ಳಬಹುದು. ಪಂದ್ಯಗಳ ನಂತರ ನಾವು ಅದರ ಬಗ್ಗೆ ನಿರ್ಧಾರ ಮಾಡುತ್ತೇವೆ ಎಂದು ತಿಳಿಸಿರುವುದು ಕುತೂಹಲ ಮೂಡಿಸಿದೆ.

ಪದಬಂಧ

5981

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
1.ದೇವರ ಮಾತುಗಳನ್ನು ಹೀಗನ್ನಬಹುದು (4)
3.ನಿತ್ಯಕರ್ಮ-ದಿನದ ಕೆಲಸ (4)
5.ನರಕದ ಮೇಲೂ ಬೆಳಕು ಬೀರುವ ಸೂರ್ಯ (4)
8.ಬಡಗಿಯ ಕೆಲಸ-ಮರಗೆಲಸ (4)
10.ಸೂಚನೆ-ಗುರುತು ಎಂಬರ್ಥದ ಶಬ್ದ (3)
12.ಸೋಮಾರಿಯನ್ನು ಹೀಗೂ ಹೇಳಬಹುದು (3)
14.ದೀಕ್ಷನ ನಡುವೆ ಭಸ್ಮವಡಗಿದೆ (3)
16.ಶ್ರೇಷ್ಠ-ಅನುಗ್ರಹಿತ ಅಭಿನಯಗಾರ (4)
17.ದೇಹವನ್ನು ಧರಿಸು-ಮೈದಾಳು ಎಂಬರ್ಥದ ಶಬ್ದ (4)

ಮೇಲಿನಿಂದ ಕೆಳಕ್ಕೆ
2.ಷಟ್ಪದಿಯ ಹೆಸರಾದ ಮುದಿತನ (3)
4.ದೃಷ್ಟಿಯೂ ಹೌದು-ಕಾಣಿಕೆಯೂ ಹೌದು (3)
6.ಇದು ಮನುಷ್ಯ ಜಾತಿ (4)
7.ಇದು ಸೂಪ್‌ನಂಥಹ ಖಾದ್ಯ (2)
8.ಕೊಡುವ ವ್ಯಕ್ತಿ-ದಾನಿಯೀತ (2)
9.ಭೂಮಿ-ಸಮುದ್ರ ಭೇಟಿಯಾದ ಸ್ಥಳ (4)
11.ಅತ್ಯಂತ ಆತ್ಮೀಯ ಗೆಳೆಯ (5)
12.ಮೃದುಹೃದಯದ ಮನಸ್ಸು (4)
13.ಹೆಚ್ಚಿನ ಹಣ-ಆಸ್ತಿ ಹೊಂದುವುದು (4)
14.ಹತ್ತಿರವಲ್ಲದ ಸಂಬಂಧವಿದು (4)
15.ಅಕ್ಷರಗಳ ಮೇಲಿನ ಸಣ್ಣ ಅಡ್ಡಗೆರೆ (4)

5980 ಉತ್ತರ

ಎಡದಿಂದ ಬಲಕ್ಕೆ:
1.ತೇಲುಗಣ್ಣು 3.ತೆಗಳಿಕೆ
5.ಜಾಲಗಾರ 8.ದಿನಮಣಿ
10.ಪಲ್ಲಟ 11.ಪಣ
12.ಮಗು 14.ಕಾವಲುಗಾರ
16.ಮಹಾನದಿ
17.ಹೊಸಹಾಡು

ಮೇಲಿನಿಂದ ಕೆಳಕ್ಕೆ :
2.ಗಾಣಿಗ 4.ಗಹನ
6.ಲವಣ 7.ಪರ
8.ದಿಟ 9.ಮಲಗು
11.ಪರಶುರಾಮ
13.ಮರಳುಗಾಡು
14.ಕಾಲಮಾನ
15.ಸಹಕಾರ

ಕಿರುಸುದ್ದಿ

ಮತ್ತೆ ಮಳೆಯ ಮುನ್ಸೂಚನೆ ನೀಡಿದ ಇಲಾಖೆ

ಮಂಗಳೂರು: ಕರಾವಳಿಯಲ್ಲಿ ಮತ್ತೆ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ಕಳೆದ ಕೆಲವು ದಿನಗಳಿಂದ ದಕ್ಷಿಣ ಕನ್ನಡ, ಉಡುಪಿ ಸೇರಿದಂತೆ ಹಲವೆಡೆ ಮಳೆಯಾಗುತ್ತಿದೆ. ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತವಾಗುವ ಸಾಧ್ಯತೆಯಿದ್ದು, ಇದರ ಪರಿಣಾಮ ಕರಾವಳಿಗೂ ತಟ್ಟಲಿದೆ. ಮೇ 13ರಿಂದ ಕರ್ನಾಟಕ ಕರಾವಳಿ, ಕೇರಳ ಹಾಗೂ ತಮಿಳುನಾಡಿನ ಹಲವೆಡೆ ಗುಡುಗು-ಮಿಂಚು ಸಹಿತ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಭಾಗಗಳಲ್ಲಿ ಕೆಲವು ದಿನಗಳಿಂದ ಗುಡುಗು ಸಹಿತ ಭಾರೀ ಮಳೆಯಾಗುತ್ತಿದೆ. ಸುಳ್ಯ, ಕಡಬ, ಉಪ್ಪಿನಂಗಡಿ, ಬೆಳ್ತಂಗಡಿ, ಮಂಗಳೂರು ಸೇರಿದಂತೆ ಹಲವೆಡೆ ಮಳೆ ಸುರಿದಿದೆ. ಕೆಲವೆಡೆ ಮಳೆಯಿಂದಾಗಿ ಹಾನಿಯೂ ಉಂಟಾಗಿದೆ.

ಸಣ್ಣ ನೀರಾವರಿ ಸಚಿವರ ಪ್ರವಾಸ

ಮಂಗಳೂರು: ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಭೋಸರಾಜು ಅವರು ಮೇ 12 ಮತ್ತು 13 ರಂದು ದಕ್ಷಿಣ ಕನ್ನಡ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಮೇ 12ರಂದು ಬೆಳಿಗ್ಗೆ 8.15ಕ್ಕೆ ಮಂಗಳೂರು ವಿಮಾನ ನಿಲ್ದಾಣಕ್ಕೆ ಆಗಮನ, 8.45ಕ್ಕೆ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಚೇರಿಗೆ ಭೇಟಿ, 11.30ಕ್ಕೆ ಧರ್ಮಸ್ಥಳ ಮಂಜುನಾಥ ಸ್ವಾಮಿ ದೇವಸ್ಥಾನಕ್ಕೆ ಭೇಟಿ, ಮಧ್ಯಾಹ್ನ 1 ಗಂಟೆಗೆ ಬೆಳ್ತಂಗಡಿ ತಾಲೂಕು ಕೊಕ್ಕಡ ಗ್ರಾಮದ ಮೈಪಾಲ ಸೇತುವೆ ಸಹಿತ ಕಿಂಡಿ ಅಣೆಕಟ್ಟು ಪರಿವೀಕ್ಷಣೆ, 2 ಗಂಟೆಗೆ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಭೇಟಿ, ನಂತರ ಸಚಿವರು ಉಡುಪಿ ಜಿಲ್ಲೆಗೆ ತೆರಳಲಿದ್ದಾರೆ. ಮೇ 13 ರಂದು ಸಂಜೆ 5.15ಕ್ಕೆ ಅಡ್ಯಾರು ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜು ಭೇಟಿ, 6.30ಕ್ಕೆ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ಭೇಟಿ, ರಾತ್ರಿ 10.40ಕ್ಕೆ ಸಚಿವರು ಮಂಗಳೂರಿನಿಂದ ಬೆಂಗಳೂರಿಗೆ ತೆರಳಲಿದ್ದಾರೆ.

ದ್ವಿತೀಯ ಪಿ.ಯು.ಸಿ-2 ಪರೀಕ್ಷಾ ಹಾಜರಾತಿ

ಮಂಗಳೂರು: ಜಿಲ್ಲೆಯಲ್ಲಿ ಸೋಮವಾರ ನಡೆದ ದ್ವಿತೀಯ ಪಿ.ಯು.ಸಿ-2 ರ ಸಮಾಜಶಾಸ್ತ್ರ ಪರೀಕ್ಷೆಗೆ 77 ವಿದ್ಯಾರ್ಥಿಗಳು ಹಾಜರಾಗಿದ್ದು, 30 ಮಂದಿ ಗೈರು ಹಾಜರಾಗಿದ್ದರು. ಸಂಖ್ಯಾಶಾಸ್ತ್ರ ಪರೀಕ್ಷೆಗೆ 47 ಮಂದಿ ವಿದ್ಯಾರ್ಥಿಗಳು ಹಾಜರಾಗಿದ್ದು, 20 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಪ್ರಕಟಣೆ ತಿಳಿಸಿದೆ.

ಮನೆಯ ಸನ್‌ಸ್ಪೈಡ್ ಕುಸಿದು ಬಿದ್ದು ಬಾಲಕ ಮೃತ್ಯು

ಕಾಸರಗೋಡು: ನಿರ್ಮಾಣ ಹಂತದಲ್ಲಿರುವ ಮನೆಯ ಸನ್‌ಸ್ಪೈಡ್ ಕುಸಿದು ಬಿದ್ದು ಬಾಲಕ ಸಾವನ್ನಪ್ಪಿದ ದಾರುಣ ಘಟನೆ ನಡೆದಿದೆ. ನೀಲೇಶ್ವರ ಪಾರಪಳ್ಳಿ ಮೂರನೇ ಮೈಲ್‌ನ ನೂರುಲ್ ಹುದ ಮದ್ರಸಾ ಅಧ್ಯಾಪಕ ಹಾಗೂ ಮಸೀದಿಯ ಇಮಾಂ ಆಗಿರುವ ಮೂಲತ ಪಾಲಾ ನಿವಾಸಿ ಉಸ್ತಾದ್ ಅಬ್ದುಲ್ ಗಫೂರ್ ಮತ್ತು ಝೈನಾಬಿ ದಂಪತಿಯ ಪುತ್ರ ಮೊಹಮ್ಮದ್ ರಾಬಿನ್ (12) ಸಾವನ್ನಪ್ಪಿದ ಬಾಲಕ. ಈತ ಚಾಯೋತ್ ಶಾಲೆಯ 6ನೇ ತರಗತಿ ವಿದ್ಯಾರ್ಥಿನಿಯಾಗಿದ್ದಾನೆ. ನಿರ್ಮಾಣ ಹಂತದಲ್ಲಿರುವ ಸಮೀಪದ ಮನೆಗೆ ರಾಬಿನ್ ಭಾನುವಾರ ಸಂಜೆ ತೆರಳಿದ್ದನು. ಈ ವೇಳೆ ಮನೆಯ ಸನ್‌ಸ್ಪೈಡ್ ಕುಸಿದು ಆತನ ಮೇಲೆ ಬಿದ್ದಿದೆ. ಗಂಭೀರ ಗಾಯಗೊಂಡ ಆತನನ್ನು ಸ್ಥಳೀಯ ಆಸ್ಪತ್ರೆಗೆ ಬಳಿಕ ಹೊಸದುರ್ಗದ ಖಾಸಗಿ ಆಸ್ಪತ್ರೆ ಸಾಗಿಸಿ ಚಿಕಿತ್ಸೆ ನೀಡಲಾಗಿತ್ತಾದರೂ ಪ್ರಯೋಜನವಾಗಲಿಲ್ಲ. ಮೃತ ಬಾಲಕ ಹೆತ್ತವರ ಹೊರತಾಗಿ ಸಹೋದರ ಮುಹಮ್ಮದ್ ರಾಶಿದ್, ಸಹೋದರಿ ಬರೀಕಾ ಅವರನ್ನು ಅಗಲಿದ್ದಾನೆ.

ವಿದ್ಯುತ್ ತಂತಿ ತಗುಲಿ ಬಾಲಕಿಗೆ ಗಂಭೀರ ಗಾಯ

ಕುಶಾಲನಗರ : ಮನೆ ಮಹಡಿಯಲ್ಲಿ ಸಂಭವಿಸಿದ ವಿದ್ಯುತ್ ಅವಘಡದಲ್ಲಿ ಬಾಲಕಿಯೊಬ್ಬಳು ಗಂಭೀರವಾಗಿ ಗಾಯಗೊಂಡ ಘಟನೆ ಕುಶಾಲನಗರದ ಗುಮ್ಮನಕೊಲ್ಲಿಯಲ್ಲಿ ನಡೆದಿದೆ. ಗಾಯಗೊಂಡ ಬಾಲಕಿಯನ್ನು ಗುಮ್ಮನಕೊಲ್ಲಿ ನಿವಾಸಿ ಉಮೇಶ್ ಎಂಬವರ ಪುತ್ರಿ ಸಾನ್ವಿ (14) ಎಂದು ಗುರುತಿಸಲಾಗಿದೆ. ಮನೆ ಮಹಡಿಯಲ್ಲಿ ಹರಡಿದ್ದ ನೀರಿನ ಸೆಳೆತದ ನಡುವೆ ಕಟ್ಟಡಕ್ಕೆ ಹೊಂದಿಕೊಂಡಂತೆ ಹಾದುಹೋಗುತ್ತಿದ್ದ 11 ಕೆವಿ ವಿದ್ಯುತ್ ತಂತಿ ತಗುಲಿದ ಪರಿಣಾಮ ಈ ಘಟನೆ ನಡೆದಿದೆ. ಗಾಯಗೊಂಡ ಬಾಲಕಿಯನ್ನು ಸ್ಥಳೀಯರು ತಕ್ಷಣ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿದ್ದು, ನಂತರ ಹೆಚ್ಚಿನ ಚಿಕಿತ್ಸೆಗೆ ಮೈಸೂರು ನಗರದ ಆಸ್ಪತ್ರೆಗೆ ರವಾನಿಸಲಾಗಿದೆ. ಘಟನೆಯ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ.

ಗುಜ್ಜಾಡಿ ಸಹೋದರರ ಜೊತೆ ಮೋದಿ ಪರಿವಾರ ಮಿಲನ | ಸ್ವಯಂಸೇವಕನ ಮರೆಯದ ಪ್ರಧಾನ ಸೇವಕ

‘ಆಯಿಯೇ ಮೇರಾ ಸಂಘ್ ಪರಿವಾರ್’

ಸುದೀಪ್‌ರಾಜ್ ಸುಳ್ಯ

ಉಡುಪಿ: ರಾಜಕೀಯದ ಬಿಡುವಿಲ್ಲದ ವೇಳಾಪಟ್ಟಿಯ ನಡುವೆಯೂ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ತಳಮಟ್ಟದ ಕಾರ್ಯಕರ್ತರನ್ನು ಎಷ್ಟರ ಮಟ್ಟಿಗೆ ಪ್ರೀತಿಸುತ್ತಾರೆ ಎಂಬುದಕ್ಕೆ ಸೋಮವಾರ ಬೆಂಗಳೂರಿನಲ್ಲಿ ನಡೆದ ಒಂದು ಅಪರೂಪದ ಭೇಟಿ ಸಾಕ್ಷಿಯಾಯಿತು. ಉಡುಪಿಯ ಹಿರಿಯ ಸಂಘ ಸ್ವಯಂಸೇವಕ, ದಿ. ಗುಜ್ಜಾಡಿ ನರಸಿಂಹ ನಾಯಕ್ ಅವರ ಆರು ಮಂದಿ ಪುತ್ರರನ್ನು ಆತ್ಮೀಯವಾಗಿ ಬರಮಾಡಿಕೊಂಡ ಪ್ರಧಾನಿಯವರು, ಅದನ್ನು ಕೇವಲ ಔಪಚಾರಿಕ ಭೇಟಿಯಾಗಿಸದೆ ಒಂದು ಮಧುರ 'ಪರಿವಾರ ಮಿಲನ'ವನ್ನಾಗಿ ಬದಲಿಸಿದರು.

‘ಬನ್ನಿ ನನ್ನ ಸಂಘ ಪರಿವಾರವೇ’

ಗುಜ್ಜಾಡಿ ಸ್ವರ್ಣ ಜ್ಯುವೆಲರ್ಸ್ ಸಂಸ್ಥಾಪಕರಾದ ದಿ. ನರಸಿಂಹ ನಾಯಕ್ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ಸಿದ್ಧಪಡಿಸಲಾದ ಅವರ ಜೀವನಚರಿತ್ರೆಯ ಸ್ಮರಣ ಗ್ರಂಥವನ್ನು ಅರ್ಪಿಸಲು ಸ್ವರ್ಣ ಸಹೋದರರು ಆಗಮಿಸಿದಾಗ, ಮೋದಿ ಅವರು 'ಆಯಿಯೇ ಮೇರಾ ಸಂಘ ಪರಿವಾರ್' (ಬನ್ನಿ ನನ್ನ ಸಂಘ ಪರಿವಾರವೇ) ಎಂದು ಪ್ರೀತಿಯಿಂದ ಸ್ವಾಗತಿಸಿದರು. ಪ್ರಧಾನಿಯವರ ಈ ಸಹಜ ಸುಂದರ ಮಾತುಗಳಿಂದ ಕುಟುಂಬದ ಸದಸ್ಯರಲ್ಲಿದ್ದ ಆತಂಕವೆಲ್ಲಾ ಕಳೆದುಹೋಗಿ, ಮನೆಯ ಹಿರಿಯ ಸದಸ್ಯನ ಸಮ್ಮುಖದಲ್ಲಿದ್ದೇವೆ ಎಂಬ ಭಾವ ಮೂಡಿತು. ಈ ಭೇಟಿಯ ಸಂದರ್ಭದಲ್ಲಿ ಕುಟುಂಬಸ್ಥರು ಭಾವುಕರಾದಾಗ, ಮೋದಿ ಅವರು 'ಆಪ್ ಸಬ್ ಭಾವುಕ್ ಹೋ ಗಯೇ' (ನೀವೆಲ್ಲರೂ ಭಾವುಕರಾಗಿದ್ದೀರಿ) ಎಂದು ಸಾಂತ್ವನ ನೀಡಿದ ರೀತಿ ಅವರ ಸರಳತೆಗೆ ಹಿಡಿದ ಕೈಗನ್ನಡಿಯಾಗಿತ್ತು.



ಉಡುಪಿಗೆ ಭರವಸೆಯ ಆಮಂತ್ರಣ

ಜುಲೈ 26ರಂದು ಉಡುಪಿಯಲ್ಲಿ ನಡೆಯುವ ಪುಸ್ತಕ ಬಿಡುಗಡೆ ಸಮಾರಂಭಕ್ಕೆ ಆಗಮಿಸುವಂತೆ ಸಹೋದರರು ನೀಡಿದ ಆಹ್ವಾನಕ್ಕೆ ಉತ್ತರಿಸಿದ ಮೋದಿ, ಬರಲು ಖಂಡಿತ ಪ್ರಯತ್ನಿಸುತ್ತೇನೆ. ನನ್ನ ಸಂದೇಶವನ್ನಂತೂ ಖಂಡಿತ ಕಳುಹಿಸಿಕೊಡುತ್ತೇನೆ' ಎಂದು ಭರವಸೆ ನೀಡಿದರು.

ಕಾರ್ಯಕ್ರಮದ ಕೊನೆಯಲ್ಲಿ ಪ್ರಧಾನಿಯವರೇ ಕುಟುಂಬದೊಂದಿಗೆ ಗ್ರೂಪ್ ಫೋಟೋ ತೆಗೆಸಿಕೊಂಡಿದ್ದು ಕುಟುಂಬದ ಪಾಲಿಗೆ ಅತ್ಯಂತ ಅವಿಸ್ಮರಣೀಯ ಕ್ಷಣವಾಗಿತ್ತು. ಇದು ಕೇವಲ ರಾಜಕೀಯ ಭೇಟಿಯಲ್ಲ, 67 ವರ್ಷಗಳ ಕಾಲ ತಮ್ಮ ತಂದೆಯವರು ರಾಷ್ಟ್ರಕ್ಕಾಗಿ ಮಾಡಿದ ತಪಸ್ಸಿಗೆ ಮೋದಿ ಅವರ ಮೂಲಕ ದೊರೆತ ಪರಮ ಗೌರವ ಎಂದು ಗುಜ್ಜಾಡಿ ಸಹೋದರರು ಇದೇ ಸಂದರ್ಭದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ದಿ. ನರಸಿಂಹ ನಾಯಕ್ ಪರಿಚಯ

ಸೆ. 22 ರ1942ರಲ್ಲಿ ಉಡುಪಿಯಲ್ಲಿ ಸಂಘದ ಮೊದಲ ಶಾಖೆ ಆರಂಭವಾದ ಕೇವಲ ಮೂರು ತಿಂಗಳಲ್ಲೇ ಸ್ವಯಂಸೇವಕರಾಗಿ ಸೇರಿದ್ದ ನರಸಿಂಹ ನಾಯಕ್, ಸತತ 67 ವರ್ಷಗಳ ಕಾಲ ಆರ್‌ಎಸ್‌ಎಸ್, ವಿಎಚ್‌ಪಿ, ಜನಸಂಘ/ಬಿಜೆಪಿಯ ಮೂಲಕ ರಾಷ್ಟ್ರವ್ರತವನ್ನು ಪಾಲಿಸಿದವರು.

ಅಲ್ಲದೇ ಪ್ರತಿಷ್ಠಿತ ಗುಜ್ಜಾಡಿ ಸ್ವರ್ಣ ಜ್ಯುವೆಲರ್ಸ್ ಸಂಸ್ಥಾಪಿಸಿ ಜನಮನ್ನಣೆ ಪಡೆದಿದ್ದರು.

ಸಂಘ ನಿಷ್ಠೆ ನೆನೆದ ಪ್ರಧಾನಿ ಮೋದಿ

ದಿವಂಗತ ಗುಜ್ಜಾಡಿ ನರಸಿಂಹ ನಾಯಕರ ಸಂಘ ನಿಷ್ಠೆಯನ್ನು ನೆನೆದ ಪ್ರಧಾನಿ, ಹಿಂದಿನ ಕಾಲದಲ್ಲಿ ನಿಮ್ಮ ತಂದೆಯಂತಹವರ ಅಪಾರ ತ್ಯಾಗ ಮತ್ತು ಕಠಿಣ ಶ್ರಮದಿಂದಲೇ ಇಂದು ಸಂಘಟನೆಗೆ ಈ ಶಕ್ತಿ ಬಂದಿದೆ ಎಂದು ಬಣ್ಣಿಸಿದರು. ನರಸಿಂಹ ನಾಯಕರ ಅಚಲ ನಿಷ್ಠೆಯನ್ನು ಬಂಗಾಳದ ಹಿರಿಯ ಕಾರ್ಯಕರ್ತ ಭಗನ್ ಲಾಲ್ ಅವರ ಬದ್ಧತೆಗೆ ಹೋಲಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

‘ಪಿಎಂ ಕೇರ್ಸ್’ ನಿಧಿಗೆ ರಘುವೀರ ನಾಯಕ್ ದಂಪತಿ ಒಂದು ಕೋಟಿ ರೂಪಾಯಿಗಳ ದೇಣಿಗೆ

ಭೇಟಿಯ ವೇಳೆ ಕುಟುಂಬದ ಹಿರಿಯರಾದ ಪ್ರಭಾಕರ ನಾಯಕ್ ದಂಪತಿ ಕೊಲ್ಲೂರು ಮೂಕಾಂಬಿಕಾ ದೇವಿಯ ಪ್ರಸಾದ ಹಾಗೂ ಉಡುಪಿಯ ಮಲ್ಲಿಗೆ ಹಾರವನ್ನು ಅರ್ಪಿಸಿದರು. ಮಾಧವ ನಾಯಕ್ ಅವರು ಉಡುಪಿ ಶ್ರೀಕೃಷ್ಣ ಮಠ ಹಾಗೂ ಮಂಗಳೂರು ಶ್ರೀ ವೆಂಕಟರಮಣ ದೇವಸ್ಥಾನದ ಪ್ರಸಾದವನ್ನು ನೀಡಿದಾಗ ಪ್ರಧಾನಿಯವರು ಅತ್ಯಂತ ಶ್ರದ್ಧೆಯಿಂದ ಸ್ವೀಕರಿಸಿದರು. ತಂದೆಯವರ ಜೀವನಗಾಥೆಯ ಪುಸ್ತಕವನ್ನು ರಾಮದಾಸ ನಾಯಕ್ ದಂಪತಿ ಹಸ್ತಾಂತರಿಸಿದಾಗ ಪ್ರಧಾನಿಯವರು ಅದನ್ನು ಆಸಕ್ತಿಯಿಂದ ವೀಕ್ಷಿಸಿದರು. ಗೋಪಾಲಕೃಷ್ಣ ನಾಯಕ್ ಅವರು ಬೆಳ್ಳಿಯ ಸ್ಮರಣಿಕೆ ನೀಡಿದರೆ, ರಾಜೇಶ್ ನಾಯಕ್ ಅವರು ಅಯೋಧ್ಯೆ ಮತ್ತು ತಿರುಪತಿಗೆ ತಯಾರಿಸಿದ ಆಭರಣಗಳ ವಿವರಗಳನ್ನು ಹಂಚಿಕೊಂಡರು. ಇದೇ ವೇಳೆ ರಘುವೀರ ನಾಯಕ್ ದಂಪತಿ 'ಪಿಎಂ ಕೇರ್ಸ್' ನಿಧಿಗೆ 1 ಕೋಟಿ ರೂಪಾಯಿಗಳ ಬೃಹತ್ ದೇಣಿಗೆಯನ್ನು ಸಮರ್ಪಿಸಿದರು. 'ಇದು ದೇಶದ ಕೆಲಸಕ್ಕಾಗಿ ಸಮರ್ಪಿತವಾಗಲಿದೆ' ಎಂದು ಮೋದಿ ಈ ಕೊಡುಗೆಯನ್ನು ಸ್ಮರಿಸಿದರು.

ಧರ್ಮಸ್ಥಳಕ್ಕೆ ವಿಜಯೇಂದ್ರ ಭೇಟಿ



ಧರ್ಮಸ್ಥಳ: ಭಾರತೀಯ ಜನತಾ ಪಕ್ಷದ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರು ತಮ್ಮ ಕುಟುಂಬ ಸದಸ್ಯರೊಂದಿಗೆ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಭೇಟಿ ನೀಡಿ, ಶ್ರೀ ಮಂಜುನಾಥ ಸ್ವಾಮಿಗೆ ವಿಶೇಷ ಪೂಜೆ ಹಾಗೂ ಸೇವೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಅವರು ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಹಾಗೂ ಮಾತೃಶ್ರೀ ಹೇಮಾವತಿ ವಿ. ಹೆಗ್ಗಡೆ ಅವರ ಆಶೀರ್ವಾದ ಪಡೆದರು. ಭೇಟಿಯ ವೇಳೆ ದಕ್ಷಿಣ ಕನ್ನಡ ಜಿಲ್ಲೆಯ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಬೆಳ್ತಂಗಡಿ ವಿಧಾನಸಭಾ ಕ್ಷೇತ್ರದ ಶಾಸಕ ಹರೀಶ್ ಪೂಂಜ, ವಿಧಾನಪರಿಷತ್ ಸದಸ್ಯ ಪ್ರತಾಪ್‌ಸಿಂಹ ನಾಯಕ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ವಿವಾಹ ನಿಶ್ಚಿತಾರ್ಥ ಬಳಿಕ ಯುವಕ ಅಪಘಾತದಲ್ಲಿ ಮೃತ್ಯು

ನೊಂದ ಯುವತಿ ನೇಣು ಬಿಗಿದು ಆತ್ಮಹತ್ಯೆ

ಕಾಸರಗೋಡು: ವಿವಾಹ ನಿಶ್ಚಿತಾರ್ಥ ನಡೆದ ಯುವಕ ಬೈಕ್ ಅಪಘಾತದಲ್ಲಿ ಮೃತಪಟ್ಟ ಘಟನೆಯಿಂದ ಮನನೊಂದ ಯುವತಿ ಮನೆಯೊಳಗೆ ಫ್ಯಾನ್‌ಗೆ ನೇಣು ಬಿಗಿದು ಸಾವಿಗೀಡಾದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾಳೆ.



ಕಿದೂರು ಕುಂಟಂಗೇರಡ್ಕ ನಿವಾಸಿ ಬಿ.ಜಯಾನಂದ ಅವರ ಪುತ್ರಿ ಪ್ರಫುಲ್ಲಾ (26) ಸಾವಿಗೀಡಾದ ಯುವತಿಯಾಗಿದ್ದಾಳೆ. ಭಾನುವಾರ ಸಂಜೆ ಈಕೆಯ ಮೃತದೇಹ ಮನೆಯೊಳಗೆ ಫ್ಯಾನ್‌ಗೆ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಈ ವೇಳೆ ಮನೆಯಲ್ಲಿ ಯಾರೂ ಇರಲಿಲ್ಲ. ಮನೆಮಂದಿ ಜಯಾನಂದರ ಸಹೋದರಿಯ ಪುತ್ರಿಯ ವಿವಾಹ ಸಮಾರಂಭದಲ್ಲಿ ಭಾಗವಹಿಸಲು ತೆರಳಿದ್ದರು. ಈ ವೇಳೆ ಪ್ರಫುಲ್ಲಾ ಮಾತ್ರವೇ ಮನೆಯಲ್ಲಿದ್ದಳು, ಸಂಜೆ ಮನೆಯವರು ಬಂದು ನೋಡಿದಾಗ ನೇಣು ಬಿಗಿದ ಸ್ಥಿತಿಯಲ್ಲಿ ಕಂಡುಬಂದಿದೆ.

ಕುಂಬಳೆ ಪೊಲೀಸರು ಸ್ಥಳಕ್ಕಾಗಮಿಸಿ ಮೃತದೇಹದ ಮಹಜರು ನಡೆಸಿದ ಬಳಿಕ ಕಾಸರಗೋಡು ಜನರಲ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು.

ತಮಿಳುನಾಡು ನಿವಾಸಿ ಬ್ಯಾಂಕ್ ನೌಕರ ಮಣಿ ಹಾಗೂ ಪ್ರಫುಲ್ಲಾರ ವಿವಾಹ ನಿಶ್ಚಿತಾರ್ಥ ನಾಲ್ಕು ತಿಂಗಳ ಹಿಂದೆ ನಡೆಸಲಾಗಿತ್ತು. ಮಳೆಗಾಲ ಮುಗಿದ ಬಳಿಕ ಮದುವೆ ನಡೆಸಲು ಎರಡೂ ಮನೆಯವರು ನಿರ್ಧರಿಸಿದ್ದರು. ಈ ಮಧ್ಯೆ ಒಂದು ತಿಂಗಳ ಹಿಂದೆ ಮಣಿ ಚಲಾಯಿಸಿದ ಬೈಕ್ ಹಾಗೂ ಬೇರೊಂದು ಬೈಕ್ ಡಿಕ್ಕಿ ಹೊಡೆದು ಅಪಘಾತ ಉಂಟಾಗಿತ್ತು. ಇದರಿಂದ ಗಂಭೀರ ಗಾಯಗೊಂಡ ಮಣಿ ಹತ್ತು ದಿನಗಳಕಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಬಳಿಕ ಮೃತಪಟ್ಟರು. ಮಣಿಯ ಅಂತ್ಯ ಸಂಸ್ಕಾರ ಕಾರ್ಯಕ್ರಮದಲಿ ಪ್ರಫುಲ್ಲಾ ಹಾಗೂ ಕುಟುಂಬ ಭಾಗವಹಿಸಿದ್ದರು. ಅಲ್ಲಿಂದ ಅವರು ಮರಳಿದ ಬಳಿಕ ಪ್ರಫುಲ್ಲಾ ಮಾನಸಿಕವಾಗಿ ತೀವ್ರ ನೊಂದಿದ್ದಾಳೆನ್ನಲಾಗಿದೆ. ಇದೇ ಕಾರಣದಿಂದ ಆಕೆ ನೇಣು ಬಿಗಿದು ಸಾವಿಗೀಡಾಗಿರಬಹುದೆಂದು ಸಂಶಯಿಸಲಾಗಿದೆ ಎಂದು ಸಂಬಂಧಿಕರು ತಿಳಿಸಿದ್ದಾರೆ.

ಇದೇ ವೇಳೆ ಪ್ರಫುಲ್ಲಾ ಸಾವಿಗೆ ಶರಣಾಗುವ ಮೊದಲು ಬರೆದಿಟ್ಟ ಪತ್ರವೊಂದು ಮನೆಯಲ್ಲಿ ಪತ್ತೆಯಾಗಿದೆ. ಅದರಲ್ಲಿ 'ತನ್ನೊಂದಿಗೆ ಮದುವೆ ನಿಶ್ಚಿತಾರ್ಥ ನಡೆದ ಮಣಿಯ ಸಾವಿನ ದುಃಖ ಸಹಿಸಲಾಗುತ್ತಿಲ್ಲ. ತನ್ನ ಮೃತದೇಹವನ್ನು ಅವರ ಅಂತ್ಯ ಸಂಸ್ಕಾರ ನಡೆದ ಸ್ಥಳದಲ್ಲೇ ನಡೆಸಬೇಕು' ಎಂದು ಬರೆಯಲಾಗಿದೆ. ಈ ವಿಷಯದಲ್ಲಿ ಎರಡೂ ಮನೆಯವರು ಒಮ್ಮತದ ನಿರ್ಧಾರ ಕೈಗೊಂಡಿರುವುದಾಗಿ ಪ್ರಫುಲ್ಲರ ಸಂಬಂಧಿಕರು ತಿಳಿಸಿದ್ದಾರೆ. ಇದರಿಂದ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ತಮಿಳುನಾಡಿಗೆ ಕೊಂಡೊಯ್ಯುವುದಾಗಿ ಸಂಬಂಧಿಕರು ತಿಳಿಸಿದ್ದಾರೆ.

ಪ್ರಫುಲ್ಲಾ ಅವರ ಸಾವಿಗೆ ಸಂಬಂಧಿಸಿ ಕುಂಬಳೆ ಪೊಲೀಸರು ಸಾವು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಪ್ರಫುಲ್ಲಾ ಅವರು ಬರೆದಿಟ್ಟ ಪತ್ರ ಹಾಗೂ ಮೊಬೈಲ್‌ಫೋನ್‌ನ್ನು ಪೊಲೀಸರು ಕಸ್ಟಡಿಗೆ ತೆಗೆದುಕೊಂಡಿದ್ದಾರೆ.

ಮೃತಳು ತಂದೆ, ತಾಯಿ ದೇವಿ, ಸಹೋದರ ಪ್ರಮೋದ್‌ಕುಮಾರ್, ಸಹೋದರಿ ಪ್ರಮೋದಿನಿ ಅವರನ್ನು ಅಗಲಿದ್ದಾರೆ.

ಜೀವನ ಜ್ಯೋತಿ, ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಭದ್ರತೆ ಅತ್ಯಗತ್ಯ

ಉಡುಪಿ: ಸಾಮಾಜಿಕ ಭದ್ರತೆಯನ್ನು ಒದಗಿಸುವ ಪ್ರಧಾನ ಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ ಮತ್ತು ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆಗಳು ಪ್ರತಿಯೊಬ್ಬರ ಕುಟುಂಬಕ್ಕೆ ಕನಿಷ್ಠ ವೆಚ್ಚದಲ್ಲಿ ಆರ್ಥಿಕ ಭದ್ರತೆಯನ್ನು ಒದಗಿಸುತ್ತದೆ. ಇವುಗಳನ್ನು ಪ್ರತಿಯೊಬ್ಬರೂ ಹೊಂದುವ ಹಾಗೆ ನೋಡಿಕೊಳ್ಳಬೇಕು ಎಂದು ಮೂಲಸೌಕರ್ಯ ಅಭಿವೃದ್ಧಿಯ ಕಾರ್ಯದರ್ಶಿ ಡಾ. ವಿಶಾಲ್ ಆರ್. ಸೂಚನೆ ನೀಡಿದರು.

ಅವರು ಸೋಮವಾರ ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಜೀವನದ ಅನಿಶ್ಚಿತತೆಯ ವಿರುದ್ಧ ರಕ್ಷಣೆಗಾಗಿಯೇ ಪ್ರಧಾನ ಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ ಮತ್ತು ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆಗಳನ್ನು ಸರಕಾರ ಜಾರಿಗೆ ತಂದಿದೆ. ಈ ಯೋಜನೆಗಳು ಸಾಮಾಜಿಕ, ಆರ್ಥಿಕ ಸ್ಥಿತಿಯ ಅಡೆತಡೆಗಳನ್ನು ಮೀರಿ ಜೀವನದ ಎಲ್ಲಾ ಹಂತಗಳಲ್ಲಿ ವ್ಯಕ್ತಿಗಳಿಗೆ ಸುರಕ್ಷಾ ಜಾಲವನ್ನು ವಿಸ್ತರಿಸುತ್ತದೆ. ಅಲ್ಪ ವಿಮಾ ಮೊತ್ತವನ್ನು ಪಾವತಿಸುವುದರೊಂದಿಗೆ ಈ ಯೋಜನೆಗಳ ಮೂಲಕ ತ್ವರಿತವಾಗಿ ಕವರೇಜ್‌ಗಳನ್ನು ಪಡೆಯಬಹುದು, ಅನಿರೀಕ್ಷಿತ ಅಪಘಾತಗಳು ಮತ್ತು ಅಂಗವೈಕಲ್ಯಗಳ ವಿರುದ್ಧ ಆರ್ಥಿಕ ರಕ್ಷಣೆಯನ್ನು ಒದಗಿಸುತ್ತದೆ. ಇದನ್ನು ಪ್ರತಿಯೊಬ್ಬರೂ ಹೊಂದಬೇಕು ಎಂದರು.

ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಸಗಿ ಹಾಗೂ ಸರಕಾರಿ ನೌಕರರು ಕಡ್ಡಾಯವಾಗಿ ಈ ಯೋಜನೆಗಳ ನೋಂದಣಿ ಮಾಡಿಸಿಕೊಳ್ಳಬೇಕು. ಒಂದೊಮ್ಮೆ ಅಪಘಾತದಲ್ಲಿ ಮರಣ ಸಂಭವಿಸಿದ್ದಲ್ಲಿ 40 ಲಕ್ಷ ಕ್ಕೂ ಹೆಚ್ಚು ಹಣ ತಮ್ಮ ಕುಟುಂಬದವರಿಗೆ ದೊರೆಯುತ್ತದೆ ಎಂದ ಅವರು, ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರುಗಳು, ಈ ವ್ಯಾಪ್ತಿಯಲ್ಲಿ ಬರುವಂತೆ ನೋಡಿಕೊಳ್ಳಬೇಕು. ಜಿಲ್ಲಾ ಅಗ್ರಗಣ್ಯ ಬ್ಯಾಂಕ್‌ನ ವ್ಯವಸ್ಥಾಪಕರು ಈ ಬಗ್ಗೆ ಅನುಕರಣೆ ಮಾಡಬೇಕೆಂದು ಸೂಚನೆ ನೀಡಿದರು.



> **ಜನಸಾಮಾನ್ಯರಿಗೆ ಉತ್ತಮ ಆರೋಗ್ಯ ಸೇವೆಗಳನ್ನು ಒದಗಿಸಲು ಅನೇಕ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ. ಇವು ಪ್ರತಿಯೊಬ್ಬರಿಗೂ ತಲುಪಬೇಕು. ಈ ಜಿಲ್ಲೆಯಲ್ಲಿ ವಿಶೇಷವಾಗಿ ಕೊರಗ ಸಮುದಾಯದವರಿಗೆ ಆರೋಗ್ಯ ಸೇವೆಗಳ ಲಾಭ ಪಡೆಯುವಂತೆ ಆಶಾ ಹಾಗೂ ಆರೋಗ್ಯ ಸಿಬ್ಬಂದಿಗಳು ನೋಡಿಕೊಳ್ಳಬೇಕು.**
> ■ ಡಾ. ವಿಶಾಲ್ ಆರ್

ಪ್ರವಾಸೋದ್ಯಮವು ಸ್ಥಳೀಯ ಜನರಿಗೆ ಹೆಚ್ಚು ಉದ್ಯೋಗಾವಕಾಶಗಳನ್ನು ಸುಲಭವಾಗಿ ದೊರಕುವಂತಾಗುತ್ತದೆ. ಪೂರಕವಾಗಿ ನಮ್ಮಲ್ಲಿನ ಕಡಲ ಕಿನಾರೆಗಳು, ಧಾರ್ಮಿಕ ಕೇಂದ್ರಗಳು, ನೈಸರ್ಗಿಕ ಸ್ಥಳಗಳು ಇವೆ. ಇವು ಜನರನ್ನು ಹೆಚ್ಚು ಆಕರ್ಷಿಸುತ್ತವೆ. ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಒತ್ತು ನೀಡಬೇಕು ಎಂದರು.

ಧಾರ್ಮಿಕ ಕೇಂದ್ರಗಳಿಗೆ ಆಗಮಿಸುವ ಭಕ್ತರುಗಳಿಗೆ ದೇವರ ದರ್ಶನ ಹಾಗೂ ಪ್ರಸಾದದ ವ್ಯವಸ್ಥೆಗಳು ವ್ಯವಸ್ಥಿತವಾಗಿ ಲಭ್ಯವಾಗುವಂತೆ ನೋಡುವುದರ ಜೊತೆಗೆ, ಅವರಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು ಎಂದ ಅವರು, ದೇವಸ್ಥಾನಗಳಲ್ಲಿರುವ ಅನುದಾನ ಗಳನ್ನು ಸಮರ್ಪಕವಾಗಿ ಬಳಕೆ ಮಾಡಿಕೊಂಡು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು. ಇದಕ್ಕೆ ಅಗತ್ಯವಿರುವ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು ಎಂದರು.

ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದ ಕೇಂದ್ರ ಭಾಗದಲ್ಲಿರುವ ಸ್ಥಳವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಂಡು ಅಭಿವೃದ್ಧಿ ಪಡಿಸಬೇಕು. ಇಲ್ಲಿಗೆ ಬರುವ ವಾಹನಗಳ ನಿಲ್ದಾಣಕ್ಕೆ ಅನುಕೂಲವಾಗಲು ವರ್ಟಿಕಲ್ ಪಾರ್ಕಿಂಗ್ ವ್ಯವಸ್ಥೆಯನ್ನು ಮಾಡಬೇಕು ಎಂದರು.

ಕುಡಿಯುವ ನೀರನ್ನು ಒದಗಿಸುವ ಜಲ್ ಜೀವನ್ ಮಿಷನ್ ಯೋಜನೆಯ ಅಭಿವೃದ್ಧಿ ಕಾರ್ಯಗಳ ಬಗ್ಗೆ ಮಾಹಿತಿ ಪಡೆದ ಅವರು, ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು. ಬಾಕಿ ಉಳಿದಿರುವ ವಾರಾಹಿ ಯೋಜನೆಯ ಕಾಮಗಾರಿಗಳನ್ನು ಆದ್ಯತೆಯ ಮೇಲೆ ಪೂರ್ಣಗೊಳಿಸಲು ತಿಳಿಸಿದರು.

ಕೊಚ್ಚಿನ್ ಶಿಪ್‌ಯಾರ್ಡ್‌ನ ಕಾರ್ಯವ್ಯಾಪ್ತಿ ಗಳನ್ನು ಹೆಚ್ಚಿಸಲು ಅಗತ್ಯ ಸೌಕರ್ಯಗಳನ್ನು ನೀಡಬೇಕು. ಇಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶ ಗಳು ಲಭ್ಯವಾಗುವಂತೆ ನೋಡಿಕೊಳ್ಳಬೇಕು. ಈ ಹಿಂದೆ ಹೆಚ್ಚಿನವರು ಹೊರ ಜಿಲ್ಲೆಯವರೇ ಕಾರ್ಯನಿರ್ವಹಿಸುತ್ತಿದ್ದರು. ಇದಕ್ಕೆ ಪೂರಕವಾಗಿ ಐ.ಟಿ.ಐ ನಲ್ಲಿ ವೃತ್ತಿ ತರಬೇತಿಗಳನ್ನು ಕಲ್ಪಿಸಲು ಮುಂದಾಗಬೇಕು ಎಂದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್, ಎಸ್‌ಪಿ ಸುಧಾಕರ್ ನಾಯಕ್, ಸಹಾಯಕ ಕಮೀಷನರ್ ರಶ್ಮಿ, ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಮೇ 28ರಂದು ಮಂಗಳೂರಿಗೆ ಸದ್ಗುರು ಶ್ರೀ ಮಾತಾ ಅಮೃತಾನಂದಮಯಿ ದೇವಿ | ಆರಾಧ್ಯಮಾತೆಯ ಕಣ್ತುಂಬಿಕೊಳ್ಳಲು ಕಾದಿದ್ದಾರೆ ಕರಾವಳಿಯ ಭಕ್ತರು

ಬ್ರಹ್ಮಸ್ಥಾನಂ ಮಹೋತ್ಸವ- ಅಮೃತ ಸಂಗಮ ಪ್ರಚಾರ ಪೋಸ್ಟರ್ ಬಿಡುಗಡೆ

ಮಂಗಳೂರು: ವಿಶ್ವದ ಅಗ್ರಗಣ್ಯ ಆಧ್ಯಾತ್ಮಿಕ ನೇತಾರೆ, ಕೋಟ್ಯಂತರ ಭಕ್ತರ ಆರಾಧ್ಯಮಾತೆಯೂ ಆಗಿರುವ ಸದ್ಗುರು ಶ್ರೀ ಮಾತಾ ಅಮೃತಾನಂದಮಯಿ ದೇವಿಯವರು ಮೇ 28ರಂದು ಮಂಗಳೂರಿಗೆ ಆಗಮಿಸಲಿದ್ದು, ಬ್ರಹ್ಮಸ್ಥಾನಂ ಮಹೋತ್ಸವ- ಅಮೃತ ಸಂಗಮ 2026 ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಎರಡು ದಿನಗಳ ಕಾಲ ನಡೆಯಲಿರುವ ಈ ಕಾರ್ಯಕ್ರಮದ ಯಶಸ್ಸಿಗೆ ಈಗ ಸಕಲ ಸಿದ್ಧತೆಗಳು ಕಡಲತಡಿಯಲ್ಲಿ ಭರದಿಂದ ಸಾಗುತ್ತಿವೆ.

ಪ್ರಚಾರ ಪೋಸ್ಟರ್ ಬಿಡುಗಡೆ

'ಅಮ್ಮ' ಮಂಗಳೂರಿಗೆ ಆಗಮಿಸುವ ಹಿನ್ನೆಲೆಯಲ್ಲಿ ಬ್ರಹ್ಮಸ್ಥಾನಂ ಮಹೋತ್ಸವ- ಅಮೃತ ಸಂಗಮ 2026 ಕಾರ್ಯಕ್ರಮದ ಪ್ರಚಾರಾರ್ಥ ಪೋಸ್ಟರ್ ಬಿಡುಗಡೆ ಕಾರ್ಯಕ್ರಮ ಜರುಗಿತು. ಮಂಗಳೂರಿನ ಮಾತಾ ಅಮೃತಾನಂದಮಯಿ ಮಠದಲ್ಲಿ ಸ್ವಾಮಿನಿ ಮಂಗಳಾಮೃತ ಪ್ರಾಣರವರು ಜ್ಯೋತಿ ಬೆಳಗಿಸಿ ಪೋಸ್ಟರ್ ಬಿಡುಗಡೆಗೆ ಚಾಲನೆಯನ್ನು ನೀಡಿದರು.





ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು

ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಡಿ. ವೇದವ್ಯಾಸ್ ಕಾಮತ್, ಪೋಸ್ಟರ್ ಅನಾವರಣಗೊಳಿಸಿ ಮಾತನಾಡಿ, ಮಂಗಳೂರಿನಲ್ಲಿ ಈ ಹಿಂದೆ ನಡೆದ ಮಾತಾ ಅಮೃತಾನಂದಮಯಿ ದೇವಿಯವರ ಕಾರ್ಯಕ್ರಮದಲ್ಲಿ ದಾಖಲೆಯ ಸಂಖ್ಯೆಯಲ್ಲಿ ಭಕ್ತಾದಿಗಳು ಭಾಗವಹಿಸಿದ್ದರು. ಅಮ್ಮನವರು ಪ್ರತಿಯೊಬ್ಬರನ್ನು ಅಪ್ಪಿ ಆಲಂಗಿಸಿ ಅನುಗ್ರಹಿಸಿದ್ದರು. ಈ ಬಾರಿಯ ಕಾರ್ಯಕ್ರಮವು ಏಳು ವರ್ಷಗಳ ಬಳಿಕ ನಡೆಯುತ್ತಿರುವುದಲ್ಲದೆ ಕರ್ನಾಟಕದಲ್ಲಿ ಏಕೈಕ ಕಾರ್ಯಕ್ರಮವಾಗಿದೆ. ಆದ್ದರಿಂದ ಹೆಚ್ಚಿನ ಮಹತ್ವ ಪಡೆದಿದ್ದು ಜನರು ಹೆಚ್ಚಿನ ಸಂಖ್ಯೆಯಲ್ಲಿ ಬರುವ ಸಾಧ್ಯತೆಗಳಿವೆ ಎಂದವರು ಹೇಳಿದರು.

ಸಂಪೂರ್ಣ ಸಹಕಾರ: ಐವನ್ ಡಿಸೋಜ

ಮುಖ್ಯ ಅತಿಥಿಯಾಗಿ ಭಾಗವಹಿಸಿದ ವಿಧಾನ ಪರಿಷತ್ ಸದಸ್ಯ ಐವನ್ ಡ' ಸೋಜ ಮಾತನಾಡಿ, ಅಮ್ಮನವರ ಪಾದಸ್ಪರ್ಶದಿಂದ ಈ ಭಾಗದಲ್ಲಿ ಸಕಾರಾತ್ಮಕ ಪರಿವರ್ತನೆಯಾಗಿದ್ದು, ಅಮ್ಮನವರ ಮಾನವೀಯ ಸೇವಾ ಯೋಜನೆಗಳು ಜನತೆಗೆ ಪ್ರಯೋಜನಕಾರಿಯಾಗಿದೆ. ಇಲ್ಲಿ ನಡೆದ ಉಚಿತ ಹೃದಯ ಶಸ್ತ್ರ ಚಿಕಿತ್ಸಾ ಶಿಬಿರವು ಅಸಹಾಯಕ ಪೋಷಕರಿಗೆ ವರದಾನವೆನಿಸಿದೆ. ಆರೋಗ್ಯ ಸೇವೆಯ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಸಂತೃಪ್ತಿ ತಂದಿದೆ ಎಂದರು. ಮೇ 28, 29 ರಂದು ಅಮೃತ ವಿದ್ಯಾಲಯಂ ಮೈದಾನದಲ್ಲಿ ನಡೆಯುವ ಅಮ್ಮನವರ ಕಾರ್ಯಕ್ರಮಕ್ಕೆ ನಾನು, ಶಾಸಕ ವೇದವ್ಯಾಸ್ ಕಾಮತ್ ಸಂಪೂರ್ಣ ಸಹಕಾರ ನೀಡುತ್ತೇವೆ. ಈ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ನಡೆಯಬೇಕು ಎಂದರು.

ವೇದಿಕೆಯಲ್ಲಿ ಗೌರವಾಧ್ಯಕ್ಷರಾದ ಡಾ. ಜೀವರಾಜ್ ಸೊರಕೆ, ಡಾ. ವೈ. ಸನತ್ ಹೆಗ್ಡೆ, ಡಾ. ವಸಂತ ಕುಮಾರ್ ಪೆರ್ಲ, ಅಧ್ಯಕ್ಷ ಸುರೇಶ್ ಅಮೀನ್, ಚೇತನ್ ಬೆಂಗ್ರೆ, ಮುರಳೀಧರ ಶೆಟ್ಟಿ, ಗಣೇಶ್ ಹೊಸಬೆಟ್ಟು, ವಿ. ಎಲ್. ರೇಗೋ ಉಪಸ್ಥಿತರಿದ್ದರು. ಡಾ. ದೇವದಾಸ್ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು.

ಜಿಲ್ಲೆಯ ವಿವಿಧ ಸಮಿತಿಗಳ ಪದಾಧಿಕಾರಿಗಳು, ಅಮ್ಮನ ಭಕ್ತರು ಭಾಗವಹಿಸಿದ್ದರು.

ಅಗತ್ಯ ವ್ಯವಸ್ಥೆ

ನನ್ನ ಕ್ಷೇತ್ರದಲ್ಲಿರುವ ಈ ಪವಿತ್ರ ಸನ್ನಿಧಿಗೆ ಬರುವ ಜನರಿಗೆ, ಸೇವಾರ್ಥಿಗಳಿಗೆ ಅಗತ್ಯವಾಗಿ ಬೇಕಾಗಿರುವ 10 ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಈ ಪವಿತ್ರ ಸೇವೆಯಲ್ಲಿ ಪಾಲ್ಗೊಳ್ಳಲು ಅವಕಾಶ ದೊರೆತಿರುವುದು ನನ್ನ ಸೌಭಾಗ್ಯ. ಅಮ್ಮನವರ ಕಾರ್ಯಕ್ರಮಕ್ಕೆ ಸಾರ್ವಜನಿಕರು ಬಂದು ಭಾಗವಹಿಸಿ ಅಮ್ಮನವರ ಅನುಗ್ರಹಕ್ಕೆ ಪಾತ್ರರಾಗುವಂತೆ ಶಾಸಕ ವೇದವ್ಯಾಸ ಕಾಮತ್ ಕರೆ ನೀಡಿದರು.

ಏಳು ವರ್ಷಗಳ ಬಳಿಕ ಮಂಗಳೂರಿಗೆ ‘ಅಮ್ಮ’ ಭೇಟಿ

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಮಂಗಳವಾರ 12, ಮೇ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU

ಇಂದಿನ ಹವಾಮಾನ

ದಕ್ಷಿಣ ಕನ್ನಡ	ಉಡುಪಿ
35° 27°	35° 28°


ಪುಟ 2
ಉಪ್ಪಿನಂಗಡಿಯಲ್ಲಿ ವಾಹನ ದಟ್ಟಣೆಯಿಂದ ಜನತೆಗೆ ಸಂಕಷ್ಟ


ಪುಟ 3
ಕಾಸರಗೋಡಿನಲ್ಲಿ ಘಮಘಮಿಸುತ್ತಿವೆ ರಸಭರಿತ ಮಾವುಗಳು!

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಎಡನೀರು ಶ್ರೀಮಠದಲ್ಲಿ ಜಗದ್ಗುರು ಶ್ರೀ ಶಂಕರ ಭಗವತ್ಪಾದರ ಪಂಚಲೋಹದ ಪ್ರತಿಮೆ ಪ್ರತಿಷ್ಠಾಪನೆ






ಶ್ರೀಮದ್ ಎಡನೀರು ಮಠದಲ್ಲಿ ನೂತನವಾಗಿ ಸ್ಥಾಪಿಸಿದ ಜಗದ್ಗುರು ಶ್ರೀ ಶಂಕರ ಭಗವತ್ಪಾದಾಚಾರ್ಯರ ಪಂಚಲೋಹದ ಪ್ರತಿಮೆಯ ಪ್ರತಿಷ್ಠಾಪನೆ, ಕುಂಭಾಭಿಷೇಕವನ್ನು ಶೃಂಗೇರಿ ಮಠದ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ನೆರವೇರಿಸಿದರು. ಎಡನೀರು ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಇದ್ದರು. ಇದೇ ಸಂದರ್ಭ ಶ್ರೀ ಮಠದ ಆನಂದ ಭಾರತೀ ಪ್ರಕಾಶನದ ಲಾಂಛನವನ್ನು ಶೃಂಗೇರಿ ಶ್ರೀ ಬಿಡುಗಡೆಗೊಳಿಸಿದರು.

ಹೊಸ ದಿಗಂತ
ನಿಮ್ಮವರ ಮನೆಗೂ ಈ ರಾಷ್ಟ್ರ ಜಾಗೃತಿಯ ದೈನಿಕ ಪರಿಚಯಿಸಿ

ಹೆಚ್ಚಿನ ಮಾಹಿತಿಗೆ ನಮ್ಮನ್ನು ಇಲ್ಲಿ ಸಂಪರ್ಕಿಸಿ
88612 09102
88612 09100

ಸುತ್ತಮುತ್ತ

ಮಂಗಳೂರು ನಗರದ ಗ್ರಾಮಾಂತರದಲ್ಲಿ ತಂಪೆರೆದ ಗುಡುಗು ಮಳೆ

ಕೈಕಂಬ: ಮಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಸೋಮವಾರ ಅಪರಾಹ್ನ ಗುಡುಗು ಸಹಿತ ಸಾಧಾರಣ ಮಳೆಯಾಗಿದೆ. ದಟ್ಟ ಮೋಡ ಕವಿದು ಗುಡುಗು ಆರಂಭವಾಗಿ ಭಾರೀ ಮಳೆ ಸುರಿಯುವ ಲಕ್ಷಣ ಕಂಡು ಬಂದಿತ್ತಾದರೂ ಜೋರಾಗಿ ಬೀಸಿದ ಗಾಳಿ ಭಾರೀ ಮಳೆ ಸುರಿಯುವುದನ್ನು ತಡೆಯಿತು. ಬಜಪೆ, ಗುರುಪುರ-ಕೈಕಂಬ, ಗಂಜಿಮಠ, ಮಳಲಿ, ಕುಪ್ಪೆಪದವು, ಎಡಪದವು ಸುತ್ತಮುತ್ತ ಸಾಧಾರಣ ಮಳೆ ಸುರಿದಿದೆ. ಮುಚ್ಚೂರು ಸುತ್ತಮುತ್ತ ಸುಮಾರು 20 ನಿಮಿಷಗಳ ಕಾಲ ಭಾರೀ ಮಳೆಯಾಗಿದೆ ಕಳೆದ ಮೂರು ದಿನಗಳಿಂದ ಇದೆ ರೀತಿ ಅಲ್ಲಲ್ಲಿ ಸಾಧಾರಣ ಮಳೆಯಾಗುತ್ತಿದ್ದು, ತಾಪಮಾನವನ್ನು ಇನ್ನಷ್ಟು ಹೆಚ್ಚಿಸುತ್ತಿದೆ. ಮಳೆ ಸುರಿದ ಕೆಲ ಗಂಟೆಗಳ ಕಾಲ ಸೆಖೆ ಇಳಿಮುಖವಾದರೂ ಬಳಿಕ ಮತ್ತೆ ಯಥಾ ರೀತಿಯಲ್ಲಿ ಸೆಕೆ ಜಾಸ್ತಿಯಾಗುತ್ತಿದೆ.

ಕಡಬ ಪರಿಸರದಲ್ಲಿ ಮತ್ತೆ ಗಾಳಿ ಮಳೆ ಆರ್ಭಟ: ಹಲವೆಡೆ ಒಂದಿಷ್ಟು ಹಾನಿ

ಕಡಬ: ಕಡಬ ಪರಿಸರದ ಹಲವು ಗ್ರಾಮಗಳಲ್ಲಿ ಸೋಮವಾರ ಸಂಜೆ ಸುಮಾರು ಒಂದು ತಾಸು ಗಾಳಿಯೊಂದಿಗೆ ಸುರಿದ ಮಳೆಗೆ ಹಲವೆಡೆ ಸಣ್ಣಪುಟ್ಟ ಹಾನಿಗಳು ಸಂಭವಿಸಿವೆ.

ಗ್ರಾಮೀಣ ಭಾಗಗಳಲ್ಲಿ ಮರದ ಕೊಂಬೆಗಳು ಮುರಿದುಬಿದ್ದು ವಿದ್ಯುತ್ ಲೈನ್‌ಗೆ ಹಾನಿಯಾಗಿವೆ. ಕೆಲವು ಕಡೆ ತೋಟಗಳಲ್ಲಿ ತೆಂಗು, ಅಡಿಕೆ ಹಾಗೂ ಬಾಳೆಗಿಡಗಳು ಮುರಿದು ಬಿದ್ದು ನಷ್ಟ ಉಂಟಾಗಿದೆ. ಗ್ರಾಮೀಣ ಭಾಗದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿ ರಾತ್ರಿಯ ತನಕವೂ ಸಮಸ್ಯೆ ಬಗೆಹರಿದಿಲ್ಲ.



ಕುಟ್ರುಪ್ಪಾಡಿ ಗ್ರಾಮದ ಕೇಪು ಶ್ರೀ ಲಕ್ಷ್ಮೀ ಜನಾರ್ದನ ದೇವಸ್ಥಾನದ ವಠಾರದಲ್ಲಿ ಶ್ರೀ ಪಂಚಮುಖಿ ಆಂಜನೇಯ ಸನ್ನಿಧಿಯ ಛಾವಣಿಯ ಹೆಂಚುಗಳು ಗಾಳಿಗೆ ಹಾರಿ ಒಡೆದು ಹೋಗಿವೆ. ಕುಟ್ರುಪ್ಪಾಡಿ ಗ್ರಾಮದ ಕೇಪು ಶ್ರೀ ಲಕ್ಷ್ಮೀ ಜನಾರ್ದನ ದೇವಸ್ಥಾನದ ವಠಾರದಲ್ಲಿ ಶ್ರೀ ಪಂಚಮುಖಿ ಆಂಜನೇಯ ಸನ್ನಿಧಿಯ ಛಾವಣಿಯ ಹೆಂಚುಗಳು ಗಾಳಿಗೆ ಹಾರಿ ಒಡೆದು ಹೋಗಿವೆ.

ಪುತ್ತೂರು ತಾಲೂಕಿನಲ್ಲಿ ಸೋಮವಾರವೂ ಸುರಿದು ತುಸು ತಂಪೆರೆದ ಮಳೆ

ಪುತ್ತೂರು: ಪುತ್ತೂರು ತಾಲೂಕಿನಾದ್ಯಂತ ಸೋಮವಾರ ಸಂಜೆ ಮತ್ತೆ ಮಳೆಯಾಗಿದೆ. ಕಳೆದ ಮೂರ್ನಾಲ್ಕು ದಿನಗಳಿಂದ ಸಂಜೆ ವೇಳೆಗೆ ಗುಡುಗು ಮಿಂಚುಗಳೊಂದಿಗೆ ಮಳೆ ಸುರಿಯುತ್ತಿದೆ. ಆದರೆ, ಭಾನುವಾರ ಗುಡುಗಿನ ಸದ್ದು ಕೇಳಿ ಬಂದರೂ ಮಳೆ ಮಾತ್ರ ವಿರಾಮ ಪಡೆದಿತ್ತು. ಸೋಮವಾರ ಸಂಜೆ ವೇಳೆಗೆ ಮತ್ತೆ ಮಳೆ ಸುರಿದಿದೆ. ಪುತ್ತೂರು ಗ್ರಾಮಾಂತರವಲ್ಲದೆ ಕಡಬ ಪ್ರದೇಶದಲ್ಲೂ ಸೋಮವಾರ ಉತ್ತಮ ಮಳೆ ಸುರಿಯಿತು. ಪುತ್ತೂರು, ಕಡಬ ಪ್ರದೇಶಗಳಲ್ಲಿ ಸಂಜೆ, ರಾತ್ರಿ ವೇಳೆ ನಿರಂತರವಾಗಿ ಮಳೆ ಸುರಿಯುತ್ತಿದ್ದರೂ ಹಗಲಿನ ವೇಳೆ ತಾಪಮಾನದಲ್ಲಿ ಮಾತ್ರ ಇಳಿಕೆಯಾಗಿಲ್ಲ, ರಾತ್ರಿ ವೇಳೆ ತಂಪಿನ ವಾತಾವರಣ ಉಂಟಾಗಿದೆ.

ಮಂಗಳೂರಿಗೆ ಇನ್ನೂ ಭೇಟಿ ನೀಡದ ಮಳೆ: ಬಂದರು ನಗರಿ ಧಗಧಗ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಭಾಗಗಳಲ್ಲಿ ಮಳೆಯಾಗಿದ್ದರೂ ಸೋಮವಾರ ಬಂದರು ನಗರಿ ಮಂಗಳೂರಿನಲ್ಲಿ ಮಾತ್ರ ಸುಡು ಬೇಸಿಗೆ ಮುಂದುವರಿದಿತ್ತು. ಮೋಡ ಮುಸುಕಿದ ವಾತಾವರಣ ಇತ್ತಾದರೂ ಮಳೆಯಾಗಿಲ್ಲ. ತಾಪಮಾನ ಮಾತ್ರ ಮತ್ತಷ್ಟು ಏರಿಕೆ ಕಂಡಿತ್ತು.

ಹೆದ್ದಾರಿಗೆ ಕೃತಕ ನೆರೆ | ಚರಂಡಿಗೆ ತ್ಯಾಜ್ಯ ಹೊರೆ | ತಗ್ಗು ಪ್ರದೇಶ ಕೆರೆ

ಎಚ್ಚರಿಕೆ ನೀಡಿದೆ ಮಳೆಯ ಟ್ರೈಲರ್!

ಅವಾಂತರ ತಡೆಗೆ ತಕ್ಷಣ ಎಚ್ಚೆತ್ತುಕೊಳ್ಳಬೇಕಿದೆ ಉಡುಪಿ ಆಡಳಿತ


ಉಡುಪಿ: ಜಿಲ್ಲೆಯಲ್ಲಿ ಕಳೆದ ಎರಡು ದಿನಗಳಿಂದ ಸುರಿಯುತ್ತಿರುವ ಮುಂಗಾರು ಪೂರ್ವ ಮಳೆಯು ಮುಂಬರುವ ಮಳೆಗಾಲದಲ್ಲಿ ಎದುರಾಗಬಹುದಾದ ಗಂಭೀರ ಸವಾಲುಗಳ ಮುನ್ಸೂಚನೆಯನ್ನು ನೀಡಿದೆ. ಈಗ ಸುರಿದ ಬೇಸಿಗೆ ಮೊದಲ ಕೆಲವು 'ಸಾಧಾರಣ' ಮಳೆಗಳಲ್ಲೇ ರಾಷ್ಟ್ರೀಯ ಹೆದ್ದಾರಿ, ನಗರದ ಪ್ರಮುಖ ರಸ್ತೆಗಳು ಜಲಾವೃತಗೊಂಡಿರುವುದು, ಇಲ್ಲಿ ಮಳೆಗಾಲ ಸಿದ್ಧತೆಗಳ ವೈಫಲ್ಯವನ್ನು ಎತ್ತಿ ತೋರಿಸುತ್ತಿವೆ.

ಹೆದ್ದಾರಿಯಲ್ಲಿ 'ಜಲಾವೃತ' ಅನಾಹುತ ಸೃಷ್ಟಿ

ಮಳೆಗಾಲದ ಆರಂಭದಲ್ಲೇ ಅಂಬಲಪಾಡಿ ಅಂಡರ್ ಪಾಸ್‌ನಲ್ಲಿ ಮಳೆ ನೀರು ವಾಹನ ಸಂಚಾರಕ್ಕೆ ಸಂಚಕಾರ ತಂದೊಡ್ಡಿದೆ. ಕಟಪಾಡಿಯಲ್ಲಿ ಓವರ್‌ಪಾಸ್ ಕಾಮಗಾರಿ ನಡೆಯುತ್ತಿರುವ ಭಾಗದಲ್ಲೂ ನೀರು ಅವಾಂತರ ಸೃಷ್ಟಿಸಿದೆ. ಹೆದ್ದಾರಿ ಅವೈಜ್ಞಾನಿಕ ಕಾಮಗಾರಿಯಿಂದ ನೀರು ಹರಿಯಲು ದಾರಿಯಿಲ್ಲದೆ ರಸ್ತೆಯಲ್ಲೇ 'ಕೆರೆ' ಸೃಷ್ಟಿಯಾಗಿದೆ.

ನಗರದ 35 ವಾರ್ಡ್‌ಗಳಲ್ಲೂ ಚರಂಡಿ ಸಮಸ್ಯೆ

ಈ ಬಾರಿ ಉಡುಪಿ ನಗರಸಭೆಯಲ್ಲಿ ಜನಪ್ರತಿನಿಧಿಗಳಿಲ್ಲ, ಹಾಗಾಗಿ ಸದ್ಯ ಆಡಳಿತಾಧಿಕಾರಿಗಳು ಮತ್ತು ಅಧಿಕಾರಿ ವರ್ಗವೇ ಇತ್ತ ತಕ್ಷಣ ಸೂಕ್ತ ಕಾಳಜಿ ವಹಿಸಬೇಕಿದೆ.



ಸಂಗಮ ವಿಶೇಷ

ಈಗಲೇ ಹೀಗಾದರೆ ಹೇಗೆ?

ಉಡುಪಿ ನಗರಸಭೆ ವ್ಯಾಪ್ತಿಯ ಅಜ್ಜರಕಾಡು, ಕುಕ್ಕಿಕಟ್ಟೆ, ಅಲೆವೂರು, ಮಣಿಪಾಲ, ಪರ್ಕಳ, ಸಂತೆಕಟ್ಟೆ, ನಿಟ್ಟೂರು ಹಾಗೂ ಮಲ್ಪೆ ಸೇರಿದಂತೆ ಎಲ್ಲಾ 35 ವಾರ್ಡ್‌ಗಳಲ್ಲಿ ಚರಂಡಿ ವ್ಯವಸ್ಥೆ ಅಯೋಮಯವಾಗಿದೆ. ಬಹುತೇಕ ಕಡೆ ಚರಂಡಿ ಹೂಳು ತುಂಬಿ ಹರಿಯಲು ಜಾಗವಿಲ್ಲದೆ ನೀರು ನೇರವಾಗಿ ರಸ್ತೆಯ ಮೇಲೆಯೇ ಹರಿಯುತ್ತಿದೆ.

ಎಚ್ಚೆತ್ತುಕೊಳ್ಳಲಿ ಆಡಳಿತ, ಅಧಿಕಾರಿಗಳು

ಅಧಿಕಾರಿಗಳು, ಆಡಳಿತವು ಇಲ್ಲಿನ ಸಮಸ್ಯೆಗಳ ಬಗ್ಗೆ ತಕ್ಷಣ ಮುತುವರ್ಜಿ ವಹಿಸಿ ಮುಂದಿನ ತಿಂಗಳು ಆರಂಭವಾಗುವ 'ಅಧಿಕೃತ' ಮಳೆಗಾಲದಲ್ಲಿ ಎಲ್ಲೆಡೆ ಸಂಭವಿಸಬಹುದಾದ ಅನಾಹುತಗಳನ್ನು ತಡೆಗಟ್ಟಲು ಈಗಾಗಲೇ ಮುಂದಾಗಬೇಕಿದೆ.

ಹೆದ್ದಾರಿ ಇಲಾಖೆ ನಿರ್ಲಕ್ಷ್ಯಕ್ಕೆ ಸಂಕಷ್ಟದಲ್ಲಿ ಸಾರ್ವಜನಿಕರು

ರಾಷ್ಟ್ರೀಯ ಹೆದ್ದಾರಿಯಲ್ಲಿ ನೀರು ಸರಾಗವಾಗಿ ಹರಿದು ಹೋಗುವ ವ್ಯವಸ್ಥೆ ಇಲ್ಲದಿರುವುದು ಅವೈಜ್ಞಾನಿಕ ಕಾಮಗಾರಿಗೆ ಹಿಡಿದ ಕನ್ನಡಿಯಾಗಿದೆ. ಪಡುಬಿದ್ರಿ, ಕಾಪು, ಎರ್ಮಾಳು, ಉಚ್ಚಿಲ ಹಾಗೂ ಹೆಜಮಾಡಿ ಪ್ರದೇಶಗಳಲ್ಲಿ ಹೆದ್ದಾರಿಯ ಮೇಲೆ ಮೊಣಕಾಲುದ್ದದ ನೀರು ನಿಂತಿರುವುದರಿಂದ ವಾಹನ ಸವಾರರು ಪ್ರಾಣಾಪಾಯ ಎದುರಿಸುತ್ತಿದ್ದಾರೆ. ಈ ಬಗ್ಗೆ ಹಲವು ಬಾರಿ ಹೆದ್ದಾರಿ ಇಲಾಖೆಗೆ ದೂರು ನೀಡಿದರೂ ಯಾವುದೇ ಸ್ಪಂದನೆ ದೊರೆತಿಲ್ಲ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಅಪಘಾತ ತಾಣವಾಗುತ್ತಿವೆ ಇಲ್ಲಿನ ತಗ್ಗು ಪ್ರದೇಶಗಳು

ಸರಿಯಾದ ಒಳಚರಂಡಿ ವ್ಯವಸ್ಥೆಯ ಕೊರತೆಯಿಂದಾಗಿ ತಗ್ಗು ಪ್ರದೇಶಗಳ ರಸ್ತೆಗಳಲ್ಲಿ ನೀರು ನಿಂತು ಸಂಚಾರಕ್ಕೆ ಕಂಟಕವಾಗುತ್ತಿದೆ. ಇದರಿಂದಾಗಿ ಈಗಾಗಲೇ ಹಲವು ಅಪಘಾತಗಳು ಸಂಭವಿಸಿ ಸಾವು-ನೋವುಗಳು ಉಂಟಾಗಿವೆ ಎಂದು ಸ್ಥಳೀಯರು ದೂರಿದ್ದಾರೆ. ಮುಂಗಾರು ಮಳೆ ಪೂರ್ಣ ಪ್ರಮಾಣದಲ್ಲಿ ತೀವ್ರಗೊಳ್ಳುವ ಮೊದಲು ಜಿಲ್ಲಾಡಳಿತವು ನೀರು ಹರಿದು ಹೋಗುವ ವ್ಯವಸ್ಥೆಯನ್ನು ಸರಿಪಡಿಸಿ ರಸ್ತೆ ಸುರಕ್ಷತೆಯನ್ನು ತಕ್ಷಣವೇ ಖಚಿತಪಡಿಸಬೇಕಿದೆ.



ಅಂಗರಗುಡ್ಡೆ ಬಳಿ ಸಂಕಷ್ಟ ಸೃಷ್ಟಿಸಿದೆ ಅರೆಬರೆ ನಡೆದ ತಡೆಗೋಡೆ ಕಾಮಗಾರಿ

ಸುತ್ತ ಕೃತಕ ನೆರೆಗೆ ಕುಸಿತ ಭೀತಿಯಲ್ಲಿದೆ ಮನೆ

ಮುಲ್ಕಿ: ಕಿನ್ನಿಗೋಳಿ ಪಟ್ಟಣ ಪಂಚಾಯತಿ ವ್ಯಾಪ್ತಿಯ ತಾಳಿಪಾಡಿ ಅಂಗರಗುಡ್ಡೆ ಬಳಿ ಎಸ್‌ಸಿ/ಎಸ್‌ಟಿ ಅನುದಾನದಲ್ಲಿ ಸ್ಥಳೀಯ ನಿವಾಸಿ ಆನಂದ ಎಂಬವರ ಮನೆಯ ಹಿಂಭಾಗದಲ್ಲಿ ಅರ್ಧಂಬರ್ಧ ಕಾಂಕ್ರೀಟ್ ತಡೆಗೋಡೆ ಕಾಮಗಾರಿ ನಡೆದಿದ್ದು ಅಪಾಯಕಾರಿಯಾಗಿದೆ.

ಸಂಕಷ್ಟ ತಂದಿದೆ ಅರೆಬರೆ ಕಾಮಗಾರಿ

ಅರೆಬರೆ ಕಾಮಗಾರಿಯಿಂದ ಕಳೆದ ದಿನದ ಹಿಂದೆ ಸುರಿದ ಭಾರೀ ಮಳೆಗೆ ಮನೆಯ ಸುತ್ತಲೂ ಕೃತಕ ನೆರೆ ಉಂಟಾಗಿ ಮನೆ ಕುಸಿತದ ಭೀತಿ ಎದುರಾಗಿದೆ

ಆನಂದ ಅವರ ಮನೆ ಅಂಗರಗುಡ್ಡೆ ಭಜನಾ ಮಂದಿರದ ಬಳಿಯ ಇಳಿಜಾರು ಪ್ರದೇಶದಲ್ಲಿದ್ದು ಭಾರೀ ಮಳೆಗೆ ಮಣ್ಣು ಸವೆತದಿಂದ ಕಾಂಕ್ರೀಟ್ ರಸ್ತೆ ಬದಿ ಭಾರೀ ಗಾತ್ರದ ಹೊಂಡಗಳು ಉಂಟಾಗಿ ರಸ್ತೆ ಕುಸಿಯುವ ಭೀತಿ ಎದುರಾಗಿದೆ

ಕಾಮಗಾರಿ ಕಳಪೆಯ ಆರೋಪ

ಅಂಗರಗುಡ್ಡೆ ಪರಿಸರದಲ್ಲಿ ರಸ್ತೆ ಬದಿಯ ಅಮೃತ್ ಕುಡಿವ ನೀರಿನ ಪೈಪ್‌ಗಳೂ ಕಾಮಗಾರಿ ಕಳಪೆಯಾಗಿದ್ದು ಅವಘಡಕ್ಕೆ ಎಡೆ ಮಾಡಿಕೊಡುತ್ತಿದೆ.


ಕುಡಿಯುವ ನೀರಿನ ಪೈಪುಗಳು ರಸ್ತೆ ಬದಿ ಹೊಂಡ ತೋಡಿ ಹಾಕದೆ ಮೇಲ್ಭಾಗದಲ್ಲಿ ಹಾಗೆ ಇಟ್ಟಿದ್ದು ಇದು ತೀರಾ ಅಪಾಯ ಕಾರಿಯಾಗಿ ಪರಿಣಮಿಸಿದೆ.



ನೀರು ಸಂಪರ್ಕದ್ದೂ ಕಳಪೆ ಕಾಮಗಾರಿ!!

ಕೆಲ ದಿನಗಳ ಹಿಂದೆ ಆನಂದ ಅವರ ಮನೆಗೆ ಕಿನ್ನಿಗೋಳಿ ಪಟ್ಟಣ ಪಂಚಾಯತ್‌ನಿಂದ ಕುಡಿಯುವ ನೀರಿನ ಸಂಪರ್ಕ ಮಾಡಲಾದೆ. ಮಣ್ಣಿನ ದಿಬ್ಬದ ರಾಶಿಯ ಮೇಲೆ ಕಾಂಕ್ರಿಟ್ ಸ್ಲಾಬ್ ಹಾಕಿ ಪೈಪ್ ಹಾಕಲಾಗಿದ್ದು, ಭಾರೀ ಮಳೆಗೆ ಪೈಪ್ ಸಮೇತ ಮಣ್ಣಿನಲ್ಲಿ ಕೊಚ್ಚಿ ಹೋಗುವ ಸಾಧ್ಯತೆ ಇದೆ. ಈ ಬಗ್ಗೆ ಪಂಚಾಯತ್‌ಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ ಎಂದು ದೂರಿದ್ದಾರೆ ಆನಂದ್.

ನಡುರಸ್ತೆಯಲ್ಲಿ ನಿಂತು ಬೆಚ್ಚಿಬೀಳಿಸಿದ ಗಜರಾಜ...



ಚಾರ್ಮಾಡಿ ಕಣಿವೆ ರಸ್ತೆಯ 10ನೇ ತಿರುವಿನಲ್ಲಿ ಸೋಮವಾರ ಒಂಟಿ ಸಲಗ ರಸ್ತೆ ಮಧ್ಯೆ ನಿಂತ ಪರಿಣಾಮ ಪ್ರಯಾಣಿಕರು ಗಾಬರಿಗೊಂಡಿದ್ದಲ್ಲದೆ ಸುಮಾರು ಒಂದು ಗಂಟೆ ಕಾಲ ವಾಹನ ಚಾಲಕರು ಪರದಾಡುವಂತಾಯಿತು. ವಾಹನಗಳು ಇಲ್ಲಿ ಸಾಲುಗಟ್ಟಿ ನಿಂತು ಸಂಚಾರವೂ ಅಸ್ತವ್ಯಸ್ತವಾಗಿತ್ತು.

ಸುರತ್ಕಲ್-ಕೈಕಂಬ ರಸ್ತೆಯಲ್ಲಿ ಪಾದಚಾರಿಗಳ ನಿತ್ಯ ಪರದಾಟ | ತಕ್ಷಣ ಸೂಕ್ತ ಕ್ರಮ ಕೈಗೊಳ್ಳಲು ನಾಗರಿಕರ ಆಗ್ರಹ

ಇಲ್ಲಿ ಫುಟ್‌ಪಾತ್ ವಾಹನ ಪಾರ್ಕಿಂಗ್‌ಗೆ, ರಸ್ತೆ ಪಾದಚಾರಿಗಳಿಗೆ!

ಸುರತ್ಕಲ್: ಇಲ್ಲಿನ ಸುರತ್ಕಲ್‌ನಿಂದ ಕೈಕಂಬದವರೆಗಿನ ರಸ್ತೆಯ ಪಾದಚಾರಿ ಪಥಗಳು ವಾಹನ ನಿಲುಗಡೆ ಮತ್ತು ಅಂಗಡಿಗಳಿಂದ ಸಂಪೂರ್ಣ ಕಬಳಿಸಲ್ಪಟ್ಟಿದ್ದು, ನಿತ್ಯ ನೂರಾರು ಜನರು ಜೀವ ಭಯದಿಂದಲೇ ರಸ್ತೆಯ ಮೇಲೆಯೇ ನಡೆದುಕೊಂಡು ಹೋಗುವ ದುಃಸ್ಥಿತಿ ನಿರ್ಮಾಣವಾಗಿದೆ.

ಫುಟ್‌ಪಾತ್‌ನಲ್ಲೇ ವಾಹನ ನಿಲುಗಡೆ

ಎಲ್ಲೆಡೆ ವಾಹನಗಳು ಪಾದಚಾರಿ ಪಥಗಳ ಮೇಲೆ ನಿಲ್ಲುತ್ತಿವೆ. ಅಂಗಡಿ ಮುಂಗಟ್ಟುಗಳು ಮತ್ತು ಫುಡ್ ಸ್ಟಾಲ್ ಕೂಡಾ ಪಥಗಳನ್ನೇ ತಮ್ಮ ವ್ಯಾಪಾರದ ವಿಸ್ತರಣೆಗೆ ಬಳಸಿಕೊಳ್ಳುತ್ತಿವೆ. ಬೃಹತ್ ಮಾಲ್‌ಗಳೂ ಇದರಿಂದ ಹೊರತಾಗಿಲ್ಲ, ಮಳೆ ನೀರು ಹರಿಯುವ ತೋಡು, ಸಾರ್ವಜನಿಕ ಸಂಚಾರಕ್ಕಾಗಿ ಮೀಸಲಿಟ್ಟ ಜಾಗದಲ್ಲಿಯೂ ವಾಹನಗಳನ್ನು ಈಗ ಎಲ್ಲೆಂದರಲ್ಲಿ ನಿಲ್ಲಿಸುವುದು ಇಲ್ಲೆಲ್ಲಾ ಸಾಮಾನ್ಯವಾಗಿದೆ.

ಇಲ್ಲಿ ಜೀವಕ್ಕೆ ರಕ್ಷಣೆ ಸಿಗುವ ಭರವಸೆ ಇಲ್ಲ

ಇದರಿಂದ ಪಾದಚಾರಿಗಳು, ವಿಶೇಷವಾಗಿ ವಿದ್ಯಾರ್ಥಿಗಳು, ವೃದ್ಧರು ಮತ್ತು ಮಹಿಳೆಯರು ವಾಹನಗಳ ನಡುವೆಯೇ ಸಂಚರಿಸಬೇಕಾದ ಅನಿವಾರ್ಯತೆ ಉಂಟಾಗಿದೆ. ಅನೇಕ ಕಡೆ ಪಾದಚಾರಿಗಳು ವಾಹನಗಳಿಂದ ಹೊಡೆಸಿಕೊಂಡು ಗಾಯಗೊಂಡು ನೋವು ಅನುಭವಿಸುವ ಘಟನೆಗಳು ನಡೆಯುತ್ತಿವೆ. ಜೀವ ರಕ್ಷಣೆಯ ಭರವಸೆ ಇಲ್ಲದೆ ಜನರು ಇಲ್ಲಿ ರಸ್ತೆಯನ್ನು ದಾಟುವುದು ಕೂಡಾ ಅಪಾಯಕಾರಿಯಾಗಿದೆ.

ಇನ್ನು ಹಲವು ಕಡೆ ಮನೆ ನಿರ್ಮಾಣದ ಭರದಲ್ಲಿ ಕಟ್ಟಡ ಸಾಮಗ್ರಿಗಳನ್ನು ಪಾದಚಾರಿ ಪಥಗಳ ಮೇಲೆ ಸುರಿದು ತಿಂಗಳುಗಟ್ಟಲೆ ಹಾಗೆಯೇ ಬಿಡಲಾಗುತ್ತಿದೆ. ಈ ಬಗ್ಗೆ ಸಂಬಂಧಪಟ್ಟವರು ಸೂಕ್ತ ಕ್ರಮ ಕೈಗೊಳ್ಳದೆ ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸಿದೆ.



ಸಂಗಮ ವಿಶೇಷ

- ಪಾದಚಾರಿ ಪಥಗಳ ಮೇಲೆಯೇ ಇಲ್ಲೆಲ್ಲಾ ವಾಹನಗಳ ಪಾರ್ಕಿಂಗ್
- ಫುಡ್ ಸ್ಟಾಲ್‌ಗಳ ವ್ಯಾಪಾರ ವಿಸ್ತರಣೆಗೂ ಇಲ್ಲಿ ಇದೇ ಪಥಗಳು
- ನಿತ್ಯ ನೂರಾರು ಜನ ರಸ್ತೆಯಲ್ಲೇ ಸಂಚರಿಸಬೇಕಾದ ಪರಿಸ್ಥಿತಿ ಇಲ್ಲಿದೆ

ಅನಧಿಕೃತ ವಾಹನ ನಿಲುಗಡೆಗೆ ಇಲ್ಲಿ ತಕ್ಷಣ ಕಡಿವಾಣ ಹಾಕಬೇಕು

ಮಂಗಳೂರಿನಲ್ಲಿ ಸುಸಜ್ಜಿತವಾಗಿ ಬೆಳೆಯಬೇಕಾದ ಸುರತ್ಕಲ್, ಕೃಷ್ಣಾಪುರ, ಕಾಟಿಪಳ್ಳ ಭಾಗದ ಪಾದಚಾರಿ ಸುರಕ್ಷತೆ ನಿಧಾನವಾಗಿ ಕಣ್ಮರೆಯಾಗುತ್ತಿದೆ. ದಿನಗಳಲ್ಲಿ ಮಳೆ ನೀರು ಹರಿಯುವ ತೋಡು ನಿರ್ಮಾಣಕ್ಕೆ ವಿರೋಧ ವ್ಯಕ್ತವಾದರೂ ಆಗಬಹುದು ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ. ಪಾದಚಾರಿ ಪಥಗಳ ಮೇಲಿನ ಅತಿಕ್ರಮಣ ತೆರವುಗೊಳಿಸಿ, ಅನಧಿಕೃತ ವಾಹನ ನಿಲುಗಡೆಗೆ ಕಡಿವಾಣ ಹಾಕಬೇಕು ಎಂದು ಅವರು ಒತ್ತಾಯಿಸಿದ್ದಾರೆ. ಇಲ್ಲದಿದ್ದರೆ ಮುಂದಾಗುವ ಯಾವುದೇ ಅನಾಹುತಕ್ಕೆ ಸಂಬಂಧಪಟ್ಟ ಅಧಿಕಾರಿಗಳೇ ಹೊಣೆ ಎಂದು ಸ್ಥಳೀಯರು ಎಚ್ಚರಿಸಿದ್ದಾರೆ.

ಸಾರ್ವಜನಿಕರು ಆರೋಗ್ಯ ಕಾಳಜಿಯಲ್ಲಿ ಆತ್ಮಶಕ್ತಿ ಸಂಘದ ಪಾತ್ರ ಪ್ರಮುಖವಾದುದು 2
ಉಬ್ರಂಗಳ ಶ್ರೀ ದೇವಸ್ಥಾನದಲ್ಲಿ ಹಿತ್ತಾಳೆ ಕವಚದ 18 ಮೆಟ್ಟಿಲುಗಳ ಲೋಕಾರ್ಪಣೆ 3
ಉಪ್ಪಳ ರೈಲ್ವೆ ನಿಲ್ದಾಣ ಪರಿಸರ ರಸ್ತೆ ದುಸ್ತರ: ವಾಹನ ಸವಾರರಿಗೆ ಸಂಕಷ್ಟ 3
ಹಸ್ತ ಪ್ರತಿಗಳ ಡಿಜಿಟಲೀಕರಣ ಚುರುಕುಗೊಳಿಸಲು ಸೂಚನೆ 4

ನಿರಂತರ ಸುದ್ದಿ ಅಪ್ಡೇಟ್‌ಗಾಗಿ Google Lens ನಲ್ಲಿ ಈ QRಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!

ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಮಂಗಳವಾರ 12, ಮೇ 2026

ಸುತ್ತಮುತ್ತ

ಇಂದು ವಿದ್ಯುತ್ ವ್ಯತ್ಯಯ

ಮಂಗಳೂರು: ಕುಲಶೇಖರ ಉಪಕೇಂದ್ರದಿಂದ ಹೊರಡುವ ಏರ್ಪೋರ್ಟ್ ಮತ್ತು ಗೋಳಿಗುಡ್ಡೆ ಫೀಡರ್‌ಗಳಲ್ಲಿ ತುರ್ತು ನಿರ್ವಹಣೆ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ, ಗುರುಪ್ರಸಾದ್ ರೋಡ್, ಗೋಳಿಗುಡ್ಡೆ ಸೆಕ್ಟರ್‌ಮನೆ, ಉಡ್ಡೆಹಾಡಿ, ಏರ್ಪೋರ್ಟ್ ರೋಡ್, ಕೇಂದ್ರೀಯ ವಿದ್ಯಾಲಯ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 12ರಂದು ಬೆಳಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ. ಮುಲ್ಲಕಾಡ್ಡ ಉಪಕೇಂದ್ರದಿಂದ ಹೊರಡುವ ವಾಟರ್ ಸಪ್ಲೈ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ ಮೇ 12ರಂದು ಬೆಳಗ್ಗೆ 10ರಿಂದ ಸಂಜೆ 4 ಗಂಟೆಯವರೆಗೆ ಉರ್ವ ಮಾರ್ಕೆಟ್ ಏರಿಯಾದ ಪ್ರದೇಶ, ... ಬಾರ್, ಉರ್ವ ಮಾರಿಗುಡಿ ರಸ್ತೆ, ... ಸೆಂಟರ್, ... ಕಲ್ಯಾಣ ಮಂದಿರ, ... ಕ್ರಾಸ್ ರಸ್ತೆ, ..., ... ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ನಾಳೆ ಮೆಸ್ಕಾಂ ಜನಸಂಪರ್ಕ ಸಭೆ

ಪುತ್ತೂರು: ಮೆಸ್ಕಾಂ ಮಂಗಳೂರು ವೃತ್ತ ಅಧೀಕ್ಷಕ ಇಂಜಿನಿಯರ್ ಅಧ್ಯಕ್ಷತೆಯಲ್ಲಿ ಮೇ 13ರಂದು ಬೆಳಗ್ಗೆ 11ರಿಂದ 12 ಗಂಟೆಯವರೆಗೆ ಪುತ್ತೂರು ನಗರ ಹಾಗೂ ... ಗ್ರಾಮಾಂತರ ಉಪವಿಭಾಗ ಮಟ್ಟದ ಜನ ಸಂಪರ್ಕ ಸಭೆ ಪುತ್ತೂರು ವಿಭಾಗ ಕಚೇರಿಯಲ್ಲಿ ನಡೆಯಲಿದೆ. ಗ್ರಾಹಕರು ಪುತ್ತೂರು ... ವಿಭಾಗ ಕಚೇರಿಯ ಸಭಾಂಗಣದಲ್ಲಿ ಮತ್ತು ದೂರವಾಣಿ ಮೂಲಕ ತಮ್ಮ ದೂರುಗಳನ್ನು ಸಲ್ಲಿಸಬಹುದು ಎಂದು ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆ ತಿಳಿಸಿದೆ.

ಮೇ 14: ಮೆಸ್ಕಾಂ ಜನಸಂಪರ್ಕ ಸಭೆ

ಮುಲ್ಕಿ: ಮೆಸ್ಕಾಂ ಮುಲ್ಕಿ ಉಪವಿಭಾಗ ಕಚೇರಿಯಲ್ಲಿ ಮೇ 14ರಂದು ಗುರುವಾರ ಬೆಳಗ್ಗೆ 11ರಿಂದ 12 ಗಂಟೆಯವರೆಗೆ ಜನ ಸಂಪರ್ಕ ಸಭೆ ನಡೆಯಲಿದ್ದು, ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಈ ಸಭೆಯಲ್ಲಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲುಗಳನ್ನು ದೂರವಾಣಿ ಸಂಖ್ಯೆ 0824-2294426ರ ಮುಖಾಂತರವೂ ಸಂಪರ್ಕಿಸಿ, ಅಹವಾಲುಗಳನ್ನು ಸಲ್ಲಿಸಬಹುದಾಗಿದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ಮಂಗಳೂರು: ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ -1 ರ ... ವಿದ್ಯಾರ್ಥಿಗಳಿಂದ 2025-26ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ... ಸೌಲಭ್ಯಕ್ಕಾಗಿ, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ದಿನಾಂಕವನ್ನು ಮೇ 16 ರವರೆಗೆ ವಿಸ್ತರಿಸಲಾಗಿದೆ. ಅರ್ಜಿ ಸಲ್ಲಿಸಲು ವೆಬ್‌ಸೈಟ್: https://ssp. Post matric.karnataka.gov.in ನಲ್ಲಿ ಮೂಲಕ ಅರ್ಜಿ ಸಲ್ಲಿಸಬಹುದು. ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆ ಹಾಗೂ ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದ ಸಂಪೂರ್ಣ ಮಾಹಿತಿಗಾಗಿ https://bcwd.karnataka.gov.in ನಲ್ಲಿ ನೋಡಬಹುದು. ಹೆಚ್ಚಿನ ಮಾಹಿತಿಗಾಗಿ ... ಇ-ಮೇಲ್ bcwdmatrichelp@karnataka.gov.in ವಿಳಾಸ ಹಾಗೂ ಸಹಾಯವಾಣಿ 1902 ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್‌ಕೆಎಸ್‌ಎಸ್‌ಎಫ್ ನಿಂದ ಸನ್ಮಾನ

ಕೊಣಾಜೆ: ... ನಡೆಸಿದ ... ಸ್ವರ್ಧೆಯಲ್ಲಿ ... ವಿಜೇತರಾದವರನ್ನು ಗೌರವಿಸಲಾಯಿತು. ... ಸ್ವಾಗತಿಸಿದರು. ಈ ಸಂದರ್ಭದಲ್ಲಿ ಯುನಿಟ್ ಅಧ್ಯಕ್ಷ ..., ಕಾರ್ಯದರ್ಶಿ ..., ... ಇದ್ದರು.

ಮದುವೆ, ಗೃಹಪ್ರವೇಶ ಸಹಿತ ಖಾಸಗಿ ಕಾರ್ಯಕ್ರಮಗಳಿಂದ ಮುಖ್ಯರಸ್ತೆಗಳಲ್ಲಿ ವಾಹನ ಸಂಚಾರ ಹೆಚ್ಚಳ


ಉಪ್ಪಿನಂಗಡಿಯಲ್ಲಿ ವಾಹನ ದಟ್ಟಣೆಯಿಂದ ಜನತೆಗೆ ಸಂಕಷ್ಟ

ಉಪ್ಪಿನಂಗಡಿ: ಮದುವೆ, ಗೃಹಪ್ರವೇಶ ಇತ್ಯಾದಿ ಹಲವಾರು ಖಾಸಗಿ ಕಾರ್ಯಕ್ರಮಗಳ ಕಾರಣದಿಂದಾಗಿ ಇಲ್ಲಿನ ವಾಹನ ಸಂಚಾರ ಕಳೆದ ಕೆಲ ದಿನಗಳಿಂದ ಹೆಚ್ಚಿದ್ದು, ಈ ಪರಿಣಾಮ ಉಪ್ಪಿನಂಗಡಿಯ ಪ್ರಮುಖ ರಸ್ತೆಗಳಲ್ಲಿ ವಾಹನ ದಟ್ಟಣೆ ಉಂಟಾಗಿ ಜನತೆ ಸಂಕಷ್ಟಕ್ಕೊಳಗಾಗುತ್ತಿರುವ ಬಗ್ಗೆ ಸಾರ್ವಜನಿಕ ಆಕ್ರೋಶ ವ್ಯಕ್ತಗೊಂಡ ಬಗ್ಗೆ ವರದಿಯಾಗಿದೆ.

ಇಲ್ಲಿನ ಹೆದ್ದಾರಿ ಕಾಮಗಾರಿಯಿಂದ ರಾಷ್ಟ್ರೀಯ ಹೆದ್ದಾರಿ 75 ಹಾದು ಹೋಗುವ ರಸ್ತೆಯಲ್ಲಿ ಮುಂಜಾನೆಯಿಂದ ಮಧ್ಯಾಹ್ನದವರೆಗೆ ವಾಹನ ದಟ್ಟಣೆಯಿಂದ ಸಂಚಾರಕ್ಕೆ ಅಡ್ಡಿ ಉಂಟಾಗಿತ್ತು. ಇದರಿಂದಾಗಿ ಮೊದಲೇ ವ್ಯವಹಾರ ಕುಸಿತಕ್ಕೆ ಒಳಗಾಗಿರುವ ವ್ಯಾಪಾರಿಗಳು ಮತ್ತಷ್ಟು ಸಮಸ್ಯೆಗೆ ಸಿಲುಕುವಂತಾಯಿತು.

ವಾಹನ ದಟ್ಟಣೆಯಿಂದಾಗಿ ಪೇಟೆಗೆ ಬಂದ ನಾಗರಿಕರು ಎಲ್ಲೆಂದರಲ್ಲಿ ವಾಹನಗಳನ್ನು ನಿಲ್ಲಿಸಲಾಗದೆ ದಟ್ಟಣೆಯೊಂದಿಗೆ ವಾಹನಗಳ ಸಾಲಿನಲ್ಲಿ ಮುಂದುವರಿಯಬೇಕಾಗಿ ಬಂದು, ಅಂಗಡಿ ಮುಂಗಟ್ಟುಗಳ ವರ್ತಕರು ಗ್ರಾಹಕರಿಲ್ಲದೆ, ರಸ್ತೆಯಲ್ಲಿನ ವಾಹನಗಳ ಸಾಲನ್ನು ನೋಡುತ್ತಾ ಕಾಲ ಕಳೆಯುವಂತಾಗಿತ್ತು.

ಈ ಬಗ್ಗೆ ಸ್ಥಳೀಯ ವರ್ತಕರಿಂದ ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶದ ಅಭಿಪ್ರಾಯಗಳು ವ್ಯಕ್ತವಾಗುತ್ತಿದ್ದುದಲ್ಲದೇ, ಸ್ಥಳೀಯ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಪದಾಧಿಕಾರಿಗಳು ಸಮಸ್ಯೆಯ ಗಂಭೀರತೆಯನ್ನು ಪೊಲೀಸ್ ವೃತ್ತ ನಿರೀಕ್ಷಕರ ಗಮನಕ್ಕೆ ತಂದರು.







ಅಂಡರ್ ಪಾಸ್‌ನಲ್ಲಿ ಅನಧಿಕೃತ ಅಂಗಡಿ

ಉಪ್ಪಿನಂಗಡಿಯಲ್ಲಿ ಪದೇ ಪದೇ ವಾಹನ ದಟ್ಟಣೆ ಉಂಟಾಗುತ್ತಿದ್ದರೂ, ಅಂಡರ್ ಪಾಸ್ ನಲ್ಲಿ ಅನಧಿಕೃತವಾಗಿ ವಾಹನಗಳಲ್ಲಿ ಸಾಮಾನು ಸರಂಜಾಮು ತಂದಿರಿಸಿ ವ್ಯಾಪಾರ ಮಾಡಲು ಅವಕಾಶ ನೀಡಲಾಗಿದೆ. ಇದರಿಂದಾಗಿ ಇಲ್ಲಿ ವಾಹನ ಸಂಚಾರಕ್ಕೆ ಅಡಚಣೆಯಾಗುತ್ತಿದೆ ಎಂಬ ಆಕ್ರೋಶ ವ್ಯಕ್ತವಾಗಿದೆ.

ಮುನ್ನೆಚ್ಚರ ಅಗತ್ಯ

ಸಮಸ್ಯೆ ಗಂಭೀರವಾಗಿ ಕಾಡಿದ ಬಳಿಕ ಪೊಲೀಸ್ ಸಿಬ್ಬಂದಿಯನ್ನು ನಿಯುಕ್ತಿಗೊಳಿಸುವ ಬದಲು ಮೊದಲೇ ಸಂಚಾರ ವ್ಯವಸ್ಥೆಯನ್ನು ನಿಯಂತ್ರಿಸಲು ಪೊಲೀಸ್ ಸಿಬ್ಬಂದಿಯನ್ನು ಆಯಕಟ್ಟಿನ ಸ್ಥಳದಲ್ಲಿ ನಿಯುಕ್ತಿಗೊಳಿಸಿದ್ದಲ್ಲಿ ಸಮಸ್ಯೆಯನ್ನು ಮುಂದಿನದಲ್ಲೇ ನಿಯಂತ್ರಿಸಲು ಸಾಧ್ಯ ಎನ್ನುವುದನ್ನು ವರ್ತಕರ ಸಂಘದಿಂದ ಇಲಾಖೆಗೆ ತಿಳಿಸಲಾಗಿದೆ.

> **ಕಾನೂನು ಹೋರಾಟ ಅನಿವಾರ್ಯ**
>
> ಈಗಾಗಲೇ ವರ್ತಕರಿಂದ ವ್ಯಾಪಕ ದೂರುಗಳು ಬಂದಿದ್ದು, ವಾಹನ ದಟ್ಟಣೆ ಸಮಸ್ಯೆಯಿಂದ ಪೇಟೆಯ ವರ್ತಕರು ಸಹಿತ ಎಲ್ಲರಿಗೂ ತೊಂದರೆಯಾಗುತ್ತಿದೆ. ಈ ಬಗ್ಗೆ ಪೊಲೀಸ್ ವೃತ್ತ ನಿರೀಕ್ಷಕರಿಗೆ ಮನವರಿಕೆ ಮಾಡಲಾಗಿದೆ. ಠಾಣೆಯ ಸನಿಹದಲ್ಲಿ ಈ ರೀತಿ ಅವ್ಯವಸ್ಥೆಯನ್ನು ಸರಿಪಡಿಸಲು ಸಾಧ್ಯವಾಗದೆ ಇದ್ದಲ್ಲಿ ಕಾನೂನು ಹೋರಾಟ ನಡೆಸಲು ಸಂಘದಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು.
>
> • ಪ್ರಶಾಂತ್ ಡಿಕೋಸ್ಟ, ಅಧ್ಯಕ್ಷ, ಉಪ್ಪಿನಂಗಡಿ ವಾಣಿಜ್ಯ ಮತ್ತು ಕೈಗಾರಿಕಾ ಸಂಘ

ಮೂಡುಪಡುಕೋಡಿಯಲ್ಲಿ ಬಂಟರ ಕ್ರೀಡಾಕೂಟ | ಜಗನ್ನಾಥ ಚೌಟ ಬಣ್ಣನೆ

ಕ್ರೀಡಾಕೂಟದಿಂದ ಸ್ನೇಹ ಭಾವನೆಗಳು ವೃದ್ಧಿ

ಬಂಟ್ವಾಳ: ಕ್ರೀಡೆಯು ಕೇವಲ ದೈಹಿಕ ವ್ಯಾಯಾಮವಲ್ಲ, ಅದು ಮನುಷ್ಯರಲ್ಲಿ ಒಗ್ಗಟ್ಟು, ನಾಯಕತ್ವ ಗುಣ ಮತ್ತು ಶಿಸ್ತನ್ನು ಬೆಳೆಸುವ ಶಕ್ತಿಯನ್ನು ಹೊಂದಿದೆ ಎಂದು ಬಂಟ್ವಾಳ ತಾಲೂಕು ಬಂಟರ ಸಂಘದ ಅಧ್ಯಕ್ಷ ಜಗನ್ನಾಥ ಚೌಟ ಅಭಿಪ್ರಾಯಪಟ್ಟರು.

... ಮೂಡುಪಡುಕೋಡಿಯ ... ಮೈದಾನದಲ್ಲಿ ನಡೆದ ಯುವ ಬಂಟರ ಸಂಘ ಮತ್ತು ... ಬಂಟರ ಸಂಘದ ಆಶ್ರಯದಲ್ಲಿ, ಇರ್ವತ್ತೂರು, ಮೂಡುಪಡುಕೋಡಿ, ಕಾಡಬೆಟ್ಟು, ..., ... ಹಾಗೂ ಕಾಡಬೆಟ್ಟು ಗ್ರಾಮದ ಬಂಟರಿಗಾಗಿ ಆಯೋಜಿಸಲಾಗಿದ್ದ 'ಬಂಟರ ಕ್ರೀಡಾಕೂಟ-2026' ಕ್ರಿಕೆಟ್ ಹಾಗೂ ತ್ರೋಬಾಲ್ ಪಂದ್ಯಾಟದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು.

... ಸಹಕಾರ ಸಂಘದ ಅಧ್ಯಕ್ಷ ಪ್ರವೀಣ್ ಕುಮಾರ್ ರೈ ಅವರು ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿ, ಕ್ರೀಡಾಕೂಟವು ಬಾಂಧವ್ಯ ಹೆಚ್ಚಿಸುವ ಸ್ನೇಹದ ಬೆಸುಗೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ... ಬಂಟರ ಸಂಘದ ಅಧ್ಯಕ್ಷ ... ಶೆಟ್ಟಿ ವಹಿಸಿದ್ದರು. ಬಂಟರ ಸಂಘ ... ಗೌರವಾಧ್ಯಕ್ಷ ... ಶೆಟ್ಟಿ, ಉಪಾಧ್ಯಕ್ಷ ಪ್ರವೀಣ್ ಕುಮಾರ್ ..., ... ಶೆಟ್ಟಿ, ಕಾರ್ಯದರ್ಶಿ ... ಕುಮಾರ್ ಶೆಟ್ಟಿ, ಯುವ ವಿಭಾಗದ ಅಧ್ಯಕ್ಷ ... ರೈ ಕಾಡಬೆಟ್ಟು, ಉಪಾಧ್ಯಕ್ಷ ... ಶೆಟ್ಟಿ, ಕ್ರೀಡಾ ಕಾರ್ಯದರ್ಶಿ ... ಶೆಟ್ಟಿ ಇದ್ದರು. ... ಶೆಟ್ಟಿ ಸ್ವಾಗತಿಸಿದರು. ... ಕುಮಾರ್ ಶೆಟ್ಟಿ ವಂದಿಸಿದರು. ... ಶೆಟ್ಟಿ ನಿರೂಪಿಸಿದರು. ...



ಕಾಡಬೆಟ್ಟು, ಇರ್ವತ್ತೂರು ಪ್ರಥಮ

ಒಟ್ಟು ... ತಂಡಗಳು ಪಾಲ್ಗೊಂಡಿದ್ದ ಈ ಕ್ರೀಡಾಕೂಟದ ಕ್ರಿಕೆಟ್ ಪಂದ್ಯಾಟದಲ್ಲಿ ಕಾಡಬೆಟ್ಟು ಗ್ರಾಮ ಪ್ರಥಮ ಹಾಗೂ ಮೂಡುಪಡುಕೋಡಿ ಗ್ರಾಮ ದ್ವಿತೀಯ ಸ್ಥಾನ ಪಡೆಯಿತು. ಹಾಗೆಯೇ ಮಹಿಳೆಯರ ತ್ರೋಬಾಲ್ ಪಂದ್ಯಾಟದಲ್ಲಿ ಇರ್ವತ್ತೂರು ಗ್ರಾಮ ಪ್ರಥಮ, ಮೂಡುಪಡುಕೋಡಿ ದ್ವಿತೀಯ ಹಾಗೂ ಕಾಡಬೆಟ್ಟು ತೃತೀಯ ಸ್ಥಾನ ಪಡೆಯಿತು.

ನೀರಪಾದೆ: ಬ್ರಹ್ಮಶ್ರೀ ನಾರಾಯಣ ಗುರುವರ್ಯರ ಮೂರ್ತಿ ಪ್ರತಿಷ್ಠೆ

ಗುರುಗಳ ಆದರ್ಶ ಮೈಗೂಡಿಸಿ : ಕನ್ಯಾಡಿಶ್ರೀ

ಬಂಟ್ವಾಳ: ಬ್ರಹ್ಮಶ್ರೀ ನಾರಾಯಣ ಗುರುವರ್ಯರ ತತ್ವ ಸಿದ್ಧಾಂತ ಆದರ್ಶವನ್ನು ಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆದಾಗ ನಮ್ಮ ಬದುಕು ಹಸನಾಗುತ್ತದೆ. ಈ ಮಂದಿರದ ಮೂಲಕ ನಿರಂತರವಾಗಿ ಸಮಾಜಮುಖಿ ಕಾರ್ಯಗಳು ನಡೆಯಲಿ ಎಂದು ಕನ್ಯಾಡಿ ಶ್ರೀರಾಮ ಕ್ಷೇತ್ರದ ಶ್ರೀ ಬ್ರಹ್ಮಾನಂದ ಸರಸ್ವತೀ ಮಹಾರಾಜ್ ಅವರು ನುಡಿದರು.

ಬಂಟ್ವಾಳ ತಾಲೂಕಿನ ಬಾಳ್ತಿಲ ಗ್ರಾಮದ ನೀರಪಾದೆಯಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಟ್ರಸ್ಟ್ ವತಿಯಿಂದ ನಿರ್ಮಾಣಗೊಂಡ ನೂತನ ಬ್ರಹ್ಮಶ್ರೀ ನಾರಾಯಣಗುರು ಮಂದಿರದಲ್ಲಿ ಶ್ರೀ ಗುರುವರ್ಯರ ಮೂರ್ತಿ ಪ್ರತಿಷ್ಠೆ ಕಲಶಾಭಿಷೇಕ, ... ಶ್ರೀ ... ಕಾರ್ಯಕ್ರಮದ ಪ್ರಯುಕ್ತ ನಡೆದ ಧಾರ್ಮಿಕ ಸಭೆಯನ್ನು ಉದ್ಘಾಟಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಅತಿಥಿಯಾಗಿದ್ದ ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಪ್ರಭಾಕರ ಭಟ್ ಕಲ್ಲಡ್ಕ ಮಾತನಾಡಿ, ಬಾಳ್ತಿಲ ಸಹಿತ ಸುತ್ತಮುತ್ತಲಿನ ಗ್ರಾಮಗಳ ಹಿಂದು ಸಮಾಜದ ಒಗ್ಗಟ್ಟಿನ ... ಬ್ರಹ್ಮಶ್ರೀ ನಾರಾಯಣಗುರುಗಳ ಮಂದಿರದ ... ಮೂಲಕ ನಡೆದಿದೆ. ... ಹಿಂದೂ ಸಮಾಜಕ್ಕೆ ದೊಡ್ಡ ಶಕ್ತಿ ನೀಡುತ್ತದೆ. ... ಸಮಾಜವನ್ನು ಒಟ್ಟುಗೂಡಿಸುವ ... ನಾರಾಯಣಗುರುಗಳು ... ಎಂದರು.

... ನಾರಾಯಣ ಗುರುಗಳು ... ಎಂದರು.

... ನಿಗಮದ ಮಾಜಿ ಅಧ್ಯಕ್ಷ ... ಬಂಟ್ವಾಳ ಮಾತನಾಡಿದರು. ಅಧ್ಯಕ್ಷತೆಯನ್ನು ಮಾಜಿ ಶಾಸಕ ... ಪೂಜಾರಿ ವಹಿಸಿದ್ದರು. ಬಂಟ್ವಾಳ ... ನೀರಪಾದೆ ಬ್ರಹ್ಮಶ್ರೀ ನಾರಾಯಣ ಗುರು ಮಂದಿರದ ಅಧ್ಯಕ್ಷ ನಾರಾಯಣ ಪೂಜಾರಿ, ಬಂಟ್ವಾಳ ... ಸಂಘದ ಮಾಜಿ ಅಧ್ಯಕ್ಷ ... ಪೂಜಾರಿ, ಶ್ರೀ ... ಯೋಜನೆ ಬಿ.ಸಿ.ಟ್ರಸ್ಟ್ ಬಂಟ್ವಾಳ ತಾಲೂಕು ಯೋಜನಾಧಿಕಾರಿ ..., ಸಮಾಜ ಕಾರ್ಯಕರ್ತ ..., ... ಅಧ್ಯಕ್ಷ ..., ಬ್ರಹ್ಮಶ್ರೀ ... ಅಧ್ಯಕ್ಷ ... ಪೂಜಾರಿ, ... ಪೂಜಾರಿ, ... ಅಧ್ಯಕ್ಷ ..., ಮಂಗಳೂರು ತಾಲೂಕು ಆರೋಗ್ಯಾಧಿಕಾರಿ ಡಾ. ... ಭಂಡಾರಿ, ... ಬಂಗೇರ, ... ಇದ್ದರು. ಟ್ರಸ್ಟ್ ನ ಕಾರ್ಯದರ್ಶಿ ... ಪ್ರಸ್ತಾವನೆಗೈದರು. ... ಸ್ವಾಗತಿಸಿದರು. ... ವಂದಿಸಿದರು.



ಕುಪ್ಪೆಪದವು-ಎಡಪದವು ಯುವವಾಹಿನಿ ಘಟಕದಿಂದ ಕ್ರಿಕೆಟ್ ಪಂದ್ಯಾಟ ಉದ್ಘಾಟನೆ



ಕೈಕಂಬ: ಬ್ರಹ್ಮಶ್ರೀ ನಾರಾಯಣಗುರುಗಳ ತತ್ವದಂತೆ ವಿದ್ಯೆ ಎಂಬ ಸಂಘಟನೆ ಎಂಬ ಧ್ಯೇಯದೊಂದಿಗೆ ... ಯುವವಾಹಿನಿಯು ಕುಪ್ಪೆಪದವು-ಎಡಪದವು ಘಟಕ ಸಮಾಜಮುಖಿ ಕಾರ್ಯಚಟುವಟಿಕೆಯಲ್ಲಿ ಯುವಕರನ್ನು ತೊಡಗಿಸಿಕೊಂಡಿರುವ ... ಸಂಘಟನೆಯಾಗಿ ... ಮಾಡುತ್ತಿದೆ ಎಂದು ಮಂಗಳೂರು ನಗರ ಉತ್ತರ ಶಾಸಕ ಡಾ. ಭರತ್ ಶೆಟ್ಟಿ ಹೇಳಿದ್ದಾರೆ.

ಯುವವಾಹಿನಿ ಕುಪ್ಪೆಪದವು ಎಡಪದವು ಘಟಕದ ವತಿಯಿಂದ ... ಮೈದಾನದಲ್ಲಿ ಹಮ್ಮಿಕೊಂಡ ... ಕ್ರಿಕೆಟ್ ಪಂದ್ಯಾಟದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಘಟಕದ ಅಧ್ಯಕ್ಷ ... ಶ್ರೀಧರ ಪೂಜಾರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ... ಮುಖ್ಯ ಅತಿಥಿಗಳಾಗಿ ... ಕುಮಾರ್ ... ದಿನೇಶ್ ಕುಮಾರ್ ..., ... ಸ್ವಾಗತಿಸಿದರು. ... ನಿರೂಪಿಸಿದರು. ... ಕುಮಾರ್ ಸ್ವಾಗತಿಸಿ, ... ವಂದಿಸಿದರು.

ಕ್ರಿಕೆಟ್ ಪಂದ್ಯಾಟ: ಸನ್ನಿ ಕ್ರಿಕೆಟರ್ಸ್ ವಂಜಿಮೊಗರು ತಂಡ ಚಾಂಪಿಯನ್



ಮಂಗಳೂರು: ಉದಯ ಕ್ರಿಕೆಟರ್ಸ್ ... ವತಿಯಿಂದ ... ನಡೆದ ... ಕ್ರಿಕೆಟ್ ಟೂರ್ನಿಯಲ್ಲಿ ಸನ್ನಿ ಕ್ರಿಕೆಟರ್ಸ್ ವಂಜಿಮೊಗರು ತಂಡವು ಚಾಂಪಿಯನ್ ಆಗಿ ಹೊರಹೊಮ್ಮಿದೆ. ...

ಕಿನ್ನಿಗೋಳಿ ಯೂತ್ ಆಫ್ ಜಿಎಸ್‌ಬಿ 'ಯುವ ಕ್ರೀಡೋತ್ಸವ'



ಕಿನ್ನಿಗೋಳಿ: ಇಂದಿನ ದಿನಮಾನದಲ್ಲಿ ಯುವ ಜನತೆ ವ್ಯಾಯಾಮವಿಲ್ಲದೆ, ... ಎಂದು ... ಹೇಳಿದರು. ... ವಹಿಸಿದ್ದರು. ...

ಪಕ್ಷಿಕೆರೆಯಲ್ಲಿ ಆತ್ಮಶಕ್ತಿ ಸಹಕಾರಿ ಸಂಘದಿಂದ ವೈದ್ಯಕೀಯ, ನೇತ್ರ ತಪಾಸಣಾ, ದಂತ ಚಿಕಿತ್ಸಾ ಶಿಬಿರ | ಅಧ್ಯಕ್ಷ ಚಿತ್ತರಂಜನ್ ಬೋಳಾರ್ ಮಾಹಿತಿ

ಸಾರ್ವಜನಿಕರು ಆರೋಗ್ಯದ ಬಗ್ಗೆ ಕಾಳಜಿ ವಹಿಸುವಲ್ಲಿ ಆತ್ಮಶಕ್ತಿ ಸಹಕಾರಿ ಸಂಘದ ಮುಖ್ಯ ಪಾತ್ರ

ಮಂಗಳೂರು: ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಪಕ್ಷಿಕೆರೆ ಶಾಖೆಯ ದ್ವಿತೀಯ ವಾರ್ಷಿಕೋತ್ಸವದ ಪ್ರಯುಕ್ತ ಮಂಗಳೂರಿನ ... ದೊಂದಿಗೆ ... ಉಚಿತ ಸಾಮಾನ್ಯ ವೈದ್ಯಕೀಯ, ನೇತ್ರ ತಪಾಸಣೆ ಮತ್ತು ದಂತ ಚಿಕಿತ್ಸಾ ಶಿಬಿರವು ಪಕ್ಷಿಕೆರೆ ... ಭವನದಲ್ಲಿ ನಡೆಯಿತು.

ವಿಜಯ ಮಿತ್ರ ಮಂಡಳಿ ಗೌರವಾಧ್ಯಕ್ಷ ... ಶಿಬಿರವನ್ನು ಉದ್ಘಾಟಿಸಿ ಮಾತನಾಡಿ, ... ಆರೋಗ್ಯ ... ಎಂದರು.



... ಈ ಶಿಬಿರದ ಪ್ರಯೋಜನ ಉಂಟಾಗಲಿ. ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘವು ಇನ್ನಷ್ಟು ಬೆಳವಣಿಗೆಯನ್ನು ಕಾಣಲಿ ಎಂದರು. ... ಸಮುದಾಯ ದಂತ ಆರೋಗ್ಯ ಶಿಬಿರದ ಮುಖ್ಯಸ್ಥೆ ಡಾ. ... ಮಾತನಾಡಿದರು. ಅಧ್ಯಕ್ಷತೆಯನ್ನು ವಹಿಸಿದ್ದ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷ ಚಿತ್ತರಂಜನ್ ಬೋಳಾರ್ ಮಾತನಾಡಿ, ...

ವಿವಿಧ ಸಂಘಟನೆಗಳ ಸಹಯೋಗ

ಎಸ್.ಜಿ ವರ್ಲ್ಡ್ ಚಾರಿಟೇಬಲ್ ಟ್ರಸ್ಟ್ ಮಂಗಳೂರು, ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಂಘ ಎಸ್ ಕೋಡಿ ತೋಕೂರು, ವಿಜಯ ಮಿತ್ರ ಮಂಡಳಿ ಹಾಗೂ ವಿಜಯ ಮಹಿಳಾ ಮಂಡಳಿ ಪಕ್ಷಿಕೆರೆ, ಶ್ರೀ ಹರಿಪಾದ ಜಾರಂದಾಯ ಯುವಕ ಮಂಡಲ ಹಾಗೂ ಮಹಿಳಾ ಮಂಡಳಿ ಪಂಜ ಕೊಯಿಕುಡೆ, ಕೊಲ್ಲೂರು ದ್ವಾರಕಾನಾಥ ಸೇವಾ ಸಮಿತಿ ಪಕ್ಷಿಕೆರೆ ಸಹಯೋಗದೊಂದಿಗೆ ಆಯೋಜನೆ ಮಾಡಲಾಗಿತ್ತು.

ಸಹಕಾರಿ ಸಂಘವು ಕಳೆದ 14 ವರ್ಷಗಳಿಂದ ನಿರಂತರವಾಗಿ ಆರೋಗ್ಯ ಶಿಬಿರವನ್ನು ನಡೆಸಿಕೊಂಡು ಬರುತ್ತಿದೆ. ಇದು ಸಂಘದ 108ನೇ ಉಚಿತ ವೈದ್ಯಕೀಯ ಶಿಬಿರವಾಗಿದೆ. ಗ್ರಾಮೀಣ ಭಾಗದ ಜನರಿಗೆ ಪ್ರಯೋಜನವಾಗಲಿ ಎಂಬ ಉದ್ದೇಶದಿಂದ ... ಎಂದು ಹೇಳಿದರು.

ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ನಿರ್ದೇಶಕರಾದ ..., ಮುಖ್ಯ ಕಾರ್ಯನಿರ್ವಹಣಾಧಿಕಾರಿ ..., ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಂಘದ ... ಅಧ್ಯಕ್ಷ ..., ವಿಜಯ ಮಿತ್ರ ಮಂಡಳಿ ... ಪಕ್ಷಿಕೆರೆ ... ಹಾಗೂ ವಿಜಯ ಮಹಿಳಾ ಮಂಡಳಿ ... ಅಧ್ಯಕ್ಷೆ ..., ... ಉಪಸ್ಥಿತರಿದ್ದರು. ... ಸ್ವಾಗತಿಸಿದರು. ... ವಂದಿಸಿದರು. ... ನಿರೂಪಿಸಿದರು.

ಸುತ್ತಮುತ್ತ

ಮೇ 14: ಪ್ರಯೋಗಾಲಯ ತಂತ್ರಜ್ಞರ ನೇಮಕಾತಿ

ಕಾಸರಗೋಡು: ಅಂಗಡಿಮೊಗರು ಕುಟುಂಬ ಆರೋಗ್ಯ ಕೇಂದ್ರದಲ್ಲಿ ಪ್ರಯೋಗಾಲಯ ತಂತ್ರಜ್ಞರ ನೇಮಕಾತಿಗಾಗಿ ಸಂದರ್ಶನವು ಮೇ 14ರಂದು ಬೆಳಗ್ಗೆ 11 ಗಂಟೆಗೆ ಅಂಗಡಿಮೊಗರು ಕುಟುಂಬ ಆರೋಗ್ಯ ಕೇಂದ್ರದಲ್ಲಿ ನಡೆಯಲಿದೆ. ಕೇರಳ ಮಾನ್ಯತೆ ಪಡೆದ ಬಿಎಸ್ಸಿ, ಎಂಎಲ್‌ಟಿ, ಟಿಎಂಎಲ್‌ಟಿ, ಕೇರಳ ಪ್ಯಾರಾ ಮೆಡಿಕಲ್ ಕೌನ್ಸಿಲ್ ನೋಂದಣಿ ಅರ್ಹತೆ ಪಡೆದವರಿಗೆ ಹಾಜರಾಗಬಹುದು. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ 9747038765ಕ್ಕೆ ಕರೆ ಮಾಡಬಹುದು.

ಮೇ 20: ಶಿಕ್ಷಕರ ಹುದ್ದೆಗೆ ಸಂದರ್ಶನ

ಮುಳ್ಳೇರಿಯ: ಬೆಳ್ಳೂರು ಸರ್ಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಹೈಯರ್ ಸೆಕೆಂಡರಿ ವಿಭಾಗದಲ್ಲಿ ವಿವಿಧ ವಿಷಯಗಳಲ್ಲಿ ತಾತ್ಕಾಲಿಕ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಹೈಯರ್ ಸೆಕೆಂಡರಿ (ಸೀನಿಯರ್) ಇಂಗ್ಲಿಷ್, ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ರಾಜ್ಯಶಾಸ್ತ್ರ, ಇತಿಹಾಸ, ಹೈಯರ್ ಸೆಕೆಂಡರಿ (ಜೂನಿಯರ್) ಮಲೆಯಾಳಂ, ಕನ್ನಡ, ಪ್ರಾಣಿಶಾಸ್ತ್ರ ಸಮಾಜಶಾಸ್ತ್ರ ಎಂಬೀ ಹುದ್ದೆಗಳು ಖಾಲಿಇದ್ದು, ಅರ್ಹ ಅಭ್ಯರ್ಥಿಗಳು ಮೇ 20ರಂದು ಬೆಳಗ್ಗೆ 11 ಗಂಟೆಗೆ ಶಾಲಾ ಕಚೇರಿಯಲ್ಲಿ ನಡೆಯುವ ಸಂದರ್ಶನಕ್ಕೆ ಹಾಜರಾಗಬೇಕಾಗಿದೆ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 9446328483ಗೆ ಕರೆ ಮಾಡಬಹುದು.

ಮೇ 28: ಸಂದರ್ಶನ

ಕಾಸರಗೋಡು: ಕಾಸರಗೋಡು ಸರ್ಕಾರಿ ವಿಶೇಷ ಶಿಕ್ಷಕ ತರಬೇತಿ ಶಿಕ್ಷಕ ಕೇಂದ್ರದಲ್ಲಿ ಮನೋವಿಜ್ಞಾನ ವಿಭಾಗದ ಹುದ್ದೆಗೆ ನೇಮಕಾತಿಗಾಗಿ ಸಂದರ್ಶನವು ಮೇ 28ರಂದು ಬೆಳಗ್ಗೆ 10.30ಕ್ಕೆ ಕಾಸರಗೋಡು ಶಿಕ್ಷಣ ಉಪ ನಿರ್ದೇಶಕರ ಕಚೇರಿಯಲ್ಲಿ ನಡೆಯಲಿದೆ. DEd.Spl.Ed(IDD).ಯೋಗ್ಯತೆ ಹೊಂದಿರಬೇಕು. ಬೆಳಿಗ್ಗೆ 9.30 ರಿಂದ ಬೆಳಿಗ್ಗೆ 10.15ರವರೆಗೆ ಹೆಸರು ನೋಂದಾಯಿಸಬೇಕಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 9567128470 ಕರೆ ಮಾಡಬಹುದು.

ವೈದ್ಯಾಧಿಕಾರಿ ನೇಮಕಾತಿ

ಮುಳ್ಳೇರಿಯ: ಕಾರಡ್ಕ ಗ್ರಾಮ ಪಂಚಾಯತ್ ವ್ಯಾಪ್ತಿಯ ಮುಳ್ಳೇರಿಯ ಕುಟುಂಬ ಆರೋಗ್ಯ ಕೇಂದ್ರದಲ್ಲಿ ಆರ್ದ್ರಂ ಯೋಜನೆಯಡಿ ವೈದ್ಯಾಧಿಕಾರಿಗಳ ನೇಮಕಾತಿಗಾಗಿ ಮೇ 20ರಂದು ಅಪರಾಹ್ನ 2 ಗಂಟೆಗೆ ಎಫ್‌ಎಚ್‌ಸಿ ಮುಳ್ಳೇರಿಯದಲ್ಲಿ ಸಂದರ್ಶನ ನಡೆಯಲಿದೆ.

ಚಾಲಕರ ನೇಮಕಾತಿ

ಮುಳ್ಳೇರಿಯ: ಕಾರಡ್ಕ ಗ್ರಾ.ಪಂ.ನಲ್ಲಿ ಹಸಿರು ಕ್ರಿಯಾಸೇನಾ ವಾಹನಕ್ಕೆ ಚಾಲಕನನ್ನು ನೇಮಿಸುವ ನಿಟ್ಟಿನಲ್ಲಿ ಮೇ 20ರಂದು ಬೆಳಗ್ಗೆ 11 ಗಂಟೆಗೆ ಕಾರಡ್ಕ ಪಂಚಾಯತ್ ಕಚೇರಿಯಲ್ಲಿ ನಡೆಯಲಿದೆ.

ಮೇ 16ರಂದು ಮಿನಿ ಜಾಬ್ ಡ್ರೈವ್

ಕಾಸರಗೋಡು: ರಾಷ್ಟ್ರೀಯ ಉದ್ಯೋಗ ಸೇವೆ, ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಕಾಸರಗೋಡು ಮತ್ತು ಉದ್ಯೋಗಾವಕಾಶ ಕೇಂದ್ರ ಕಾಸರಗೋಡು ಜಂಟಿಯಾಗಿ ಜಿಲ್ಲೆಯ ಅಭ್ಯರ್ಥಿಗಳಿಗಾಗಿ ಮಿನಿ ಜಾಬ್ ಡ್ರೈವ್ ಅನ್ನು ಆಯೋಜಿಸುತ್ತಿವೆ. ವಿವಿಧ ಖಾಸಗಿ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಇದು ಮಿನಿ ಜಾಬ್ ಡ್ರೈವ್ ಆಯೋಜಿಸು ವುದಾಗಿದೆ. ಮಲಿಕ್ ದಿನಾರ್ ಕಾಲೇಜ್ ಆಫ್ ಗ್ರಾಜುಯೇಟ್ ಸ್ಟಡೀಸ್, ಆಸ್ಟರ್ ಮಿಮ್ಸ್, ಎವಾಲ್ವ್ ಟೊಯೋಟಾದಂತಹ ಪ್ರಮುಖ ಸಂಸ್ಥೆಗಳು ಇದರಲ್ಲಿ ಭಾಗವಹಿಸುತ್ತಿವೆ. ಮೇ 16 ರಂದು ಬೆಳಿಗ್ಗೆ 10 ರಿಂದ ಕಾಸರಗೋಡಿನ ಅಸಾಪ್ ಕಮ್ಯೂನಿಟಿ ಸ್ಕಿಲ್ ಪಾರ್ಕ್ ನಲ್ಲಿ ಜಾಬ್ ಡ್ರೈವ್ ಪ್ರಾರಂಭವಾಗಲಿದೆ.
ಪ್ಲಸ್ ಟು, ಐಟಿಐ, ಡಿಪ್ಲೊಮಾ, ಸಿವಿಲ್, ಎಂಬಿಬಿಎಸ್, ಬಿಎಸ್ಸಿ ನರ್ಸಿಂಗ್, ಪದವಿ, ಸ್ನಾತಕೋತ್ತರ ಪದವಿ ಮುಂತಾದ ಅರ್ಹತೆ ಹೊಂದಿರುವ ಅಭ್ಯರ್ಥಿಗಳು ಭಾಗವಹಿಸಬಹುದು. ಹಿಂದಿ/ಇಂಗ್ಲಿಷ್ ಭಾಷಾ ಪ್ರಾವೀಣ್ಯತೆ ಹೊಂದಿರುವವರು ಮತ್ತು ಬೋಧನಾ ಹುದ್ದೆಗಳಿಗೆ ಅರ್ಹರು ಸಹ ಅರ್ಹರು. ಕೆಲಸದ ಅನುಭವ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. ಉದ್ಯೋಗಾವಕಾಶ ಕೇಂದ್ರದಲ್ಲಿ ಈಗಾಗಲೇ ನೋಂದಾಯಿಸಿಕೊಂಡಿರುವ ಅಭ್ಯರ್ಥಿಗಳು ನೇರವಾಗಿ ಭಾಗವಹಿಸಬಹುದು.
ನೋಂದಾಯಿಸದವರಿಗೆ, ಆ ದಿನದಂದು ಸ್ಪಾಟ್ ನೋಂದಣಿ ಲಭ್ಯವಿರುತ್ತದೆ. ಮಾಹಿತಿಗಾಗಿ ದೂರವಾಣಿ ಸಂಖ್ಯೆ 9207155700ಕ್ಕೆ ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಹಣ್ಣಿನ 'ರಾಜ'ನಿಗೆ ಡಿಮ್ಯಾಂಡಪ್ಪೋ ಡಿಮ್ಯಾಂಡು | ಖರೀದಿಗೆ ಮುಗಿಬೀಳುತ್ತಿರುವ ಜನರು

ಕಾಸರಗೋಡಿನಲ್ಲಿ ಘಮಘಮಿಸುತ್ತಿದೆ ರಸಭರಿತ ಮಾವುಗಳು!

ಕಾಸರಗೋಡು: ಬೇಸಿಗೆಯ ಆರಂಭದೊಂದಿಗೆ ಮಾರುಕಟ್ಟೆಗಳಲ್ಲಿ ಮಾವಿನ ಸೀಸನ್ ಆರಂಭವಾಗಿದ್ದು, ಹಣ್ಣುಗಳ ರಾಜ ಮಾವಿನ ಹಣ್ಣಿಗೆ ಈಗ ಎಲ್ಲಿಲ್ಲದ ಡಿಮ್ಯಾಂಡ್ ಶುರುವಾಗಿದೆ.
ಮಾರುಕಟ್ಟೆಯತ್ತ ತೆರಳಿದರೆ ಸಾಲು ಸಾಲು ಮಾವಿನ ಹಣ್ಣಿನ ಅಂಗಡಿಗಳು ಗ್ರಾಹಕರನ್ನು ತನ್ನತ್ತ ಸೆಳೆಯುತ್ತವೆ. ವಿವಿಧ ರೀತಿಯ ಸಿಹಿ ಮತ್ತು ರಸಭರಿತವಾದ ಮಾವಿನ ಹಣ್ಣುಗಳು ಮಾರುಕಟ್ಟೆಯಲ್ಲಿ ಭಾರೀ ವ್ಯವಹಾರ ನಡೆಯುತ್ತಿದೆ. ಅಗ್ಗದ ಬೆಲೆಯಲ್ಲಿ ರಸಭರಿತ ಮಾವುಗಳು ದೊರೆಯುವುದರಿಂದ ಕೊಂಡುಕೊಳ್ಳುವ ಗ್ರಾಹಕರ ಸಂಖ್ಯೆಯೂ ಈಗ ಹೆಚ್ಚಾಗಿದೆ.

ಕೆ.ಜಿ.ಗೆ 50 ರೂಪಾಯಿ

ಸ್ಥಳೀಯ ಮಾವಿನ ಹಣ್ಣುಗಳಿಗೆ ಕಿಲೋ ಗ್ರಾಮ್‌ಗೆ 50 ರೂ. ಬೆಲೆ ಇದೆ. ಮಾರುಕಟ್ಟೆಯಲ್ಲಿ ಮಾವಿನ ಹಣ್ಣುಗಳು ಹೆಚ್ಚಾಗಿ ಲಭ್ಯವಿರುವುದರಿಂದ ಆಹಾರ ಇಲಾಖೆ, ಸ್ಥಳೀಯಾಡಳಿತ ಸಂಸ್ಥೆಗಳು ಮತ್ತು ಕೃಷಿ ಇಲಾಖೆಯ ಆಶ್ರಯದಲ್ಲಿ ವಿವಿಧ ಕೇಂದ್ರಗಳಲ್ಲಿ ಮಾವಿನ ಹಬ್ಬಗಳನ್ನು ಆಯೋಜಿಸಲು ಸಿದ್ಧತೆಗಳು ನಡೆಯುತ್ತಿವೆ. ಉಪ್ಪಿನಕಾಯಿಯಿಂದ ಹಿಡಿದು ಹಲ್ವಾದವರೆಗೆ ಮಾವಿನ ಹಣ್ಣುಗಳನ್ನು ಬಳಸಿ ತಯಾರಿಸಿದ ವಿವಿಧ ಖಾದ್ಯಗಳು ಇಂತಹ ಮೇಳಗಳಲ್ಲಿ ಪ್ರಮುಖ ಆಕರ್ಷಣೆಗಳಾಗಿವೆ.





ಹಣ್ಣಾಗಿಸುವುದೇ ಬೆಲೆ ಕುಸಿತಕ್ಕೆ ಕಾರಣ

ದೇಶದ ವಿವಿಧ ಭಾಗಗಳಲ್ಲಿ ಸ್ಥಳೀಯ ಮಾವಿನ ಹಣ್ಣುಗಳನ್ನು ವ್ಯಾಪಕವಾಗಿ ಹಣ್ಣಾಗಿಸುವುದು ಬೆಲೆ ಕುಸಿತಕ್ಕೆ ಪ್ರಮುಖ ಕಾರಣವಾಗಿದೆ.

ರುಚಿಯಾದ ಕುಟ್ಟಿಯತ್ತೂರು ಮಾವು

ರುಚಿ ಮತ್ತು ಗುಣಮಟ್ಟದಲ್ಲಿ ಮುಂದಿರುವ ಕುಟ್ಟಿಯತ್ತೂರು ಮಾವು ಅಥವಾ ನಂಬಿಯಾರ್ ಮಾವು ಕೂಡಾ ಕಣ್ಣೂರಿನಿಂದ ಕಾಸರಗೋಡು ಮಾರುಕಟ್ಟೆಗೆ ತಲುಪಿದೆ. ಇವು ಕೆ.ಜಿ.ಗೆ 100ರ ದರದಲ್ಲಿ ಮಾರಾಟವಾಗುತ್ತಿವೆ.
ಆಂಧ್ರದ ಬಂಕನಪಲ್ಲಿ, ಗುಜರಾತ್‌ನ ಕೇಸರ್, ಉತ್ತರ ಭಾರತದ ದಾಸೇರಿ, ಪಶ್ಚಿಮ ಬಂಗಾಳದ ಹಿಮಸಾಗರ್, ಗೋವಾದ ಮಲ್ಗೋವಾ, ಇತ್ಯಾದಿಗಳೆಲ್ಲವೂ 100ರ ಸಮೀಪವಿರುವ ಬೆಲೆಯಲ್ಲಿ ಲಭ್ಯವಿದೆ.

ಗಲ್ಫ್ ರಾಷ್ಟ್ರಗಳಿಗೆ ರಫ್ತು ಮಾಡಲಾಗುತ್ತದೆ

ಮಹಾರಾಷ್ಟ್ರದ ರತ್ನಗಿರಿಯ ಪ್ರಸಿದ್ಧ ಅಲ್ಫೋನ್ಸೋ ಮಾವು ಮಾತ್ರ ಮಾರುಕಟ್ಟೆಗೆ ಬರುತ್ತಿಲ್ಲ. ಮುಂಬೈ ಮಾರುಕಟ್ಟೆಯಲ್ಲಿ ಬಹಳ ಜನಪ್ರಿಯವಾಗಿರುವ ಈ ತಳಿಯನ್ನು ಮುಖ್ಯವಾಗಿ ಗಲ್ಫ್ ರಾಷ್ಟ್ರಗಳಿಗೆ ರಫ್ತು ಮಾಡಲಾಗುತ್ತದೆ.

ಉತ್ಪಾದನೆಯಲ್ಲಿ ಹೆಚ್ಚಳ

ಮಾರುಕಟ್ಟೆಯಲ್ಲಿ ಮಾವಿನ ಲಭ್ಯತೆಗೆ ಸಣ್ಣ ಮತ್ತು ದೊಡ್ಡ ಮಾವಿನ ಉತ್ಪಾದನೆಯಲ್ಲಿನ ಹೆಚ್ಚಳವೇ ಕಾರಣ. ಮುಂದಿನ ದಿನಗಳಲ್ಲಿ ಮಾವಿನ ಮಾರುಕಟ್ಟೆ ಇನ್ನಷ್ಟು ಸಕ್ರಿಯವಾಗುವ ಸಾಧ್ಯತೆಯಿದೆ ಎಂದು ಕೃಷಿಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮಾವಿನ ಹಣ್ಣುಗಳಲ್ಲಿ ಬಣ್ಣದಲ್ಲಿ ಬದಲಾವಣೆ

ಕಳೆದ ಎರಡು ವಾರಗಳಿಂದ ಕಾಸರಗೋಡು ನಗರದಲ್ಲಿ ಮಾವಿನ ವ್ಯಾಪಾರ ಭರದಿಂದ ನಡೆಯುತ್ತಿದೆ. ಆದರೆ ಬಿಸಿಲಿನ ಬೇಗೆಯಿಂದಾಗಿ ಮಾವಿನ ಹಣ್ಣುಗಳು ಕೆಲವೇ ದಿನಗಳಲ್ಲಿ ತನ್ನ ಬಣ್ಣದಲ್ಲಿ ಬದಲಾವಣೆ ತರುತ್ತಿರುವುದರಿಂದ ಅಂತಹ ಮಾವಿನ ಹಣ್ಣುಗಳನ್ನು ಖರೀದಿ ಸಲು ಜನರು ಹಿಂಜರಿಯುತ್ತಾರೆ. ಅಂತಹ ಮಾವಿನ ಹಣ್ಣುಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಬೇಕಾದ ಪರಿಸ್ಥಿತಿ ಉಂಟಾಗಿದೆ. ಈಗಾಗಲೇ ಹಲವು ತರಹದ ಮಾವಿನ ಹಣ್ಣುಗಳು ಮಾರುಕಟ್ಟೆಗೆ ಬಂದಿದ್ದು, ತನ್ನ ಬಣ್ಣಗಳಿಂದ ಜನರನ್ನು ಆಕರ್ಷಿಸುತ್ತಿರುವುದರಿಂದ ವ್ಯಾಪಾರವು ಹೆಚ್ಚಳಗೊಳ್ಳಲು ಕಾರಣವಾಗಿದೆ.

● ಕುಂಞಿರಾಮನ್, ನಗರದ ವ್ಯಾಪಾರಿ

ವಿದ್ಯಾನಗರದಲ್ಲಿ 'ಬೆಟ್' ಉತ್ಪನ್ನಗಳ ಪ್ರದರ್ಶನ, ಮಾರಾಟ ಮೇಳ ಉದ್ಘಾಟನೆ



ಕಾಸರಗೋಡು: ಟೀಮ್ ಬೇಡಗಂ ಇದರ 'ಬೆಟ್ ಸ್ನ್ಯಾಕ್ಸ್ ಫೆಸ್ಟ್' ವಿವಿಧ ರುಚಿಗಳನ್ನು ನೀಡುತ್ತದೆ. ಬೇಡಗಂನಲ್ಲಿರುವ ಮಹಿಳಾ ಘಟಕವು 'ಟೀಮ್ ಬೇಡಗಂ ಕುಟುಂಬಶ್ರೀ ಆಗ್ರೋ ಫಾರ್ಮರ್ಸ್ ಪ್ರೊಡ್ಯೂಸರ್ ಕಂಪೆನಿ ಲಿಮಿಟೆಡ್' ತಯಾರಿಸಿದ ಮತ್ತು ಮಾರಾಟ ಮಾಡುವ 'ಬೆಟ್ ಫುಡ್ಸ್' ಉತ್ಪನ್ನಗಳ ವ್ಯಾಪಕ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಕಾಸರಗೋಡು ವಿದ್ಯಾನಗರ ಸಿವಿಲ್ ಸ್ಟೇಷನ್‌ನಲ್ಲಿ ನಡೆಸಲಾಯಿತು.
ಬೆಟ್ ಆರಂಭಿ ಸಿದ ಉತ್ಪನ್ನಗಳನ್ನು ನೇರವಾಗಿ ಜನರಿಗೆ ತಲುಪಿಸುವ ಉದ್ದೇಶದಿಂದ ಸೋಮವಾರ ಈ ಮೇಳವನ್ನು ಆಯೋಜಿಸಲಾಗಿತ್ತು.
ಪ್ರದರ್ಶನ ಮತ್ತು ಮಾರುಕಟ್ಟೆ ಮೇಳವನ್ನು ಜಿ.ಪಂ. ಅಧ್ಯಕ್ಷ ಸಾಬು ಅಬ್ರಹಾಂ ಉದ್ಘಾಟಿಸಿದರು. ಜಿಲ್ಲಾಧಿಕಾರಿ ಅರ್ಜುನ್ ಪಾಂಡಿಯನ್ ಮುಖ್ಯ ಅತಿಥಿಯಾಗಿದ್ದರು. ಕುಟುಂಬಶ್ರೀ ಜಿಲ್ಲಾ ಮಿಷನ್ ಸಂಯೋಜಕ ರತೀಶ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು.
ಸ್ಥಳೀಯಾಡಳಿತ ಇಲಾಖೆ ಜಂಟಿ ನಿರ್ದೇಶಕ ಜೇಸನ್ ಮ್ಯಾಥ್ಯೂ, ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂದನನ್, ಮಾಜಿ ಜಿಲ್ಲಾ ಪಂ. ಅಧ್ಯಕ್ಷೆ ಇ.ಪದ್ಮಾವತಿ, ಚೆಂಗಳ ಸಿಡಿಎಸ್ ಅಧ್ಯಕ್ಷೆ ಸಕೀನಾ ಮಾತನಾಡಿದರು.
ಬೇಡಗಂ ಸಿಡಿಎಸ್ ಅಧ್ಯಕ್ಷೆ ಗುಲಾಬಿ ಸ್ವಾಗತಿಸಿ, ಎಡಿಎಂಸಿ ಕಿಶೋರ್ ಕುಮಾರ್ ವಂದಿಸಿದರು.
ಈ ಉದ್ಯಮವು ಕುಟುಂಬಶ್ರೀ , ಬೇಡಡ್ಕ ಗ್ರಾ.ಪಂ.ನ ಸಹಾಯದೊಂದಿಗೆ ರೂಪುಗೊಂಡ 'ಟೀಮ್ ಬೇಡಗಂ ಆಗ್ರೋ ಫಾರ್ಮರ್ಸ್ ಪ್ರೊಡ್ಯೂಸರ್ಸ್ ಕಂಪೆನಿ'ಗೆ ಸೇರಿದೆ.
ಸಂಪೂರ್ಣ ಮಹಿಳೆಯರಿಂದ ನಿಯಂತ್ರಿಸಲ್ಪಡುವ ಈ ಕಂಪೆನಿಯ 20 ಮಹಿಳೆಯರಿಗೆ ಕಳೆದ ಏಪ್ರಿಲ್ ತಿಂಗಳಿನಲ್ಲಿ ಮುನ್ನಾಡ್ ಕಾರ್ಖಾನೆಯಲ್ಲಿ ವಿಶೇಷ ತರಬೇತಿ ನೀಡಲಾಯಿತು. ಸುಮಾರು ತೊಂಬತ್ತು ವೈವಿಧ್ಯಮಯ ಉತ್ಪನ್ನಗಳನ್ನು ತಯಾರಿಸಲು ಕುಟುಂಬಶ್ರೀ ನೇತೃತ್ವದಲ್ಲಿ ತರಬೇತಿಯನ್ನು ನೀಡಲಾಯಿತು. ಮಹಿಳೆಯರ ಆರ್ಥಿಕ ಉನ್ನತಿ ಮತ್ತು ಸ್ವಾವಲಂಬನೆಯನ್ನು ಗುರಿಯಾಗಿರಿಸಿಕೊಂಡಿರುವ ಈ ಗುಂಪಿಗೆ ಉತ್ತಮ ಬೆಂಬಲ ಲಭಿಸುತ್ತಿದೆ. ಮೇಳದ ಜೊತೆಗೆ ಉತ್ಪನ್ನಗಳನ್ನು ಅವರ ಮುಖ್ಯ ಔಟ್‌ಲೆಟ್ ಮೂಲಕ ಉತ್ತಮ ಕೊಡುಗೆಗಳೊಂದಿಗೆ ಮಾರಾಟ ಮಾಡಲಾಗುತ್ತಿದೆ.

90 ಕ್ಕೂ ಹೆಚ್ಚು ಉತ್ಪನ್ನಗಳ ತಯಾರಿ

ಮೇಳದಲ್ಲಿ ಬೇಕಿಂಗ್ ಉತ್ಪನ್ನಗಳು, ಸ್ಥಳೀಯ ಕರಿ ಪುಡಿಗಳು ಮತ್ತು ವಿವಿಧ ರೀತಿಯ ಸಿಹಿತಿಂಡಿಗಳು ಸೇರಿದಂತೆ ಸುಮಾರು 90 ವೈವಿಧ್ಯಮಯ ಉತ್ಪನ್ನಗಳನ್ನು ತಯಾರಿಸಲಾಯಿತು. ಕಾರ್ಯಕ್ರಮದಲ್ಲಿ ತರಬೇತಿ ಪೂರ್ಣಗೊಳಿಸಿದ ಮಹಿಳೆಯರಿಗೆ ಪ್ರಮಾಣಪತ್ರ ವಿತರಿಸಲಾಯಿತು.

ಕಾಸರಗೋಡು ಆಸ್ಟರ್ ಮಿಮ್ಸ್‌ನಲ್ಲಿ ಅತ್ಯಾಧುನಿಕ ಲಿವರ್ ಕ್ಲಿನಿಕ್ ಆರಂಭ

ಕಾಸರಗೋಡು: ಉತ್ತರ ಮಲಬಾರಿನ ಆರೋಗ್ಯ ಕ್ಷೇತ್ರದಲ್ಲಿ ಹೊಸ ಅಧ್ಯಾಯ ದಾಖಲಿಸಿ ಕಾಸರಗೋಡು ಆಸ್ಟರ್ ಮಿಮ್ಸ್‌ನಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನೊಳಗೊಂಡ ಲಿವರ್ (ಕರಳು) ಕ್ಲಿನಿಕ್ ಕಾರ್ಯಾಚರಣೆ ಆರಂಭಗೊಂಡಿದೆ ಎಂದು ಆಸ್ಪತ್ರೆಯ ಚೀಫ್ ಆಪರೇಟಿಂಗ್ ಆಫೀಸರ್ ಸುಧೀರ್ ಬಾಸುರಿ ಸೋಮವಾರ ಪ್ರೆಸ್‌ಕ್ಲಬ್‌ನಲ್ಲಿ ಜರಗಿದ ಸುದ್ದಿಗೋಷ್ಠಿಯಲ್ಲಿ ಅವರ ತಿಳಿಸಿದರು.
ಜೀವನಶೈಲಿಯ ಬದಲಾವಣೆಗಳಿಂದ ಹೆಚ್ಚುತ್ತಿರುವ ಯಕೃತ್ತಿ (ಕರಳು) ನ ಕಾಯಿಲೆಗ ಳನ್ನು ಗಮನದಲ್ಲಿಟ್ಟುಕೊಂಡು ರೋಗಿಗಳಿಗೆ ವೈಜ್ಞಾನಿಕ ಮತ್ತು ನಿಖರವಾದ ಚಿಕಿತ್ಸೆ ನೀಡುವ ಬೃಹತ್ ಗುರಿಯನ್ನು ಈ ಕ್ಲಿನಿಕ್ ಹೊಂದಿದೆ.
ಆಸ್ಪತ್ರೆಯ ಚೀಫ್ ಆಪರೇಟಿಂಗ್ ಆಫೀಸರ್ ಸುಧೀರ್ ಬಾಸುರಿ ಆಸ್ಪತ್ರೆಯಲ್ಲಿ ನಡೆದ ಸಮಾರಂಭದಲ್ಲಿ ಕ್ಲಿನಿಕ್‌ನ್ನು ಅಧಿಕೃತವಾಗಿ ಉದ್ಘಾಟಿಸಿದರು.
ಈ ಸಂದರ್ಭ ಮಾತನಾಡಿದ ಅವರು, ಗ್ಯಾಸ್ಟ್ರೋ ಎಂಟರಾಲಜಿ ವಿಭಾಗದ ಮುಖ್ಯಸ್ಥ ಡಾ.ಮ್ಯಾಥ್ಯೂ ಜೇಕಬ್ ನೇತೃತ್ವದ ತಜ್ಞ ವೈದ್ಯರ ತಂಡ ಈ ಲಿವರ್ ಕ್ಲಿನಿಕ್‌ನಲ್ಲಿ ಕಾರ್ಯನಿರ್ವಹಿಸಲಿದೆ. ಗ್ಯಾಸ್ಟ್ರೋಎಂಟರಾಲಜಿ , ಹೆಪಟಾಲಜಿ ವಿಭಾಗಗಳಲ್ಲಿ ಲಭ್ಯವಿರುವ ಅತ್ಯಾಧುನಿಕ ಚಿಕಿತ್ಸಾ ವಿಧಾನಗಳನ್ನು ಇಲ್ಲಿ ಅಳವಡಿಸಲಾಗಿದೆ. ಯಕೃತ್ತಿನ ಆರೋಗ್ಯ ಪರೀಕ್ಷಿಸುವ ನೂತನ 'ಫೈಬ್ರೊಸ್ಕ್ಯಾನ್', ಅತ್ಯಾಧುನಿಕ ಎಂಡೋ ಸ್ಕೋಪಿ ವ್ಯವಸ್ಥೆಗಳು, ಫ್ಯಾಟಿ ಲಿವರ್ ಮತ್ತು ಸಿರೋಸಿಸ್‌ನಂತಹ ಕಾಯಿಲೆಗಳಿಗೆ ವಿಶೇಷ ಚಿಕಿತ್ಸಾ ಪ್ರೋಟೋಕಾಲ್‌ಗಳು ಇಲ್ಲಿ ಲಭ್ಯವಿವೆ.
ಸಮಗ್ರ ತಪಾಸಣಾ ಸೌಲಭ್ಯಗಳು, ತಜ್ಞ ವೈದ್ಯರ ಸೇವೆ ಒದಗಿಸುವ ಮೂಲಕ ಕಾಸರಗೋಡು ಆಸ್ಟರ್ ಮಿಮ್ಸ್ ಈ ಭಾಗದ ರೋಗಿಗಳಿಗೆ ದೊಡ್ಡ ಸಮಾಧಾನ ತರಲಿದೆ ಎಂದರು.
ಆಸ್ಟರ್ ಕೇರಳ ಕ್ಲಸ್ಟರ್ ಮೆಡಿಕಲ್ ಡೈರೆಕ್ಟರ್ ಡಾ. ಸೂರಜ್ ಕೆ., ಗ್ಯಾಸ್ಟ್ರೋ ಎಂಟರಾಲಜಿ ಮುಖ್ಯಸ್ಥ ಡಾ.ಮ್ಯಾಥ್ಯೂ ಜೇಕಬ್, ಡಾ.ಕಿರಣ್ ಉಮೇಶ್ ರಾವಂಕರ್, ಡಾ. ಅರುಣ್ ಆರ್.ಎಂ., ಡಾ. ಜೆಸಿಲ್, ಡಾ.ವಿವೇಕ್ ಗೋಷ್ಠಿಯಲ್ಲಿ ದ್ದರು.

ಸಾಮಾನ್ಯ ಜನರಿಗೂ ಚಿಕಿತ್ಸೆ ಒದಗಿಸುವ ಗುರಿ

ನೂತನ ತಂತ್ರಜ್ಞಾನ , ಮಾನವೀಯ ಕಾಳಜಿಯು ಸಂಗಮಿಸುವ ಚಿಕಿತ್ಸಾ ಸಂಸ್ಕೃತಿಯನ್ನು ಈ ಲಿವರ್ ಕ್ಲಿನಿಕ್ ಮೂಲಕ ನಾವು ಉದ್ದೇಶಿಸಿದ್ದೇವೆ. ದೂರದ ನಗರಗ ಳಿಗೆ ಹೋಗುವ ಅಗತ್ಯವಿಲ್ಲದೆ, ವಿಶ್ವದರ್ಜೆಯ ಯಕೃತ್ತಿನ ರೋಗ ಚಿಕಿತ್ಸೆಯನ್ನು ನಮ್ಮೂರಿನ ಸಾಮಾನ್ಯ ಜನರಿಗೆ ಲಭ್ಯವಾಗುವಂತೆ ಮಾಡುವುದು ನಮ್ಮ ಪ್ರಾಥಮಿಕ ಗುರಿ.

● ಸುಧೀರ್ ಬಾಸುರಿ

ಉಪ್ಪಳ ರೈಲ್ವೆ ನಿಲ್ದಾಣ ಪರಿಸರದ ರಸ್ತೆ ದುಸ್ತರ: ವಾಹನ ಸವಾರರಿಗೆ ಸಂಕಷ್ಟ



ಉಪ್ಪಳ: ಉಪ್ಪಳ ರೈಲ್ವೆ ನಿಲ್ದಾಣ ಪರಿಸರದಲ್ಲಿ ರೈಲ್ವೆ ಇಲಾಖೆಯ ಅಧೀನದಲ್ಲಿರುವ ರಸ್ತೆ ಹದಗೆಟ್ಟು ಶೋಚನೀಯಾವಸ್ಥೆಯಿಂದ ವಾಹನ ಹಾಗೂ ಪಾದಚಾರಿಗಳ ಸಂಚಾರ ದುಸ್ತರವಾಗಿದೆ. ಈ ಪರಿಸರದಲ್ಲಿ ಇಲಾಖೆಯ ಸುಮಾರು 150 ಮೀಟರ್ ನಷ್ಟು ರಸ್ತೆ ಹಲವು ವರ್ಷಗಳಿಂದ ದುರಸ್ತಿ ಕಾಮಗಾರಿ ನಡೆಸದಿರುವುದರಿಂದ ಪರಿಸರ ನಿವಾಸಿಗಳು ಸಮಸ್ಯೆ ಅನುಭವಿಸುವಂತಾಗಿದೆ.
ರೈಲ್ವೆ ನಿಲ್ದಾಣಕ್ಕೆ ತಲುಪುವವರು ಹಾಗೂ ಈ ಪರಿಸರದಲ್ಲಿ ವಾಸಿಸುವ ನೂರಾರು ಕುಟುಂಬಗಳು ಉಪ್ಪಳ ಪೇಟೆ ಸಹಿತ ವಿವಿಧೆಡೆಗೆ ತೆರಳಲು ಈ ರಸ್ತೆಯನ್ನೇ ಆಶ್ರಯಿಸಬೇಕಾಗಿದೆ. ಮಳೆಗಾಲ ಆರಂಭಗೊಂಡರೆ ನೀರು ಪೂರ್ತಿ ರಸ್ತೆಯಲ್ಲಿಯೇ ಹರಿದು ಬೃಹತ್ ಹೊಂಡಗಳು ಉಂಟಾಗಿ ಕೆಸರುಮಯವಾಗಿ ಬದಲಾಗುತ್ತಿರುವುದಾಗಿ ಸ್ಥಳೀಯರು ತಿಳಿಸಿದ್ದಾರೆ.

ಹದಗೆಟ್ಟಿದೆ

ಅಲ್ಲದೆ ನಿಲ್ದಾಣ ಪರಿಸರದಿಂದ ಮಣಿಮುಂಡ ಭಾಗಕ್ಕೆ ತೆರಳುವ ರಸ್ತೆಯು ಕೂಡಾ ತೀರಾ ಹದಗೆಟ್ಟಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ರಸ್ತೆ ದುರಸ್ತಿ ಕಾಮಗಾರಿ ನಡೆಸಿ ಡಾಮರೀಕರಣ ಅಥವಾ ಕಾಂಕ್ರೀಟ್ ರಸ್ತೆಯನ್ನು ನಿರ್ಮಿಸಿ ಜನರು ಅನುಭವಿಸುವ ತೊಂದರೆಗಳಿಗೆ ಕೂಡಲೇ ಪರಿಹಾರ ಒದಗಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಕೆಎಸ್‌ಆರ್‌ಟಿಸಿಯಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ: ಅಗತ್ಯ ಕ್ರಮಕ್ಕೆ ಚಾಲನೆ

ಕಾಸರಗೋಡು: ಯುಡಿಎಫ್‌ನ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಲಾಗಿದ್ದ ಮೂರು ಗ್ಯಾರೆಂಟಿಯ ಪೈಕಿ ಒಂದಾಗಿರುವ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತವಾಗಿ ಪ್ರಯಾಣ ಸೌಕರ್ಯ ಏರ್ಪಡಿಸಿ ಅಗತ್ಯದ ಪೂರ್ವಭಾವಿ ಕ್ರಮಕ್ಕೆ ಕೆಎಸ್‌ಆರ್‌ಟಿಸಿ ಆರಂಭಿಕ ಚಾಲನೆ ನೀಡಿದೆ.
ಹೊಸ ಸರಕಾರ ಅಧಿಕಾರಕ್ಕೇರಿದ ಬಳಿಕ ನಡೆಯುವ ಮೊದಲ ಸಚಿವ ಸಂಪುಟ ಸಭೆಯಲ್ಲೇ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣವನ್ನು ವಿದ್ಯುಕ್ತವಾಗಿ ಘೋಷಿಸುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಅದಕ್ಕೆ ಪೂರ್ವಭಾವಿಯಾಗಿ ಕೆಎಸ್‌ಆರ್‌ಟಿಸಿ ಈ ಕ್ರಮ ಆರಂಭಿಸಿದೆ. ಆದರಂತೆ ಕೆಎಸ್‌ಆರ್‌ಟಿಸಿಯಲ್ಲಿ ಪ್ರತಿದಿನ ಎಷ್ಟು ಮಹಿಳೆಯರು ಪ್ರಯಾಣಿಸುತ್ತಿದ್ದಾರೆ ಎಂಬ ಲೆಕ್ಕಾಚಾರವನ್ನು ಕೆಎಸ್‌ಆರ್‌ಟಿಸಿ ಈಗ ಆರಂಭಿಸಿದೆ.
ಖಾಯಂ ಆಗಿ ಬಸ್‌ನಲ್ಲಿ ಪ್ರಯಾಣಿಸುವವರು ಮತ್ತು ದೀರ್ಘ ದೂರ ಪ್ರಯಾಣ ನಡೆಸುವ ಎಲ್ಲಾ ಮಹಿಳೆಯರ ಶೇಕಡಾವಾರು ಸಂಖ್ಯೆಯನ್ನು ಸಂಗ್ರಹಿಸಲಾಗುತ್ತಿದೆ. ರಾಜ್ಯದಲ್ಲಿ ರಿಸರ್ವೇಶನ್ ಪಡೆಯದೆ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಪ್ರಯಾಣಿಸುತ್ತಿರುವವರಲ್ಲಿ ಶೇ. 55ರಿಂದ 60ರಷ್ಟು ಮಂದಿ ಮಹಿಳೆಯರೇ ಆಗಿದ್ದಾರೆ. ಅಂದರೆ ದಿವಸಕ್ಕೆ ದೈನಂದಿನ ರಾಜ್ಯದಲ್ಲಿ ಕೆಎಸ್ ಆರ್‌ಟಿಸಿ ಬಸ್‌ಗಳಲ್ಲಿ ಸರಿ ಸುಮಾರು 23.5 ಲಕ್ಷದಷ್ಟು ಮಹಿಳಾ ಪ್ರಯಾಣಿಕರು ಸಂಚರಿಸುತ್ತಿದ್ದಾರೆ. ಎ.ಸಿ.ಸೂಪರ್ ಫಾಸ್ಟ್ ಬಸ್‌ಗಳಲ್ಲೂ ಮಹಿಳೆಯರಿಗೆ ಉಚಿತ ಪ್ರಯಾಣ ಸೌಕರ್ಯ ಏರ್ಪಡಿಸುವ ಭರವಸೆಯನ್ನು ಯುಡಿಎಫ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದೆ.



ತಿಂಗಳಿಗೆ 90 ಕೋ. ವೆಚ್ಚ ತಗಲಿದೆ

ಇದನ್ನೆಲ್ಲಾ ಲೆಕ್ಕ ಹಾಕುವಾಗ ಕೆಎಸ್‌ಆರ್ ಟಿಸಿಗೆ ತಿಂಗಳಿಗೆ 90 ಕೋಟಿ ರೂ. ವೆಚ್ಚ ಉಂಟಾಗಲಿದೆ. ಆ ವೆಚ್ಚವನ್ನು ಸರಕಾರವೇ ನೀಡಬೇಕಾಗಿ ಬರಲಿದೆ. ಸೂಪರ್ ಕ್ಲಾಸ್ ಬಸ್‌ಗಳನ್ನು ಹೊರತುಪಡಿಸಿ ಫಾಸ್ಟ್ ಸೂಪರ್ ಫಾಸ್ಟ್ ಮತ್ತು ಆರ್ಡಿನರಿ ಬಸ್‌ಗಳಲ್ಲಿ ಮಾತ್ರವೇ ಮಹಿಳೆಯರಿಗೆ ಉಚಿತ ಪ್ರಯಾಣದ ಸೌಕರ್ಯವನ್ನು ನೀಡಲು ತೀರ್ಮಾನಿಸಲಾಗಿದೆ.

ಉಬ್ರಂಗಳ ಶ್ರೀ ದೇವಸ್ಥಾನದಲ್ಲಿ ಹಿತ್ತಾಳೆ ಕವಚದ 18 ಮೆಟ್ಟಿಲುಗಳ ಲೋಕಾರ್ಪಣೆ





ಕಾಸರಗೋಡು: ಬಡಗು ಶಬರಿಮಲೆ ಉಬ್ರಂಗಳ ಶ್ರೀ ಮಹಾದೇವ ಪಾರ್ವತಿ ಶ್ರೀ ಶಾಸ್ತಾರ ದೇವಸ್ಥಾನದಲ್ಲಿ ಹಿತ್ತಾಳೆ ಕವಚದ 18 ಮೆಟ್ಟಿಲುಗಳ ದ್ವಾರಪೂಜೆ ಹಾಗೂ ಲೋಕಾರ್ಪಣೆಯು 101 ಚೆಂಡೆ ವಾದ್ಯಗಳೊಂದಿಗೆ ಸೋಮವಾರ ಜರಗಿತು. ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠಾಧೀಶರಾದ ಜಗದ್ಗುರು ಶಂಕರಾಚಾರ್ಯ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳ ಕರಕಮಲಸಂಜಾತರಾದ ಜಗದ್ಗುರು ಶಂಕರಾಚಾರ್ಯ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮೀ ಹಾಗೂ ಜಗದ್ಗುರು ಶ್ರೀ ಶಂಕರಾಚಾರ್ಯ ಸಂಸ್ಥಾನ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ಲೋಕಾರ್ಪಣೆಗೊಳಿಸಿದರು.

ಸಂಪುಟದಲ್ಲಿ ನಮಗೂ ಪ್ರಾತಿನಿಧ್ಯ ಬೇಕು: ಆರ್‌ಎಸ್‌ಪಿ- ಆರ್‌ಎಂಪಿ

ಕಾಸರಗೋಡು: ಹತ್ತು ವರ್ಷಗಳ ಕಾಯುವಿಕೆಯ ಬಳಿಕ ಪ್ರಚಂಡ ಬಹುಮತದೊಂದಿಗೆ ಆರಿಸಲ್ಪಟ್ಟ ಯುಡಿಎಫ್ ಸಚಿವ ಸಂಪುಟದಲ್ಲಿ ನಮಗೂ ಅರ್ಹ ಪ್ರಾತಿನಿಧ್ಯ ನೀಡಬೇಕೆಂಬ ಪರೋಕ್ಷವಾಗಿ ಯುಡಿಎಫ್ ಘಟಕ ಪಕ್ಷಗಳಾದ ಆರ್‌ಎಂಪಿ ಮತ್ತು ಆರ್‌ಎಸ್‌ಪಿ ಸೂಚಿಸಿವೆ.
ಕಲ್ಲಿಕೋಟೆ ಜಿಲ್ಲೆಯ ವಡಗರ ವಿಧಾನ ಸಭಾ ಕ್ಷೇತ್ರದಿಂದ ಆರ್‌ಎಂಪಿ ನಾಯಕಿ ಕೆ.ಕೆ.ರಮಾ ಆ ಕ್ಷೇತ್ರದಿಂದ ಸತತ ಎರಡನೇ ಬಾರಿ ಆಯ್ಕೆಗೊಂಡಿದ್ದಾರೆ. ನಿಮಗೆ ಯುಡಿಎಫ್ ಸಚಿವ ಸಂಪುಟದಲ್ಲಿ ಸಚಿವರಾಗಲು ಆಗ್ರಹವಿದೆಯೇ ಎಂದು ಸುದ್ದಿಗಾರರು ಪ್ರಶ್ನಿಸಿದಾಗ ಆ ವಿಷಯದಲ್ಲಿ ನಮ್ಮ ಪಕ್ಷ ಈ ತನಕ ಯಾವುದೇ ತೀರ್ಮಾನ ಕೈಗೊಂಡಿಲ್ಲ, ಪಕ್ಷದ ಸಭೆ ಕರೆದು ಈ ವಿಷಯದ ಬಗ್ಗೆ ಚರ್ಚೆ ನಡೆಸಲಾಗುವುದು. ಅದೇನೇ ಇದ್ದರೂ ಸಚಿವ ಸಂಪುಟದಲ್ಲಿ ನಮಗೂ ಅರ್ಹ ಪ್ರಾತಿನಿಧ್ಯ ಲಭಿಸಲಿದೆ ಎಂಬ ಮೂಲಕ ತಮಗೂ ಸಚಿವ ಸ್ಥಾನ ಲಭಿಸಬೇಕೆಂದು ಪರೋಕ್ಷವಾಗಿ ತಮ್ಮ ಮನದಾಳದ ಇಂಗಿತವನ್ನು ನಿರೀಕ್ಷೆ ಯನ್ನು ನಾವು ಹೊಂದಿದ್ದೇವೆ ಎಂದು ಪ್ರಶ್ನೆಗೆ ಕೆ.ಕೆ. ರಮಾ ಪ್ರತಿಕ್ರಿಯೆ ನೀಡಿದ್ದಾರೆ.

ಅರ್ಹ ಪ್ರಾತಿನಿಧ್ಯ ಲಭಿಸಲಿದೆ

ಇದರ ಹೊರತಾಗಿ ಚುನಾವಣೆಯಲ್ಲಿ ಮೂರು ಕ್ಷೇತ್ರಗಳಲ್ಲಿ ಯುಡಿಎಫ್‌ನ ಇನ್ನೊಂದು ಘಟಕ ಪಕ್ಷವಾದ ಆರ್ ಎಸ್‌ಪಿ ಗೆದ್ದಿದೆ. ಆರ್‌ಎಸ್‌ಪಿ ಈ ಬಾರಿ ಐದು ಕ್ಷೇತ್ರಗಳಲ್ಲಿ ಸ್ಪರ್ಧಿ ಸಿತ್ತು. ಯುಡಿಎಫ್ ಸಚಿವ ಸಂಪುಟದಲ್ಲಿ ಆ ಪೈಕಿ ಚವರ, ಇರವಿಪುರಂ ಮತ್ತು ಕುನ್ನತ್ತೂರು ಎಂಬ ಕ್ಷೇತ್ರಗಳಲ್ಲಿ ಗೆದ್ದಿದೆ. ಇದರಿಂದ ಆರ್‌ಎಸ್‌ಪಿಗೆ ಅರ್ಹ ಪ್ರಾತಿನಿಧ್ಯ ಲಭಿಸಲಿದೆಯೆಂಬ ನಿರೀಕ್ಷೆಯನ್ನು ವ್ಯಕ್ತಪಡಿಸಿದೆ. ಹಾಗೆ ನಡೆದಲ್ಲಿ ಆರ್‌ಎಸ್‌ಪಿ ನೇತಾರ ಶಿಬು ಬೇಬಿ ಜೋನ್‌ರಿಗೆ ಸಚಿವ ಸ್ಥಾನ ಲಭಿಸುವ ಸಾಧ್ಯತೆ ಇದೆ. ಅವರು ಆರ್‌ಎಸ್‌ಪಿಯ ರಾಜ್ಯ ಕಾರ್ಯದರ್ಶಿಯೂ ಆಗಿದ್ದಾರೆ.

ಗೆಲುವು ಸಾಧಿಸಿದ್ದಾರೆ

ಆರ್‌ಎಂಪಿ ನಾಯಕಿ ಕೆ.ಕೆ. ರಮಾ ವಡಗರ ವಿಧಾನಸಭಾ ಕ್ಷೇತ್ರದಲ್ಲಿ ಯುಡಿಎಫ್ ಬೆಂಬಲಿತ ಪಕ್ಷೇತರ ಉಮೇದ್ವಾರರಾಗಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದಾರೆ. ಅಲ್ಲದೆ ಸಿಪಿಎಂ ಪಕ್ಷವನ್ನು ಬಿಟ್ಟು ಹೊರಬಂದ ಮಾಜಿ ಸಚಿವ ಜಿ.ಸುಧಾಕರನ್ ಅಂಬಲ ಪುಳ ಕ್ಷೇತ್ರದಲ್ಲೂ ತಳಿಪರಂಬ ಕ್ಷೇತ್ರದಲ್ಲಿ ಕೆ.ಗೋವಿಂದನ್ ಮತ್ತು ಪಯ್ಯನ್ನೂರಿನಲ್ಲಿ ಕುಂಞಿಕೃಷ್ಣನ್ ಯುಡಿಎಫ್ ಬೆಂಬಲಿತ, ಪಕ್ಷೇತರ ಉಮೇದ್ವಾರರಾಗಿ ಸ್ಪರ್ಧಿಸಿ ಗೆದ್ದು ಬಂದಿದ್ದಾರೆ. ಈ ಪೈಕಿ ಜಿ. ಸುಧಾಕರನ್ ಸಚಿವ ಸ್ಥಾನ ಆಕಾಂಕ್ಷಿಯಾಗಿದ್ದಾರೆ.

ಕೇಂದ್ರ ಕೃಷಿ ಸಚಿವಾಲಯದ ಅಗ್ರಿಸ್ಟಾಕ್ ಕೃಷಿಕ ರಿಜಿಸ್ಟ್ರೇಶನ್ ಪಡೆದವರಿಗೆ ಮಾತ್ರ ಸಿಗಲಿದೆ ಕೃಷಿ ಸವಲತ್ತು

ಮೇ 30ರವರೆಗೆ ಹೆಸರು ನೋಂದಾಯಿಸಲು ಇದೆ ಅವಕಾಶ

ಕಾಸರಗೋಡು: ಕೇಂದ್ರ ಕೃಷಿ ಸಚಿವಾಲಯದ ಅಗ್ರಿಸ್ಟಾಕ್ ಕೃಷಿಕ ರಿಜಿಸ್ಟ್ರೇಶನ್ ಪಡೆಯದವರಿಗೆ ಇನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳ ಯಾವುದೇ ರೀತಿಯ ಕೃಷಿ ಸವಲತ್ತುಗಳು ಸಿಗುವುದಿಲ್ಲ. ಕೃಷಿ ಸವಲತ್ತುಗಳು ಲಭಿಸಲು ಕೃಷಿಕರು ಮೇ 30ರೊಳಗೆ ಕೇಂದ್ರ ಕೃಷಿ ಸಚಿವಾಲಯದ ಅಗ್ರಿಸ್ಟಾಕ್ ಹಾಗೂ ನೋಂದಾವಣೆಯಲ್ಲಿ ತಮ್ಮ ಹೆಸರನ್ನು ನೋಂದಾವಣೆ ನಡೆಸಲು ಅವಕಾಶ ನೀಡಲಾಗಿದೆ.

ಅಕ್ಷಯ ಕೇಂದ್ರ , ಕಾಮನ್ ಸರ್ವೀಸ್ ಸೆಂಟರ್‌ನಲ್ಲೂ ನೋಂದಾವಣೆಗೆ ಅವಕಾಶ

ಕೇರಳದಲ್ಲಿ ಈ ತನಕ ಶೇಕಡಾ 50ರಷ್ಟು ಕೃಷಿಕರು ತಮ್ಮ ಹೆಸರನ್ನು ಇನ್ನೂ ನೋಂದಾಯಿಸಿಲ್ಲ. ಕೃಷಿಗೆ ಅಗತ್ಯವಿರುವ ಒಂದು ಕಿಲೋ ಯೂರಿಯಾ ಖರೀದಿಸಲೂ ಈಗ ಅಗ್ರಿಸ್ಟಾಕ್ ಗುರುತುಚೀಟಿ ಬೇಕಾಗಿ ಬರುತ್ತಿದೆ. ಆಯಾ ಕೃಷಿ ಭವನಗಳ ಮೂಲಕ ಕೃಷಿಕರು ಈ ಹಿಂದೆ ಅಗ್ರಿಸ್ಟಾಕ್ ಗುರುತು ಚೀಟಿಗಾಗಿ ತಮ್ಮ ಹೆಸರು ನೋಂದಾಯಿಸಬೇಕಾಗಿ ಬರುತ್ತಿತ್ತು. ಆದರೆ ಬಳಿಕ ಅಕ್ಷಯ ಕೇಂದ್ರ ಮತ್ತು ಕಾಮನ್ ಸರ್ವೀಸ್ ಸೆಂಟರ್‌ಗಳ ಮೂಲಕ ನೋಂದಾವಣೆ ನಡೆಸಲು ಅವಕಾಶ ನೀಡಲಾಗಿದೆ. ಕೇರಳದಲ್ಲಿ ಇದುವರೆಗೆ 22,51,606ರಷ್ಟು ಕೃಷಿಕರು ತಮ್ಮ ಹೆಸರು ನೋಂದಾಯಿಸಿದ್ದಾರೆ. ಅದರಲ್ಲಿ 12,44,811 ಮಂದಿಗೆ ಅಂಗೀಕಾರ ಲಭಿಸಿದೆ. ಸ್ವಂತವಾಗಿ ಕೃಷಿ ಭೂಮಿ ಹೊಂದಿದವರು ಈ ಗುರುತು ಚೀಟಿಗಾಗಿ ಹೆಸರು ನೋಂದಾಯಿಸಬಹುದಾಗಿದೆ. ಹೀಗೆ ಹೆಸರು ನೋಂದಾಯಿಸುವ ಕೃಷಿಕರಿಗೆ 21 ಸಂಖ್ಯೆ ಹೊಂದಿರುವ ಕೃಷಿ ಐ.ಡಿ.ಕಾರ್ಡ್ ಲಭಿಸಲಿದೆ. ಈ ಕಾರ್ಡ್ ಲಭಿಸಿದಲ್ಲಿ ಮಾತ್ರ ಕೃಷಿಕರಿಗೆ ಇನ್ನು ಕೇಂದ್ರ – ಕೇರಳ ಸರಕಾರದ ಕೃಷಿ ಸವಲತ್ತುಗಳು ಲಭಿಸಲಿವೆ.



ಮಾಹಿತಿ ಸಂಗ್ರಹಿಸಲಾಗುವುದು

ಕೃಷಿಕರ ಕುರಿತಾದ ಎಲ್ಲಾ ಮಾಹಿತಿಗಳು ಈ ಡಿಜಿಟಲ್ ಕ್ರೂಸ್ ಸರ್ವೇ ಮಾಹಿತಿಗಳು, ಕಂದಾಯ ಇಲಾಖೆ ಭೂ ದಾಖಲೆ ಪತ್ರಗಳನ್ನು ಪರಿಶೀಲಿಸಿ ಕೃಷಿಕರ ಕೃಷಿಯ ಬಗ್ಗೆ ಸಂಪೂರ್ಣ ಮಾಹಿತಿಗಳನ್ನು ಮೊದಲು ಸಂಗ್ರಹಿಸಲಾಗುವುದು. ಅದನ್ನು ಬಳಿಕ ಸಂಬಂಧಪಟ್ಟ ಗ್ರಾಮ ಕಚೇರಿಗಳಿಗೆ ಸಲ್ಲಿಸಿ ಪರಿಶೀಲಿಸಿದ ಬಳಿಕವಷ್ಟೇ ಅಗ್ರಿಸ್ಟಾಕ್ ಗುರುತು ಚೀಟಿಗೆ ಅಂಗೀಕಾರ ನೀಡಲಾಗುತ್ತಿದೆ. ಗ್ರಾಮ ಕಚೇರಿ ಹೊಂದಿರುವ ಮಾಹಿತಿಗಳು, ಕೃಷಿಕರು ಸಲ್ಲಿಸುವ ಮಾಹಿತಿಗಳು ಪರಸ್ಪರ ಹೊಂದಿಕೆಯಾಗದಿದ್ದಲ್ಲಿ ಗುರುತು ಚೀಟಿ ಲಭಿಸದು. ಇಂತಹ 1,22,115 ನೋಂದಾವಣೆ ಕ್ರಮ ಗ್ರಾಮ ಕಚೇರಿಗಳ ಅಂಗೀಕಾರಕ್ಕಾಗಿ ಬಾಕಿ ಉಳಿದುಕೊಂಡಿದೆ. ಜಾರಿಯಲ್ಲಿ ಸರಕಾರದಿಂದ ಲಭಿಸುವ ನೋಂದಾವಣೆಯಲ್ಲಿ ಒಳಗೊಳ್ಳಲಿದೆ.

ಅಗ್ರಿಸ್ಟಾಕ್ ಗುರುತು ಕಾರ್ಡ್ ಪಡೆಯಲೇಬೇಕು

ಕೃಷಿ ಭೂಮಿಯ ವಿಸ್ತೀರ್ಣ, ಅಲ್ಲಿ ನಡೆಸುವ ಕೃಷಿ, ಉಪಯೋಗಿಸುವ ಗೊಬ್ಬರ ಮತ್ತು ಕೀಟನಾಶಕಗಳು, ಕೃಷಿ ಬೆಳೆಗಳ ಇಳುವರಿ, ಅದಕ್ಕೆ ಮಾರುಕಟ್ಟೆಯಲ್ಲಿ ಲಭಿಸುವ ಬೆಲೆ, ಸಹಾಯಗಳು ಇತ್ಯಾದಿ ಮಾಹಿತಿಗಳು ಪಿಎಂ ಕಿಸಾನ್ ಯೋಜನೆ ಪ್ರಕಾರ ಕೇಂದ್ರ ಕೃಷಿ ಇಲಾಖೆಯಿಂದ 6000 ರೂ. ಲಭಿಸುವವರೂ ಆದರ ಗುರುತು ಚೀಟಿ ಮಾತ್ರವಲ್ಲದೆ ಇನ್ನು ಅಗ್ರಿಸ್ಟಾಕ್ ಗುರುತು ಕಾರ್ಡ್‌ನ್ನು ಪಡೆಯಬೇಕಾಗಿದೆ.

ವಿಮುಕ್ತಿ ಮಿಷನ್ -ಐಸಿಡಿಎಸ್‌ನಿಂದ ಮಾದಕ ದ್ರವ್ಯ ವಿರೋಧಿ ಜಾಗೃತಿ ತರಗತಿ

ಕಾಸರಗೋಡು: ಮುಂಬರುವ ಪೀಳಿಗೆಯನ್ನು ಮಾದಕ ವ್ಯಸನದಿಂದ ಮುಕ್ತಗೊಳಿಸಲು, ಮಕ್ಕಳಲ್ಲಿ ಸಾಮಾಜಿಕ ಜಾತ್ರುತಿ ಮೂಡಿಸಲು ಮತ್ತು ಅವರನ್ನು ಸೃಜನಶೀಲ ರೀತಿಯಲ್ಲಿ ಮಾರ್ಗದರ್ಶನ ನೀಡಲು, ಐಸಿಡಿಎಸ್ ಕಾಸರಗೋಡು ಬ್ಲಾಕ್-ವಿಮುಕ್ತಿ ಮಿಷನ್ ಕಾಸರಗೋಡು ವಿಭಾಗದ ಸಹಯೋಗದೊಂದಿಗೆ ವಿಶೇಷ ಮಾದಕ ದ್ರವ್ಯ ವಿರೋಧಿ ಜಾಗೃತಿ ತರಗತಿ ಸೋಮವಾರ ತಳಂಗರೆಯಲ್ಲಿ ಆಯೋಜಿಸಲಾಯಿತು.
ತರಗತಿಯಲ್ಲಿ ಮಕ್ಕಳ ಬೇಸಿಗೆ ಶಿಬಿರದ ಎರಡನೇ ದಿನದಂದು ಜಾಗೃತಿ ತರಗತಿಯನ್ನು ಆಯೋಜಿಸಲಾಗಿತ್ತು. 'ಜೀವನವೇ ಮಾದಕ ವ್ಯಸನ' ಎಂಬ ವಿಷಯದ ಕುರಿತು ನಡೆದ ತರಗತಿಯನ್ನು ವಿಮುಕ್ತಿ ಜಿಲ್ಲಾ ಸಂಯೋಜಕಿ ಕೆ.ಎಂ.ಸ್ನೇಹಾ ನಡೆಸಿಕೊಟ್ಟರು.
ಮಾದಕ ವಸ್ತುಗಳ ಸೇವನೆಯ ಅಪಾಯಗಳು ಮತ್ತು ಆರೋಗ್ಯಕರ ಭವಿಷ್ಯ ನಿರ್ಮಿಸಲು ಮಕ್ಕಳು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳ ಕುರಿತು ತರಗತಿಗೆ ವಿವರಿಸಲಾಯಿತು. ನಂತರ ಮಕ್ಕಳ ಸಕ್ರಿಯ ಭಾಗವಹಿಸುವಿಕೆಯೊಂದಿಗೆ ಮುಕ್ತ ಚರ್ಚೆ ನಡೆಸಲಾಯಿತು. ಶಾಲಾ ಸಲಹೆಗಾರದಿವ್ಯಾಸ್ವಾಗತಿಸಿ,ಮರಿಯಾ ವಂದಿಸಿದರು. ಕಾಸರಗೋಡು ಬ್ಲಾಕ್ ಪ್ರದೇಶದ ವಿವಿಧ ಶಾಲೆಗಳ ಶಾಲಾ ಸಲಹೆಗಾರರು , ಮಕ್ಕಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಜ್ಞಾನ ಭಾರತಂ ಮಿಷನ್‌ನಡಿ ಹಸ್ತಪ್ರತಿ, ದಾಖಲೆಗಳ ಸಂಗ್ರಹಕ್ಕೆ ಸಂಬಂಧಿಸಿ ಜಿಲ್ಲಾಧಿಕಾರಿ ಸ್ವರೂಪ ಸಭೆ

ಹಸ್ತ ಪ್ರತಿಗಳ ಡಿಜಿಟಲೀಕರಣ ಚುರುಕುಗೊಳಿಸಲು ಸೂಚನೆ

ಉಡುಪಿ: ಜ್ಞಾನ ಭಾರತಂ ಮಿಷನ್ ಯೋಜನೆಯಡಿ ದೇಶದಲ್ಲಿ ಶತಮಾನಗಳಷ್ಟು ಹಳೆಯ ಕೈ ಬರಹಗಳು, ಹಸ್ತ ಪ್ರತಿಗಳು ಹಾಗೂ ಮತ್ತಿತರ ದಾಖಲೆಗಳನ್ನು ತಂತ್ರಜ್ಞಾನದ ಮೂಲಕ ಶಾಶ್ವತವಾಗಿ ಉಳಿಸಲು ಡಿಜಿಟಲೀಕರಣ ಕಾರ್ಯ ನಡೆಯುತ್ತಿದ್ದು, ಪ್ರತಿಯೊಬ್ಬರೂ ಸಹಕಾರ ನೀಡಿ ಯಶಸ್ವಿಗೊಳಿಸಬೇಕೆಂದು ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಕರೆ ನೀಡಿದರು.

ಅವರು ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜ್ಞಾನ ಭಾರತಂ ಮಿಷನ್ ಯೋಜನೆಯಡಿ ಹಸ್ತ ಪ್ರತಿಗಳ ಸಂರಕ್ಷಣೆ ಮತ್ತು ಡಿಜಿಟಲೀಕರಣ ಯೋಜನೆಯನ್ನು ಜಿಲ್ಲೆಯಲ್ಲಿ ಅನುಷ್ಠಾನಗೊಳಿಸುವ ಕುರಿತು ಆಯೋಜಿಸಲಾದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಕೇಂದ್ರ ಸರ್ಕಾರದ ಜ್ಞಾನ ಭಾರತಂ ಮಿಷನ್ ಯೋಜನೆಯಡಿಯಲ್ಲಿ ರಾಷ್ಟ್ರದಾದ್ಯಂತ ಲಭ್ಯವಿರುವ ಶತಮಾನಗಳಷ್ಟು ಹಳೆಯ ಕೈಬರಹದ ಪತ್ರಗಳು, ಹಸ್ತಪ್ರತಿಗಳು ಮತ್ತು ದಾಖಲೆಗಳನ್ನು ಸಂಗ್ರಹಿಸಿ, ಇಂದಿನ ತಂತ್ರಜ್ಞಾನ ಮೂಲಕ ಶಾಶ್ವತವಾಗಿ ಉಳಿಸಲು ಅವುಗಳ ಸಮೀಕ್ಷೆ ಕಾರ್ಯ ಕೈಗೊಳ್ಳಲಾಗುತ್ತಿದೆ.



ಸಾರ್ವಜನಿಕರು ತಮ್ಮಲ್ಲಿ ಇಂತಹ ಹಳೆಯ ಕೈಬರಹ, ಹಸ್ತಪ್ರತಿ, ದಾಖಲೆಗಳು ಲಭ್ಯವಿದ್ದಲ್ಲಿ ನೇರವಾಗಿ ಜ್ಞಾನ ಭಾರತಂ ಆ್ಯಪ್, gynabharatham.com ಮೂಲಕ ಅಪ್ಲೋಡ್ ಮಾಡಬಹುದಾಗಿದೆ ಅಥವಾ ಮಾಹಿತಿ ನೀಡಿದ್ದಲ್ಲಿ ಸಮೀಕ್ಷೆದಾರರು ತಮ್ಮಲ್ಲಿಗೆ ಬಂದು ದಾಖಲಿಸಿಕೊಳ್ಳಲಿದ್ದಾರೆ ಎಂದರು.

ಭವಿಷ್ಯದ ಪೀಳಿಗೆಗೆ ಡಿಜಿಟಲೀಕರಣ

ಐತಿಹಾಸಿಕ ದಾಖಲೆಗಳ ಸಮೀಕ್ಷೆ, ಸಂರಕ್ಷಣೆ, ರಕ್ಷಣೆ, ಡಿಜಿಟಲೀಕರಣ, ನೋಂದಣಿ, ವಿಮರ್ಶಾತ್ಮಕ ಸಂಪಾದನೆ, ಅನುವಾದ ಮತ್ತು ಪ್ರಕಟಣೆಯನ್ನು ಮಾಡುವ ಮೂಲಕ ಕರ್ನಾಟಕದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಒಂದೇ ರಾಷ್ಟ್ರೀಯ ವೇದಿಕೆಯ ಮೂಲಕ ಸಾರ್ವಜನಿಕರಿಗೆ ಒದಗಿಸಲಾಗುತ್ತದೆ. ಭವಿಷ್ಯದ ಪೀಳಿಗೆಗೆ ಅವುಗಳ ಜ್ಞಾನ ಸಂಪತ್ತಿನ ಸಂರಕ್ಷಣೆ ಮತ್ತು ಬಳಕೆಗೆ ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಡಿಜಿಟಲೀಕರಣ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಜಿಲ್ಲೆಯಲ್ಲಿ ಹಸ್ತ ಪ್ರತಿಗಳ ಡಿಜಿಟಲೀಕರಣ

ಎಲ್ಲರ ಸಹಕಾರ ಅಗತ್ಯ

ಜಿಲ್ಲೆಯ ಎಲ್ಲಾ ವಿಶ್ವವಿದ್ಯಾಲಯಗಳು, ವಸ್ತು ಸಂಗ್ರಹಾಲಯಗಳು, ಸಂಘ-ಸಂಸ್ಥೆಗಳು, ಮಠಗಳು ಮತ್ತು ವ್ಯಕ್ತಿಗಳ ಬಳಿ ಇರುವಂತಹ ಹಸ್ತಪ್ರತಿಗಳನ್ನು ದಾಖಲೀಕರಣಗೊಳಿಸಬೇಕಾಗಿದ್ದು, ಈ ಮಹತ್ವದ ಕಾರ್ಯಕ್ಕೆ ಎಲ್ಲ ಶೈಕ್ಷಣಿಕ ಸಂಸ್ಥೆಗಳು, ಖಾಸಗಿ ಸಂಶೋಧನಾ ಕೇಂದ್ರಗಳು, ಸಂಘ, ಸಂಸ್ಥೆಗಳು, ಮಠಗಳು ಮತ್ತು ದಾಖಲೆ ಹೊಂದಿರುವ ವ್ಯಕ್ತಿ, ಕುಟುಂಬಗಳು ಜಿಲ್ಲಾಡಳಿತದೊಂದಿಗೆ ಕೈ ಜೋಡಿಸುವ ಅಗತ್ಯವಿದ್ದು, ಪ್ರತಿಯೊಬ್ಬರೂ ಸಹಕಾರ ನೀಡಬೇಕೆಂದು ಜಿಲ್ಲಾಧಿಕಾರಿ ಮನವಿ ಮಾಡಿದರು.

ಕೈಗೊಂಡಿರುವ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಲು ಮಾಧ್ಯಮಗಳ ಮೂಲಕ ಹೆಚ್ಚಿನ ಪ್ರಚಾರ ಕೈಗೊಳ್ಳಬೇಕು ಎಂದ ಅವರು, ಹಸ್ತ ಪ್ರತಿಗಳು ಇರುವ ಬಗ್ಗೆ ನಿಖರವಾದ ಮಾಹಿತಿಗಳನ್ನು ಕಲೆ ಹಾಕಬೇಕು. ಈ ಸಂಬಂಧ ವಿವಿಧ ಸಮುದಾಯದವರು, ಅರ್ಚಕರು, ತಂತ್ರಿಗಳು, ಸೇರಿದಂತೆ ಮತ್ತಿತರ ಸಭೆಯನ್ನು ಕರೆಯಬೇಕು. ಅರಿವು ಕಾರ್ಯಕ್ರಮಗಳನ್ನು ಆಂದೋಲನದ ರೀತಿಯಲ್ಲಿ ಮಾಡಿದಾಗ ಮಾತ್ರ ಜಿಲ್ಲೆಯಲ್ಲಿ ಸಂಪೂರ್ಣ ಡಿಜಿಟಲೀಕರಣ ಸಾಧ್ಯವಾಗುತ್ತದೆ ಎಂದು ಜಿಲ್ಲಾಧಿಕಾರಿ ಹೇಳಿದರು.

ಪೋಸ್ಟರ್ ಬಿಡುಗಡೆ

ಜ್ಞಾನ ಭಾರತಂ ಮಿಷನ್ ಯೋಜನೆಯ ಪ್ರಚಾರದ ಪೋಸ್ಟರ್ ಅನ್ನು ಬಿಡುಗಡೆಗೊಳಿಸಲಾಯಿತು. ಸಭೆಯಲ್ಲಿ ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕಿ ವಿಂದ್ಯಾ ಎನ್. ಎಂ., ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಸುಬ್ರಹ್ಮಣ್ಯ, ಪೌರಯುಕ್ತ ಮಹಾಂತೇಶ್ ಹಂಗರಗಿ, ವಾರ್ತಾಧಿಕಾರಿ ಮಂಜುನಾಥ್ ಬಿ, ಜ್ಞಾನ ಭಾರತಂ ಉಡುಪಿಯ ಜಿಲ್ಲಾ ಮಟ್ಟದ ಸಂಯೋಜಕ ಡಾ. ಗೋಪಾಲಚಾರ್, ಪುರಾತತ್ವ ಸಂಗ್ರಹಲಯಗಳು ಮತ್ತು ಪರಂಪರೆ ಇಲಾಖೆಯ ಧನಲಕ್ಷ್ಮೀ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ (ಮಾಹೆ) ದ ಡಾ. ಬಿ ಜಗದೀಶ್ ಶೆಟ್ಟಿ, ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು ಉಪಸ್ಥಿತರಿದ್ದರು.

ಸುತ್ತಮುತ್ತ

ಮೇ 17: ಯಕ್ಷಾಂತರಂಗ ತಂಡದಿಂದ ಅಭಿಮನ್ಯು ಯಕ್ಷಗಾನ ಪ್ರದರ್ಶನ

ಕೋಟ: ಕೋಟದ ಡಾ. ಕೋಟ ಶಿವರಾಮ ಕಾರಂತ ಥೀಮ್ ಪಾರ್ಕ್‌ನಲ್ಲಿ ಯಕ್ಷಾಂತರಂಗ ವ್ಯವಸಾಯೀ ಯಕ್ಷತಂಡದ ವತಿಯಿಂದ ಮೇ 17ರ ಸಂಜೆ 4:30ಕ್ಕೆ ಸಭಾ ಕಾರ್ಯಕ್ರಮ ಹಾಗೂ ಯಕ್ಷಗಾನ ಪ್ರದರ್ಶನ ಹಮ್ಮಿಕೊಂಡಿದೆ. ಸಭೆಯ ಅಧ್ಯಕ್ಷತೆಯನ್ನು ಯಕ್ಷಾಂತರಂಗ ತಂಡದ ಅಧ್ಯಕ್ಷ ಆನಂದ ಸಿ. ಕುಂದರ್ ವಹಿಸಲಿದ್ದು, ಸಂಸದ ಕೋಟ ಶ್ರೀನಿವಾಸ ಪೂಜಾರಿ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪಿ.ಡಬ್ಲ್ಯು.ಡಿ. ಕಂಟ್ರಾಕ್ಟರ್ ಗುರುರಾಜ ರಾವ್ ಆರೂರು, ಮಣೂರು ಮಹಾಲಿಂಗೇಶ್ವರ ದೇವಸ್ಥಾನ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಸತೀಶ ಕುಂದರ್, ಕೋಟತಟ್ಟು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಸತೀಶ ಕುಂದರ್ ಬಾರಿಕೆರೆ, ಉದ್ಯಮಿ ಸದಾನಂದ ಜಿ. ಯಕ್ಷಾಂತರಂಗ ತಂಡದ ಕಾರ್ಯಾಧ್ಯಕ್ಷ ಎಂ. ಸುಬ್ರಾಯ ಆಚಾರ್ಯ ಮಣೂರು ಉಪಸ್ಥಿತರಿರಲಿದ್ದಾರೆ. ಕರ್ನಾಟಕ ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹಿರಿಯ ಯಕ್ಷಗುರು ದೇವದಾಸ ರಾವ್ ಕೂಡ್ಲಿ ಅವರಿಗೆ ಅಭಿನಂದನಾ ಸನ್ಮಾನ ನಡೆಯಲಿದೆ. ಯಕ್ಷಾಂತರಂಗದ ಯಕ್ಷಗಾನ ತರಬೇತಿ ಕೇಂದ್ರದ ವಿದ್ಯಾರ್ಥಿಗಳಿಂದ 'ಅಭಿಮನ್ಯು'ಎಂಬ ಯಕ್ಷಗಾನ ಪ್ರಸಂಗ ಪ್ರದರ್ಶನಗೊಳ್ಳಲಿದೆ ಎಂದು ಯಕ್ಷಾಂತರಂಗದ ಕಾರ್ಯದರ್ಶಿ ಕೃಷ್ಣಮೂರ್ತಿ ಉರಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೆಡ್‌ಕ್ರಾಸ್ ಸಭಾಪತಿಗಳಿಂದ ರಾಜ್ಯಪಾಲರ ಭೇಟಿ

ಉಡುಪಿ: ಕರ್ನಾಟಕ ರಾಜ್ಯ ರೆಡ್‌ಕ್ರಾಸ್ ಸಭಾಪತಿ ಮತ್ತು ಉಡುಪಿ ಜಿಲ್ಲಾ ಸಭಾಪತಿಗಳಾದ ಬಸ್ರೂರು ರಾಜೀವ ಶೆಟ್ಟಿ ಇವರು ಕರ್ನಾಟಕ ಸರ್ಕಾರದ ರಾಜ್ಯಪಾಲ ಥಾವರ್‌ಚಂದ್ ಗೆಹಲೋಟ್ ಅವರನ್ನು ಭೇಟಿಯಾಗಿ ರೆಡ್‌ಕ್ರಾಸ್ ಚಟುವಟಿಕೆಗಳ ಬಗ್ಗೆ ಚರ್ಚಿಸಿದರು. ಈ ಸಂದರ್ಭದಲ್ಲಿ ರಾಜ್ಯದ ರೆಡ್ ಕ್ರಾಸ್ ಚಟುವಟಿಕೆಗಳ ಬಗ್ಗೆ ತೃಪ್ತಿ ವ್ಯಕ್ತಪಡಿಸಿದ ರಾಜ್ಯಪಾಲರು ರೆಡ್ ಕ್ರಾಸ್‌ನ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕೆಲವು ಸಲಹೆಗಳನ್ನು ನೀಡಿದರು. ರಾಜ್ಯ ಆಡಳಿತ ಮಂಡಳಿಯ ಕೆಲವು ಸದಸ್ಯರು ಉಪಸ್ಥಿತರಿದ್ದರು.

ನಾಳೆ ರೆಡ್‌ಕ್ರಾಸ್ ವಾರ್ಷಿಕ ಮಹಾಸಭೆ

ಉಡುಪಿ: ಜಿಲ್ಲಾ ರೆಡ್‌ಕ್ರಾಸ್ ಘಟಕದ ವಾರ್ಷಿಕ ಮಹಾಸಭೆಯು ರೆಡ್‌ಕ್ರಾಸ್ ಅಧ್ಯಕ್ಷರು ಮತ್ತು ಉಡುಪಿ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಇವರ ಅಧ್ಯಕ್ಷತೆಯಲ್ಲಿ ಮೇ 13 ರಂದು ಬೆಳಿಗ್ಗೆ 10.30 ಕ್ಕೆ ಉಡುಪಿ ಟೌನ್‌ಹಾಲಿನ ಮಿನಿಹಾಲ್‌ನಲ್ಲಿ ನಡೆಯಲಿದ್ದು ರೆಡ್‌ಕ್ರಾಸ್‌ನ ಸದಸ್ಯರು ಭಾಗವಹಿಸುವಂತೆ ಪ್ರಕಟಣೆ ತಿಳಿಸಿದೆ.

ಅರಿವು ಶೈಕ್ಷಣಿಕ ಸಾಲ ಯೋಜನೆ: ಅರ್ಜಿ ಆಹ್ವಾನ

ಉಡುಪಿ: ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ ಪ್ರಸಕ್ತ ಸಾಲಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಸಿ.ಇ.ಟಿ/ನೀಟ್‌ನಲ್ಲಿ ಎಂಬಿಬಿಎಸ್, ಬಿಡಿಎಸ್, ಬಿಇ/ಬಿಟೆಕ್, ಬ್ಯಾಚ್ಯುಲರ್ ಆಫ್ ಆರ್ಕಿಟೆಕ್ಚರ್, ಬಿ.ಆಯುಷ್, ಫಾರ್ಮಸಿ, ಕೃಷಿ ವಿಜ್ಞಾನ ಮತ್ತು ಪಶು ವೈದ್ಯಕೀಯ ಕೋರ್ಸ್‌ಗಳಿಗೆ ಆಯ್ಕೆಯಾಗುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ (ಕ್ರಿಶ್ಚಿಯನ್ ಹೊರತುಪಡಿಸಿ) ಅರಿವು ಶೈಕ್ಷಣಿಕ ಸಾಲ ಯೋಜನೆಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಯೋಜನೆಯಡಿಯಲ್ಲಿ ಸಾಲ ಪಡೆಯಲು ಬಯಸುವ ವಿದ್ಯಾರ್ಥಿಗಳು kmdconline.karnataka.gov.in ವೆಬ್‌ಸೈಟ್ ಮೂಲಕ ಮೇ. 3ರೊಳಗಾಗಿ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ಅಗತ್ಯ ದಾಖಲಾತಿಗಳನ್ನು ಜೂನ್ 1ರೊಳಗೆ ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ(ನಿ), ಮೌಲಾನಾ ಆಜಾದ್ ಭವನ, 1 ನೇ ಮಹಡಿ, ಪಶು ಚಿಕಿತ್ಸಾಲಯದ ಹತ್ತಿರ, ಅಲೆವೂರು ರಸ್ತೆ, ಮಣಿಪಾಲ ಇಲ್ಲಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂ: 0820-2574990 ಅಥವಾ ತಾಲೂಕು ಮಾಹಿತಿ ಕೇಂದ್ರವನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಕಚೇರಿ ಪ್ರಕಟಣೆ ತಿಳಿಸಿದೆ.

ಅಪರಿಚಿತ ವ್ಯಕ್ತಿಯ ಮೃತದೇಹ ಪತ್ತೆ

ಉಡುಪಿ: ಬೈಂದೂರು ಕಿರಿಮಂಜೇಶ್ವರ ಗ್ರಾಮದ ನ್ಯಾರಿಕೇರಿ ಹತ್ತಿರದ ಕ್ಲಿನಿಕ್ ಒಂದರ ಎದುರುಗಡೆ ರಾಷ್ಟ್ರೀಯ ಹೆದ್ದಾರಿ 66 ರ ಪೂರ್ವ ಬದಿ ಚರಂಡಿಯ ಬಳಿ 35 ರಿಂದ 40 ವರ್ಷದ ಓರ್ವ ಅಪರಿಚಿತ ವ್ಯಕ್ತಿಯ ಮೃತ ದೇಹ ಪತ್ತೆಯಾಗಿದ್ದು, ವ್ಯಕ್ತಿಯು ಕೆಲವು ದಿನಗಳಿಂದ ಈ ಪರಿಸರದಲ್ಲಿ ತಿರುಗಾಡಿಕೊಂಡಿದ್ದು ಮೇ 6ರಿಂದ 7ರ ಮಧ್ಯಾವಧಿಯಲ್ಲಿ ಅನಾರೋಗ್ಯ ಅಥವಾ ಇನ್ನಾವುದೋ ಕಾರಣದಿಂದ ಮೃತಪಟ್ಟಿದ್ದಾರೆ ಎಂದು ಅಂದಾಜಿಸಲಾಗಿದೆ. 5 ಅಡಿ 5 ಇಂಚು ಎತ್ತರವಿದ್ದ ವ್ಯಕ್ತಿ ತೆಲುಗು ಬಾಷೆ ಬಲ್ಲವರಾಗಿದ್ದು ಈ ಬಗ್ಗೆ ಬೈಂದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಿಲ್ಲೆಯಲ್ಲಿ ಸರಾಸರಿ 3.7 ಮಿಲಿ ಮೀಟರ್ ಮಳೆ

ಉಡುಪಿ: ಉಡುಪಿ ಜಿಲ್ಲೆಯಲ್ಲಿ ಕಳೆದ 24 ಗಂಟೆ ಅವಧಿಯಲ್ಲಿ ಸರಾಸರಿ 3.7 ಮಿಲಿ ಮೀಟರ್ ಮಳೆಯಾಗಿರುವ ಬಗ್ಗೆ ವರದಿಯಾಗಿದೆ. ಕಾರ್ಕಳ ತಾಲೂಕಿನಲ್ಲಿ 10.6ಮಿ.ಮೀ., ಕುಂದಾಪುರ -0.9 ಮಿ.ಮೀ., ಉಡುಪಿ- 1.0ಮಿ.ಮೀ., ಬೈಂದೂರು -3.1ಮಿ.ಮೀ., ಬ್ರಹ್ಮಾವರ-0.1 ಮಿ.ಮೀ., ಕಾಪು-7.3ಮಿ.ಮೀ., ಹೆಬ್ರಿ- 2.0 ಮಿ.ಮೀ ಮಳೆಯಾಗಿ ರುವ ಬಗ್ಗೆ ಮೂಲಗಳು ತಿಳಿಸಿವೆ.

ಪಾಂಡೇಶ್ವರ ಗ್ರಾ.ಪಂ. ಬೇಸಿಗೆ ಶಿಬಿರ ಸಮಾರೋಪ | ಋಷಿರಾಜ್ ಕಳವಳ

ಹೆಚ್ಚು ಮೊಬೈಲ್ ಬಳಕೆ, ಸಮಸ್ಯೆಯೂ ಅಧಿಕ

ಕೋಟ: ಹೆಚ್ಚು ಮೊಬೈಲ್ ಬಳಕೆಯಿಂದ ಮಕ್ಕಳ ಮನೋಸ್ಥಿತಿ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದ್ದು ಇದರಿಂದ ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಈ ಬಗ್ಗೆ ಪೋಷಕರು ಜಾಗೃತರಾಗುವುದು ಒಳಿತು ಎಂದು ಸಾಮಾಜಿಕ ಚಿಂತಕ ಋಷಿರಾಜ್ ಸಾಸ್ತಾನ ಅಭಿಪ್ರಾಯಪಟ್ಟರು.

ಪಾಂಡೇಶ್ವರ ಪಂಚಾಯತ್ ಸಭಾಂಗಣದಲ್ಲಿ ಪಾಂಡೇಶ್ವರ ಗ್ರಾಮ ಪಂಚಾಯತ್, ಅರಿವು ಕೇಂದ್ರ ಡಿಜಿಟಲ್ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ ಪಾಂಡೇಶ್ವರ ಇವರ ಆಶ್ರಯದಲ್ಲಿ ತನಕ ನಡೆದ ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಪ್ರಸ್ತುತ ಪಾಂಡೇಶ್ವರ ಗ್ರಾಮ ಪಂಚಾಯತ್‌ನಲ್ಲಿ ಆಯೋಜಿಸಿರುವ ಬೇಸಿಗೆ ಶಿಬಿರಗಳ ಮಕ್ಕಳ ಕೌಶಲ್ಯಾಭಿವೃದ್ಧಿಗೆ ಪೂರಕ ವಾತಾವರಣ ನಿರ್ಮಿಸಲಿದ್ದು, ಪೋಷಕರು ಮಕ್ಕಳಿಗೆ ಸಂಸ್ಕಾರಯುತ ಮಾಹಿತಿಯನ್ನು ಆಗಾಗ ನೀಡಬೇಕಿದೆ ಎಂದು ಹೇಳಿದರು. ಭಾರತೀಯ ಹಿಂದು ಪರಂಪರೆಯಲ್ಲಿ ತನ್ನದೆ ಆದ ವ್ಯಕ್ತಿತ್ವ ರೂಪಿಸಲು ಬೇಕಾದ ಮಾಹಿತಿಗಳನ್ನು ಗುರುಪರಂಪರೆ, ಆಚಾರ ವಿಚಾರಗಳ ಬಗ್ಗೆ ಸಮಗ್ರ ಮಾಹಿತಿಯನ್ನು ನೀಡಿದರು.



ಗೌರವಾರ್ಪಣೆ, ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ

ಎಂಟು ದಿನಗಳ ಕಾಲ ನಡೆದ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗಿಯಾದ ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಜಿ.ರಾಮಚಂದ್ರ ಐತಾಳ್, ಶಿಕ್ಷಕಿ ನಾಗರತ್ನ ಹೇರ್ಳೆ, ಅಂಗನವಾಡಿ ಕಾರ್ಯಕರ್ತೆ ಜಯಲಕ್ಷ್ಮಿ ಕೋಟತಟ್ಟು ಅವರನ್ನು ಗೌರವಿಸಲಾಯಿತು. ಶಿಬಿರದಲ್ಲಿ ನಾಲ್ಕು ತಂಡಗಳ ವಿರ್ಪಡಿಸಿ ಸ್ಪರ್ಧೆಯಲ್ಲಿ ವಿಜೇತರಾದ ಎರಡು ತಂಡಗಳಿಗೆ ಬಹುಮಾನವನ್ನು ನೀಡಲಾಯಿತು.

ಕೌಶಲ ಅಭಿವೃದ್ಧಿ ಮಾಹಿತಿ

ಸಂಪನ್ಮೂಲ ವ್ಯಕ್ತಿಯಾಗಿ ರಾಜ್ಯ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಸಾಹಿತಿ ನರೇಂದ್ರ ಕುಮಾರ್ ಕೋಟ ಭಾಗಿಯಾಗಿ ಮಕ್ಕಳ ಕೌಶಲ ಅಭಿವೃದ್ಧಿ ಸೇರಿದಂತೆ ಅನೇಕ ವಿಚಾರಗಳನ್ನು ತಿಳಿಸಿದರು.

ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಪಾಂಡೇಶ್ವರ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ವಂದನಾ ವಹಿಸಿದ್ದರು.

ಉಷಾ ಗಣೇಶ್ ಪೂಜಾರಿ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಗ್ರಂಥಪಾಲಕಿ ಜ್ಯೋತಿ ಪೂಜಾರಿ ಕಾರ್ಯಕ್ರಮಕ್ಕೆ ಸಹಕರಿಸಿದರು.

ಪಡುಬಿದ್ರಿ, ಅಭಿರಾಮ ಧಾಮದ ವಸಂತ ಶಿಬಿರದಲ್ಲಿ ಡಾ.ಸುದರ್ಶನ ಸಲಹೆ

ಮಕ್ಕಳಿಗೆ ಸದ್ವಿಚಾರ, ಸೂಕ್ತ ಮಾರ್ಗದರ್ಶನ ಅಗತ್ಯ

ಪಡುಬಿದ್ರಿ: ಮಕ್ಕಳು ಬೆಳೆಯುವ ಸಮಯದಲ್ಲಿ ಸದ್ವಿಚಾರ, ಸೂಕ್ತ ಮಾರ್ಗದರ್ಶನಗಳೂ ನೀಡದೇಹೋದಲ್ಲಿ ನಾವು ಪೋಷಕರೂ, ಸಮಾಜವೂ, ಗುರು ಪೀಠಗಳೂ, ಸಮುದಾಯಗಳ ಹಿರಿಯರೂ ನಾಳೆಗಳಿಗೆ ಜವಾಬುದಾರಿಯಾಗಬೇಕಾಗುತ್ತದೆ. ವಸಂತ ಶಿಬಿರಗಳೂ ಈ ನಿಟ್ಟಿನಲ್ಲಿ ಮಹತ್ತರ ಪ್ರಭಾವ ಬೀರುವಲ್ಲಿ ಯಶಸ್ವಿಯಾಗುತ್ತಿದೆ ಎಂದು ಉಡುಪಿ ಗುಂಡಿಬೈಲಿನ ಶ್ರೀ ಅಭಿರಾಮಧಾಮ ಸಂಕೀರ್ತನ ಮಂದಿರದ ಸಂಸ್ಥಾಪಕ-ಅಧ್ಯಕ್ಷ ಪರ್ಲತ್ತಾಯ ಡಾ.ಸುದರ್ಶನ ಭಾರತೀಯ ಹೇಳಿದರು.

ಪಡುಬಿದ್ರಿಯ ಅಭಿರಾಮ ಧಾಮದ ವಸಂತ ಶಿಬಿರದಲ್ಲಿ ಅವರು ಮಾತನಾಡಿದರು.

ಕೇವಲ ಹದಿನೆಂಟು ದಿನಗಳ ಈ ವಸಂತ ಶಿಬಿರ 44 ಮಕ್ಕಳಿಗೆ ವಿದ್ವಾನ್ ರಾಮಕೃಷ್ಣ ಶಾಸ್ತ್ರಿಗಳಿಂದ ಸನಾತನ ಹಿಂದೂ ಧಾರ್ಮಿಕ ಸಂಸ್ಕಾರಗಳ ತಯಾರಿ, ಸಂಗೀತ, ನೃತ್ಯ, ಯಕ್ಷಗಾನ, ವೇದ-ಗಣಿತ, ಶ್ರೀಮದ್ಭಗವದ್ಗೀತ, ವಾಲ್ಮೀಕಿ ರಾಮಾಯಣ, ಗಮಕ ಕಲೆ, ರಂಗಭೂಮಿ, ರಂಗೋಲಿ, ಪುಷ್ಪಮಾಲಿಕೆ, ಕಸದಿಂದ ರಸ, ದೇಶಭಕ್ತಿ ಗೀತೆ ಕಲಿಕೆ ಮಾತ್ರವಲ್ಲದೆ ಯೋಗ, ಪ್ರಾಣಾಯಾಮ, ಭಜನೆ, ಕವಿತೆ ರಚನೆ, ಮಾತೃಪೂಜನ, ಭಾರತಮಾತಾ ಪೂಜನ.. ಹೀಗೆ ಮಕ್ಕಳ ವ್ಯಕ್ತಿತ್ವ ನಿರ್ಮಾಣದ ಹಲವು ಹತ್ತು ಮಜಲುಗಳಲ್ಲಿ ಅಭಿರಾಮ ಧಾಮದ ವಸಂತ ಶಿಬಿರ ಗಮನಾರ್ಹ ಯಶಸ್ಸುಗಳಿಸಲು ಸಾಧ್ಯವಾಯಿತು ಎಂದು ಅವರು ಅಭಿಪ್ರಾಯ ಪಟ್ಟರು.



ಆಯೋಜಕರಾದ ಸ್ವರಸಾಮ್ರಾಟ್ ವಿದ್ವಾನ್ ಅಭಿರಾಮ್ ಭರತವಂಶಿ ಸಾಂಸ್ಕೃತಿಕ ಪ್ರತಿಷ್ಠಾನದ ಕಾರ್ಯದರ್ಶಿ, ನಾಟ್ಯ ವಿದುಷಿ ಸುಷ್ಮಾ ಸುದರ್ಶನ್ ಮಾತನಾಡಿದರು.

ಯಕ್ಷಗಾನ ಗುರು ನವೀನ್ ಕೋಟರವರ ಭಾಗವತಿಕೆಯಲ್ಲಿ ಶ್ರೀರಾಮ ಕಾರುಣ್ಯ ಪ್ರಸಂಗವನ್ನು, ಸಂಸ್ಕೃತ ಭಾರತಿಯ ಶಿಕ್ಷಣ ಪ್ರಮುಖರಾದ ವಿದ್ವಾನ್ ಶಮಂತ್ ಭಾಗವತ್ - ಅಕ್ಷಯಾ ದಂಪತಿಗಳಿಂದ ಸಂಸ್ಕೃತ ಸಂಭಾಷಣೆ ಹಾಗೂ ಪ್ರಹ್ಲಾದ ಚರಿತ ನಾಟಕವನ್ನು ಮಕ್ಕಳು ಸಮರ್ಥವಾಗಿ ನಟಿಸಿದರು ಎಂದು ಪೋಷಕರು ಪ್ರಶಂಸಿಸಿದರು.

ದಾಸವಾಣಿ ಕಚೇರಿ

ಉಡುಪಿಯ ಶ್ರೀಕೃಷ್ಣ ಮಂದಿರದ ಭಜಕರಾದ ಮಧೂರು ನಾರಾಯಣ ಸರಳಾಯರಿಂದ ದಾಸವಾಣಿ ಕಛೇರಿ ನಡೆಯಿತು. ಪ್ರವಚನಕಾರರಾದ ವಿದ್ವಾನ್ ಕೃಷ್ಣರಾಜ ಕುತ್ಪಾಡಿಯವರ ಭಾರತ ದರ್ಶನ ಮಕ್ಕಳಿಗೆ ದೇಶದ ಪಾವಿತ್ರ್ಯತೆಗಳ ಪರಿಚಯ ಮಾಡಿಕೊಟ್ಟಿತು.

ಶ್ರೀಸರಸ್ವತೀ ವಿದ್ಯಾಮಂತ್ರ ದೀಕ್ಷೆ

ಬಂಟ್ವಾಳದ ಗಮಕ ಕಲಾವಿದರಿಂದ ಸೀತಾ ಸ್ವಯಂವರ, ಕ್ಷೇತ್ರ ದರ್ಶನ ಪ್ರಯುಕ್ತ ಆದಿಶಕ್ತಿ ದುರ್ಗಾಪರಮೇಶ್ವರೀ ದೇವಾಲಯಕ್ಕೆ ಮುಂಜಾನೆ ಕರೆದೊಯ್ದು ಎಲ್ಲಾ ಮಕ್ಕಳಿಗೆ ಶ್ರೀಸರಸ್ವತೀ ವಿದ್ಯಾಮಂತ್ರ ದೀಕ್ಷೆಗಳನ್ನು ಬೋಧಿಸಲಾಯಿತು.

ಪಡುಬಿದ್ರಿ, ದೇವಸ್ಥಾನದಲ್ಲಿ ಸಾಂಸ್ಕೃತಿಕ ವೈಭವ ಉದ್ಘಾಟನೆ: ಮಹಾರಥೋತ್ಸವ, ಧಾರ್ಮಿಕ ಸಭೆ



ಪಡುಬಿದ್ರಿ: ಪಡುಬಿದ್ರಿಯ ಒಡೆಯನ ಸನ್ನಿಧಾನ ಹಾಗೂ ಖಡ್ಗೇಶ್ವರೀ ಕ್ಷೇತ್ರಗಳು ಪಡುಬಿದ್ರಿಯಲ್ಲಿವೆ. ಇಲ್ಲಿನ ಬ್ರಹ್ಮಕಲಶೋತ್ಸವನ್ನು ಯಶಸ್ವಿಗೊಳಿಸಿದ ವಿಪ್ರ ಸಮಾಜದ ಎಲ್ಲರನ್ನೂ ಸಮ್ಮಾನಿಸಲಾಗಿದೆ. ಪ್ರತಿಭಾನ್ವಿತರನ್ನೂ ಗುರುತಿಸಿ ಪ್ರೋತ್ಸಾಹಿಸಲಾಗಿದೆ. ವನದುರ್ಗಾ ಟ್ರಸ್ಟ್ ಮೂಲಕ ಇನ್ನಷ್ಟು ಸಮಾಜಮುಖಿ ಕಾರ್ಯಗಳಾಗಲಿ ಎಂದು ವೇದ ವಿದ್ವಾನ್ ಪಂಜ ಭಾಸ್ಕರ ಭಟ್ ಹೇಳಿದರು.

ಪಡುಬಿದ್ರಿಯ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ವಠಾರದಲ್ಲಿ ಶ್ರೀ ದೇಗುಲದ ವರ್ಷಾವಧಿ ಮಹಾ ರಥೋತ್ಸವದದಲ್ಲಿ ಧಾರ್ಮಿಕ ಸಭೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ, ವಿದ್ಯಾರ್ಥಿಗಳು ಹಾಗೂ ಇತರರನ್ನು ಗೌರವಿಸಿ ಮಾತನಾಡಿದರು.

ಶ್ರೀ ಖಡ್ಗೇಶ್ವರೀ ಬ್ರಹ್ಮಸ್ಥಾನದ ಅರ್ಚಕರಾದ ಗುರುರಾಜ ಆಚಾರ್ಯ, ರಘುಪತಿ ಆಚಾರ್ಯ, ಪಾತ್ರಿಗಳಾದ ಹರಿ ನಾರಾಯಣ ರಾವ್, ಗುರಿಕಾರ ನಟರಾಜ ಪಿ. ಎಸ್. ಇದ್ದರು. ಪ್ರತಿಭಾನ್ವಿತ ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು, ಪಡುಬಿದ್ರಿ ಬ್ರಹ್ಮಕಲಶೋತ್ಸವದ ಸಂದರ್ಭ ಅದರ ಯಶಸ್ಸಿಗೆ ಕಾರಣೀಕರ್ತರಾದ ಸಮಾಜ ಬಾಂಧವರನ್ನು ವೇದಿಕೆಯಲ್ಲಿ ಸಮ್ಮಾನಿಸಲಾಯಿತು. ಯಕ್ಷಗುರು ರವೀಂದ್ರ ರಾವ್ ಪಿ.ಎಸ್., ಸಾಂಸ್ಕೃತಿಕ ಕಾರ್ಯಕ್ರಮ ಪ್ರಾಯೋಜಕ ವನದುರ್ಗಾ ಟ್ರಸ್ಟ್‌ನ ಕೋಶಾಧಿಕಾರಿ ಸುರೇಶ್ ರಾವ್ ವೈ. ಅವರನ್ನು ಗೌರವಿಸಲಾಯಿತು. ವನದುರ್ಗಾ ಟ್ರಸ್ಟ್‌ನ ಕಾರ್ಯದರ್ಶಿ ವೈ. ಎನ್. ರಾಮಚಂದ್ರ ರಾವ್ ಪ್ರಸ್ತಾವಿಸಿ ಸ್ವಾಗತಿಸಿದರು. ರಜನೀಶ್ ಭಟ್ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ಮೂಳೂರಲ್ಲಿ ಕಾಪು ಪುರಸಭೆಯ ಎಸ್‌ಟಿಪಿ: ಗ್ರಾಮಸ್ಥರ ಪ್ರತಿಭಟನೆ



ಕಾಪು: ಮೂಳೂರು ಗ್ರಾಮದಲ್ಲಿ ಕಾಪು ಪುರಸಭೆ ವತಿಯಿಂದ ನಿರ್ಮಿಸಲು ಹೊರಟಿರುವ ಕೊಳಚೆ ನೀರು ಶುದ್ಧೀಕರಣ ಘಟಕ (ಎಸ್‌ಟಿಪಿ) ನಿರ್ಮಾಣ ವಿರೋಧಿಸಿ ಎಸ್‌ಟಿಪಿ ನಿರ್ಮಾಣ ವಿರೋಧ ಸಮಿತಿ, ಮೂಳೂರು ವತಿಯಿಂದ ಬೃಹತ್ ಪ್ರತಿಭಟನೆ ನಡೆಯಿತು.

ಪ್ರತಿಭಟನೆಯಲ್ಲಿ ಶಾಸಕರು ಗುರ್ಮೆ ಸುರೇಶ್ ಶೆಟ್ಟಿ ಭಾಗವಹಿಸಿದ್ದರು.

ಪುರಸಭೆಗೆ ಕೊಳಚೆ ನೀರು ಶುದ್ಧೀಕರಣ ಘಟಕ ಅತ್ಯಗತ್ಯ. ಆದರೆ ಮೂಳೂರುನಲ್ಲಿ ಘಟಕ ಸ್ಥಾಪಿಸಿದಲ್ಲಿ ಇದರಿಂದ ಸ್ಥಳೀಯರಿಗೆ ಸಮಸ್ಯೆ ಆಗಲಿದೆ ಎಂದು ಗ್ರಾಮಸ್ಥರು ಹೇಳಿದರು.

ಮೂಳೂರು ಎಸ್.ಟಿ.ಪಿ ನಿರ್ಮಾಣ ವಿರೋಧ ಸಮಿತಿಯ ಮನೋಹರ್ ಅಡ್ಯಂತಾಯ, ಬಿಕ್ರಿಗುತ್ತು ಪ್ರಭಾತ್ ಶೆಟ್ಟಿ ಮತ್ತಿತರರೊಂದಿಗೆ ಶಾಸಕರು ಕಾಪು ತಹಶೀಲ್ದಾರರಾದ ಅನಂತ ಶಂಕರ್ ಹಾಗೂ ಕಾಪು ಪುರಸಭೆಯ ಮುಖ್ಯಾಧಿಕಾರಿಗಳಾದ ನೀಲಕಂಠ ಮೇಸ್ತಾ ಅವರಿಗೆ ಮೂಳೂರು ಪರಿಸರದಲ್ಲಿ ಕೊಳಚೆ ನೀರು ಶುದ್ಧೀಕರಣ ಘಟಕ ನಿರ್ಮಿಸದಂತೆ ಮನವಿಯನ್ನು ಸಲ್ಲಿಸಿದರು.

ಬದಲಿ ಸ್ಥಳ ಗುರುತಿಸಲು ಸೂಚನೆ

ಸ್ಥಳೀಯರಿಂದ ವಿರೋಧ ಇರುವುದರಿಂದ ಪರಿಸರ ಸಂಬಂಧಿ ಇತರೆ ಸಮಸ್ಯೆ ಎದುರಾಗುವುದರಿಂದ ಇದಕ್ಕೆ ಪರ್ಯಾಯವಾಗಿ ತಕ್ಷಣವೇ ಬೇರೆ ಕಡೆಗೆ ಸ್ಥಳಾಂತರಿಸುವಂತೆ ಅಥವಾ ಬದಲಿ ಸ್ಥಳ ಗುರುತಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಶಾಸಕರು ಸೂಚಿಸಿದರು.

ಶಿರ್ವ ಕಾಲೇಜು: ಹಳೆ ವಿದ್ಯಾರ್ಥಿಗಳ 'ಸ್ನೇಹ ಸಮ್ಮಿಲನ' ಕಾರ್ಯಕ್ರಮ



ಶಿರ್ವ: ಶಿರ್ವದ ಮೂಲ್ಕಿ ಸುಂದರ ರಾಮ್ ಶೆಟ್ಟಿ ಕಾಲೇಜಿನಲ್ಲಿ 2003-04ನೇ ಶೈಕ್ಷಣಿಕ ವರ್ಷದ ಬಿಕಾಂ ಹಳೆ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಕಾರ್ಯಕ್ರಮವು ನಡೆಯಿತು. ಅಧ್ಯಕ್ಷತೆಯನ್ನು ವಹಿಸಿದ್ದ ಶಿರ್ವ ವಿದ್ಯಾವರ್ಧಕ ಸಂಘದ ಆಡಳಿತಾಧಿಕಾರಿ ಪ್ರೊ.ವೈ. ಭಾಸ್ಕರ್ ಶೆಟ್ಟಿ ಮಾತನಾಡಿ, ಕಲಿತ ಸಂಸ್ಥೆಯ ಬಗ್ಗೆ ಗೌರವ ಆದರ ಇಟ್ಟುಕೊಂಡು ಸಾಧ್ಯವಾದ ಸಹಾಯ ಮಾಡಬೇಕು. ಈ ದಿಶೆಯಲ್ಲಿ ಸಂಸ್ಥೆ ಈ ವಿದ್ಯಾರ್ಥಿಗಳ ಕೊಡುಗೆಯನ್ನು ಕೃತಜ್ಞತೆಯಿಂದ ಸ್ಮರಿಸುತ್ತದೆ ಎಂದರು.

ಮುಖ್ಯ ಅತಿಥಿಗಳಾಗಿ ಮಂಗಳೂರು ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ವಿದ್ಯಾವರ್ಧಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯ ಮಾಜಿ ಅಧ್ಯಕ್ಷ ಮಟ್ಟಾರ್ ರತ್ನಾಕರ ಹೆಗ್ಡೆ ಮಾತನಾಡಿ, ಬದಲಾದ ಕಾಲಮಾನದಲ್ಲಿ ಹಳೆ ವಿದ್ಯಾರ್ಥಿಗಳು ಈ ಸಂಸ್ಥೆಗೆ ಬಂದು ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದರು.

2003-04ನೇ ಸಾಲಿನ ಎಲ್ಲಾ ಉಪನ್ಯಾಸಕರು ಹಾಗೂ ಕಚೇರಿ ಸಿಬ್ಬದಿ ಉಪಸ್ಥಿತರಿದ್ದು, ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು, ಈ ಸಂದರ್ಭದಲ್ಲಿ ಹಳೆ ವಿದ್ಯಾರ್ಥಿಗಳು ಕಾಲೇಜಿನ ಮದ್ಯಾಹ್ನದ ಬಿಸಿಯೂಟ ಯೋಜನೆಗೆ ರೂಪಾಯಿ 1,50,000 ರೂ ದೇಣಿಗೆ ನೀಡಿದರು, ಅಲ್ಲದೆ ನಿವೃತ್ತ ಹಾಗೂ ಪ್ರಸ್ತುತ ಇರುವ ಉಪನ್ಯಾಸಕರು ಮತ್ತು ಬೋಧಕೇತರ ವೃಂದದವರನ್ನು ಸನ್ಮಾನಿಸಿದರು,

ಉಪನ್ಯಾಸಕಿ ಡಾ.ಸೋನಾ ಎಚ್.ಸಿ. ವಂದಿಸಿದರು.

ಹಿರಿಯ ಪ್ರಾಥಮಿಕ ಶಾಲೆಗಳಿಗೆ ವಾಹನ, ಬ್ರಾಹ್ಮೀ ಯುವಕ ಮಂಡಲಕ್ಕೆ ಆ್ಯಂಬುಲೆನ್ಸ್ ಹಸ್ತಾಂತರ | ಉದ್ಯಮಿ ಜಯಶೀಲ ಶೆಟ್ಟಿ ಅಭಿಪ್ರಾಯ

ಶೈಕ್ಷಣಿಕ ಸೌಲಭ್ಯಗಳು ದೊರಕಿದಾಗ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಂದ ಸಾಧನೆ

ಬೈಂದೂರು: ಗ್ರಾಮೀಣ ಭಾಗದ ಶಾಲೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಹೆಚ್ಚು ಹೆಚ್ಚು ಸೌಲಭ್ಯ ಕೊಟ್ಟಾಗ ಅಲ್ಲಿ ಅತ್ಯಂತ ಉತ್ತಮ ಗುಣಮಟ್ಟದ ಶೈಕ್ಷಣಿಕ ವಾತಾವರಣ ನಿರ್ಮಾಣವಾಗುತ್ತದೆ. ಅನುಭವಿ ಶಿಕ್ಷಕರ ತಂಡ, ಆಡಳಿತ ಮಂಡಳಿ ಸಹಕಾರ ಜತೆಗೆ ಸಾಮಾಜಿಕ ಚಿಂತನೆ ಹಾಗೂ ಕಳಕಳಿ ಇದ್ದಾಗ ಹಳ್ಳಿಯ ಮಕ್ಕಳಿಗೆ ಸಾಧನೆ ಮಾಡಲು ಸಾಧ್ಯ. ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರು ಶಾಲೆಯ ಆವರಣದಲ್ಲಿ ಉತ್ತಮ ವಾತಾವರಣ ನಿರ್ಮಿಸಲು ಪ್ರಯತ್ನಿಸಬೇಕು. ಎಂದು ಘಟಪ್ರಭಾ ಉದ್ಯಮಿ ಎಚ್. ಜಯಶೀಲ ಎನ್. ಶೆಟ್ಟಿ ಹೇಳಿದರು.

ಹೇರಂಜಾಲು ಶ್ರೀಗುಡೇಮಹಾಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಸೋಮವಾರ ಸಂಸ್ಥೆಯ ವತಿಯಿಂದ ರಾಗಿಹಕ್ಲು, ಯರುಕೋಣೆ, ಆಜ್ರಿಹಾರ, ಹೆಸ್ಕತ್ತೂರು ಹಾಗೂ ಚಪ್ಪರಿಕೆ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಶಾಲಾ ವಾಹನ ಮತ್ತು ಸಿದ್ದಾಪುರ ಬ್ರಾಹ್ಮೀ ಯುವಕ ಮಂಡಲಕ್ಕೆ ಆ್ಯಂಬುಲೆನ್ಸ್ ಅನ್ನು ಹಸ್ತಾಂತರಿಸಿ ಅವರು ಮಾತನಾಡಿದರು. ಪೋಷಕರ ಮತ್ತು ವಿದ್ಯಾರ್ಥಿಗಳ ಅಭಿರುಚಿ ವಿಭಿನ್ನವಾದರೂ ಸಹ ಪ್ರಸ್ತುತ ಪೋಷಕರ ಅಭಿರುಚಿಗಿಂತ ವಿದ್ಯಾರ್ಥಿಗಳ ಅಭಿರುಚಿಗೆ ಪ್ರೋತ್ಸಾಹ ದೊರೆಯಬೇಕು. ಗ್ರಾಮೀಣ ಭಾಗದಲ್ಲಿ ಮೂಲ ಸೌಕರ್ಯದ ಕೊರತೆಗಳಿದ್ದರೂ ಪ್ರತಿಭೆಗಳಿಗೆ ಕೊರತೆಯಿಲ್ಲ. ಈ ನಿಟ್ಟಿನಲ್ಲಿ ಗಳಿಕೆಯ ಒಂದಂಶವನ್ನು ಶಾಲೆಗಳ ಅಭಿವೃದ್ಧಿಗೆ ನೀಡುವ ಮೂಲಕ ಸಮಾಜದ ಋಣವನ್ನು ತೀರಿಸಲು ಪ್ರಯತ್ನಿಸುತ್ತಿದ್ದೇನೆ ಎಂದರು.



ಹುಟ್ಟೂರಿಗೆ ಕೊಡುಗೆ

ಹುಟ್ಟೂರಿನಲ್ಲಿ ಶಾಶ್ವತ ಕೊಡುಗೆ ನೀಡಬೇಕು ಎನ್ನುವ ಉದ್ದೇಶ, ಪ್ರತಿಯೊಂದು ಮಗುವೂ ಕೂಡ ಶಿಕ್ಷಣದಿಂದ ವಂಚಿತರಾಗಬಾರದೆಂಬ ನೆಲೆಯಲ್ಲಿ ಅತ್ಯಂತ ಗ್ರಾಮೀಣ ಭಾಗದ ಹಲವಾರು ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ ವಾಹನ ನೀಡಿದ್ದೇನೆ. ಈ ಸತ್ಕಾರ್ಯದಿಂದ ಹೃದಯ ತುಂಬಿದೆ.

● ಎಚ್. ಜಯಶೀಲ ಎನ್. ಶೆಟ್ಟಿ
ಘಟಪ್ರಭಾ ಉದ್ಯಮಿ

ಶ್ರೀಗುಡೇ ಮಹಾಲಿಂಗೇಶ್ವರ ಸೌಹಾರ್ದ ಸಹಕಾರಿ ಸಂಘದ ಉಪಾಧ್ಯಕ್ಷ ಕಿರಣ್ ಶೆಟ್ಟಿ, ನಿರ್ದೇಶಕರಾದ ಬಟ್ನಾಡಿ ಅಣ್ಣಪ್ಪ ಶೆಟ್ಟಿ, ಸುಧಾಕರ ಶೆಟ್ಟಿ, ಸುಭಾಶ್ಚಂದ್ರ ಶೆಟ್ಟಿ, ದೇವಳದ ವ್ಯವಸ್ಥಾಪನಾ ಸಮಿತಿ ಸದಸ್ಯ ಜಯಶೀಲ ಶೆಟ್ಟಿ, ಡಾ. ಅತುಲ್‌ಕುಮಾರ್ ಶೆಟ್ಟಿ, ಕರುಣಾಕರ ಶೆಟ್ಟಿ ಇದ್ದರು. ಐದೂ ಶಾಲೆಗಳ ಪರವಾಗಿ ಶಿಕ್ಷಕ ನಾರಾಯಣ ದೇವಾಡಿಗ ದಾನಿಗಳಿಗೆ ಕೃತಜ್ಞತೆ ಸಲ್ಲಿಸಿದರು. ಶಿಕ್ಷಕ ಜಯಪ್ರಕಾಶ ಶೆಟ್ಟಿ ಕಾರ್ಯಕ್ರಮ ನಿರ್ವಹಿಸಿದರು.